ಬುಡಕಟ್ಟು ಅಭಿವೃದ್ಧಿ : ಒಂದು ವಿಮರ್ಶಾತ್ಮಕ ಅಧ್ಯಯನ
(ಜೇನು ಕುರುಬ ಮತ್ತು ಕೊರಗ ಆದಿಮ ಬುಡಕಟ್ಟುಗಳಿಗೆ ಸಂಬಂಧಿಸಿದಂತೆ)

AN ANALYTICAL STUDY ON TRIBAL DEVELOPMENT
(With Special reference to Jenu Kuruba and Koraga Primitive Tribes)

ಪಿಎಚ್.ಡಿ. ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಅಂತರ್ಶಿಸ್ತೀಯ ವಿಧಾನದಲ್ಲಿ ಸಮಾಜಕಾರ್ಯ
ವಿಷಯದಲ್ಲಿ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕ
ಮುನಿರಾಜು ಎಸ್. ಬಿ.

ಮಾರ್ಗದರ್ಶಕರು
ಡಾ. ಕೆ. ಎಂ. ಮೇತ್ರಿ
ಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ-೫೮೩ ೨೭೬

ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ-೫೮೩ ೨೭೬

ಅಕ್ಟೋಬರ್-೨೦೦೮

259

259

ಪ್ರಮಾಣ ಪತ್ರ

ಬುಡಕಟ್ಟು ಅಭಿವೃದ್ಧಿ: ಒಂದು ವಿಮರ್ಶಾತ್ಮಕ ಅಧ್ಯಯನ (ಜೇನು ಕುರುಬ ಮತ್ತು ಕೊರಗ ಆದಿಮ ಬುಡಕಟ್ಟುಗಳಿಗೆ ಸಂಬಂಧಿಸಿದಂತೆ) ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಪಿಎಚ್ ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಡಾ ಕೆ ಎಂ ಮೇತ್ರಿ ಅವರ ಮಾರ್ಗದರ್ಶನದಲ್ಲಿ ಅಂತರ್ಶಿಸ್ತೀಯ ವಿಧಾನದಲ್ಲಿ ಸಮಾಜಕಾರ್ಯ ವಿಷಯದಲ್ಲಿ ಸಿದ್ಧಪಡಿಸಲಾಗಿದೆ. ಈ ಮಹಾಪ್ರಬಂಧವನ್ನು ಅಥವ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿ ಇಲ್ಲವೆ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ: ವಿದ್ಯಾರಣ್ಯ
ದಿನಾಂಕ :

ಮುನಿರಾಜು ಎಸ್ ಬಿ
ಸಂಶೋಧನ ವಿದ್ಯಾರ್ಥಿ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ–೫೮೩ ೨೭೬

ದೃಢೀಕರಣ ಪತ್ರ

ಶ್ರೀ ಮುನಿರಾಜು ಎಸ್ ಬಿ ಅವರು ಬುಡಕಟ್ಟು ಅಭಿವೃದ್ಧಿ: ಒಂದು ವಿಮರ್ಶಾತ್ಮಕ ಅಧ್ಯಯನ (ಜೇನು ಕುರುಬ ಮತ್ತು ಕೊರಗ ಆದಿಮ ಬುಡಕಟ್ಟುಗಳಿಗೆ ಸಂಬಂಧಿಸಿದಂತೆ) ಎಂಬ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಪಿಎಚ್ ಡಿ ಪದವಿಗಾಗಿ ಅಂತರ್ಶಿಸ್ತೀಯ ವಿಧಾನದಲ್ಲಿ ಸಮಾಜಕಾರ್ಯ ವಿಷಯದಲ್ಲಿ ಸಿದ್ಧಗೊಳಿಸಿದ್ದಾರೆ. ಇದು ಅವರು ಸ್ವತಃ ಸಂಶೋಧನೆ ಮತ್ತು ಕ್ಷೇತ್ರಕಾರ್ಯ ಕೈಗೊಂಡು ಸಂಗ್ರಹಿಸಿದ ಸಂಶೋಧನ ಸಾಮಗ್ರಿಯ ಆಧಾರದ ಮೇಲೆ ರಚಿತವಾಗಿದೆ. ಇದನ್ನು ಭಾಗಶಃ ಆಗಲಿ ಪೂರ್ಣವಾಗಿಯಾಗಲಿ ಬೇರಾವುದೆ ಡಿಪ್ಲೊಮ ಅಥವಾ ಪದವಿಗಾಗಿ ಒಪ್ಪಿಸಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ಸ್ಥಳ: ವಿದ್ಯಾರಣ್ಯ
ದಿನಾಂಕ : ೨೧.೧೦-೨೦೧೮

ಡಾ ಕೆ ಎಂ ಮೇತ್ರಿ
ಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ–೫೮೩ ೨೭೬

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದಲ್ಲಿ ಪಿಎಚ್ ಡಿ ಅಧ್ಯಯನಕ್ಕೆ ಅವಕಾಶ ಕಲ್ಪಿಸಿಕೊಟ್ಟ ಹಿಂದಿನ ಕುಲಪತಿಗಳಾಗಿದ್ದ ಡಾ ವಿವೇಕ ರೈ ಅವರಿಗೆ ಹಾಗೂ ಇಂದಿನ ಕುಲಪತಿಗಳಾದ ಡಾ ಎ ಮುರಿಗೆಪ್ಪ ಅವರಿಗೆ ಕುಲಸಚಿವರಾದ ಡಾ ಹಿ ಚಿ ಬೋರಲಿಂಗಯ್ಯ ಅವರಿಗೆ ಅಧ್ಯಯನಾಂಗದ ನಿರ್ದೇಶಕರಾದ ಡಾ ಪಾಂಡುರಂಗಬಾಬು ಅವರಿಗೆ ಮತ್ತು ಬುಡಕಟ್ಟು ಅಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ ಚಲುವರಾಜು ರವರಿಗೆ ಮತ್ತು ವಿಭಾಗದ ಎಲ್ಲಾ ಸಿಬ್ಬಂದಿ ವರ್ಗದವರಿಗೆ

ಅಧ್ಯಯನ ಆರಂಭದ ಪೂರ್ವದಿಂದ ಮಹಾಪ್ರಬಂಧಕ್ಕೆ ಅಂತಿಮ ರೂಪ ಕೊಡುವವರೆಗೆ ಎಲ್ಲ ರೀತಿಯ ಸಕಾಲಿಕ ಮತ್ತು ಸೂಕ್ತ ಸಹಕಾರ ಸಲಹೆಗಳನ್ನ ನೀಡುವ ಮೂಲಕ ಮಾರ್ಗದರ್ಶನ ನೀಡಿದ ಆತ್ಮೀಯ ಗುರುಗಳಾದ ಡಾ ಕೆ ಎಂ ಮೇತ್ರಿ ರವರಿಗೆ ಮತ್ತು ಅವರ ಮನೆಗೆ ಬೇಟಿಯಿತ್ತಾಗಲೆಲ್ಲ ಕುಟುಂಬದ ಸದಸ್ಯನಂತೆ ಸತ್ಕರಿಸಿ ಮಹಾಪ್ರಬಂಧ ಪೂರ್ಣಗೊಳ್ಳಲು ಸಹಕರಿಸಿದ ಅವರ ಧರ್ಮಪತ್ನಿ ಅಕ್ಕ ಶ್ರೀಮತಿ ದಾಕ್ಷಾಯಿಣಿ ಮೈತ್ರಿ ಹಾಗೂ ಕಿರಿದಾದರು ಹಿರಿಯರಂತೆ ವರ್ತಿಸಿ ಮಹಾಪ್ರಬಂಧದ ಕೆಲವು ಪುಟಗಳನ್ನ ಪುಟ್ಟ ಕೈಗಳಿಂದ ಬೆರಳಚ್ಚು ಮಾಡಿದ ಪುಟ್ಟಿ ಸಹನಾ ರವರಿಗೆ

ಜನ್ಮನೀಡಿ ಪ್ರೀತಿಯಿಂದ ಸಾಕಿ ಸಲುಹಿದ ಮಾತೋಶ್ರೀ ಸಂಪಮ್ಮ ಪಿತೃಶ್ರೀ ಬೀರಪ್ಪ ಶಿಕ್ಷಣಕೊಡಿಸಿ ಬೆಳಕಿಗೆ ಬರಲು ಎಲ್ಲಾ ರೀತಿಯ ಸಹಕಾರ ನೀಡಿದ ಅಣ್ಣಂದಿರಾದ ವೆಂಕಟೇಶ್, ಬೆಳ್ಳಪ್ಪ, ಸಂಪಂಗಿ ಮತ್ತು ಅತ್ತಿಗೆಯರಾದ ಮಂಜುಳಮ್ಮ, ಲಕ್ಷ್ಮಮ್ಮ, ಮುನಿಲಕ್ಷ್ಮಮ್ಮ ಸಹೋದರಿಯಾದ ಜಯಲಕ್ಷ್ಮಿ ಮತ್ತು ಬಾವನವರಾದ ಕೆಂಪೆಗೌಡರವರಿಗೆ

ಸದಾ ನನ್ನೊಂದಿಗಿದ್ದು ನನ್ನ ಏಳಿಗೆಯನ್ನ ಬಯಸಿ ಅಧ್ಯಯನಕ್ಕೆ ಸ್ಪೂರ್ತಿಯಾಗಿ ನಿಂತು ಎಲ್ಲಾ ರೀತಿಯ ಬೆಂಬಲವನ್ನ ನೀಡುತ್ತಿರುವ ನನ್ನ ಅರ್ಧಾಂಗಿ ಶ್ರೀಮತಿ ರಶ್ಮಿರಾಜು ಮತ್ತು ನನ್ನ ಪುಟ್ಟ ಪಾಪು ರಿಷಿಗೆ ಮತ್ತು ಬೆಂಬಲಿಗರಾಗಿರುವ ನನ್ನ ಅತ್ತೆ ಮಾವಂದಿರಾದ ಮುನಿರಂಗಪ್ಪ ಮತ್ತು ಸುಜಾತ ಮುನಿರಂಗಪ್ಪ ಹಾಗೂ ನಾದಿನಿ ರಂಜಿತ ರವರಿಗೆ

ಸದಾ ನನ್ನ ಮನದಾಳದಲ್ಲಿ ಹಚ್ಚ ಹಸಿರಾಗಿ ಉಳಿದಿರುವ ನನ್ನ ಗುರುಗಳಾದ ಬಾಲಪ್ಪ ಮೇಸ್ಟ್ರು, ಆಲಂಬಾಡಿ. ಟಿ ವೆಂಕಟೇಶ್ ಮೇಸ್ಟ್ರು, ಚಿಕ್ಕ ತಿರುಪತಿ, ರಾಜಣ್ಣ ಮೇಸ್ಟ್ರು, ಚೂಡನಾಯಕನ ಹಳ್ಳಿ, ನನ್ನಲ್ಲಿ ಆಶಾವಾದವನ್ನ, ತಾಳ್ಮೆಯನ್ನ ತುಂಬಿ ಸದಾ ಒಳ್ಳೆಯದನ್ನೆ ಬಯಸುವ ಗುರುಗಳಾದ ಮುನಿಯಪ್ಪ ರವರು ಮತ್ತು ಅವರ ಧರ್ಮಪತ್ನಿಯವರು ಮತ್ತು ಸೋಮಶೇಖರ್ ಮಾಸ್ಟರ್ ರವರಿಗೆ

ಕ್ಷೇತ್ರ ಕಾರ್ಯದಲ್ಲಿ ಸಹಕಾರ ನೀಡಿದ ಸಹೋದರರಾದ ಶಿವರಾಜು, ವೆಂಕಟೇಶ್ ಮೂರ್ತಿ, ಗೆಳೆಯರಾದ ಶಿವರಾಜು ಯರವ, ಮಾರ ಜೇನುಕುರುಬ, ಗಣೇಶ್ ಕುಮಾರ್ ಕಾಡುಕುರುಬ,

ಮಧು ಬಗ್ಲೇರ್, ನಾಗೇಶ್ ಕೊಳವಿಗೆ ಹಾಡಿ, ಪರಮೇಶ್ ಮೈಸೂರು, ಶ್ರೀ ಗೊಕುಲ್ ದಾಸ್, ಸಮಗ್ರ ಗಿರಿಜನ ಅಭಿವೃದ್ಧಿ ಅಧಿಕಾರಿಗಳಾಗಿದ್ದ ಮೈಸೂರು ನಟರಾಜ್, ಕೊಡಗು, ಸತ್ಯನಾರಾಯಣ, ಮಂಗಳೂರು (ಪ್ರಬಾರ) ಸುಂದರಿ, ಉಡುಪಿ (ಪ್ರಬಾರ)ಗಣಪತಿ. ಮತ್ತು ಅವರ ಕಛೇರಿಯ ಎಲ್ಲಾ ಸಿಬ್ಬಂದಿ ವರ್ಗದವರಿಗೆ

ಮಾಧ್ಯಮಿಕ ಸಂಪನ್ಮೂಲ ಸಂಗ್ರಹಣೆಗೆ ನೆರವಾದ ಡಾ ಜೋಗನ್ ಶಂಕರ್, ಬುಡಕಟ್ಟು ಕಲ್ಯಾಣ ನಿರ್ದೇಶನಾಲಯದ ಉಪ ನಿರ್ದೇಶಕರುಗಳಾದ, ಶ್ರೀ ಕೆ ಎಸ್ ಮೃತ್ಯುಂಜಯ, ಶ್ರೀ ಎನ್ ಬಳಿಗಾರ್, ಸಂಶೋಧನಾಧಿಕಾರಿ ಶ್ರೀಮತಿ ಹಾಜಿರಾಬೇಗಂ ಮತ್ತು ಅವರ ಸಿಬ್ಬಂದಿವರ್ಗ, ಬೆಂಗಳೂರು ವಿಶ್ವವಿದ್ಯಾಲಯದ ಸಮಾಜಕಾರ್ಯ ವಿಭಾಗದ, ಮುಖ್ಯಸ್ಥರು ಮತ್ತು ಗುರುಗಳಾದ ಡಾ ವೆಂಕಟಸ್ವಾಮಿ ರೆಡ್ಡಿ ಶ್ರೀಮತಿ ವಾಸಂತಿ ವಿಜಯ್ ಮತ್ತು ಡಾ ಗಾಂಧಿ ದಾಸ್ ರವರಿಗೆ

ಭಾರತ ಜನಗಣತಿಯ ರಾಜ್ಯ ನಿದೇರ್ಶನಾಲಯದ ಉಪ ನಿರ್ಧೇಶಕರುಗಳಾದ ಶ್ರೀ ರಾಘವೇಂದ್ರ ರಾವ್ ಮತ್ತು ಶ್ರೀ ಖಾಸ್ಮಿ ಹಾಗೂ ಅವರ ಇಲಾಖೆಯ ಶ್ರೀ ರಘುನಾಯಕ್, ಶ್ರೀನಿವಾಸ್ ಮೂರ್ತಿ, ಮತ್ತು ಇತರ ಸಿಬ್ಬಂದಿ ವರ್ಗದವರಿಗೂ

ನನ್ನ ಅಧ್ಯಯನಕ್ಕೆ ಅನುಕೂಲ ಮಾಡಿಕೊಟ್ಟ ಪರಿಶಿಷ್ಟ ಜಾತಿ ಪರಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗದ ನನ್ನ ಸಹದ್ಯೋಗಿ ಮಿತ್ರರಿಗೆ ಮತ್ತು ಜಂಟಿಕಾರ್ಯದರ್ಶಿಗಳಾದ ಶ್ರೀ ಎಸ್ ಎಸ್ ಶರ್ಮ, ನಿರ್ದೇಶಕರಾದ ಡಿ ಜೆ ಎನ್ ಆನಂದ್, ಡಾ ಸೋಮಾವತ್ ಮತ್ತು ಶ್ರೀ ಆರ್ ಸಿ ದುರ್ಗಾ, ಉಪ ನಿರ್ದೇಶಕರಾದ ಕೆ ಡಿ ಬನ್ನೂರ್, ಸಹಾಯಕ ನಿರ್ದೇಶಕರಾದ ಆರ್ ಲಕ್ಷ್ಮೀ ಮತ್ತು ಇತರೆ ಸಹದ್ಯೋಗಿ ಮಿತ್ರರುಗಳಿಗೆ

ಈ ಅಧ್ಯಯನವನ್ನ ಅಂದವಾಗಿ ಗಣಕಯಂತ್ರದಲ್ಲಿ ಸಂಯೋಜಿಸಿ ವ್ಯಾಕರಣವನ್ನ ಸರಿಪಡಿಸಲು ಸಹಕರಿಸಿದ ಡಾ ಆರ್ ಬಿ ಕುಮಾರರವರಿಗೆ ಮತ್ತು ಮಿತ್ರ ಮಲ್ಲಿಕಾರ್ಜುನ ಮಾನ್ಪಡೆ, ಅಧ್ಯಯನದುದ್ದಕ್ಕೂ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಕರಿಸಿದ ಎಲ್ಲ ಬುಡಕಟ್ಟು ಬಾಂಧವರಿಗೆ ಮತ್ತು ವಿಶ್ವವಿದ್ಯಾಲಯದ ಎಲ್ಲ ಸಿಬ್ಬಂದಿವರ್ಗವರಿಗೆ ಕೃತಜ್ಞತೆಗಳು.

ದಿನಾಂಕ: ೩೧.೧೦.೨೦೦೮
ಸ್ಥಳ: ವಿದ್ಯಾರಣ್ಯ

ಮುನಿರಾಜು ಎಸ್ ಬಿ
ಸಂಶೋಧನ ವಿದ್ಯಾರ್ಥಿ

ಪರಿವಿಡಿ

ಅನುಬಂಧಗಳು

ಪರಿಶಿಷ್ಟಗಳು

ಪರಿಶಿಷ್ಟ: ೧ ಚಿತ್ರ

ಪರಿಶಿಷ್ಟ: ೨ ಲಂಬಚಿತ್ರ

ಪರಿಶಿಷ್ಟ: ೩ ಸ್ಥಂಬಚಿತ್ರ

ಪರಿಶಿಷ್ಟ: ೪ ವೃತ್ತಚಿತ್ರ

ಪರಿಶಿಷ್ಟ: ೫ ಕೋಷ್ಟಕ

ಪರಿಶಿಷ್ಟ: ೬ ನಕ್ಷೆ

ಅನುಬಂಧ: ೧ ಅಂಕಿಅಂಶಗಳು

ಅನುಬಂಧ: ೨ ಛಾಯಾಚಿತ್ರಗಳು

ಅಧ್ಯಾಯ ೧

ಸಂಶೋಧನೆಯ ವಿನ್ಯಾಸ, ವಿಧಾನ, ಉದ್ದೇಶಗಳು ಮತ್ತು ಮಹತ್ವ

೧.೧ ಪ್ರಸ್ತಾವನೆ

ಮಾನವ ಮೂಲತಃ ಇತರೆ ಜೀವಿಗಳಂತೆ ಪರಿಸರಜೀವಿ, ಮಾನವಶಾಸ್ತ್ರಜ್ಞರಾದ ಡಾ ಥಾಮಸ್ ಹೆನ್ರಿ ಹಕ್ಸಲಿ ರವರ ಪ್ರಕಾರ "ಮಾನವನು ಚಿಂಪಾಂಜಿ, ಗಿಬನ್, ಗೋರಿಲ್ಲಾ, ಓರಾಂಗುಟಾಂಗ್ ಅಥವಾ ಇತರೆ ವಾನರ ಸಮೂಹಕ್ಕೆ ಮೂಲವಾದ ಪ್ರಾಣಿಯಿಂದಲೆ ವಿಕಾಸವಾಗಿದ್ದಾನೆ" ಎಂದು ಪ್ರತಿಪಾದಿಸಿದ್ದಾರೆ. "ಡಾ ಜಾನ್ಸನ್ ಮತ್ತು ಡಾ ಟಿಮ್‌ವೈಟ್ ರವರ ಪ್ರಕಾರ "ಆಫರೆನ್ಸಿಸ್> ಆಫ್ರಕಾನ್ಸ್>ರೂಬಾಸ್ಟಸ್; ಹೆಬಲಿಸ್>ಎರೆಕ್ಟಸ್>ಸೆಪಿಯನ್ಸ್ ಹಾಗೂ ಕ್ರೊಮಾಗ್ನನ್ ಮಾನವನನ್ನು ಹಿಂದೆ ಬಿಟ್ಟು ಸುಮಾರು ಒಂದು ಲಕ್ಷವರ್ಷದಷ್ಟು ಹಿಂದೆ ನೋಡಿದರೆ ನಿಯಾಂಡರ್‌ಥಾಲ್ ಮಾನವ ಭೂಮಿಯ ಮೇಲಿದ್ದ ಕಾಲಕ್ಕೆ ಬರುತ್ತೇವೆ"(ಮೇತ್ರಿ, ಕೆ ಎಂ:೨೦೦೨:೨). ಹೋಮೋ ಏರೆಕ್ಟಸ್ ಮಾನವನ ಕೊನೆಯ ಆವೃತ್ತಿಯೇ ಇಂದಿನ ಮಾನವ" ಎಂದು ಮಂಡಿಸಿದ್ದಾರೆ.

ಮಾನವಶಾಸ್ತ್ರಜ್ಞರು ಹಾಗೂ ಜೀವವಿಕಾಸ ವಿಜ್ಞಾನಿಗಳು ತಮ್ಮದೇ ಆದ ರೀತಿಯಲ್ಲಿ ಮಾನವನ ಉಗಮ ಹಾಗೂ ವಿಕಾಸದ ಬಗೆಗೆ ಅಭಿಪ್ರಾಯಗಳನ್ನ ಮಂಡಿಸಿದ್ದಾರೆ, ಆದಿ ಮಾನವರು ಆಧುನಿಕ ಮಾನವರಿಗಿಂತ ದೈಹಿಕವಾಗಿ ಭಿನ್ನರಾಗಿದ್ದು ಅವರು ಚಿಂಪಾಂಜಿ, ಗೋರಿಲ್ಲಾಗಳಂತೆ ದೇಹವನ್ನು ಹೊಂದಿದ್ದು, ಕೈಬೆರಳುಗಳು ಒರಟಾಗಿದ್ದು ಭೂಮಿಯನ್ನು ಅಗೆದು ಸಿಗುವ ಗೆಡ್ಡೆ ಗೆಣಸುಗಳನ್ನು ತಿಂದು ಜೀವನ ಸಾಗಿಸುತ್ತಿದ್ದರು. ತಮ್ಮ ಭಾವನೆಗಳನ್ನ ತಮ್ಮದೆ ಆದ ಭಾಷೆಯಲ್ಲಿ ಇಂದಿನ ಮಂಗಗಳಂತೆ ವ್ಯಕ್ತಪಡಿಸುತಿದ್ದು ಚೀರಾಡುವುದರ ಮೂಲಕ ತಮ್ಮ ನೋವು/ಭಯವನ್ನ ವ್ಯಕ್ತಪಡಿಸಿ ಕ್ರೂರ ಪ್ರಾಣಿಗಳಿಂದ ಹಾಗೂ ಭಯಾನಕ ಪರಿಸ್ಥಿತಿಗಳಿಂದ ತಪ್ಪಿಸಿಕೊಳ್ಳುತ್ತಿದ್ದರು.

ಭಯಾನಕ ಸ್ಥಿತಿಯಲ್ಲಿ ಜೀವನ ಸಾಗಿಸುತ್ತಿದ್ದ ಮಾನವರು ತಮ್ಮ ರಕ್ಷಣೆಗಾಗಿ ಗುಂಪುಗಳಲ್ಲಿ ವಾಸ ಮಾಡುವುದನ್ನ ಮೈಗೂಡಿಸಿಕೊಂಡಿದ್ದರು. ಸಾಮೂಹಿಕ ಬೇಟೆ, ಸಾಮೂಹಿಕ ನೆಲೆ, ಸಾಮೂಹಿಕ ಹೋರಾಟ, ಸಾಮೂಹಿಕ ಆಹಾರ ಸಂಗ್ರಹಣೆ ಹೀಗೆ ಸಾಮೂಹಿಕವಾಗಿ ಜೀವನ ನಡೆಸುತಿದ್ದ ಮಾನವನ ಗುಂಪಿನ ಸಂಖ್ಯೆ ಹೆಚ್ಚಾಗುತ್ತಿದ್ದಂತೆ ಆಹಾರದ ಕೊರತೆ, ಗುಂಪಿನ ನಾಯಕತ್ವದ ಭಿನ್ನಾಭಿಪ್ರಾಯ, ಸಾಂಕ್ರಾಮಿಕ ರೋಗಗಳು ಇತ್ಯಾದಿಗಳಿಂದ ಗುಂಪುಗಳು ಒಡೆದು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗುತ್ತಿದ್ದು ತಮಗೆ ಅನುಕೂಲಕರವೆನಿಸಿದ ಸ್ಥಳಗಳಲ್ಲಿ ನೆಲೆನಿಲ್ಲಲು ಯತ್ನಿಸುತ್ತಿದ್ದರು. ಮಾನವನ ಆರಂಭದ ಜೀವನವು ಬೇಟೆಯಿಂದ ನಡೆಯು ತಿದ್ದು, ಬೆಂಕಿಯ ಉಪಯೊಗ ತಿಳಿದ ನಂತರ ಬೇಟೆಯಲ್ಲಿ ದೊರೆತ ಪ್ರಾಣಿಗಳನ್ನ ಬೆಂಕಿಯಲ್ಲಿ ಸುಟ್ಟು ಮಾಂಸವನ್ನ ಸಾಮೂಹಿಕವಾಗಿ ಹಂಚಿ ತಿನ್ನುತಿದ್ದರು. ಪ್ರಕೃತಿಯ ಬದಲಾವಣೆ ಯೊಂದಿಗೆ ಮಾನವನ ಬುದ್ದಿಯು ವಿಕಾಸವಾಗತೊಡಗಿತು, ಕೃಷಿಯ



ಚಿತ್ರ ೧.೧ ಆದಿಮಾನವರು

ಪ್ರಾಮುಖ್ಯತೆಯನ್ನ ಅರಿತು ಕೃಷಿ ಚಟುವಟಿಕೆಗಳಲ್ಲಿ ತೊಡಗುತಿದ್ದು ತಮ್ಮದೇ ಆದ ಭಾಷೆಯನ್ನ ಬಳಸಿ ತಮ್ಮ ಸಂಗಡಿಗರೊಂದಿಗೆ ವ್ಯವಹರಿಸುವಂತಾದರು. ಹರಿದು ಹಂಚಿಹೋದ ಮಾನವರ ಗುಂಪುಗಳು ಪ್ರಪಂಚದ ವಿವಿಧ ಭಾಗಗಳಲ್ಲಿ ವಿವಿಧ ಭಾಷೆ, ಸಂಸ್ಕೃತಿಯೊಂದಿಗೆ ವಿಭಿನ್ನ ಜೀವನ ನಡೆಸಲು ಆರಂಭಿಸಿದರು. ಹೀಗೆ ವಿಂಗಡಗೊಂಡ ಗುಂಪುಗಳು ಪರಿಸರಕ್ಕೆ ಹೊಂದಿಕೆಯಾಗುವಂತ ವಿವಿಧ ವೃತ್ತಿಗಳಲ್ಲಿ ತೊಡಗಿದರು. ಆ ರೀತಿಯಲ್ಲಿ ಮಾನವರು ಆಯ್ಕೆ ಮಾಡಿಕೊಂಡ ವೃತ್ತಿಗಳೆಂದರೆ ಬೇಟೆ, (ಬೇಟೆಗಾರರ ಗುಂಪು), ಪಶುಪಾಲನೆ, (ಪಶುಪಾಲಕರ ಗುಂಪು) ಕೃಷಿ (ಕೃಷಿಕರ ಗುಂಪು).

ಚಿತ್ರ: ೧.೨ ಆದಿಮ ದಂಪತಿಗಳು



ಬೇಟೆಗಾರರ ಗುಂಪು ಬೇಟೆಯನ್ನೆ ತಮ್ಮ ಜೀವನಕ್ಕಾಗಿ ಮುಖ್ಯ ವೃತ್ತಿಯನ್ನಾಗಿಸಿಕೊಂಡರೆ, ಪಶುಪಾಲಕರ ಗುಂಪು ಪಶುಪಾಲನೆಯನ್ನ ತಮ್ಮ ಜೀವನಕ್ಕಾಗಿ ಮುಂದುವರಿಸಿದರು. ಹಾಗೆಯೇ ಕೃಷಿಕರ ಗುಂಪು ಕೃಷಿಯನ್ನೆ ತಮ್ಮ ಜೀವನಕ್ಕಾಗಿ ಮುಂದುವರೆಸಿದರು. ಈ ರೀತಿಯಲ್ಲಿ ವಿವಿಧ ವೃತ್ತಿಗಳನ್ನ ಕೈಗೊಂಡ ಗುಂಪುಗಳಲ್ಲಿ ಮೊದಲಿಗೆ ನೆಲೆನಿಂತ ಗುಂಪೆ ಕೃಷಿಕರ ಗುಂಪು. ಆನಂತರದಲ್ಲಿ ನೆಲೆಯೂರಲೆತ್ನಿಸಿದ ಸಮುದಾಯವೇ ಪಶುಪಾಲಕರ ಗುಂಪು. ಈ ಎರಡು ಗುಂಪುಗಳ ಕಾರ್ಯಚಟುವಟಿಕೆಗಳಿಂದ ದೂರ ಉಳಿದು ಪರ್ವತಗಳಲ್ಲಿ, ಗೊಂಡಾರಣ್ಯಗಳಲ್ಲಿ ನೆಲೆನಿಂತು ಬೇಟೆಯನ್ನೆ ಜೀವನಕ್ಕಾಗಿ ಮುಂದುವರೆಸಿದ ಗುಂಪುಗಳು ಆದಿವಾಸಿ ಸಮುದಾಯಗಳಾಗಿ ಹೊರಹೊಮ್ಮಲ್ಪಟ್ಟವು.

"ಭಾರತ ದೇಶದಲ್ಲಿ ಮಾನವನ ಉಗಮವು ಸುಮಾರು ಕ್ರಿ.ಪೂ. ೨೫೦೦೦೦ ವರ್ಷಗಳ ಹಿಂದೆ ಇತ್ತೆಂಬುದನ್ನು ಇಲ್ಲಿ ದೊರೆತಿರುವ ಹಳೆ ಶಿಲಾಯುಗದ ಪಳಿಯುಳಿಕೆಗಳ ಆಧಾರದ ಮೇಲೆ ಗುರ್ತಿಸಲಾಗಿದೆ"(ಪಾಲಾಕ್ಷ:೧೯೯೮:೮). ಅವನ ಆರಂಭದ ದಿನಗಳು ತುಂಬ ಕಷ್ಟಕರ ಆಗಿದ್ದುದರಿಂದ ಮಾನವ ಇತರೆ ಜೀವಿಗಳಂತೆ ಪರಾವಲಂಬಿ ಜೀವನ ನಡೆಸುತಿದ್ದನು, ತನ್ನ ಸಂತತಿಯ ಅಳಿವು ಮತ್ತು ಉಳಿವಿಗಾಗಿ ದಿನನಿತ್ಯ ತನ್ನ ಶತ್ರುಗಳೊಂದಿಗೆ ನಿರಂತರ ಹೋರಾಟದಲ್ಲಿ ನಿರತನಾಗಿರಬೇಕಾಗಿತ್ತು, ತನ್ನ ಸಂತತಿಯ ಉಳಿವು ಮತ್ತು ಬೆಳವಿನೊಂದಿಗೆ ತಾನೂ ಬದುಕಿ ತನ್ನೊಂದಿಗೆ ಇತರೆ ಜೀವ ಸಂಕುಲಗಳ ಬೆಳವಣಿಗೆಗೆ ಅನುಕೂಲಕರವಾದ ನೀತಿ ನಿಯಮಗಳನ್ನ ರೂಪಿಸಿದ ಜೀವಿಗಳಲ್ಲಿ ಮಾನವ ಮೊದಲಿಗನು. ಹೀಗೆ ಮಾನವ ಒಂದು ಸಾಮಾಜಿಕ ಹಾಗೂ ಸಾಂಘಿಕ ಜೀವಿಯಾಗಿ ಹೊರಹೊಮ್ಮಿ ಇತರೆ ಜೀವಿಗಳಿಗಿಂತ ಭಿನ್ನವೆನಿಸಿಕೊಂಡನು.

ಭಾರತದಲ್ಲಿ ಸಿಂಧೂ ನದಿಯ ನಾಗರೀಕತೆಯ ಜೊತೆ ಜೊತೆಯಲ್ಲಿಯೇ ಆದಿಮ ಸಮುದಾಯಗಳ ಉಗಮವು ಸಾಗಿಬಂದಿರುವುದನ್ನ ಐತಿಹಾಸಿಕವಾಗಿ ದೊರೆತಿರುವ ಪ್ರಾಕ್ತನ ಆಧಾರಗಳು, ಭೂ ಉತ್ಖನನಗಳು ಇತ್ಯಾದಿಗಳಿಂದ ಧೃಡಪಟ್ಟಿರುವದನ್ನ ಇತಿಹಾಸದಲ್ಲಿ ನಾವು

ಕಾಣಬಹುದಾಗಿದೆ. ಕರ್ನಾಟಕದಲ್ಲಿ ಆದಿಮಾನವನ ಅವಶೇಷಗಳನ್ನ ರಾಯಚೂರು, ಕೊಪ್ಪಳ, ಬಳ್ಳಾರಿ, ತುಮಕೂರು, ಚಿತ್ರದುರ್ಗ, ಮೈಸೂರು ಇತ್ಯಾದಿ ಭಾಗಗಳಲ್ಲಿ ಆಂಗ್ಲ ಸಂಶೋಧಕರು ಬ್ರೂಸ್ ಫೂಟ್ ರವರ ಅಧ್ಯಕ್ಷತೆಯಲ್ಲಿ ಸಂಶೋಧಿಸಿದರು. ಗಣರಾಜ್ಯಗಳ ಅವನತಿಯೊಂದಿಗೆ ಮಗಧ ರಾಜ್ಯದ ಸ್ಥಾಪನೆಯ ನಂತರದ ಐತಿಹಾಸಿಕಬೆಳವಣಿಗೆಗಳಾಗಿವೆ. ಒಮ್ಮೆ ಪ್ರಸಿದ್ಧವಾದ ಸಂಸ್ಥಾನಗಳು ಮುರಿದು ಬಿದ್ದರೆ ಮತ್ತೊಂದೆಡೆ ಸಂಸ್ಥಾನದ ನಾಯಕರು, ಮಂತ್ರಿಗಳು, ಸೇನಾ ಸಿಬ್ಬಂದಿ, ತಮ್ಮ ಶತ್ರುಗಳಿಂದ ಜೀವರಕ್ಷಣೆಗೆ ಗುಡ್ಡಗಾಡುಗಳಲ್ಲಿ ಅವಿತುಕೊಂಡು ಜೀವನ ಸಾಗಿಸುತಿದ್ದರು, ಹೀಗೆ ತಮ್ಮ ಜೀವನದ ಹಿಂದಿನ ದಿನಗಳನ್ನ ಮರೆತು ಅರಣ್ಯವಾಸಿಗಳಾಗಿ ಇಂದಿನ ಆದಿಮ ಮಾನವರಾಗಿ ಜೀವನವನ್ನ ನಡಸುತ್ತಿರುವದನ್ನೂ ಸಹ ನಾವು ಇತಿಹಾಸದ ಗ್ರಂಥಗಳಿಂದ ತಿಳಿಯಬಹುದು.

೧.೨ ವಿಷಯ ನಿರೂಪಣೆ

ಭಾರತ ಸ್ವಾತಂತ್ರ್ಯ ಪಡೆದು ಆರು ದಶಕಗಳನ್ನ ಕಳೆದರೂ ಸಹ ಮುಖ್ಯ ವಾಹಿನಿಯೊಂದಿಗೆ ಗುರುತಿಸಿಕೊಳ್ಳಲು ಸಾದ್ಯವಾಗದ, ಇಂದಿಗೂ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಪರಿಸ್ಥಿತಿಯಲ್ಲಿ ಏಳ್ಗೆ ಕಾಣದೆ ಹೀನಾಯ ಸ್ಥಿತಿಯಲ್ಲಿ ಹಲವಾರು ಸಮುದಾಯಗಳು ಜೀವನ ಸಾಗಿಸುತ್ತಿವೆ. ಈ ರೀತೀಯ ಶೋಚನೀಯ ಜೀವನ ನಡೆಸುತ್ತಿರುವ ಜೇನು ಕುರುಬ ಮತ್ತು ಕೊರಗ ಸಮುದಾಯಗಳು ಆದಿಮ ಸಮುದಾಯಗಳೆಂದು ಗುರ್ತಿಸಿಕೊಂಡು ದಶಮಾನಗಳು ಕಳದಿವೆಯಾದರು ಈ ಸಮುದಾಯಗಳಿಗಾಗಿ ರೂಪಿಸಿದ ವಿಶೇಷ ಯೋಜನೆಗಳು ಇಂದಿಗೂ ತಲಪುತ್ತಿಲ್ಲ. ಅಭಿವೃದ್ಧಿ ಯೋಜನೆಗಳನ್ನು ಮುಂದಿಟ್ಟುಕೊಂಡು ಅವರ ಮೂಲ ನೆಲೆಗಳಿಂದ ಅರಣ್ಯವಾಸಿಗಳನ್ನು ಸ್ಥಳಾಂತರಿಸಿರುವುದರಿಂದ ಅವರ ಜೀವನ ಮತ್ತಷ್ಟು ಶೊಚನೀಯ ಸ್ಥಿತಿಗೆ ತಲಪುವಂತಾಗಿದೆ.

ಭಾರತ ಸರ್ಕಾರ ಕರ್ನಾಟಕ ರಾಜ್ಯದಲ್ಲಿ ೫೦ ಸಮುದಾಯಗಳನ್ನ ಪರಿಶಿಷ್ಟ ವರ್ಗಗಳೆಂದು ಗುರ್ತಿಸಿ ಅನುಸೂಚಿತ ಪಟ್ಟಿಯಲ್ಲಿ ಸೇರಿಸಿದೆ. ಅವುಗಳಲ್ಲಿ ಆದಿಮ ಸಂಸ್ಕೃತಿ, ಆದಿಮ ಬೇಸಾಯ ಪದ್ಧತಿ, ಹಿಂದುಳಿದ ಶೈಕ್ಷಣಿಕ ಹಾಗೂ ಆರ್ಥಿಕ ಸ್ಥಾನಮಾನಗಳನ್ನೊಂದಿರುವ ಜೇನುಕುರುಬ ಮತ್ತು ಕೊರಗ ಬುಡಕಟ್ಟುಗಳನ್ನ ಆದಿಮ ಬುಡಕಟ್ಟುಗಳೆಂದು ಗುರ್ತಿಸಿದೆ. ಜೇನುಕುರುಬರು ಮುಖ್ಯವಾಗಿ ರಾಜ್ಯದ ಮೈಸೂರು, ಕೊಡಗು ಜಿಲ್ಲೆಗಳಲ್ಲಿ ಕೇಂದ್ರಿಕೃತವಾಗಿದ್ದರೆ, ಕೊರಗರು ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಹೆಚ್ಚಾಗಿ ವಾಸಿಸುತಿದ್ದಾರೆ.

ಕೊಷ್ಟಕ : ೧.೧ ಕರ್ನಾಟಕದ ಜೇನು ಕುರುಬ ಮತ್ತು ಕೊರಗ ಆದಿಮ ಬುಡಕಟ್ಟುಗಳ ಜನಸಂಖ್ಯೆ

ವರ್ಷ	ಒಟ್ಟು ಬುಡಕಟ್ಟು ಜನಸಂಖ್ಯೆ	ಜೇನು ಕುರುಬ	ಕೊರಗ
೧೯೯೧	೧೯,೧೫,೬೯೧	೨೯,೩೭೧	೧೬,೩೨೨
೨೦೦೧	೩೪,೬೩,೯೮೬	೨೯,೮೨೮	೧೬,೦೭೧

ಮೂಲ: ಭಾರತ ಜನಗಣತಿ ೧೯೯೧ & ೨೦೦೧

ರಾಜ್ಯ/ಕೇಂದ್ರ ಸರ್ಕಾರಗಳು ಸ್ವಾತಂತ್ರ್ಯಾನಂತರ ಹಲವಾರು ಯೋಜನೆಗಳನ್ನ ರೂಪಿಸಿಕೊಂಡು ಬುಡಕಟ್ಟು ಜನರ ಸರ್ವತೋಮುಖ ಅಭಿವೃದ್ಧಿಗಾಗಿ ಕಾರ್ಯನಿರ್ವಹಿಸುತ್ತಿವೆಯಾದರೂ ಮುಖ್ಯವಾಹಿನಿಗೆ ಸಮೀಪಬಲ್ಲಿರುವ ಸಮುದಾಯಗಳು

ಸರ್ಕಾರದ ಯೋಜನೆಗಳನ್ನ ಆದಿಮ ಸಮುದಾಯಗಳಿಗೆ ಸಮರ್ಥವಾಗಿ ತಲುಪಿಸುವಲ್ಲಿ ವಿಫಲವಾಗಿವೆ. ಈ ಎರಡು ಸಮುದಾಯಗಳನ್ನ ಕುರಿತು ಇದುವರೆಗೆ ಯಾವುದೇ ನಿರ್ದಿಷ್ಟ ಅಧ್ಯಯನಗಳು ನಡೆದಿರುವುದಿಲ್ಲ. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಜನರ ಅವಶ್ಯಕತೆಗಳನ್ನ ಅರ್ಥೈಸಿಕೊಂಡು ಅವರ ಸರ್ವತೋಮುಖ ಅಭಿವೃದ್ಧಿಗಾಗಿ ಯೋಜನೆಗಳನ್ನ ರೂಪಿಸಲು ಹೆಚ್ಚು ಹೆಚ್ಚು ಅಧ್ಯಯನಗಳು ನಡೆಯಬೇಕಾಗಿದೆ, ಸಮಾಜಕಾರ್ಯದ ಹಿನ್ನೆಲೆಯಲ್ಲಿ ಆದಿಮ ಬುಡಕಟ್ಟುಗಳಾದ ಜೇನುಕುರುಬ ಹಾಗೂ ಕೊರಗ ಬುಡಕಟ್ಟುಗಳ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಅವಶ್ಯಕತೆಗಳು ಮತ್ತು ಸಮಸ್ಯೆಗಳ ಬಗೆಗೆ ಅರಿಯುವುದು ಅವಶ್ಯಕವೆಂಬ ದೃಷ್ಟಿಯಿಂದ ಆ ಸಮುದಾಯಗಳನ್ನು ಅನುಲಕ್ಷಿಸಿ ವಿಮರ್ಶಾತ್ಮಕ ಅಧ್ಯಯನವನ್ನು ಇಲ್ಲಿ ಕೈಗೊಳ್ಳಲಾಗಿದೆ.

೧.೩ ಬುಡಕಟ್ಟುಗಳ ಕುರಿತು ನಡೆದ ಅಧ್ಯಯನಗಳ ಪರಾಮರ್ಶೆ

ಬುಡಕಟ್ಟುಗಳ ಬಗೆಗೆ ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಅಧ್ಯಯನಗಳಾಗಿದ್ದರೂ ಆದಿವಾಸಿ ಬುಡಕಟ್ಟುಗಳ ಅಭಿವೃದ್ಧಿಯ ಕುರಿತು ಅಧ್ಯಯನಗಳಾಗಿಲ್ಲದಿರುವುದು ಕಂಡುಬರುತ್ತದೆ. ಈಗಾಗಲೆ ಬುಡಕಟ್ಟುಗಳ ಕುರಿತು ಕೈಗೊಂಡಿರುವ ಹೆಚ್ಚು ಅಧ್ಯಯನಗಳು ಅವರ ಕುರಿತಾದ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಸಾಹಿತ್ಯಾಧ್ಯಯನಗಳಾಗಿವೆ. ಅಪರೂಪಕ್ಕೆ ಅಲ್ಲೊಂದು ಇಲ್ಲೊಂದು ಪತ್ರಗಳಲ್ಲಿ ಹಾಗೂ ಲೇಖನಗಳಲ್ಲಿ ಮಾತ್ರ ಬುಡಕಟ್ಟು ಜನರ ಆರ್ಥಿಕ ಬದುಕಿನ ಬಗೆಗೆ ಪ್ರಸ್ತಾಪಿಸಲಾಗಿದೆ. ಅಂತಹ ಕೆಲವು ಪ್ರಕಟಣೆಗಳೆಂದರೆ ಎಡ್ಗರ್ ಥರ್ಸ್ಟನ್ [೧೯೦೯], ಎಥ್‌ವರ್ಡ ಗೋರ್ಸ್ಮ್ಯಾನ್ [೧೯೨೩], ಅನಂತಕೃಷ್ಣ ಅಯ್ಯರ [೧೯೩೫], ಮಜುಮ್‌ದಾರ್ [೧೯೫೦-೫೬], ರಾಬರ್ಟ ಹೆಚ್ ಲೂಹಿ [೧೯೩೫], ಆರ್ ಸಿ ದುಬೆ [೧೯೫೬ ಮತ್ತು ೧೯೬೭], ಶ್ರೀನಿವಾಸ್ ಎಮ್ ಎನ್ [೧೯೬೭], ಘೋಸ್ [೧೯೬೩ ಮತ್ತು ೧೯೭೦], ಲೂಯಿಜ್ ಎ ಎ ಡಿ[೧೯೬೩] ವಿದ್ಯಾರ್ಥಿ [೧೯೬೬-೭೦], ಸಿನ್ಹ [೧೯೬೮], ಹೆಗ್ಗಡೆ ಎಲ್ ಕೆ [೧೯೭೭], ಬಹದ್ದೂರ್ ಕೆ ಪಿ [೧೯೭೮], ಕೃಷ್ಣಯ್ಯ [೧೯೮೭], ಸಿಂಗ್ ಕೆ ಎಸ್ [೧೯೯೦-೯೩], ಮೀನಾಕ್ಷಿ ಹೋಜಾ [೧೯೯೬], ಮೈತ್ರಿ ಕೆ ಎಂ [೧೯೯೪], ಮಹೇಂದ್ರ ಮೋಹನ್ ವರ್ಮ [೨೦೦೩], ಆರ್ ಸಿ ವರ್ಮ [೨೦೦೪] ಮುಂತಾದವರು.

ಹಲವಾರು ವಿದ್ವಾಂಸರು ಬುಡಕಟ್ಟು ಸಮುದಾಯಗಳ ಸ್ವಾತಂತ್ರ್ಯ, ಸಾಮಾಜಿಕ, ಸಾಂಸ್ಕೃತಿಕ ಜೀವನದ ಬಗೆಗೆ ಒತ್ತನ್ನ ಕೊಟ್ಟಿದ್ದು ಅವರ ಆರ್ಥಿಕ ಶೈಕ್ಷಣಿಕ ಬದುಕಿಗೆ ಒತ್ತನ್ನು ನೀಡದೆ ಇರುವುದು ಕೃತಿಗಳ ಮೂಲಕ ತಿಳಿದು ಬರುತ್ತದೆ. ಬುಡಕಟ್ಟು ಜನರು ಮೂಲತಃ ಸ್ವತಂತ್ರ ಜೀವಿಗಳಾಗಿದ್ದು ಸಂಕೋಚ ಸ್ವಭಾವದವರಾದುದರಿಂದ ಅವರ ಕುರಿತು ಹೆಚ್ಚಿನ ಅಧ್ಯಯನಗಳು ನಡೆಯದೇ ಇರಬಹುದು.

ಭಾರತ ಸ್ವಾತಂತ್ರ್ಯ ಪಡೆದ ನಂತರ ಬುಡಕಟ್ಟು ಜನರನ್ನ ಮುಖ್ಯವಾಹಿನಿಯತ್ತ ತರಲು ಹಲವಾರು ಕಾರ್ಯಕ್ರಮಗಳನ್ನ ಹಮ್ಮಿಕೊಂಡು, ಆರ್ಥಿಕ ಅಭಿವೃದ್ಧಿಗಾಗಿ ಹಲವಾರು ಅಭಿವೃದ್ಧಿಪರ ಯೋಜನೆಗಳನ್ನು ಜಾರಿಗೆ ತರುವ ಬೆನ್ನಲ್ಲೆ, ರಾಷ್ಟ್ರದ ಇತರೆ ಭಾಗಗಳಿಗೆ ರಸ್ತೆ ಮತ್ತು ರೈಲುಸಂಪರ್ಕ ಕಲ್ಪಿಸಲು ಅನುಕೂಲಕರವಾದ ಮಾರ್ಗಗಳನ್ನ ಆಯ್ಕೆಮಾಡಿ ಕೊಳ್ಳಲಾಯಿತು. ಆ ಒಂದು ಸಮಯದಲ್ಲಿ ಬುಡಕಟ್ಟು ಹಾಡಿಗಳು, ಅರಣ್ಯಗಳನ್ನ ಗುಡ್ಡಗಾಡು ಪ್ರದೇಶಗಳನ್ನ ಸರ್ಕಾರ ತನ್ನ ತೆಕ್ಕೆಗೆ ತೆಗೆದುಕೊಂಡಿದ್ದರಿಂದ ಬುಡಕಟ್ಟು ಜನರು ತಮ್ಮ ಮೂಲ ನೆಲೆಗಳನ್ನ ಕಳೆದುಕೊಳ್ಳುವಂತಾಯಿತು.

ಕ್ರಿಶ್ಚಿಯನ್ ಮಿಶಿನರಿಗಳು ಈ ಮಧ್ಯೆ ಬುಡಕಟ್ಟು ಜನರ ಮುಗ್ಧತೆ ಹಾಗೂ ಬಡತನವನ್ನೇ ಬಂಡವಾಳವಾಗಿಸಿಕೊಂಡು ಅವರನ್ನು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಿಸಿರುವ ಉದಾಹರಣೆಗಳುಂಟು ಮತ್ತು ಬುಡಕಟ್ಟುಗಳನ್ನು ಅವರ ಮೂಲ ನೆಲೆಗಳಿಂದ ಗುಳೆಯಬ್ಬಿಸಿದ ಸಂಗತಿಗಳನ್ನ ಕಾಣಬಹುದು. ಅಲ್ಲದೇ ಅದೇ ಸಂದರ್ಭದಲ್ಲಿ ಬ್ರಿಟೀಷರು ಬುಡಕಟ್ಟು ಜನರನ್ನ ತಮ್ಮ ಕಾಫಿ, ಟೀ ತೋಟಗಳಲ್ಲಿ ಕೂಲಿ ಕೆಲಸಗಾರರನ್ನಾಗಿ ಸೇರಿಸಿಕೊಂಡು ತಮ್ಮ ಗುಲಾಮರನ್ನಾಗಿಸಿಕೊಂಡರು. ಇದುವರೆಗೂ ಕೈಗೊಂಡಿರುವ ಬುಡಕಟ್ಟು ಜನರ ಬಗೆಗಿನ ಅಧ್ಯಯನಗಳು ಅವರ ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿಗೆ ಮೀಸಲಾಗಿವೆ ವಿನಃ ಅವರ ಆರ್ಥಿಕ, ಶೈಕ್ಷಣಿಕ ಬದುಕಿಗೆ ಒತ್ತು ಕೊಟ್ಟವುಗಳಲ್ಲ. ಈ ಸ್ಥಿತಿಯನ್ನ ಸಂಶೋಧನಾ ಅಂತರ" ಅಥವಾ ಸಂಶೋಧನಾ ಕೊರತೆ ಎನ್ನಬಹುದು.

೧.೪ ಅಧ್ಯಯನದ ಉದ್ದೇಶಗಳು

ಅಧ್ಯಯನದ ಉದ್ದೇಶಗಳು ಮುಖ್ಯವಾಗಿ ಬುಡಕಟ್ಟು ಜನರಿಗಾಗಿ ರೂಪಿಸಿರುವ ಯೋಜನೆಗಳು ಅವುಗಳ ಕಾರ್ಯರೂಪ ಮತ್ತು ಬುಡಕಟ್ಟು ಜನರ ಬದುಕಿನಲ್ಲಿ ಉಂಟಾಗಿರುವ ಬದಲಾವಣೆಗಳು ಮತ್ತು ಎದುರಿಸುತ್ತಿರುವ ಸಮಸ್ಯೆಗಳ ಬಗೆಗೆ ವಿಮರ್ಶಾತ್ಮಕವಾಗಿ ಅಧ್ಯಯನಿಸುವುದಾಗಿದ್ದು, ಅಧ್ಯಯನದ ಉದ್ದೇಶಗಳನ್ನ ಈ ಕೆಳಗಿನಂತೆ ಗುರ್ತಿಸಲಾಗಿದೆ.

ಸಂಶೋದನೆಯ ಮುಖ್ಯ ಉದ್ದೇಶ ಮಾನವನ ಬದುಕನ್ನ ಅಸನುಗೊಳಿಸುವುದು ಹಾಗೂ ಸಮಸ್ಯೆಗಳ ಸಂಕೋಲೆಗಳಿಂದ ಹೊರತರುವುದೇ ಆಗಿದೆ. ಇಲ್ಲವಾದಲ್ಲಿ ಅದು ಸಂಶೋದನೆಯಾಗದೆ ಸಂಕೋಲೆಗಳ ಸರಮಾಲೆಯಾಗಿ ಸಮಸ್ಯೆಗಳಿಗೆ ಪುಷ್ಠಿನೀಡುವ ಹೊರೆಬಂಡಿಯಾಗುವುದು.ಈ ಸಂಶೋದನೆಯು ಆದಿಮ ಸಮುದಾಯಗಳ ಅಭಿವೃದ್ಧಿಗೆ ಹೊರೆಬಂಡಿಯಾಗದೆ ಅವರ ಸಂಸ್ಕೃತಿಯ ಸಂರಕ್ಷಣೆಯೊಂದಿಗೆ ಅಭಿವಿವೃದ್ಧಿಯತ್ತ ಕೊಂಡೊಯ್ಯುವ ವಾಯುವಾಹನವಾಗಿದೆ.

- ಸ್ವಾತಂತ್ರ್ಯಾನಂತರದಲ್ಲಿ ಬುಡಕಟ್ಟು ಜನರ ಕಲ್ಯಾಣಕ್ಕಾಗಿ ರೂಪಿಸಲ್ಪಟ್ಟ ಕಲ್ಯಾಣ ಮತ್ತು ಅಭಿವೃದ್ಧಿ ಯೋಜನೆಗಳನ್ನ ಕೂಲಂಕುಶವಾಗಿ ವಿಮರ್ಶಿಸಲಾಗಿದೆ.
- ಪಂಚವಾರ್ಷಿಕ ಯೋಜನೆಗಳಲ್ಲಿ ಬುಡಕಟ್ಟು ಜನರ ಕಲ್ಯಾಣಕ್ಕಾಗಿ ಮೀಸಲಿಡಲ್ಪಟ್ಟ ಸಂಪನ್ಮೂಲಗಳ ಬಳಕೆಯ ಕೊರತೆಯನ್ನ ಚರ್ಚಿಸಲಾಗಿದೆ.
- ಕಾರ್ಯಕ್ರಮಗಳ ಜಾರಿಯಲ್ಲಿ ಬುಡಕಟ್ಟು ಜನರ ಬೇಕು-ಬೇಡಗಳ ಪರಿಗಣನೆಯ ಸಾಂದ್ರತೆಯನ್ನ ವಿಮರ್ಶಿಸಲಾಗಿದೆ.
- ಯೋಜನೆಗಳ ರಚನೆ ಮತ್ತು ಕಾರ್ಯಗತಗೊಳಿಸುವಲ್ಲಿ ಬುಡಕಟ್ಟು ಜನರ ಪಾಲ್ಗೊಳ್ಳುವಿಕೆಯನ್ನ ಪರಾಮರ್ಶಿಸಲಾಗಿದೆ.
- ಪ್ರಸ್ತುತವಿರುವ ಯೋಜನೆಗಳನ್ನ ಕಾರ್ಯಗತಗೊಳಿಸುವಲ್ಲಿ ಉಂಟಾಗುವ ಎಡರು ತೊಡರುಗಳನ್ನ ವಿವರಿಸಿರುವುದು.
- ಯೋಜನೆಗಳನ್ನ ಫಲಪ್ರದವಾಗಿ ಕಾರ್ಯಗತಗೊಳಿಸಲು ಕೈಗೊಳ್ಳಬೇಕಾದ ಕ್ರಮಗಳು ಮತ್ತುಕಾರ್ಯಕ್ರಮಗಳ ಜಾರಿಯಲ್ಲಿ ವಹಿಸಬೇಕಾದ ಎಚ್ಚರಿಕೆಗಳನ್ನ ಚರ್ಚಿಸಲಾಗಿದೆ.
- ಜೇನುಕುರುಬ ಮತ್ತು ಕೊರಗ ಆದಿಮ ಸಮುದಾಯಗಳು ಯಾವ ಮಟ್ಟದಲ್ಲಿ ಸೌಲಭ್ಯ ಪಡೆಯುವಲ್ಲಿ ಯಶಸ್ವಿಯಾಗಿವೆ ಎಂಬುದನ್ನ ವಿಮರ್ಶಿಸಿರುವುದು.
- ಈ ಎರಡು ಆದಿಮ ಸಮುದಾಯಗಳನ್ನ ತಮ್ಮ ಸಂಸ್ಕೃತಿಯ ಜೊತೆಯಲ್ಲಿಯೇ ಸಮಾಜದ ಮುಖ್ಯವಾಹಿನಿಯತ್ತ ಕೊಂಡೊಯ್ಯಲು ಪ್ರಯತ್ನಿಸಲಾಗಿದೆ.

- ಬುಡಕಟ್ಟು ಸಮುದಾಯಗಳಿಗೆ ಸಂವಿದಾನ ಮತ್ತು ಇತರ ಕಾನೂನಿನಡಿಯಲ್ಲಿ ದೊರೆಯುವ ಸೌಲಭ್ಯಗಳ ಬಗೆಗೆ ಅರಿವು ಮೂಡಿಸುವುದಾಗಿದೆ.
- ಬುಡಕಟ್ಟು ಜನರಿಗೆ ಅಗತ್ಯವಿರುವ ಕಾರ್ಯಕ್ರಮಗಳು/ಯೋಜನೆಗಳು ಮತ್ತು ಪೂರಕ ಯೋಜನೆಗಳನ್ನ ರೂಪಿಸಲು ಶಿಫಾರಸ್ಸನ್ನ ಮಾಡಿರುವುದು.

ಮೇಲ್ಕಂಡ ಮುಖ್ಯ ಉದ್ದೇಶಗಳನ್ನ ನಿರೂಪಿಸುವ ಸಲುವಾಗಿ ಹಲವಾರು ವಿಭಾಗಗಳನ್ನು ರೂಪಿಸಿಕೊಳ್ಳಲಾಗಿದೆ.


- ಆದಿವಾಸಿ ಬುಡಕಟ್ಟುಗಳ ಕೃಷಿ ವ್ಯವಸ್ಥೆ
- ಆದಿವಾಸಿ ಬುಡಕಟ್ಟುಗಳ ಕೈಗಾರಿಕೆ ಮತ್ತು ಸೇವಾಕ್ಷೇತ್ರದಲ್ಲಿನ ಪ್ರಾತಿನಿಧ್ಯತೆ
- ಆದಿವಾಸಿ ಬುಡಕಟ್ಟುಗಳ ರಾಜಕೀಯ ಪ್ರಾತಿನಿಧ್ಯತೆ
- ಆದಿವಾಸಿ ಬುಡಕಟ್ಟುಗಳ ಆದಾಯದ ಮೂಲಗಳು
- ಆದಿವಾಸಿ ಬುಡಕಟ್ಟುಗಳ ಸಾಮಾಜಿಕ ಸ್ಥಾನಮಾನ
- ಆದಿವಾಸಿ ಬುಡಕಟ್ಟುಗಳ ಜನರಿಗೆ ಸರಕಾರಿ ಯೋಜನೆಗಳಿಂದಾದ ಪ್ರಯೋಜನಗಳು
- ಸರಕಾರದ ಆಶೋತ್ತರಗಳು / ಯೋಜನೆಗಳು

೧.೫ ಊಹೆಗಳು

- ಚಾಲ್ತಿಯಲ್ಲಿರುವ ಯೋಜನೆಗಳು ಬುಡಕಟ್ಟು ಜನರ ನೈಜ ಅವಶ್ಯಕತೆಗಳನ್ನ ಅರ್ಥಮಾಡಿಕೊಳ್ಳುವಲ್ಲಿ ವಿಫಲವಾಗಿವೆ.
- ಜಾರಿಗೊಳಿಸುತ್ತಿರುವ ಯೋಜನೆಗಳನ್ನ ಕಾರ್ಯರೂಪಗೊಳಿಸಿದಾಗ ಒಂದಲ್ಲ ಒಂದು ರೀತಿಯ ಕೊರತೆಯನ್ನ ಹೊಂದಿವೆ.
- ಯೋಜನಾ ನಿರೂಪಕರು ಮತ್ತು ಜಾರಿಗೊಳಿಸುತ್ತಿರುವ ವಿಭಾಗಗಳು ಬುಡಕಟ್ಟು ಜನರ ಮೂಲ ಸಮಸ್ಯೆಗಳನ್ನ ಅರ್ಥಮಾಡಿಕೊಳ್ಳುವಲ್ಲಿ ವಿಫಲವಾಗಿವೆ.
- ಹಲವಾರು ಯೋಜನೆಗಳು/ಕಾರ್ಯಕ್ರಮಗಳು/ಅಭಿವೃದ್ಧಿ ಕೆಲಸಗಳು ತಮ್ಮ ಉದ್ದೇಶಿತ ಗುರಿಗಳನ್ನ ಮುಟ್ಟುವಲ್ಲಿ ವಿಫಲವಾಗಿವೆ.
- ಯೋಜನೆಗಳು ಮತ್ತು ಕಾರ್ಯನೀತಿಗಳು ಕಾರ್ಯರೂಪಕ್ಕೆ ತಂದಾಗ ಅಸ್ಪಷ್ಟತೆಯಿಂದ ಕೂಡಿವೆ.
- ಯಾವುದೇ ನಿರ್ಧಾರಗಳನ್ನ ತೆಗೆದುಕೊಳ್ಳುವಾಗ ಬುಡಕಟ್ಟು ಜನರನ್ನ ಮತ್ತು ಅವರ ಅಗತ್ಯತೆಗಳನ್ನ ಪರಿಗಣನೆಗೆ ತೆಗೆದುಕೊಂಡಿರುವುದಿಲ್ಲ.

೧.೬ ಅಧ್ಯಯನದ ವ್ಯಾಪ್ತಿ

(ಅಧ್ಯಯನದ ದಕ್ಷತೆ ಹಾಗೂ ಸೂಕ್ಷ್ಮತೆಯ ದೃಷ್ಟಿಯಿಂದ) ಎಲ್ಲಾ ಬುಡಕಟ್ಟುಗಳನ್ನ ಅಧ್ಯಯನದ ವ್ಯಾಪ್ತಿಗೊಳಪಡಿಸದೆ ಕೇವಲ (ಎರಡು ಆದಿಮ ಸಮುದಾಯಗಳಾದ ಜೇನುಕುರುಬ ಮತ್ತು ಕೊರಗ ಸಮುದಾಯಗಳನ್ನ ಆಯ್ಕೆ ಮಾಡಿಕೊಂಡು ಅವರು



ಚಿತ್ರ: ೧.೩ ಆದಿಮ ಬುಡಕಟ್ಟುಗಳು ವಾಸಿಸುವ ಪಶ್ಚಿಮ ಘಟ್ಟಗಳ ಒಂದು ನೋಟ

ಹೆಚ್ಚಾಗಿ ವಾಸಮಾಡುವ ಮೈಸೂರು, ಕೊಡಗು ಹಾಗೂ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಸೀಮಿತ ಗೊಳಿಸಲಾಗಿದ್ದು ಆದಿವಾಸಿ ಬುಡಕಟ್ಟುಗಳ ಆರ್ಥಿಕ ಹಾಗೂ ಶೈಕ್ಷಣಿಕ ಪರಿಸ್ಥಿತಿ, ಸಮಸ್ಯೆಗಳು ಮತ್ತು ಪರಿಹಾರೋಪಾಯಗಳ ಬಗೆಗೆ ಸವಿಸ್ತಾರವಾಗಿ ಅಧ್ಯಯನಿಸಲಾಗಿದೆ.

೧.೭ ಸಂಶೋಧನಾ ವಿಧಾನ

ಜೇನುಕುರುಬ ಮತ್ತು ಕೊರಗ ಆದಿವಾಸಿ ಬುಡಕಟ್ಟುಗಳು ರಾಜ್ಯದಲ್ಲಿರುವ ಇತರ ಬುಡಕಟ್ಟು ಸಮುದಾಯಗಳಿಗೆ ಹೋಲಿಸಿದಲ್ಲಿ ಅತ್ಯಂತ ಹಿಂದುಳಿದ ಹಾಗೂ ಶೋಚನೀಯ ಸ್ಥಿತಿಯಲ್ಲಿ ಜೀವನ ನಡುಸುತ್ತಿರುವ ಆದಿವಾಸಿ ಬುಡಕಟ್ಟುಗಳಗಿರುವುದರಿಂದ ಈ ಎರಡು ಸಮುದಾಯಗಳ ಬಗೆಗೆ ಅತ್ಯಂತ ಸೂಕ್ಷ್ಮವಾಗಿ ಅಧ್ಯಯನಿಸುವುದರ ಅಗತ್ಯವಿದ್ದುದರಿಂದ ಯಾಧೃಚಿಕ (Random Sampling) ನ (Case study) ವಿಷಯ ಅಧ್ಯಯನ ವಿಧಾನವನ್ನ ಆಯ್ಕೆ ಮಾಡಿಕೊಳ್ಳಲಾಗಿದೆ. ಆದಿಮ ಬುಡಕಟ್ಟುಗಳ ಎಲ್ಲಾ ಕುಟುಂಬಗಳನ್ನು ಸಮೀಕ್ಷೆಗೊಳಪಡಿಸಲು ಸಾಕಷ್ಟು ಸಮಯ ಮತ್ತು ಸಂಪನ್ಮೂಲದ ಅವಶ್ಯಕತೆಯಿರುವುದರಿಂದ ಮತ್ತು ಈ ಅಧ್ಯಯನದ ಸ್ಪಷ್ಟತೆಗಾಗಿ ಅದು ಸಾಧ್ಯವಾಗದ ಕಾರಣ ಯಾಧೃಚಿಕ ವಿಧಾನವನ್ನ ಅಳವಡಿಸಿಕೊಂಡು ಆದಿಮ ಬುಡಕಟ್ಟು ಜನರು ವಾಸಿಸುವ ಹಾಡಿ/ ಗ್ರಾಮಗಳನ್ನ ಗುರುತಿಸಿ ಅವರ ಕುಟುಂಬಗಳನ್ನ ಸಮೀಕ್ಷಿಸಲಾಗಿದೆ.

೧.೮ ಸಮೀಕ್ಷೆಯ ವಿಧಾನ

ಜೇನು ಕುರುಬ ಮತ್ತು ಕೊರಗ ಸಮುದಾಯಗಳ ಸಮಗ್ರ ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಬದುಕಿನ ಬಗೆಗೆ ಅಧ್ಯಯಿನಿಸಲಿಕ್ಕಾಗಿ ಒಂದು ಸವಿಸ್ತಾರವಾದ ಪ್ರಶ್ನಾವಳಿಯನ್ನ (Questionnaire) ರೂಪಿಸಿ ಸಂದರ್ಶನ ವಿಧಾನದ (Interview Methods) ಮುಖಾಂತರ ಸಮೀಕ್ಷೆ ನಡೆಸಲಾಗಿದೆ. ಮೈಸೂರು, ಕೊಡಗು ಜಿಲ್ಲೆಗಳಲ್ಲಿ ಜೇನುಕುರುಬ ಮತ್ತು ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಕೊರಗ ಆದಿಮ ಬುಡಕಟ್ಟನ್ನ ಆಯ್ಕೆಮಾಡಿಕೊಂಡು ಅಧ್ಯಯನ ಕೈಗೊಳ್ಳಲಾಗಿದೆ. ಈ ಜಿಲ್ಲೆಗಳಲ್ಲಿ/ತಾಲ್ಲುಕುಗಳಲ್ಲಿ ಸಂಬಂದಿಸಿದ ಆದಿಮ ಬುಡಕಟ್ಟುಗಳ ಶೇಕಡ ೨೫ ರಷ್ಟು ಹಾಡಿಗಳನ್ನ ಅಂದರೆ ೧೪೪ ಹಾಡಿಗಳನ್ನ ಆಯ್ಕೆಮಾಡಿಕೊಂಡಿದ್ದು ಆ ಹಾಡಿಗಳಲ್ಲಿ ಯಾಧೃಚಿಕ ವಿಧಾನವನ್ನಳವಡಿಸಿಕೊಂಡು ಆದಿಮ ಬುಡಕಟ್ಟುಗಳ ಕುಟುಂಬಗಳನ್ನ ವಿಚಾರಣೆಯ ಮೂಲಕ ಗುರಿತಿಸಿ ಆನಂತರ ಮಾದರಿ ಸಮೀಕ್ಷೆಗೆ ಆಯ್ಕೆಮಾಡಿಕೊಂಡು ಸಮೀಕ್ಷೆಯನ್ನ ಕೈಗೊಳ್ಳಲಾಗಿದೆ.

ಲಂಬಚಿತ್ರ: ೧.೧. ಅಧ್ಯಯನಕ್ಕೆ ಆಯ್ದುಕೊಂಡ ಜೇನು ಕುರುಬ ಮತ್ತು ಕೊರಗರ ಹಾಡಿಗಳು



ಕೋಷ್ಟಕ: ೧.೨ ಕ್ಷೇತ್ರಕಾರ್ಯದ ಜಿಲ್ಲೆ, ತಾಲ್ಲೂಕು, ಹಾಡಿಗಳ ಸಂಖ್ಯೆ ಮತ್ತು ಜನಸಂಖ್ಯೆ

ಜಿಲ್ಲೆ, ತಾಲೂಕು	ಜೇನು ಕುರುಬರು			
	ಒಟ್ಟು ಹಾಡಿಗಳು	ಒಟ್ಟು ಕುಟುಂಬಗಳು	ಜನಸಂಖ್ಯೆ	ಸಮೀಕ್ಷೆ ಮಾಡಿದ ಹಾಡಿಗಳ ಸಂಖ್ಯೆ
ಮೈಸೂರು ಜಿಲ್ಲೆ	೨೦೧	೮೪೭೨	೧೫೭೫೯	೫೧
ಹೆಚ್ ಡಿ ಕೋಟೆ	೧೧೧	೪೪೩೩	೭೨೩೪	೨೮
ಹುಣಸೂರು	೫೨	೨೬೫೧	೫೫೯೦	೧೩
ನಂಜನಗೂಡು	೦೫	೨೨೫	೫೩೦	೨
ಪಿರಿಯಾಪಟ್ಟಣ	೩೨	೧೦೯೧	೨೪೦೫	೮
ಟಿ ನರಸಿಪುರ	೦೦	೦೦	೦೦	೦೦
ಕೆ ಆರ್ ನಗರ	೦೦	೦೦	೦೦	೦೦
ಮೈಸೂರು	೦೧	೭೨	೦೦	೦೦
ಕೊಡಗು ಜಿಲ್ಲೆ	೮೨	೨೦೫೦	೧೦,೦೩೭	೨೧
ಸೋಮವಾರಪೇಟೆ	೩೮	೬೩೪	೩೧೦೫	೧೦
ವಿರಾಜಪೇಟೆ	೪೪	೧೪೧೬	೬೯೩೨	೧೧
ಮಡಿಕೇರಿ	೦೦	೦೦	೦೦	೦೦
ಒಟ್ಟು	೨೮೩	೧೦೫೨೨	೨೫೭೯೧	೭೨

ಜಿಲ್ಲೆ, ತಾಲೂಕುಗಳು	ಕೊರಗರು			
	ಒಟ್ಟು ಹಾಡಿಗಳು	ಒಟ್ಟು ಕುಟುಂಬಗಳು	ಜನಸಂಖ್ಯೆ	ಸಮೀಕ್ಷೆ ಮಾಡಿದ ಹಾಡಿಗಳ ಸಂಖ್ಯೆ
ದಕ್ಷಿಣ ಕನ್ನಡ ಜಿಲ್ಲೆ	೨೦೯	೧೨೨೬	೪,೫೪೨	೫೧
ಮಂಗಳೂರು	೧೧೩	೭೭೩	೩೦೭೨	೨೮
ಬಂಟ್ವಾಳ	೩೧	೧೮೪	೬೧೮	೮
ಬೆಳ್ತಂಗಡಿ	೧೫	೧೦೬	೩೧೫	೪
ಸುಳ್ಯ	೯	೫೧	೧೬೫	೨
ಪುತ್ತೂರು	೪೧	೧೧೨	೩೭೨	೧೧
ಉಡುಪಿ ಜಿಲ್ಲೆ	೩೫೮	೩೩೦೮	೮೯೬೬	೯೧
ಉಡುಪಿ	೧೪೭	೧೦೩೬	೪೪೮೬	೩೭
ಕಾರ್ಕಳ	೮೭	೩೯೦	೧೫೯೮	೨೨
ಕುಂದಾಪುರ	೧೨೯	೬೫೬	೨೮೮೨	೩೨
ಒಟ್ಟು	೫೬೭	೪೫೩೪	೧೩೫೦೮	೧೪೨

೧.೯ ಮಾಹಿತಿ ಸಂಗ್ರಹಣೆ

ವಿಮರ್ಶಾತ್ಮಕ ಅಧ್ಯಯನಕ್ಕಾಗಿ ಕ್ಷೇತ್ರಕಾರ್ಯದಲ್ಲಿ ಸಹಭಾಗಿತ್ವ ವಿಧಾನ ಮತ್ತು ಅವಲೋಕನ ವಿಧಾನವನ್ನ ಬಳಸಲಾಗಿದೆ ಹಾಗೂ ಛಾಯಾಚಿತ್ರಗಳನ್ನ ಸೆರೆ ಹಿಡಿಯಲಾಗಿದೆ, ಸಂಶೋಧನೆಯ ಪ್ರಾರಂಭದ ೬ ತಿಂಗಳು ಸಾಹಿತ್ಯದ ಸಮೀಕ್ಷೆಗಾಗಿ ಹಿಡಿದರೆ, ಮೂರು ತಿಂಗಳು ಪರೀಕ್ಷಾರ್ಥವಾಗಿ ಪ್ರಶ್ನಾವಳಿಯ ತಯ್ಯಾರಿಕೆಗೆ ತಗುಲಿದೆ. ಆರು ತಿಂಗಳ ಕಾಲ ಕ್ಷೇತ್ರಕಾರ್ಯವನ್ನ ಕೈಗೂಂಡು ಮಾಹಿತಿಯನ್ನ ಸಂಗ್ರಹಿಸಲಾಗಿದೆ.

೧.೧೦ ಅಂಕಿ ಸಂಖ್ಯೆಗಳ ಸಂಗ್ರಹಣೆ

ಕ್ಷೇತ್ರಕಾರ್ಯ ಕೈಗೊಂಡು ಸಂಗ್ರಹಿಸಿದ ಅಂಕಿ ಸಂಖ್ಯೆಗಳನ್ನ ಅನುಕೂಲಕ್ಕೆ ತಕ್ಕಂತೆ ಪಟ್ಟಿ ಮಾಡಿ ಅನೇಕ ಕೋಷ್ಠಕಗಳನ್ನ ಗಣಕಯಂತ್ರದ ನೆರವಿನಿಂದ ತಯ್ಯಾರಿಸಲಾಗಿದ್ದು ಸಂಖ್ಯಾಶಾಸ್ತ್ರದ ಸರಳ ವಿಧಾನಗಳಾದ ಶೇಕಡಾವಾರು ಸಂಖ್ಯಾಶಾಸ್ತ್ರೀಯ ವಿಮರ್ಶೆ ಇತ್ಯಾದಿಗಳಿಂದ ಮಾಹಿತಿಯನ್ನ ಸಂಸ್ಕರಿಸಿ ಅವಶ್ಯಕತೆಗೆ ಅನುಕೂಲವಾಗುವಲ್ಲಿ ರೇಖಾಚಿತ್ರಗಳನ್ನ ಗ್ರಾಫ್‌ಗಳನ್ನ ಮತ್ತು ಚಾರ್ಟಗಳನ್ನ ರಚಿಸಲಾಗಿದೆ.

೧.೧೧ ಮಾಹಿತಿಯ ಮೂಲಗಳು

ಅಧ್ಯಯನದ ಅವಶ್ಯಕತೆಗೆ ತಕ್ಕಂತೆ ಅವಶ್ಯಕವಿರುವ ಮಾಹಿತಿಯನ್ನ ಲೇಖನಗಳು, ಪತ್ರಿಕೆಗಳು, ಸಂಚಿಕೆಗಳು, ಮಹಾ ಪ್ರಬಂಧಗಳು ಹಾಗೂ ಜನಗಣತಿ ದಾಖಲೆಗಳು ಇತ್ಯಾದಿಗಳಿಂದ ಮಾಹಿತಿಯನ್ನ ಸಂಗ್ರಹಿಸಿ ಬಳಸಿಕೊಳ್ಳಲಾಗಿದೆ.ಆದರೆ ಉಳಿದ ಮಾಹಿತಿಯನ್ನ ಸ್ವತಃ ಕ್ಷೇತ್ರಕಾರ್ಯ ಕೈಗೊಂಡು ಸಹಭಾಗಿತ್ವ ಮತ್ತು ಅವಲೋಕನ ವಿಧಾನದ ಮುಖಾಂತರ ಸಂಗ್ರಹಿಸಿ ಈ ಮಹಾಪ್ರಬಂಧದಲ್ಲಿ ಮಂಡಿಸಲಾಗಿದೆ.

೧.೧೨ ಮಾಹಿತಿ ಸಮೀಕ್ಷೆ ಮತ್ತು ಕ್ಷೇತ್ರಾನುಭವ

ಪ್ರಾಥಮಿಕ ಮಾಹಿತಿಯನ್ನ ಸ್ವತಃ ಕ್ಷೇತ್ರಕಾರ್ಯವನ್ನ ಕೈಗೊಂಡು ೨೦೦೫ ರಿಂದಲೇ ಸಂಗ್ರಹಿಸಲು ಆರಂಭಿಸಲಾಯಿತು. ಆರಂಭದ ದಿನಗಳಲ್ಲಿ ಮಾಹಿತಿ ಸಂಗ್ರಹಣೆಯು ನಿಧಾನಗತಿಯಲ್ಲಿ ಸಾಗಿತ್ತು ಇದಕ್ಕೆ ಮುಖ್ಯವಾದ ಕಾರಣ ಈ ಎರಡು ಆದಿಮ ಬುಡಕಟ್ಟಿನ ಜನರು ಹೊರಗಿನವರನ್ನ ಅಷ್ಟು ಸರಳವಾಗಿ ನಂಬುವವರಲ್ಲ ಆದರಿಂದಾಗಿ ಅವರ ನಾಯಕರೊಡನೆ ದೀರ್ಘಕಾಲ ಚರ್ಚಿಸಿದ ನಂತರ ಮಾಹಿತಿಯ ಸಂಗ್ರಹಣೆಯು ತುಂಬಾ ತ್ವರಿತಗತಿಯಲ್ಲಿ ಸಾಗಿತು ಮತ್ತು ನಿರ್ಧಿಷ್ಟ ಸಮಯದಲ್ಲಿ ಮಾಹಿತಿ ಸಂಗ್ರಹಣೆಯೂ ಕೈಗೂಡಿತು.ಇವರ ಹಾಡಿಗಳಿಗೆ ಸರಿಯಾದ ರಸ್ತೆ/ವಾಹನ ಸಂಪರ್ಕವಿಲ್ಲದುದ್ದರಿಂದ ಸುಮಾರು ಮೈಲಿಗಳು ಕಾಲ್ನಡಿಗೆಯಲ್ಲಿ/ಬಾಡಿಗೆ ಸೈಕಲ್‌ನಲ್ಲಿ ತೆರಳಿ ಮಾಹಿತಿಯನ್ನ ಸಂಗ್ರಹಿಸಲಾಯಿತು. ಕೆಲವೊಮ್ಮೆ ಕುಟುಂಬದ ಸದಸ್ಯರುಗಳು ತಮ್ಮ ಹೊಟ್ಟೆಪಾಡಿಗಾಗಿ ಕೂಲಿ ಅರಸಿ ಹೊರ ಊರುಗಳಿಗೆ ಹೋಗಿದ್ದಂತಹ ಪರಿಸ್ಥಿತಿಯು ಎದುರಾಯಿತು.ಭೇಟಿಕೊಟ್ಟ ಶೇಕಡ ೯೦ ರಷ್ಟು ಕುಟುಂಬಗಳ ಸದಸ್ಯರು ಸಂದರ್ಶನದ ಕಾರಣವನ್ನ ಕೇಳುವುದರೊಂದಿಗೆ ಇದರಿಂದಾಗುವ ಆರ್ಥಿಕ ಪ್ರಯೋಜನಗಳನ್ನ ಕೇಳುತ್ತಿದ್ದರು.ಅವರ ಮುಖಗಳಲ್ಲಿ ಏನೋ ತಮ್ಮ ಕುಟುಂಬಗಳಿಗೆ ಆರ್ಥಿಕ, ಶೈಕ್ಷಣಿಕ ನೆರವು ದೊರೆಯುತ್ತದೆ ಎಂಬ ಆಶಾಭಾವನೆಗಳನ್ನ ವ್ಯಕ್ತಪಡಿಸುತ್ತಿದ್ದರು. ಆ ಸಂದರ್ಭದಲ್ಲಿ ಅವರಿಗೆ ವಿವರಣಾತ್ಮಕವಾಗಿ ವಿಷಯ ಮನದಟ್ಟು ಮಾಡಿ, ಈ ಅಧ್ಯಯನವು ಅವರ ಹಿಂದಿನ ಬದುಕು ಹಾಗೂ ಇಂದಿನ ಬದುಕಿನ ಬಗೆಗಿನ ಅಧ್ಯಯನ ಹಾಗೂ ಸರ್ಕಾರಿ ಯೋಜನೆಗಳಿಂದ ಅವರು ಎಷ್ಟರ ಮಟ್ಟಿಗೆ ಸಂತೃಪ್ತರಾಗಿದ್ದಾರೆ ಎಂಬುದನ್ನು ಅರಿಯುವ

ಉದ್ದೇಶ ಇದಾಗಿದೆ ಎಂದು ವಿವರಿಸಿದಾಗ ಅವರು ಮುಕ್ತಮನಸ್ಸಿನಿಂದ ಮಾಹಿತಿಯನ್ನ ನೀಡಿದ್ದಲ್ಲದೆ ಅವರ ಮನೆ ಆಸ್ತಿಪಾಸ್ತಿ ದೈನಂದಿನ ಕಾರ್ಯಚಟುವಟಿಕೆಗಳ ಬಗ್ಗೆ ಆಚರಣೆಗಳು/ಸಂಪ್ರದಾಯಗಳ ಬಗೆಗೆ ಸ್ಪಷ್ಟವಾಗಿ ವಿವರಸಿದರು

೧.೧೩ ಅಧ್ಯಯನದ ಮಿತಿಗಳು

ಅಧ್ಯಯನದ ಸ್ಪಷ್ಟತೆ ಮತ್ತು ಸೂಕ್ಷ್ಮತೆಗಾಗಿ ಕೇವಲ ಮೈಸೂರು ಮತ್ತು ಕೊಡಗು ಜಿಲ್ಲೆಗಳ ಜೇನು ಕುರುಬರು ಮತ್ತು ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ಕೊರಗ ಬುಡಕಟ್ಟುಗಳನ್ನ ಮಾತ್ರ ಆಯ್ಕೆ ಮಾಡಿಕೊಳ್ಳಲಾಗಿದೆ.

ಅಧ್ಯಯನವನ್ನ ಮತ್ತಷ್ಟು ಸೂಕ್ಷ್ಮತೆಗೊಳಪಡಿಸಿ ನೈಜ ಅಂಶಗಳನ್ನ ಹೊರತೆಗೆಯುವ ಸಲುವಾಗಿ ಅವರ ಎಲ್ಲಾ ಹಾಡಿಗಳನ್ನ ಈ ಅಧ್ಯಯನದ ವ್ಯಾಪ್ತಿಗೊಳಪಡಿಸಲಾಗಲಿಲ್ಲ.

ಈ ಎರಡು ಆದಿಮ ಬುಡಕಟ್ಟುಗಳ ಜನಜೀವನ ತುಂಬಾ ಸರಳ ಜೀವನವಾದ್ದರಿಂದ ಅವರ ಆರೋಗ್ಯ ಸಂಘಟನೆಯ ಬಗೆಗೆ ಸಾಕಷ್ಟು ಮಾಹಿತಿಯನ್ನ ನೀಡಲಾಗಿಲ್ಲ.

ಈ ನಾಲ್ಕು ಜಿಲ್ಲೆಗಳ ಬೇರಾವ ಬುಡಕಟ್ಟು ಸಮುದಾಯವನ್ನೂ ಈ ಅಧ್ಯಯನದ ವ್ಯಾಪ್ತಿಗಳಿಗೊಳಪಡಿಸಲಾಗಲಿಲ್ಲ.

೧.೧೪ ಮಹಾಪ್ರಬಂಧದ ಅಧ್ಯಾಯಗಳು

ಅಧ್ಯಯನದ ಸ್ಪಷ್ಟತೆ ಮತ್ತು ಸೂಕ್ಷ್ಮತೆಯ ದೃಷ್ಟಿಯಿಂದ ಈ ಮಹಾ ಪ್ರಬಂಧವನ್ನ ಆರು ಅಧ್ಯಾಯಗಳಾಗಿ ವಿಂಗಡಿಸಲಾಗಿದೆ.

- ಮೊದಲನೆಯ ಅಧ್ಯಾಯವು ಸಂಶೋಧನೆಯ ವಿನ್ಯಾಸ, ವಿಧಾನ, ಉದ್ದೇಶಗಳು, ಮಹತ್ವ ಅಂಕಿ ಸಂಖ್ಯೆಗಳ ಸಂಗ್ರಹಣೆ, ಸಂಸ್ಕರಣೆ, ಮಾಹಿತಿಯ ಮೂಲಗಳು, ಅಧ್ಯಯನದ ಮಿತಿಗಳು ಇತ್ಯಾದಿಗಳನ್ನು ಒಳಗೊಂಡಿದೆ.
- ಎರಡನೆಯ ಅಧ್ಯಾಯವು ಆದಿವಾಸಿ ಬುಡಕಟ್ಟುಗಳ ಅಭಿವೃದ್ಧಿಯ ಇತಿಹಾಸ, ಸಂವಿಧಾನ ಅವಕಾಶಗಳು ಪ್ರಸ್ತುತ ಆಡಳಿತ ವ್ಯವಸ್ಥೆ, ಯೋಜನೆಗಳು, ಕಾರ್ಯಕ್ರಮಗಳ ಜಾರಿಯನ್ನೊಳಗೊಂಡಿದೆ.
- ಮೂರನೆಯ ಅಧ್ಯಾಯವು ಸಂಪೂರ್ಣವಾಗಿ ಜೇನು ಕುರುಬರ ಹಿನ್ನೆಲೆ, ದೈಹಿಕ ಲಕ್ಷಣಗಳು, ವೇಷಭೂಷಣ, ಒಳಪಂಗಡಗಳು, ಬಳಿಪದ್ಧತಿ, ಸಂಸ್ಕಾರಗಳು, ಆಹಾರಪದ್ಧತಿ, ನಂಬಿಕೆ ಮತ್ತು ಸಂಪ್ರದಾಯಗಳು, ವಿವಾಹ ಪದ್ಧತಿ, ಭಾಷೆ ಮತ್ತು ನ್ಯಾಯಪದ್ಧತಿ, ಇತರ ಸಮುದಾಯಗಳೊಡನೆಯಿರುವ ಒಡಂಬಡಿಕೆ, ಮತ್ತು ಸರ್ಕಾರದಿಂದ ದೊರೆತಿರುವ ಸೌಲಭ್ಯಗಳು ಮತ್ತು ಸಮಸ್ಯೆಗಳನ್ನು ನೋಡಲಾಗಿದೆ.
- ನಾಲ್ಕನೆಯ ಅಧ್ಯಾಯವು ಸಂಪೂರ್ಣವಾಗಿ ಕೊರಗರ ನೆಲೆಗಳು, ಲಕ್ಷಣಗಳು, ಬಳಿಪದ್ಧತಿ, ಪಂಗಡಗಳು, ಜನನ ಮರಣದ ಸಂಸ್ಕಾರಗಳು, ಹಬ್ಬಹರಿದಿನಗಳು, ಆರಾಧನೆ, ವಿವಾಹಪದ್ಧತಿ, ಮನರಂಜನೆ ಭಾಷೆ ಮತ್ತು ಸಂಸ್ಕೃತಿ, ನ್ಯಾಯಪದ್ಧತಿ, ಕೊರಗರ ವೃತ್ತಿ ಮತ್ತು ಭೌಗೋಳಿಕ ಪರಿಸರ, ಕೊರಗರು ಮತ್ತು ಇತರ ಸಮುದಾಯಗಳ ಸಂಬಂಧ, ಜೀವನರೂಢಿ, ಸರ್ಕಾರಿ ಯೋಜನೆಗಳ ಲಭ್ಯತೆ, ಸಮಸ್ಯೆಗಳು ಇವೆ ಇತ್ಯಾದಿಗಳನ್ನೊಳಗೊಂಡಿದೆ.
- ಐದನೆಯ ಅಧ್ಯಾಯವು ಬುಡಕಟ್ಟು ಅಭಿವೃದ್ಧಿಯ ಮಾನದಂಡಗಳು ಹಾಗೂ ನಾಲ್ಕು ಜಿಲ್ಲೆಗಳ ಭೌಗೋಳಿಕ, ಆರ್ಥಿಕ ಪರಿಸ್ಥಿತಿಗಳು, ಯೋಜನೆಗಳ ರೂಪರೇಷೆಗಳು ಕಾರ್ಯಗತಗೊಳಿಸುವವಲ್ಲಿ ಉಂಟಾಗುವ ಕಷ್ಟಕಾರ್ಪಣ್ಯಗಳು, ಅವುಗಳು ಬಗೆಗೆ ಸರ್ಕಾರಿ

ಅಧಿಕಾರಿಗಳ ಧೋರಣೆಗಳು, ಸಮುದಾಯದ ಪ್ರತಿನಿಧಿಗಳ ನಿರೀಕ್ಷಣೆಗಳು ಇತ್ಯಾದಿಗಳನ್ನ ವಿಮರ್ಶಿಸಲಾಗಿದೆ.

- ಆರನೆಯ ಅಧ್ಯಾಯವು ಉಪಸಂಹಾರವಾಗಿದ್ದು ಅದರಲ್ಲಿ ಮಹಾಪ್ರಬಂಧದ ಸಾರಾಂಶ ನೀಡುವುದರೊಂದಿಗೆ ನಿರ್ಣಯಗಳನ್ನ ಒಳಗೊಂಡಿದೆ ಸಂಶೋಧಕರು, ಈ ಬುಡಕಟ್ಟು ಜಿಲ್ಲೆಗಳ ಬಗೆಗೆ ಭವಿಷ್ಯದಲ್ಲಿ ಮಾಡಬಹುದಾದ ಮುಂದುವರೆದ ಸಂಶೋಧನೆಗಳ ಬಗೆಗೆ ವಿವರಿಸಲಾಗಿದೆ.

೧.೧೫ ಭವಿಷ್ಯದಲ್ಲಿ ಮಾಡಬಹುದಾದ ಸಂಶೋಧನಾ ಕ್ಷೇತ್ರಗಳು

ಈ ಸಂಶೋಧನೆಯು ಭವಿಷ್ಯದಲ್ಲಿ ಸಂಶೋಧನಾಕಾರರು ನಡೆಸುವ ಅಧ್ಯಯನಗಳಿಗೆ ದಾರಿಯಾಗುತ್ತದೆಂದು ಭಾವಿಸಲಾಗಿದೆ. ಜೇನುಕುರುಬ ಮತ್ತು ಕೊರಗ ಸಮುದಾಯಗಳ ಜನಜೀವನ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸ್ಥಿತಿ–ಗತಿಯನ್ನು ಅರಿಯುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದ್ದು ಮುಂದೆ ಅಧ್ಯಯನಕಾರರು ಈ ಸಮುದಾಯಗಳ ಬದಲಾಗುತ್ತಿರುವ ಆರ್ಥಿಕ, ಸಾಮಾಜಿಕ, ರಾಜಕೀಯ, ಶೈಕ್ಷಣಿಕ ಸ್ಥಿತಿಗತಿಯ ಬಗೆಗೆ ಮುಂದುವರೆದ ಅಧ್ಯಯನಗಳನ್ನು ಕೈಗೊಳ್ಳಬಹುದು.

೧.೧೬ ಅಧ್ಯಯನದ ಅವಶ್ಯಕತೆ

ಇದುವರೆಗೂ ಯಾವುದೇ ನಿರ್ದಿಷ್ಟ ಅಧ್ಯಯನಗಳು ಈ ಎರಡು ಆದಿಮ ಬುಡಕಟ್ಟುಗಳ ಬಗೆಗೆ ಆಗದಿರುವುದರಿಂದ ಹಾಗೂ ಆದಿವಾಸಿ ಬುಡಕಟ್ಟುಗಳ ಅಭಿವೃದ್ಧಿಗಾಗಿ ನಿರತರಾಗಿರುವ ಬುಡಕಟ್ಟು ಸಮುದಾಯಗಳ ಅಧ್ಯಯನಕಾರರಿಗೆ, ಸರ್ಕಾರಿ ಯೋಜನಾ ನಿರೂಪಕರಿಗೆ, ಆಡಳಿತಗಾರರಿಗೆ, ರಾಜಕೀಯ/ಸಮುದಾಯದ ನಾಯಕರಿಗೆ ಹಾಗೂ ಸ್ವಯಂ ಸೇವಾ ಸಂಸ್ಥೆಗಳಿಗೆ ಆಕರವಾಗುವುದರಿಂದ ಪ್ರಸ್ತುತ ಅಧ್ಯಯನವು ಅವಶ್ಯಕವಾಗಿರುವುದು.

ಭಾರತ ಸರ್ಕಾರ ಹತ್ತು ಪಂಚ ವಾರ್ಷಿಕ ಯೋಜನೆಗಳನ್ನ ಪೂರ್ಣಗೊಳಿಸಿ ಹನ್ನೊಂದನೆ ಪಂಚವಾರ್ಷಿಕ ಯೋಜನೆಯನ್ನ ಜಾರಿಗೊಳಿಸುತಿದ್ದರೂ ಸಹ ಆದಿಮ ಬುಡಕಟ್ಟುಗಳ ಆರ್ಥಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಸ್ಥಿತಿಗತಿಗಳಲ್ಲಿ ಅಂತಹ ಮಹತ್ವದ ಬದಲಾವಣೆಯೇನೂ ಕಂಡುಬರುವುದಿಲ್ಲ. ಬದಲಾಗಿ ಈ ಸಮುದಾಯಗಳು ಮತ್ತಷ್ಟು ಶೋಷಿತ ಬದುಕಿಗೆ ತಳ್ಳಲ್ಪಟ್ಟಿವೆ. ಯೋಜನೆಗಳ ಕಾರ್ಯರೂಪತೆಯು ಒಂದು ಪ್ರಶ್ನಾರ್ಥಕ ಚಿನ್ಹೆಯಾಗಿಯೇ ಉಳಿದಿದೆ.ಆದ್ದರಿಂದ ಯೋಜನೆಗಳ ರೂಪುರೇಷಗಳ ರಚನೆ ಹಾಗೂ ಕಾರ್ಯಗತಗೊಳಿಸುವ ವಿಧಾನಗಳ ಬಗೆಗೆ ತೀವ್ರತರವಾದ ಅಧ್ಯಯನದ ಅವಶ್ಯಕತೆಯಿರುವುದರಿಂದ ಈ ಅಧ್ಯಯನವನ್ನ ಕೈಗೊಳ್ಳಲಾಗಿದೆ. ಈ ಅಧ್ಯಯನವು, ಬುಡಕಟ್ಟು ಅಧ್ಯಯನಕಾರರು ಬುಡಕಟ್ಟು ಜನರ ಜನಜೀವನ ಮತ್ತು ಸಂಸ್ಕೃತಿಗಿಂತಲೂ ಹೆಚ್ಚಾಗಿ ಅವರ ಜೀವನದಲ್ಲಿ ಆಗಬೇಕಾಗಿರುವ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಬದಲಾಣೆಗಳ ಬಗೆಗೆ ಒತ್ತನ್ನ ಕೊಡುವ ಉದ್ದೇಶವನ್ನು ಮನಗಾಣಿಸುವುದಾಗಿದೆ. ಈ ಅಧ್ಯಯನವು ಸಂಶೋಧಕರಲ್ಲಿ ಪ್ರಗತಿದಾಯಕ ಹಾಗೂ ಸಕಾರಾತ್ಮಕ ಸಂಶೋಧನಾ ಮನೋಭಾವವನ್ನು ಮೂಡಿಸುವಲ್ಲಿ ಸಹಕಾರಿಯಾಗುವುದು. ಈ ಅಧ್ಯಯನವು ಸಾಂಪ್ರದಾಯಿಕ ಅಧ್ಯಯನಕಾರರು ಮತ್ತು ಚಿಂತಕರನ್ನ ಬದಲಾಗುತ್ತಿರುವ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸ್ಥಿತಿಗನುಗುಣವಾಗಿ ಚಿಂತಿಸುವಂತೆ ಮಾಡುವಲ್ಲಿ ಸಹಕಾರಿಯಾಗುವುದು ಎಂದು ಭಾವಿಸಲಾಗಿದೆ.

೧.೧೭ ಪ್ರಸ್ತುತ ದಿನಗಳ ಸಮಸ್ಯೆ ಹಾಗೂ ಅದರ ಪರಿಹಾರದ ಕುರಿತಾಗಿರುವ ಅಗತ್ಯತೆ


ಕರ್ನಾಟಕ ರಾಜ್ಯದಲ್ಲಿ ಹತ್ತು ಪಂಚವಾರ್ಷಿಕ ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೊಳಿಸ ಲಾಗಿದೆಯಾದರೂ ಈ ಎರಡು ಆದಿಮ ಸಮುದಾಯಗಳ ಸುಮಾರು ಶೇ.೮೦ ರಷ್ಟು ಕುಟುಂಬಗಳು ತಮ್ಮ ದಿನನಿತ್ಯದ ಅವಶ್ಯಕತೆಗಳಿಗಾಗಿ ಪರದಾಡುತ್ತಿವೆ ಹಾಗೂ ಬಡತನ ರೇಖೆಯಿಂದ ಮೇಲೆ ಬರಲು ಪ್ರಯತ್ನಿಸುತಿದ್ದರೂ ಸಹ ಬದಲಾಗುತ್ತಿರುವ ಆರ್ಥಿಕ ಪರಿಸ್ಥಿತಿಯಲ್ಲಿ ಅದು ಅವರಿಂದ ಸಾಧ್ಯವಾಗುತ್ತಿಲ್ಲ ಇಂತಹ ಪರಿಸ್ಥಿಯಲ್ಲಿ ಸರ್ಕಾರಗಳು ರೂಪಿಸಿರುವ ಬೃಹತ್ ನೀರಾವರಿ,ವಿಧ್ಯುತ್,ಗಣಿಗಾರಿಕೆ, ಕೈಗಾರಕೆ ಹಾಗೂ ರಾಷ್ಟ್ರೀಯ ಉದ್ಯಾನವನಗಳ ಘೋಷಣೆಯಂತಹ ಯೋಜನೆಗಳು ಅವರ ಬದುಕಿಗೆ ಮತ್ತಷ್ಟು ಮಾರಕವಾಗಿವೆ.

ಬುಡಕಟ್ಟು ಉಪ ಯೋಜನೆ ಹಾಗೂ ಇತರ ಕಲ್ಯಾಣಾತ್ಮಕ ಯೋಜನೆಗಳು ಇಂದಿಗೂ ಪರಿಸ್ಥಿತಿಗೆ ತಕ್ಕಂತೆ ಮಾರ್ಪಾಡುಗಳನ್ನು ಮಾಡಿಕೊಳ್ಳದೆ ಅದೇ ಮಾನದಂಡಗಳನ್ನೆ ಮುಂದುವರೆಸಿವೆ. ಬುಡಕಟ್ಟು ಜನರ ಜೀವನದಲ್ಲಿ ಮಾರ್ಪಾಡುಗಳನ್ನು ಮಾಡುವಂತಹ ಗುಣಾತ್ಮಕ ಬದಲಾವಣೆಗಳನ್ನು ಅಳವಡಿಸಿಕೊಂಡು ಆದಿವಾಸಿ ಬುಡಕಟ್ಟುಗಳ, ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಜೀವನವನ್ನು ಬದಲಾಯಿಸಬೇಕಾಗಿದೆ, ಒಂದು ದಶಕವನ್ನು ಗುರಿಯಾಗಿಸಿಕೊಂಡು ಸಮಗ್ರ ಆದಿಮಬುಡಕಟ್ಟು ಅಭಿವೃದ್ಧಿಯನ್ನ ಗುರಿಯಾಗಿಸಿಕೊಂಡು ಕಾರ್ಯಕ್ರಮಗಳನ್ನು ರೂಪಿಸಬೇಕಾಗಿದೆ.


ವಾಸ್ತವಿಕವಾಗಿ ಬುಡಕಟ್ಟು ಜನರ ರಾಜಕೀಯ ಜೀವನದಲ್ಲಿ ಬದಲಾವಣೆ ತರಲು' ಸಂವಿಧಾನದ ೭೩ ಮತ್ತು ೭೪ನೇ ತಿದ್ದುಪಡಿಯಂತೆ ಜನರ ಭಾಗವಹಿಸುವಿಕೆಯನ್ನು ಉತ್ತೇಜಿಸಿ ಹಾಗೂ ಫಲಾನುಭವಿಗಳ ಆಯ್ಕೆಯಲ್ಲಿ ಪಾರದರ್ಶಕತೆಯನ್ನ ಅನುಸರಿಸಬೇಕಿದೆ, ಹಾಗೂ ಐ.ಟಿ.ಡಿ.ಪಿ ಯೋಜನೆಗಳ ಮಾರ್ಗದರ್ಶಿಗಳನ್ನು ವಿಮರ್ಶಿಸಿ ಹೊಸ ಮಾರ್ಪಾಡುಗಳನ್ನ ಅಳವಡಿಸಿಕೊಳ್ಳಬೇಕಿದೆ ಎಂಬುದರ ಬಗೆಗೆ ಈ ಅಧ್ಯಯನವು ಬೆಳಕು ಚೆಲ್ಲುವುದು.

ಕರ್ನಾಟಕದಲ್ಲಿ ನಾಯಕ ಬುಡಕಟ್ಟು ಮತ್ತು ಅದರ ಸಾಮಿಪ್ಯ ಪದಗಳ ಸೇರ್ಪಡೆಯಿಂದಾಗಿ ಪರಿಶಿಷ್ಟ ಪಂಗಡಗಳ ಜನಸಂಖ್ಯೆ ಶೇ.೪ ರಿಂದ ಶೇ.೫.೬೬ ರಷ್ಟು ಹೆಚ್ಚಾಗಿದ್ದು ಸಂಪನ್ಮೂಲದ ತಿರುವಿಕೆಗೆ ಕಾರಣವಾಗಿ ಇಂದು ಆದಿಮಬುಡಕಟ್ಟುಗಳು ಶೈಕ್ಷಣಿಕ, ರಾಜಕೀಯ ಮತ್ತು ಔದ್ಯೋಗಿಕ ಮೀಸಲಾತಿ ಸೌಲಭ್ಯಗಳಿಂದ ವಂಚಿತವಾಗಿವೆ ಕಾರಣ ಈ ಬುಡಕಟ್ಟುಗಳು ಮುಖ್ಯವಾಹಿನಿಯೊಂದಿಗೆ ಗುರ್ತಿಸಿಕೊಂಡಿರುವ ಮೇಲೆ ತಿಳಿಸಿದ ಬಲಿಷ್ಟ ಬುಡಕಟ್ಟುಗಳೊಂದಿಗೆ ಸ್ಪರ್ಧಿಸುವಷ್ಟು ಸಾಮರ್ಥ್ಯವನ್ನೊಂದಿಲ್ಲ.


೨೦೦೧ರ ಜನಗಣತಿಯಂತೆ ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಲ್ಲಿರುವ ಪರಿಶಿಷ್ಟ ಪಂಗಡಗಳ ಶೇಕಡವಾರು ಜನಸಂಖ್ಯೆಯನ್ನು ರಾಜ್ಯದ ಭೂಪಟದಲ್ಲಿ ಈ ಕೆಳಗಿನಂತೆ ಕಾಣಬಹುದಾಗಿದೆ.




ನಕ್ಷೆ: ೧.೨ ಅಧ್ಯಯನಕ್ಕೆ ಆಯ್ದುಕೊಂಡ ಜಿಲ್ಲೆಗಳು



ಉಡುಪಿ ಜಿಲ್ಲೆ



ದಕ್ಷಿಣ ಕನ್ನಡ ಜಿಲ್ಲೆ



ಕೊಡಗು ಜಿಲ್ಲೆ



ಮೈಸೂರು ಜಿಲ್ಲೆ

ಕೆಂಪು ಬಣ್ಣವು ಹೆಚ್ಚು ಆದಿಮ ಬುಡಕಟ್ಟುಗಳನ್ನ ಹೊಂದಿರುವ ನೆಲೆಗಳನ್ನು ಸೂಚಿಸುವುದು

ಆಧಾರಗಳು

ಪಾಲಾಕ್ಷ, *ಕರ್ನಾಟಕ ಇತಿಹಾಸ* (ಧಾರವಾಡ: ಗದಗ ಪ್ರಕಾಶನ,೧೯೯೮)

ಮೇತ್ರಿ, ಕೆ ಎಂ., *ಬುಡಕಟ್ಟು ಕುಲಕಸುಬುಗಳು* (ಹಂಪಿ: ಕನ್ನಡ ವಿಶ್ವವಿದ್ಯಾಲಯ, ೨೦೦೨)

ಭಾರತ ಜನಗಣತಿ ವರದಿಗಳು ೧೯೯೧-೨೦೦೧

ಅಧ್ಯಾಯ ೨

ಬುಡಕಟ್ಟು ಅಭಿವೃದ್ಧಿಯ ಹಿನ್ನೆಲೆ ಮತ್ತು ವಸ್ತುಸ್ಥಿತಿ

೨.೧ ಐತಿಹಾಸಿಕ ಹಿನ್ನೆಲೆ


ಬುಡಕಟ್ಟುಗಳ ಬಹುತೇಕ ಜನ ಆರ್ಥಿಕವಾಗಿ ಹಿಂದುಳಿದವರಾಗಿದ್ದಾರೆ.ಬ್ರಿಟೀಷರ ವಸಾಹತುಶಾಹಿ ವ್ಯವಸ್ಥೆಯಿಂದ ಅವರು ಅಂಚಿಗೆ ತಳ್ಳಲ್ಪಟ್ಟಿರುವುದನ್ನು ಗುರುತಿಸಬಹುದಾಗಿದೆ. "ಬ್ರಿಟೀಷರು ಮತ್ತು ಜಮೀನ್ದಾರರು ಅರಣ್ಯವನ್ನು- ಭೂಮಿಯನ್ನು ಶೋಷಿಸಲು ಆರಂಭಿಸಿದರು. ಇದರ ಫಲವಾಗಿ ಅರಣ್ಯಗಳು ಸಾಗುವಳಿ ಪ್ರದೇಶಗಳಾಗಿ ಟೀ, ಕಾಫೀ ಮತ್ತು ರಬ್ಬರ್‌ಗಳಂಥ ವಾಣಿಜ್ಯ ಬೆಳೆಗಳನ್ನು ಬೆಳೆಯತೊಡಗಿದರು. ಅರಣ್ಯಗಳ ಧಾತುವಾಗಿದ್ದ ಮರಗಳನ್ನು ಕಡಿಯಲು ಕಾಂಟ್ರಾಕ್ಟರ್‌ಗಳಿಗೆ ಅವಕಾಶ ನೀಡಲಾಯಿತು". (ಕರ್ನಾಟಕ ಮಾನವ ಅಭಿವೃದ್ಧಿ ವರದಿ:೨೦೦೫:೨೫೫)ಈ ಎಲ್ಲಾ ಕ್ರಮಗಳು ಬುಡಕಟ್ಟು ಜನತೆಯನ್ನು ದುಃಸ್ಥಿತಿಗೆ ತಳ್ಳಿದವು. ಏಕೆಂದರೆ ಬಹುತೇಕ ಬುಡಕಟ್ಟುಗಳು ಬೇಟೆ ಹಾಗೂ ಅರಣ್ಯ ಉತ್ಪತ್ತಿಗಳನ್ನು ಅವಲಂಬಿಸಿಯೇ ತಮ್ಮ ಬದುಕನ್ನು ಸಾಗಿಸುತ್ತಿದ್ದವು. ವಾಣಿಜ್ಯೀಕರಣದ ಫಲವಾಗಿ ಬುಡಕಟ್ಟುಗಳು ಕಾಡನ್ನು ತೊರೆಯಬೇಕಾದ ಅನಿವಾರ್ಯತೆ ಉಂಟಾಯಿತು. ಜೊತೆಗೆ ಅನಿವಾರ್ಯವಾಗಿ ಅವು ಹೊರ ಜಗತ್ತಿನೊಂದಿಗೆ ಒಡನಾಟವನ್ನು ಪಡೆದವು. ಇದರ ಪರಿಣಾಮವಾಗಿ ಬುಡಕಟ್ಟು ಜನವರ್ಗವು ತಮಗೆ ಸಂಪೂರ್ಣ ಅನ್ಯವಾಗಿದ್ದ ಮದ್ಯ ಸೇವನೆ ಮತ್ತು ಲೈಂಗಿಕ ರೋಗದಂತಹ ಸಮಸ್ಯೆಗಳನ್ನು ಎದುರಿಸಬೇಕಾಯಿತು.

ಭಾರತದ ಸ್ವಾತಂತ್ರ್ಯ ಪೂರ್ವದಲ್ಲಿ ಬುಡಕಟ್ಟು ಜನರು ಸಮಾಜದ ಮುಖ್ಯವಾಹಿನಿಯಿಂದ ಬಹಳ ದೂರ ಉಳಿದಿದ್ದರು. ಅವರ ಸಾಂಸ್ಕೃತಿಕ, ಸ್ವಾಯತ್ತತೆಯ ಬದುಕನ್ನ ಅರ್ಥಮಾಡಿಕೊಳ್ಳದ ಮುಖ್ಯವಾಹಿನಿಯ ರಾಜಕೀಯ ನಾಯಕರು ಹಾಗೂ ಅಧಿಕಾರಿ ವರ್ಗ ತಮ್ಮ ಸಂಸ್ಕೃತಿ, ಸಾಮಾಜಿಕ ವ್ಯವಸ್ಥೆಯೆ ಸರಿಯೆಂದು ಭಾವಿಸಿ ಬುಡಕಟ್ಟು ಜನರ ಬದುಕಿನಲ್ಲಿ ಲಗ್ಗೆಯಿಟ್ಟಿದ್ದರಿಂದ ಅವರು ಸಂಪೂರ್ಣ ಸ್ವಾತಂತ್ರ್ಯವನ್ನು ಕಳೆದುಕೂಂಡು ಅಲೆಮಾರಿಗಳಾಗಿ, ದಿನಗೂಲಿಗಳಾಗಿ, ಕೃಷಿ ಕೂಲಿಗಳಾಗಿ, ಅತಿ ಸಣ್ಣ ಕೃಷಿಕರಾಗಿ, ಪರಿವರ್ತಿತರಾಗುವ ದುಸ್ಥಿತಿಯೊದಗಿತು. ನಮ್ಮ ದೇಶವನ್ನಾಳಿದ ಮುಸಲ್ಮಾನರಾಗಲಿ, ಬ್ರಿಟೀಷರಾಗಲಿ ಇಲ್ಲಿಯ ಆದಿವಾಸಿಗಳ ಜನಜೀವನದ ಬಗೆಗೆ ಗಮನ ಹರಿಸದೆ ಕೇವಲ ಅವರನ್ನ ಮತಾಂತರಗೊಳಿಸುವುದರಲ್ಲಿ ನಿರತರಾದರು.

ಭಾರತದಲ್ಲಿ ೨೦೦೧ರ ಜನಗಣತಿಯಂತೆ ಶೇ.೪೪.೭೦ ರಷ್ಟು ಬುಡಕಟ್ಟು ಜನಸಂಖ್ಯೆ ಕೃಷಿಯನ್ನಾದರಿಸಿದ್ದರೆ, ಶೇ.೩೬.೯% ರಷ್ಟು ಕೃಷಿ ಕೂಲಿಗಳು, ಶೇ.೧೬.೩ ರಷ್ಟು ಇತರೆ ಕೆಲಸ ಕಾರ್ಯಗಳಲ್ಲಿ ನಿರತರಾಗಿದ್ದಾರೆ. ಶೇ.೮೨ ರಷ್ಟು ಬುಡಕಟ್ಟು ಜನ ಪ್ರಾಥಮಿಕ ವಲಯವನ್ನ ತಮ್ಮ ಜೀವನಾಧಾರಕ್ಕೆ ನಂಬಿಕೊಂಡಿರುವಂಥವರು (ವೃತ್ತಚಿತ್ರ:೨.೧). ಅಧ್ಯಯನದ ಪ್ರಕಾರ ಹೆಚ್ಚು ಆದಿವಾಸಿಗಳು ಪ್ರಾಥಮಿಕ ವಲಯವನ್ನ ತಮ್ಮ ಜೀವನಾಧಾರಕ್ಕೆ ಅವಲಂಬಿಸಿರುವದರಿಂದ

ಹೆಚ್ಚು ಆದಿವಾಸಿ ಬುಡಕಟ್ಟು ಮಕ್ಕಳು ಶಾಲೆಗಳನ್ನ ತ್ಯಜಿಸುತ್ತಿದ್ದಾರೆ ಎನ್ನಬಹುದು. ಇತ್ತೀಚೆಗೆ ಮಕ್ಕಳು ಕಿರಿಯ ಹಾಗೂ ಮಾಧ್ಯಮಿಕ ಶಾಲೆಗೆ ಹೋಗುತ್ತಿವೆ ಎಂದು ಹೇಳಿದರೂ ಅದು ಅಂತಹ ತೃಪ್ತಿದಾಯಕ ವಿಚಾರವಲ್ಲ, ಅದರಲ್ಲಿಯೂ ಉನ್ನತ ವ್ಯಾಸಾಂಗದಲ್ಲಿ ಆದಿವಾಸಿ ಬುಡಕಟ್ಟು ವಿದ್ಯಾರ್ಥಿಗಳ ಪ್ರಾತಿನಿಧ್ಯತೆ ಅತ್ಯಂತ ವಿರಳವಾಗಿರುವುದನ್ನು ಕಾಣಬಹುದಾಗಿದೆ.


ವೃತ್ತಚಿತ್ರ ೨.೧: ಭಾರತದಲ್ಲಿ ಬುಡಕಟ್ಟು ಜನರ ವೃತ್ತಿ ಸ್ವಭಾವ



ಆಧಾರ: ಭಾರತ ಜನಗಣತಿ: ೨೦೦೧

ಭಾರತದಲ್ಲಿ ಸಾಮಾನ್ಯ ಜಾತಿಯ ಬಡತನ ರೇಖೆಯ ಪ್ರಮಾಣಕ್ಕಿಂತ ಬುಡಕಟ್ಟುಗಳ ಬಡತನವು ಹೆಚ್ಚಿನ ಪ್ರಮಾಣದಲ್ಲಿದೆ. ೧೯೯೩-೯೪ರ ಅಂಕಿ ಅಂಶಗಳಂತೆ ಶೇ.೫೧.೯೪% ಗ್ರಾಮೀಣ ಮತ್ತು ಶೇ.೪೧.೧೪ ನಗರ ಬುಡಕಟ್ಟು ಜನರು ಬಡತನ ರೇಖೆಗಿಂತ ಕೆಳಗಿರುವರೆಂಬುದನ್ನ ತಿಳಿಯಪಡಿಸುತ್ತದೆ.

ಲಂಬಚಿತ್ರ ೨.೧: ಭಾರತದಲ್ಲಿ ವಿವಿದ ವರ್ಗಗಳ ಬಡತನ ರೇಖೆಯ ಪ್ರಮಾಣ



ಆಧಾರ: ಬುಡಕಟ್ಟು ವ್ಯವಹಾರಗಳ ಮಂತ್ರಾಲಯದ ವಾರ್ಷಿಕ ವರದಿ ೨೦೦೭-೦೮

ಲಂಬಚಿತ್ರದಲ್ಲಿ ಕಾಣುವಂತೆ ಅತ್ಯಂತ ಹೆಚ್ಚು ಬುಡಕಟ್ಟು ಜನರು ಅಂದರೆ ಶೇ,೪೭.೨ ರಷ್ಟು ಜನಸಂಖ್ಯೆ ಬಡತನ ರೇಖೆಗಿಂತ ಕೆಳಗಿನ ಮಟ್ಟದಲ್ಲಿ ಜೀವನ ನಡೆಸುತ್ತಿದ್ದಾರೆ ಎಂಬುದನ್ನ ಸೂಚಿಸುತ್ತದೆ, ಇದು ರಾಷ್ಟ್ರದ ಒಟ್ಟಾರೆ ಬಡತನ ರೇಖೆಗಿಂತ ಶೇ ೨೧ ರಷ್ಟು ಹೆಚ್ಚಿರುವುದನ್ನ ಕಾಣಬಹುದಾಗಿದೆ. ಉಳಿದಂತೆ ಪರಿಶಿಷ್ಟ ಜಾತಿಗಳ ಬಡತನ ರೇಖೆಯ ಪ್ರಮಾಣ ಶೇ.೩೬.೮ ಮತ್ತು ಇತರೆ ವರ್ಗಗಳಲ್ಲಿ ಶೇ,೨೬.೭ ರಷ್ಟನ್ನ ಕಾಣಬಹುದಾಗಿದೆ.

ಕೋಷ್ಟಕ: ೨.೧ ರಾಜ್ಯವಾರು ಬುಡಕಟ್ಟು ಜನರ ಬಡತನ ರೇಖೆಯ ಶೇಕಡವಾರು ಮಾಹಿತಿ

ರಾಜ್ಯ	ಗ್ರಾಮೀಣ				ನಗರ			
ವರ್ಗ	ಪಪಂ	ಪಜಾ	ಹಿಂವ	ಸಾವ	ಪಪಂ	ಪಜಾ	ಹಿಂವ	ಸಾವ
ಆಂಧ್ರ ಪ್ರದೇಶ	೩೦.೫	೧೫.೪	೯.೫	೪.೧	೫೦.೦	೩೯.೯	೨೮.೯	೨೦.೬
ಅಸ್ಸಾಂ	೧೪.೧	೨೭.೭	೧೮.೮	೨೫.೪	೪.೮	೮.೬	೮.೬	೪.೨
ಬಿಹಾರ	೫೩.೩	೬೪.೦	೩೭.೮	೨೬.೬	೫೭.೨	೬೭.೨	೪೧.೪	೧೮.೩
ಛತ್ತೀಸಗಢ	೫೪.೭	೩೨.೭	೩೩.೯	೨೯.೨	೪೧.೦	೫೨.೦	೫೨.೭	೨೧.೪
ದೆಹಲಿ	೦.೦	೦.೦	೦.೦	೧೦.೬	೯.೪	೩೫.೮	೧೮.೩	೬.೪
ಗುಜರಾತ್	೩೪.೭	೨೧.೮	೧೯.೧	೪.೮	೨೧.೪	೧೬.೦	೨೨.೯	೭.೦
ಹರಿಯಾಣ	೦.೦	೨೬.೮	೧೩.೯	೪.೨	೪.೬	೩೩.೪	೨೨.೫	೫.೯
ಹಿಮಾಚಲಪ್ರದೇಶ	೧೪.೯	೧೯.೬	೯.೧	೬.೪	೨.೪	೫.೬	೧೦.೧	೨.೦
ಜಮ್ಮು&ಕಾಶ್ಮೀರ	೮.೮	೫.೨	೧೦.೦	೩.೩	೦.೦	೧೩.೭	೪.೮	೭.೮
ಜಾರ್ಖಂಡ	೫೪.೨	೫೭.೯	೪೦.೨	೩೭.೧	೪೫.೧	೪೭.೨	೧೯.೧	೯.೨
ಕರ್ನಾಟಕ	**೨೩.೫**	**೩೧.೮**	**೨೦.೯**	**೧೩.೮**	**೫೮.೩**	**೫೦.೬**	**೩೯.೧**	**೨೦.೩**
ಕೇರಳ	೪೪.೩	೨೧.೬	೧೩.೭	೬.೬	೧೯.೨	೩೨.೫	೨೪.೩	೭.೮
ಮಧ್ಯ ಪ್ರದೇಶ	೫೮.೬	೪೨.೮	೨೯.೬	೧೩.೪	೪೪.೭	೬೭.೩	೫೫.೫	೨೦.೮
ಮಹಾರಾಷ್ಟ್ರ	೫೬.೬	೪೪.೮	೨೩.೯	೧೮.೯	೪೦.೪	೪೩.೨	೩೫.೬	೨೬.೮
ಒರಿಸ್ಸಾ	೭೫.೬	೫೦.೨	೩೬.೯	೨೩.೪	೬೧.೮	೭೨.೬	೫೦.೨	೨೮.೯
ಪಂಜಾಬ್	೩೦.೭	೧೪.೬	೧೦.೬	೨.೨	೨.೧	೧೬.೧	೮.೪	೨.೯
ರಾಜಸ್ತಾನ	೩೨.೬	೨೮.೭	೧೩.೧	೮.೨	೨೪.೧	೫೨.೧	೩೫.೬	೨೦.೭
ತಮಿಳುನಾಡು	೩೨.೧	೩೧.೨	೧೯.೮	೧೯.೧	೩೨.೫	೪೦.೨	೨೦.೯	೬.೫
ಉತ್ತರ ಪ್ರದೇಶ	೩೨.೪	೪೪.೮	೩೨.೯	೧೯.೭	೩೭.೪	೪೪.೯	೩೬.೬	೧೯.೨
ಉತ್ತರಾಂಚಲ	೪೩.೨	೫೪.೨	೪೪.೮	೩೩.೫	೬೪.೪	೬೫.೭	೪೬.೫	೨೫.೫
ಪಶ್ಚಿಮ ಬಂಗಾಳ	೪೨.೪	೨೯.೫	೧೮.೩	೨೭.೫	೨೫.೭	೨೮.೫	೧೦.೪	೧೩.೦
ಒಟ್ಟು	೪೭.೨	೩೬.೮	೨೬.೭	೧೬.೧	೩೩.೩	೩೯.೯	೩೧.೪	೧೬.೦

ಆಧಾರ : ಯೋಜನಾ ಆಯೋಗದ ವರದಿ ೨೦೦೪–೦೫

ಮೇಲ್ಕಂಡ ಅಂಕಿ ಅಂಶಗಳನ್ನು ಯೋಜನಾ ಆಯೋಗವು ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆಯು (೬೧ ನೆಯ ಸಮೀಕ್ಷೆ) ನಡೆಸಿದ ವಿವಿಧ ವರ್ಗಗಳ ಬಡತನ ರೇಖೆಯ ಮಾದರಿ ಸಮೀಕ್ಷೆ ೨೦೦೪-೨೦೦೫ ರ ಆಧಾರದ ಮೇಲೆ ಪರಿಗಣಿಸಿದೆ.ಈ ಅಂಕಿ ಅಂಶಗಳನ್ನು ಗಮನಿಸಿದಾಗ ಕಂಡುಬರುವ ಅಂಶವನ್ನು ಮೇಲೆ ವಿವರಿಸಲಾಗಿದೆ. ರಾಜ್ಯಗಳ ಅಂಕಿ ಅಂಶಗಳನ್ನು ಗಮನಿಸಿದಾಗ ಅತ್ಯಂತ ಹೆಚ್ಚು ಬಡ ಬುಡಕಟ್ಟು ಜನರನ್ನು (ಗ್ರಾಮೀಣ ೭೫.೬) (ನಗರ ೭೨.೬.) ಒರಿಸ್ಸಾ ರಾಜ್ಯದಲ್ಲಿ ಮತ್ತು ಅತ್ಯಂತ ಕಡಿಮೆ ಜನರನ್ನು ಜಮ್ಮು&ಕಾಶ್ಮೀರದಲ್ಲಿ (ಗ್ರಾಮೀಣ ೮.೮ ಮತ್ತು ನಗರ ೦೦) ಕಾಣಬಹುದಾಗಿದೆ.

ಕರ್ನಾಟಕಕ್ಕೆ ಸಂಬಂಧಿಸಿದ ಅಂಕಿಅಂಶಗಳನ್ನು ಗಮನಿಸಿದಾಗ ಗ್ರಾಮೀಣ ಬುಡಕಟ್ಟುಗಳ ಬಡತನ ರೇಖೆಯ ಪ್ರಮಾಣವು ಶೇ.೨೩.೫ ಮತ್ತು ನಗರವಾಸಿ ಬುಡಕಟ್ಟುಗಳ ಬಡತನದ ಪ್ರಮಾಣವು ಶೇ.೫೦.೬ ಎಂದು ಹೇಳಲಾಗಿದೆ. ಆದರೆ ವಾಸ್ತವಿಕವಾಗಿ ಬುಡಕಟ್ಟು ಜನಸಂಖ್ಯೆಯ ಶೇ ೪೫ ರಿಂದ ೬೦ ರಷ್ಟು ಗ್ರಾಮೀಣ ಬುಡಕಟ್ಟು ಜನ ಬಡವರಿದ್ದಾರೆ ಎಂಬುದನ್ನು ಕರ್ನಾಟಕ ಮಾನವ ಅಭಿವೃದ್ಧಿ ವರದಿಯ ಆಧಾರದ ಮೇಲೆ ಅರಿಯಬಹುದಾಗಿದೆ. ಮತ್ತು ಶೇ.೮೦ ರಷ್ಟು ಆದಿಮ ಬುಡಕಟ್ಟು ಕುಟುಂಬಗಳು ಬಡತನ ರೇಖೆಗಿಂತ ಕೆಳಗಿದ್ದಾರೆ.

೨.೨ ಸ್ವಾತಂತ್ರ್ಯಾನಂತರದ ಪ್ರಯತ್ನಗಳು

ಭಾರತದ ಸಂವಿಧಾನ ರಚನಾಕಾರರು ಶತಮಾನಗಳಿಂದ ಬುಡಕಟ್ಟು ಜನರ ಬದುಕು ಶೋಷಿಸಲ್ಪಟ್ಟಿದೆ ಎಂಬುದನ್ನು ಮನಗಂಡು ಎರಡು ಮುಖ್ಯ ಮಾನದಂಡಗಳನ್ನಾಧರಿಸಿ ಅವರ ಸರ್ವತೋಮುಖ ಅಭಿವೃದ್ಧಿಗೆ ರಕ್ಷಣೊಪಾಯಗಳನ್ನು ಕಲ್ಪಿಸಿದ್ದಾರೆ. ಆ ಎರಡು ಮಾನದಂಡಗಳೆಂದರೆ

೧. ಬುಡಕಟ್ಟು ಜನರಿಗೆ ಇತರೆ ಸಮುದಾಯಗಳಿಂದಾಗುವ ದೌರ್ಜನ್ಯಗಳಿಂದ ರಕ್ಷಿಸುವುದು
೨. ಅವರ ಆರ್ಥಿಕ ಅಭಿವೃದ್ಧಿಯಲ್ಲಿ ಸಹಕರಿಸುವುದು

ಶೋಷಣೆಯಿಂದ ಸಂರಕ್ಷಣೆಯನ್ನೊದಗಿಸಲು ಸಂವಿಧಾನದ ಅನುಚ್ಛೇದ ೧೫(೪) ೧೬(೨)(೪), ೧೯(೫), ೪೬, ೩೩೦, ೩೩೨, ೩೩೫, ಐದು ಮತ್ತು ಆರನೆಯ ಅನುಸೂಚಿಗಳಲ್ಲಿ ಅವಕಾಶ ಕಲ್ಪಿಸಲಾಗಿದೆ. ಅದೇ ರೀತಿಯಾಗಿ ಆರ್ಥಿಕ ಅಭಿವೃದ್ಧಿಗಾಗಿ ಸಂವಿಧಾನದ ಅನುಚ್ಛೇದ ೨೭೫(೧) ೩೩೯(೨) ಅವಕಾಶಗಳನ್ನು ಒದಗಿಸಲಾಗಿದೆ. ಈ ಅವಕಾಶಗಳಿಂದಾಗಿ ಸರ್ಕಾರಗಳು ಜವಾಬ್ದಾರಿಯಿಂದ ಬುಡಕಟ್ಟು ಜನರ ರಕ್ಷಣೆ ಮತ್ತು ಅಭಿವೃದ್ಧಿಗೆ ವಿಶೇಷ ಯೋಜನೆಗಳನ್ನು ರೂಪಿಸಲು ಹಾಗೂ ಆರ್ಥಿಕವಾಗಿ ಸಹಕರಿಸಲು ಅನುವು ಮಾಡಿಕೊಡಲಾಗಿದೆ. ಅಧ್ಯಯನದ ಸ್ಪಷ್ಟತೆಗಾಗಿ ಸಂವಿಧಾನಿಕ ಅವಕಾಶಗಳನ್ನು ಈ ಕೆಳಗಿನಂತೆ ವಿವರಿಸಬಹುದಾಗಿದೆ *(ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗದ ವಾರ್ಷಿಕ ವರದಿ ೧೯೯೮-೯೯ ಪುಸಂ. ೨-೪).*

೨.೩ ರಕ್ಷಣೋಪಾಯಗಳು

೧. ಸಾಮಾಜಿಕ ರಕ್ಷಣೋಪಾಯಗಳು
೨. ಆರ್ಥಿಕ ರಕ್ಷಣೋಪಾಯಗಳು
೩. ಶೈಕ್ಷಣಿಕ ಮತ್ತು ಸಾಂಸ್ಕೃತಿಕ ರಕ್ಷಣೋಪಾಯಗಳು,
೪. ರಾಜಕೀಯ ರಕ್ಷಣೋಪಾಯಗಳು

೫. ಸೇವಾ ರಕ್ಷಣೋಪಾಯಗಳು

೬. ವಿಶೇಷ ರಕ್ಷಣೋಪಾಯಗಳು

೨.೨.ಅ ಸಾಮಾಜಿಕ ರಕ್ಷಣೋಪಾಯಗಳು

ಸಂವಿಧಾನದ ಅನುಚ್ಛೇದ: ೧೭, ೨೩, ೨೪, ಮತ್ತು ೨೫(೨) ಪರಶಿಷ್ಠ ಜಾತಿ ಪಂಗಡಗಳಿಗೆ ಸಾಮಾಜಿಕ ರಕ್ಷಣೆಯನ್ನೂದಗಿಸಲು ಅವಕಾಶಗಳನ್ನ ಮಾಡಿಕೊಟ್ಟಿವೆ. ಅನುಚ್ಛೇದ ೧೭ರ ಅಡಿಯಲ್ಲಿ ಕೇಂದ್ರ ಮತ್ತು ರಾಜ್ಯಸರ್ಕಾರಗಳು ಈ ಕೆಳಕಾಣುವ ಕಾಯ್ದೆಗಳನ್ನ ಜಾರಿಗೊಳಿಸುತ್ತಿವೆ.

೧ ನಾಗರೀಕ ಹಕ್ಕು ಸಂರಕ್ಷಣಾ ಕಾಯ್ದೆ (೧೯೫೫)

೨ ಪರಿಶಿಷ್ಟಜಾತಿ, ಪರಿಶಿಷ್ಟ ಪಂಗಡಗಳ (ದೌರ್ಜನ್ಯ ನಿಯಂತ್ರಣ) ಕಾಯ್ದೆ ೧೯೮೯

ಅನುಚ್ಛೇದ: ೨೩ ರ ಅಡಿಯಲ್ಲಿ ಶೋಷಿತ ಸಮಾಜದ ಬಡವರನ್ನ ದುರ್ಬಳಕೆ ಮಾಡುವುದನ್ನ ತಪ್ಪಿಸಲು 'ಬಿಗಾರ್' ಮತ್ತು ಅದೇ ರೀತಿಯ ಒತ್ತಾಯಪೂರ್ವಕ ಶ್ರಮವನ್ನ ತಪ್ಪಿಸಲು ಅವಕಾಶ ಕಲ್ಪಿಸಲಾಗಿದೆ, ಈ ಅನುಚ್ಛೇದದಡಿಯಲ್ಲಿ ಕೆಳಗಿನ ಕಾಯ್ದೆಗಳನ್ನು ರೂಪಿಸಲಾಗಿದೆ.

ಜೀತಪದ್ಧತಿಯ ವಿಮುಕ್ತ ಕಾಯ್ದೆ ೧೯೭೬ ರನ್ನ ರೂಪಿಸಿ ಯಾರಾದರೂ ಈ ಕಾಯ್ದೆಗಳಿಗೆ ವಿರುದ್ಧವಾಗಿ ವರ್ತಿಸಿದಲ್ಲಿ ಅಂತವರನ್ನ ಶಿಕ್ಷೆಗೊಳಪಡಿಸಲಾಗುವುದು ಹಾಗೂ ಜೀತದಾಳುಗಳನ್ನ ಗುರುತಿಸಿ ಅವರನ್ನ ಮುಕ್ತಗೊಳಿಸಿ ಅವರಿಗೆ, ಸೂಕ್ತ ಪುನರ್ವಸತಿಯನ್ನ ಕಲ್ಪಿಸಲಾಗುವುದು,

ಅನುಚ್ಛೇದ ೨೪: ಬಹುಸಂಖ್ಯಾತ ಬಾಲಕಾರ್ಮಿಕರು ಮತ್ತು ಜೀತದಾಳುಗಳು ಮುಖ್ಯವಾಗಿ ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟ ಜಾತಿಗಳವರಾಗಿದ್ದು ತಮ್ಮ ಬಡತನ ಬೇಗೆಯಿಂದ ತಪ್ಪಿಸಿಕೊಳ್ಳಲು ಜೀತದಾಳುಗಳಾಗಿ ಬಾಲಕಾರ್ಮಿಕರಾಗಿ ದುಡಿಯುತ್ತಾರೆ,

ಅನುಚ್ಛೇದ ೨೪: ರಡಿಯಲ್ಲಿ ಯಾರೊಬ್ಬರು ೧೪ ವರ್ಷದ ಮಕ್ಕಳನ್ನ ಕಾರ್ಖಾನೆ ಅಥವಾ ಗಣಿಗಳಲ್ಲಿ ಮತ್ತು ಇತರೆ ಕೆಲಸಗಳಲ್ಲಿ ತೊಡಗಿಸಿಕೊಳ್ಳುವಂತಿಲ್ಲ– ಅದನ್ನ ನಿಷೇದಿಸಲು ಹಾಗೂ ಸೂಕ್ತ ಪುನರ್ವಸತಿಯನ್ನ ಕಲ್ಪಿಸಲು. **ಬಾಲಕಾರ್ಮಿಕ ನಿಷೇಧ ಕಾಯ್ದೆ ೧೯೮೫** ನ್ನ ಜಾರಿಗೆ ತರಲಾಗಿದೆ,

ಅನುಚ್ಛೇದ, ೨೫(೨)ಬಿ ಯಡಿಯಲ್ಲಿ ಹಿಂದೂಧಾರ್ಮಿಕ ಸಂಸ್ಥೆಗಳು ತಮ್ಮ ಸೇವೆಯನ್ನು ಹಿಂದೂಧರ್ಮದ ಎಲ್ಲಾ ವರ್ಗದವರಿಗೂ ವಿಸ್ತರಿಸುವುದು ಕಡ್ಡಾಯವಾಗಿದೆ, ಈ ಅವಕಾಶದಡಿಯಲ್ಲಿ ಪರಿಶಿಷ್ಟ ಪಂಗಡಗಳ ಮಕ್ಕಳಿಗೆ ಹಿಂದೂಧಾರ್ಮಿಕ ಸಂಸ್ಥೆಗಳು ನಡೆಸುವ ಶಿಕ್ಷಣ ಮತ್ತು ವೃತ್ತಿಪರ ವಿಷಯಗಳಲ್ಲಿ ಮೀಸಲಾತಿಯನ್ನ ಒದಗಿಸುವುದು ಕಡ್ಡಾಯವಾಗಿದೆ.

೨.೩.೨ ಆರ್ಥಿಕ ರಕ್ಷಣೋಪಾಯಗಳು

ಅನುಚ್ಛೇದ ೨೩, ೨೪, ಮತ್ತು ೪೬ರ ಬಗೆಗೆ ಈಗಾಗಲೇ ಚರ್ಚಿಸಲಾಗಿದೆ ಅನುಚ್ಛೇದ ೪೬ರಡಿಯಲ್ಲಿ ರಾಜ್ಯವು ವಿಶೇಷ ಕಾಳಜಿಯಿಂದ ಹಿಂದುಳಿದ ವರ್ಗಗಳ ಶಿಕ್ಷಣ ಮತ್ತು ಆರ್ಥಿಕ ಹಿತಾಸಕ್ತಿಗಳನ್ನ ವಿಶೇಷವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳನ್ನ ಉದ್ಧರಿಸಬೇಕಾಗಿದೆ, ಹಾಗೂ ಅವರನ್ನ ಎಲ್ಲಾ ರೀತಿಯ ದೌರ್ಜನ್ಯಗಳಿಂದ ರಕ್ಷಿಸಿ ಸಾಮಾಜಿಕ ನ್ಯಾಯವನ್ನೊದಗಿಸಬೇಕಾಗಿದೆ.ಈ ಅವಕಾಶದಡಿಯಲ್ಲಿ ಇಂದಿನ ಮೀಸಲಾತಿ ನಿಯಮಗಳು, ಆರ್ಥಿಕ ಯೋಜನೆಗಳನ್ನ ಸರ್ಕಾರಗಳು ಜಾರಿಗೊಳಿಸುತ್ತಿವೆ.

೨.೨.ಆ. ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ರಕ್ಷಣೋಪಾಯಗಳು

ಸಂವಿಧಾನದ ಅನುಚ್ಛೇದ; ೧೫(೪) ೨೯(೧) ಮತ್ತು ೩೫೦(ಎ)ಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರ ಶಿಕ್ಷಣ ಮತ್ತು ಸಂಸ್ಕೃತಿಯ ರಕ್ಷಣೆಗೆ ವಿಶೇಷ ಅವಕಾಶಗಳನ್ನ ಕಲ್ಪಿಸಲಾಗಿದೆ.

ಅನುಚ್ಛೇದ ೧೫(೪): ರಾಜ್ಯವು ಸಾಮಾಜಿಕ ಹಾಗೂಶೈಕ್ಷಣಿಕವಾಗಿ ಹಿಂದುಳಿದಿರುವ ವರ್ಗಗಳಿಗೆ ವಿಶೇಷ ಅವಕಾಶಗಳನ್ನ ಕಲ್ಪಿಸಬೇಕಾಗಿದೆ, ಈ ಅನುಚ್ಛೇದದಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರಿಗೆ ಶಿಕ್ಷಣದಲ್ಲಿ ತಾಂತ್ರಿಕ, ಇಂಜಿನಿಯರಿಂಗ್ ಹಾಗೂ ವೈದ್ಯಕೀಯ ವಿದ್ಯಾಭ್ಯಾಸವನ್ನೊಳಗೂಂಡಂತೆ ಮೀಸಲಾತಿಯನ್ನ ಕಲ್ಪಿಸಬೇಕಾಗಿದೆ.

ಅನುಚ್ಛೇದ ೨೯(೧): ಭಾರತದ ಯಾವುದೇ ಭಾಗದಲ್ಲಿ ವಾಸಿಸುವ ಭಾರತೀಯ ನಾಗರೀಕರು, ತಮ್ಮ ಸಂಸ್ಕೃತಿ ಮತ್ತು ಭಾಷೆಯನ್ನ ರಕ್ಷಿಸಿಕೊಳುವ ಮತ್ತು ಬೆಳೆಸುವ ಹಕ್ಕನ್ನ ಹೊಂದಿದ್ದಾರೆ. ಇದರಡಿಯಲ್ಲಿ ಬುಡಕಟ್ಟು ಜನರಿಗೆ ತಮ್ಮ ಭಾಷೆ ಮತ್ತು ಸಂಸ್ಕೃತಿಯನ್ನ ರಕ್ಷಿಸಿಕೊಳ್ಳುವ ಹಕ್ಕುಗಳನ್ನ ಪಡೆದಿದ್ದಾರೆ.

ಅನುಚ್ಛೇದ ೩೫೦(ಎ): ಪ್ರತೀರಾಜ್ಯ ಮತ್ತು ಸ್ಥಳೀಯ ಸರ್ಕಾರಗಳು ತಮ್ಮ ವ್ಯಾಪ್ತಿಯೊಳಗೆ ಸ್ಥಳೀಯ ಜನರ ಮಾತೃ ಭಾಷಯಲ್ಲಿ ಭೋಧನೆ ಮಾಡಲು, ಪ್ರಾಥಮಿಕ ಶಾಲಾಮಟ್ಟದಲ್ಲಿ ಎಲ್ಲಾ ರೀತಿಯ ಸೌಲಭ್ಯಗಳನ್ನ ಒದಗಿಸಬೇಕಾಗಿದೆ ಈ ಅನುಚ್ಛೇದ ಒದಗಿಸುರುವ ಅವಕಾಶದಿಂದಾಗಿ ಪ್ರಾಥಮಿಕ ಶಾಲಾಮಟ್ಟದ ಬುಡಕಟ್ಟು ಆಶ್ರಮಶಾಲೆಗಳಲ್ಲಿ ಬುಡಕಟ್ಟು ವಿಧ್ಯಾರ್ಥಿಗಳಿಗೆ ಮಾತೃಬಾಷೆಯಲ್ಲಿ ಭೋದಿಸಲು ಬುಡಕಟ್ಟು ಶಿಕ್ಷಕರನ್ನ ಗೌರವಧನದ ಮೂಲಕ ನೇಮಕ ಮಾಡಿಕೊಳ್ಳಲಾಗುತ್ತಿದೆ.

೨.೨.ಇ. ರಾಜಕೀಯ ರಕ್ಷಣೋಪಾಯಗಳು

ಸಂವಿಧಾನದ ೧೬೪(೧), ೨೪೩(ಡಿ), ೨೪೩-ಟಿ, ೩೩೦, ೩೩೨, ೩೩೪, ೩೭೧, ೩೭೧'ಎ', ೩೭೧ಬಿ, ೩೭೧ಸಿ, ೩೭೧ಎಫ್, ೩೭೧ಜಿ ಮತ್ತು ೩೭೧ಎಚ್ ಗಳಡಿಯಲ್ಲಿ ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳಿಗೆ ರಾಜಕೀಯವಾಗಿ ಪ್ರತಿನಿದಿಸಲು ಅವಕಾಶ ಕಲ್ಪಿಸಲಾಗಿದೆ.ಈ ಅವಕಾಶಗಳಿಂದಾಗಿ ರಾಜ್ಯದಲ್ಲಿ ಇಂದು ಆದಿಮ ಬುಡಕಟ್ಟುಗಳ ಸಾಕಷ್ಟು ಮಂದಿ ಗ್ರಾಮಪಂಚಾಯ್ತಿ, ತಾಲ್ಲೂಕು ಪಂಚಾಯ್ತಿಯ ಸದಸ್ಯರಾಗಿದ್ಧಾರೆ ಆದರೆ ಜಿಲ್ಲಾಪಂಚಾಯ್ತಿ ಮಟ್ಟದಲ್ಲಿ ಕೇವಲ ಒಂದು ಅಥವಾ ಎರಡು ಸದಸ್ಯರು ಮಾತ್ರ ಆಯ್ಕೆಯಾಗಿದ್ದಾರೆ.

೨.೨.ಈ. ಸೇವಾ ರಕ್ಷಣೋಪಾಯಗಳು

ಕೇಂದ್ರ, ರಾಜ್ಯ, ಅರೆಸರ್ಕಾರಿ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಪರಿಶಿಷ್ಟ ಪಂಗಡಗಳ ನೌಕರರಿಗೆ ಸಂವಿಧಾನದ ವಿಧಿಗಳಾದ ೧೬(೪), ೧೬೪'ಎ' ಮತ್ತು ೩೩೫, ೨೦೦೧ರಲ್ಲಿ ಸಂವಿಧಾನ ೮೫ನೇ ತಿದ್ದುಪಡಿ ಕಾಯ್ದೆ ೨೦೦೧ರ ಮುಖಾಂತರ ಅನುಚ್ಛೇದ ೧೬(೪ಎ)ಯನ್ನ ಸೇರಿಸಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ನೌಕರರಿಗೆ ಪದೋನ್ನತಿಯಲ್ಲಿ ಮೀಸಲಾತಿಕಯನ್ನ ಕಲ್ಪಿಸಲಾಗಿದೆ.

೨.೨.ಉ. ವಿಶೇಷ ರಕ್ಷಣೋಪಾಯಗಳು

ಅನುಚ್ಛೇದ ೨೭೫(೧)ರಡಿಯಲ್ಲಿ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳಿಗೆ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಅನುದಾನವನ್ನ ಬಿಡುಗಡೆ ಮಾಡುತ್ತದೆ. ಅನುಚ್ಛೇದ ೩೩೮ (೮) ರಡಿಯಲ್ಲಿ ಪರಿಶಿಷ್ಟ ಪಂಗಡಗಳ ಸಮಸ್ಯೆಗಳು, ಯೋಜನೆಗಳನ್ನ ಕಾಲಕಾಲಕ್ಕೆ ಅಧ್ಯಯನಿಸಲು ಮತ್ತು ಸರ್ಕಾರಗಳಿಗೆ ಸೂಕ್ತ ಸಲಹೆ ಮತ್ತು ಮಾರ್ಗದರ್ಶನ ನೀಡಲು ಪರಿಶಿಷ್ಟ ಪಂಗಡಗಳ ರಾಷ್ಟ್ರಿಯ ಆಯೋಗವನ್ನ ರಚಿಸಲಾಗಿದೆ.

ಹೀಗೆ ಭಾರತದ ಸಂವಿಧಾನದಲ್ಲಿ ಹಲವಾರು ಅನುಚ್ಛೇದಗಳೊಂದಿಗೆ ಅನುಸೂಚಿ ಗಳಲ್ಲಿಯೂ ಸಹ ಬುಡಕಟ್ಟು ಜನರ ಕಲ್ಯಾಣ ಮತ್ತು ಅಭಿವೃದ್ಧಿಗೆ ಅವಕಾಶಗಳನ್ನ ಕಲ್ಪಿಸಿ ಕೊಡಲಾಗಿದೆ. ಆದರೆ ಅವರ ಅಭಿವೃದ್ಧಿಯು ನಿರೀಕ್ಷಿತ ಮಟ್ಟದಲ್ಲಿ ಸಾಗುತ್ತಿಲ್ಲ.ಬುಡಕಟ್ಟು ಜನರ ಆರ್ಥಿಕ ವಿಕಾಸಕ್ಕಾಗಿ ಸ್ವತಂತ್ರ ಪಡೆದ ಆರಂಭದಿಂದಲೂ ಪ್ರಯತ್ನಗಳು ನಡೆಯುತ್ತಲೇ ಇವೆ. ಅಂತಹವುಗಳಲ್ಲಿ ಮೊದಲ ಯತ್ನವಾಗಿ ೧೯೫೪ ರಲ್ಲಿ ೪೩ ವಿವಿದೊದ್ದೇಶ ಬುಡಕಟ್ಟು ಅಭಿವೃದ್ಧಿ ಯೋಜನೆಗಳನ್ನ ರೂಪಿಸಿ ಪ್ರತಿ ಯೋಜನೆಗೆ ರೂ.೨೭ ಲಕ್ಷ ರೂ ಗಳಂತೆ ಐದು ವರ್ಷಗಳ ಅವಧಿಗಾಗಿ ಸಮುದಾಯ ಅಭಿವೃದ್ಧಿ ಯೋಜನೆಗಳನ್ನ ಕೈಗೊಳ್ಳಲಾಯಿತು.ಈ ಯೋಜನೆಗಳು ಸಂಪರ್ಕದಿಂದ ದೂರ ಉಳಿದ ಗುಡ್ಡಗಾಡು ಮತ್ತು ಅರಣ್ಯ ಪ್ರದೇಶಗಳಲ್ಲಿ ಕೈಗೊಂಡಿದ್ದರಿಂದ ಹಾಗೂ ಸಮರ್ಪಕ ಸಂಪರ್ಕ ಮತ್ತು ಮೂಲಭೂತ ವ್ಯವಸ್ಥೆಗಳ ಕೊರತೆಯಿಂದಾಗಿ ನಿರೀಕ್ಷಿತ ಗುರಿ ಮುಟ್ಟುವಲ್ಲಿ ವಿಫಲವಾದವು.

೨.೩.ಸಮಿತಿಗಳು ಮತ್ತು ಆಯೋಗಗಳು

೨.೩.ಅ. ಎಲ್ವಿನ್ ಸಮಿತಿ

೧೯೫೬ರಲ್ಲಿ ಬುಡಕಟ್ಟು ಜನರ ಪರಿಸ್ಥಿತಿಯನ್ನ ವಿಶ್ಲೇಷಿಸಿ **ಎಲ್ವಿನ್ ಸಮಿತಿಯ** ಶಿಫಾರಸ್ಸಿನ ಮೇರೆಗೆ ತುಂಬಾ ಎಚ್ಚರಿಕೆಯಿಂದ ವಿವಿದೊದ್ದೇಶ ಯೋಜನೆಗಳನ್ನ ಬದಲಾಯಿಸಿ ೧೯೫೭ ರಿಂದ ಬುಡಕಟ್ಟು ಅಭಿವೃದ್ಧಿ ಕ್ಷೇತ್ರಗಳನ್ನ ವಿಂಗಡಿಸಿಲಾಯಿತು.ಬುಡಕಟ್ಟು ಅಭಿವೃದ್ಧಿ ಕ್ಷೇತ್ರಗಳನ್ನ ೧೫೦ ರಿಂದ ೨೦೦ ಚದುರ ಮೈಲಿಗಳ ವ್ಯಾಪ್ತಿಗೆ ಒಂದರಂತೆ ವಿಸ್ತರಿಸಿ ಸಂಪೂರ್ಣವಾಗಿ ಬುಡಕಟ್ಟು ಅಭಿವೃದ್ಧಿಯತ್ತ ಒತ್ತು ಕೊಡಲಾಯಿತು, ಮುಖ್ಯವಾಗಿ ಬುಡಕಟ್ಟು ಜನರ ಶಿಕ್ಷಣ, ಆರೋಗ್ಯ, ಆರ್ಥಿಕ ಮತ್ತು ಸಂಪರ್ಕಗಳ ಅಭಿವೃದ್ಧಿಯನ್ನ ಗುರಿಯಾಗಿಸಿಕೊಳ್ಳಲಾಯಿತು.

೨.೩.ಆ. ಢೇಬಾರ್ ಆಯೋಗ

"೧೯೬೦ರಲ್ಲಿ ಬುಡಕಟ್ಟು ಯೋಜನೆಗಳ ದಕ್ಷತೆ ಮತ್ತು ಪ್ರಾಮುಖ್ಯತೆಯನ್ನ ಪುನರಾವಲೋಕನ ಮಾಡಲು ಮೊದಲನೆಯ ಅನುಸೂಚಿತ ಬುಡಕಟ್ಟು ಮತ್ತು ಅನುಸೂಚಿತ ಕ್ಷೇತ್ರಗಳ ರಾಷ್ಟ್ರೀಯ ಆಯೋಗವನ್ನ ಪ್ರೂ.ದೆಬಾರ್‌ರವರ ಅಧ್ಯಕ್ಷತೆಯಲ್ಲಿ ರಚಿಸಲಾಯಿತು"*(ಯು ಎನ್ ಢೇಬಾರ್ ವರದಿ: ೧೯೬೧).* ಢೇಬಾರ್ ಆಯೋಗವು ಅಕ್ಟೋಬರ್ ೧೯೬೧ ರಲ್ಲಿ ತನ್ನ ವರದಿಯನ್ನ ಸರ್ಕಾರಕ್ಕೆ ಸಲ್ಲಿಸಿದ್ದು ಆಯೋಗವು ತನ್ನ ವರದಿಯಲ್ಲಿ ಗುರ್ತಿಸಿದ ಮುಖ್ಯ ಅಂಶಗಳು ಈ ಕೆಳಗಿನಂತಿವೆ.

- ಬುಡಕಟ್ಟು ಅಭಿವೃದ್ಧಿಯು ತುಂಬಾ ನಿಧಾನಗತಿಯಲ್ಲಿ ಸಾಗುತ್ತಿದೆ.
- ಬಂಡವಾಳ ಹೂಡಿಕೆ ಮತ್ತು ಬುಡಕಟ್ಟು ಜನರ ರಕ್ಷಣೋಪಾಯಗಳ ನ್ಯೂನ್ಯತೆ.

❖ ಸರ್ಕಾರ ಕೂಡಲೆ ಗಮನಹರಿಸಿ ಸಮಗ್ರ ಅಭಿವೃದ್ಧಿಗೆ ನಿಯಮಗಳನ್ನ ರೂಪಿಸಿ ಶೇ.೫೦ಕ್ಕಿಂತ ಹೆಚ್ಚು ಬುಡಕಟ್ಟು ಜನರು ವಾಸಿಸುವ ಪ್ರದೇಶಗಳಿಗೆಲ್ಲ ಬುಡಕಟ್ಟು ಅಭಿವೃದ್ಧಿ ಕ್ಷೇತ್ರಗಳನ್ನ ವಿಸ್ತರಿಸಲು ಸಲಹೆ ನೀಡಿತು.

ಸಲಹೆಗಳನ್ನ ಅಂಗೀಕರಿಸಿದ ಕೇಂದ್ರ ಸರ್ಕಾರ ಮೂರನೆಯ ಯೋಜನೆಯ ಅಂತ್ಯದ ವೇಳೆಗೆ ಶೇ.೪೦ಕ್ಕಿಂತ ಹೆಚ್ಚು ಬುಡಕಟ್ಟು ಜನ ವಾಸಿಸುವ ಪ್ರದೇಶಗಳಲ್ಲಿ ಸುಮಾರು ೫೦೦ ಬುಡಕಟ್ಟು ಅಭಿವೃದ್ಧಿ ಕ್ಷೇತ್ರಗಳನ್ನ ಸ್ಥಾಪಿಸಿತು.

೨.೩.ಇ. ಶಿಲು ಆಹೊ ಸಮಿತಿ

"ಭಾರತ ಸರ್ಕಾರ ೧೯೬೯ರಲ್ಲಿ ಬುಡಕಟ್ಟು ಜನರ ರಕ್ಷಣೆ ಮತ್ತು ಅಭಿವೃದ್ಧಿ ಯೋಜನೆಗಳ ಪರಿಶೀಲನೆಗಾಗಿ **ಶಿಲು ಆಹೊ** ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನ ನೇಮಕ ಮಾಡಿತು" (ವರ್ಮ:*೧೯೯೫:.೧೯೧*). ಆ ಸಮಿತಿಯು ದೇಬಾರ್ ಆಯೋಗದ ಸಲಹೆಗಳನ್ನ ಯಶಸ್ವಿಯಾಗಿ ಜಾರಿಗೊಳಸದಿರುವುದನ್ನ ತೋರಿಸುವುದರೊಂದಿಗೆ ಅವುಗಳನ್ನ ಕೂಡಲೆ ಜಾರಿಗೊಳಿಸುವಂತೆ ಸೂಚಿಸಿತು ಮತ್ತು ಬುಡಕಟ್ಟು ಕ್ಷೇತ್ರಾಭಿವೃದ್ಧಿಯ ಯೋಜನೆಯನ್ನ ನಿಲ್ಲಿಸುವಂತೆ ಸಲಹೆ ನೀಡಿತಲ್ಲದೆ, ಬುಡಕಟ್ಟು ಜನರ ಸಮಸ್ಯೆಗಳಿಗೆ, ಅವರ ಸಾಲಬಾದೆ /ಋಣಬಾದೆ, ಭೂ ಅತಿಕ್ರಮಣ, ಆರ್ಥಿಕ ಹಿಂದುಳಿದಿರುವಿಕೆ ಮತ್ತು ಅಸಮರ್ಪಕ ಸಂಪರ್ಕ ವ್ಯವಸ್ಥೆಗಳೇ ಕಾರಣವೆಂದು ತೋರ್ಪಡಿಸಿತು, ಈ ಸಮಸ್ಯೆಗಳನ್ನ ಕೂಡಲೆ ಬಗೆಹರಿಸುವಂತೆ ಸರ್ಕಾರಕ್ಕೆ ಸೂಚಿಸಿತಲ್ಲದೆ ಗಿರಿಜನರ ಸಮಗ್ರಾಭಿವೃದ್ಧಿಗೆ ಯೋಜನೆಗಳನ್ನ ರೂಪಿಸುವಂತೆ ಸಲಹೆ ಮಾಡಿತು.

೨.೩.ಈ. ಡಾ ಎಸ್ ಸಿ ದುಬೆ ಸಮಿತಿ

ಭಾರತದ ಸ್ವಾತಂತ್ರ್ಯ ನಂತರ ಜಾರಿಗೊಳಿಸಿದ ಎಲ್ಲಾ ಯೋಜನೆಗಳಿಗಿಂತಲೂ ಬುಡಕಟ್ಟು ಜನರಿಗೆ ಹೆಚ್ಚು ಉಪಯುಕ್ತಕರ ಯೋಜನೆ ಬುಡಕಟ್ಟು ಉಪ ಯೋಜನೆಯಾಗಿದೆ. ಬುಡಕಟ್ಟು ಉಪಯೋಜನೆ ಯೆಂದರೆ ಸಮಗ್ರ ಅಭಿವೃದ್ಧಿಗೆ ರಚಿಸುವ ಮುಖ್ಯ ಯೋಜನೆಯ ಒಂದು ಉಪಯೋಜನೆಯಾಗಿದೆ. ೧೯೭೨ ರಲ್ಲಿ ಭಾರತ ಸರ್ಕಾರದ ಅಂದಿನ ಶಿಕ್ಷಣ ಮತ್ತು ಸಮಾಜ ಕಲ್ಯಾಣ ಮಂತ್ರಾಲಯವು ಪ್ರೊ, ಎಸಿ.ಸಿ ದುಬೆರವರ ಅಧ್ಯಕ್ಷತೆಯಲ್ಲಿ ಬುಡಕಟ್ಟು ಅಭಿವೃದ್ದಿಗೆ ತ್ವರಿತ ಚಾಲನೆಯನ್ನು ನೀಡಲು ಒಂದು ಸಮಿತಿಯನ್ನು ರಚಿಸಿತು. ಆ ಸಮಿತಿಯು ನೀಡಿದ ವರದಿಯ ಮುಖ್ಯ ಅಂಶಗಳು ಈ ಕೆಳಕಂಡಂತಿವೆ.

- ಬುಡಕಟ್ಟು ಜನರ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ದಿಯೊಂದಿಗೆ ಅವರನ್ನ ಮುಖ್ಯ ವಾಹಿನಿಯತ್ತ ತರುವುದು.
- ಅವರ ರಕ್ಷಣೆಯೊಂದಿಗೆ ಸಾಮಾಜಿಕ ಹಾಗೂ ಆರ್ಥಿಕ ನ್ಯಾಯ ಒದಗಿಸುವುದು.

ಬುಡಕಟ್ಟು ಉಪ ಯೋಜನೆಯ ಲಕ್ಷಣಗಳು

❖ ಇದೊಂದು ಕ್ಷೇತ್ರಯೋಜನೆ: ಬುಡಕಟ್ಟು ಜನರು ಹೆಚ್ಚಾಗಿ ವಾಸಮಾಡುವ ಪ್ರದೇಶಗಳನ್ನ ಗುರ್ತಿಸಿ ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆಗಳನ್ನ (ಐಟಿಡಿಪಿ) ಜಾರಿಗೊಳಿಸುವುದು. ಕಡಿಮೆ ಸಾಂದ್ರತೆಯಿರುವ ಪ್ರದೇಶಗಳಲ್ಲಿ ಮಾದರಿ ಕ್ಷೇತ್ರ ಅಭಿವೃದ್ಧಿ ಯೋಜನೆಗಳನ್ನ ಜಾರಿಗೊಳಿಸುವುದು (ಮಾಡಾ) ಮತ್ತು ಬುಡಕಟ್ಟು ಗುಂಪುಗಳ ರಚನೆ.

- ಬುಡಕಟ್ಟು ಜನರ ಅಗತ್ಯತೆ, ಕೌಶಲ್ಯತೆ ಮತ್ತು ಸಾಮರ್ಥ್ಯತೆಗೆ ಅನುಗುಣವಾಗಿ ಸಾಮಾಜಿಕ, ಆರ್ಥಿಕ ಯೋಜನೆಗಳನ್ನ ರೂಪಿಸುವುದು ಮತ್ತು ಅವರನ್ನ ಸಮಾಜದ ಮುಖ್ಯ ವಾಹಿನಿಯತ್ತ ತರುವುದು.
- ರಾಜ್ಯ ಯೋಜನೆಗಳಲ್ಲಿಯ ಸಂಪನ್ಮೂಲಗಳನ್ನ ಕ್ರೂಢೀಕರಿಸುವುದು ಮತ್ತು ರಾಜ್ಯ ಸರ್ಕಾರಗಳು ಬುಡಕಟ್ಟು ಜನಸಂಖ್ಯೆಗೆ ಅನುಗುಣವಾಗುವಷ್ಟು ಸಂಪನ್ಮೂಲಗಳನ್ನ ಮೀಸಲಾಗಿಡುವುದು.
- ಪೂರಕವಾಗಿ ಕೇಂದ್ರ ಸರ್ಕಾರ ವಿಶೇಷ ಕೇಂದ್ರೀಯ ನೆರವನ್ನ ನೀಡುವುದು, ಮತ್ತು ಸಂಪೂರ್ಣ ಕೇಂದ್ರ ಸರ್ಕಾರದ ಯೋಜನೆಗಳು ಮತ್ತು ಕೇಂದ್ರ ಸರ್ಕಾರದಿಂದ ಪ್ರಾಯೋಜಿತ ಯೋಜನೆಗಳನ್ನ ಅನುಷ್ಠಾನಗೊಳಿಸುವುದು.
- ಎಲ್ಲಾ ಹಂತಗಳಲ್ಲೂ ವ್ಯವಸ್ಥಿತ ಆಡಳಿತವನ್ನ ರೂಪಿಸುವುದು, ವಿಶೇಷವಾಗಿ ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆಯ ಜಾರಿಯಲ್ಲಿ ಮತ್ತು ಯೋಜನೆಗಳ ಕಾರ್ಯಕ್ಷೇತ್ರಗಳಲ್ಲಿ ಇತ್ಯಾದಿ.

೨.೩.ಉ. ಪ್ರೋ ಎಲ್ ಪಿ ವಿಧ್ಯಾರ್ಥಿ ಸಮಿತಿ

೧೯೭೪ರಲ್ಲಿ ಪ್ರೋ ಎಲ್ ಪಿ ವಿಧ್ಯಾರ್ಥಿ ಯವರ ನೇತೃತ್ವದ ಸಮಿತಿಯು ಬುಡಕಟ್ಟು ಜನರ ಹಿಂದುಳಿಕೆಗೆ ಅವರ ಆದಿಮ ಕೃಷಿ ಪದ್ಧತಿ, ಭೂ ಅತೀಕ್ರಮಣ, ಋಣಭಾದೆ, ಕೈಗಾರಿಕೀಕರಣ ಮತ್ತು ಅಭಿವೃದ್ಧಿ ಯೋಜನೆಗಳ ವಿರುದ್ದಾತ್ಮಕ ಪರಿಣಾಮ, ಅನಕ್ಷರತೆ, ಅನಾರೋಗ್ಯಗಳು ಮತ್ತು ಪೌಷ್ಠಿಕ ಆಹಾರದ ಕೊರತೆಯಂತಹ ಸಮಸ್ಯೆಗಳನ್ನ ಗುರುತಿಸಿ, ಬುಡಕಟ್ಟು ಜನರಲ್ಲಿ ಹಿಂದುಳಿದ ಆದಿಮ ಬುಡಕಟ್ಟುಗಳಿಗಾಗುತ್ತಿರುವ ಅನ್ಯಾಯವನ್ನ ತೋರ್ಪಡಿಸುವದರೊಂದಿಗೆ ಆದಿಮ ಬುಡಕಟ್ಟುಗಳ ಕೃಷಿ ಸುಧಾರಣೆ, ಭೂ ಅತಿಕ್ರಮಣದಿಂದ ರಕ್ಷಣೆ, ಋಣಬಾದೆಯಿಂದ ಮುಕ್ತಿಗೆ ಕ್ರಮ, ಆದಿಮ ಬುಡಕಟ್ಟುಗಳಿಗೆ ಸೂಕ್ತ ಶಿಕ್ಷಣ, ಕೈಗಾರಿಕೀಕರಣ ಮತ್ತು ಅಭಿವೃದ್ಧಿ ಯೋಜನೆಗಳಿಂದಾಗುತ್ತಿರುವ ವಿರುದ್ದಾತ್ಮಕ ಪರಿಣಾಮದಿಂದ ರಕ್ಷಣೆ ಮತ್ತು ಸೂಕ್ತ ಪುನರ್ವಸತಿ, ಆರೋಗ್ಯ ಸುಧಾರಣೆ, ಮತ್ತು ಪೌಷ್ಟಿಕ ಆಹಾರ ಪೂರೈಕೆಗೆ ಹೆಚ್ಚು ಒತ್ತನ್ನ ಕೊಡಲು ಶಿಪಾರಸ್ಸನ್ನ ಮಾಡಿದೆ.

೨.೩.ಊ. ದಿಲೀಪ್ ಸಿಂಗ್ ಭುರಿಯಾ ವರದಿ

ಭಾರತ ಸರ್ಕಾರ ೨೦೦೩ ರಲ್ಲಿ ಪರಿಶಿಷ್ಟ ಪಂಗಡಗಳ ಕಲ್ಯಾಣ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ಪರಿಶಿಷ್ಟ ವಲಯಗಳ ಕಾರ್ಯವೈಕರಿಯ ಪರಾಮರ್ಶೆಗೆ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮಾಜಿ ಅಧ್ಯಕ್ಷರಾದ ಶ್ರೀ ದಿಲೀಪ್ ಸಿಂಗ್ ಭುರಿಯಾ ರವರ ಅಧ್ಯಕ್ಷತೆಯಲ್ಲಿ ೧೭ ಸದಸ್ಯರ ಪರಿಶಿಷ್ಟ ಪಂಗಡಗಳು ಮತ್ತು ಪರಿಶಿಷ್ಟ ವಲಯಗಳ ಎರಡನೆ ರಾಷ್ಟ್ರೀಯ ಆಯೋಗವನ್ನ ರಚಿಸಿತ್ತು. ಈ ಆಯೋಗವು ೨೦೦೪ ರಲ್ಲಿ ತನ್ನ ವರದಿಯನ್ನ ರಾಷ್ಟ್ರಪತಿಗಳಿಗೆ ಸಲ್ಲಿಸಿದ್ದು ವರದಿಯನ್ನ ಸಂಸತ್ತಿನಲ್ಲಿ ಇನ್ನೂ ಪ್ರಸ್ತುತಪಡಿಸಿರುವುದಿಲ್ಲ *(ಬುಡಕಟ್ಟು ವ್ಯವಹಾರಗಳ ಮಂತ್ರಾಲಯ ವಾರ್ಷಿಕ ವರದಿ ೨೦೦೪).*

೨.೪ ಭಾರತ ಸರ್ಕಾರದ ಬುಡಕಟ್ಟು ಅಭಿವೃದ್ಧಿ ಯೋಜನೆಗಳು

ಭಾರತದ ಸ್ವಾತಂತ್ರ್ಯ ಪಡೆದ ನಂತರ ಬುಡಕಟ್ಟು ಜನರ ಕಲ್ಯಾಣ, ಅಭಿವೃದ್ಧಿ ಮತ್ತು ರಕ್ಷಣೆಗಾಗಿ ಹಲವಾರು ಯೋಜನೆಗಳನ್ನ, ಕಾರ್ಯಕ್ರಮಗಳನ್ನ ಮತ್ತು ಕಾಯ್ದೆ ಕಾನೂನುಗಳನ್ನ ಜಾರಿಗೊಳಿಸಲಾಯಿತು.ಈ ಎಲ್ಲಾ ಕಾರ್ಯವನ್ನ ಅಂದಿನ ಗೃಹವ ಮಂತ್ರಾಲಯವು ನಿರ್ವಹಿಸುತ್ತಿದ್ದು. ಆ ನಂತರ ೧೯೭೦ರಲ್ಲಿ ವಿಂಗಡಗೊಂಡು ಸಮಾಜ ಕಲ್ಯಾಣ ಮಂತ್ರಾಲಯವಾಗಿ ೧೯೯೯ ರಲ್ಲಿ ಬುಡಕಟ್ಟು ಜನರ ಅಭಿವೃದ್ಧಿಗೆ ಹೆಚ್ಚಿನ ಒತ್ತನ್ನ ನೀಡುವ

ಸಲುವಾಗಿ ಬುಡಕಟ್ಟು ವ್ಯವಹಾರಗಳ ಮಂತ್ರಾಲಯವಾಗಿ ಕೇಂದ್ರಸರ್ಕಾರ ಸಮಾಜ ಕಲ್ಯಾಣ ಮಂತ್ರಾಲಯದಿಂದ ವಿಭಜಿಸಿದೆ. ಬುಡಕಟ್ಟು ಜನರಿಗಾಗಿ ರೂಪಿಸುವ ಕಾರ್ಯಕ್ರಮಗಳು, ನೀತಿ ನಿಯಮಗಳು ಮತ್ತು ಸಂಯೋಜನೆಗೆ ಬುಡಕಟ್ಟು ವ್ಯವಹಾರಗಳ ಮಂತ್ರಾಲಯವು ಒಂದು ನೊಡಲ್ ಮಂತ್ರಾಲಯವಾಗಿದೆ. ಈ ಮಂತ್ರಾಲಯದ ಯೋಜನೆಗಳು ಮತ್ತು ಕಾರ್ಯಕ್ರಮಗಳಡಿ ಬುಡಕಟ್ಟು ಜನರ ಅಭಿವೃದ್ಧಿಗೆ ರಾಜ್ಯ ಮತ್ತು ಸ್ವಯಂ ಸೇವಾ ಸಂಸ್ಥೆಗಳಿಗೆ, ಪೂರಕವಾಗಿ ಹಣಕಾಸಿನ ನೆರವನ್ನ ನೀಡುತ್ತದೆ. ಅಲ್ಲದೆ ಸಂದಿಗ್ದ ಅಂತರವನ್ನ ಹೋಗಲಾಡಿಸಲು ಪ್ರಯತ್ನಿಸುತ್ತಿದೆ. ಬುಡಕಟ್ಟು ಜನರ ಅಭಿವೃದ್ಧಿಯ ಕಾರ್ಯಕ್ರಮಗಳ ಜಾರಿಯು ಎಲ್ಲಾ ಮಂತ್ರಾಲಯಗಳ ಜವಾಬ್ದಾರಿಯಾದರೂ ಸಹ ಬುಡಕಟ್ಟು ವ್ಯವಹಾರಗಳ ಮಂತ್ರಾಲಯವು ಯೋಜನಾ ಆಯೋಗದ ಸಹಯೋಗದೊಂದಿಗೆ ಒಂದು ಕಾವಲುಗಾರನಂತೆ ಕಾರ್ಯ ನಿರ್ವಹಿಸುತ್ತದೆ.

೨.೪.ಅ ಬುಡಕಟ್ಟು ಉಪ ಯೋಜನೆ

ಭಾರತ ಸರ್ಕಾರವು ೧೯೭೨ ರಲ್ಲಿ ಎಸ್ ಸಿ ದುಬೆಯವರ ಅಧ್ಯಕ್ಷತೆಯಲ್ಲಿ ರಚಿಸಿದ ತಜ್ಞರ ಸಮಿತಿಯು ನೀಡಿದ ಸಲಹೆಗಳ ಆದಾರದ ಮೇಲೆ ಬುಡಕಟ್ಟು ಉಪ ಯೋಜನೆಯನ್ನ ಅಳವಡಿಸಿಕೊಳ್ಳಲಾಯಿತು. ಈ ಯೋಜನೆಯು ಇಂದಿಗೂ ಸಹ ಹಿಂದಿನ ಮಾರ್ಗದರ್ಶನಗಳ ಆಧಾರದ ಮೇಲೆಯೇ ನಡೆಯುತ್ತಿದೆ. ಈ ಯೋಜನೆಯಡಿ ಕಾರ್ಯಕ್ರಮಗಳನ್ನ ಕಾರ್ಯಗತಗೊಳಿಸುವ ಸಂಪೂರ್ಣ ಜವಾಬ್ದಾರಿಯು ಸಂಬಂಧಿಸಿದ ಕೇಂದ್ರ ಮಂತ್ರಾಲಯ / ರಾಜ್ಯಸರ್ಕಾರ/ ಕೇಂದ್ರಾಡಳಿತ ಪ್ರದೇಶದ್ದಾಗಿದೆ.

ಬುಡಕಟ್ಟು ಉಪಯೋಜನೆಯ ಮಾನದಂಡಗಳ ಪ್ರಕಾರ ಸಂಬಂದಿಸಿದ ಮಂತ್ರಾಲಯ ಹಾಗೂ ರಾಜ್ಯ ಮತ್ತು ಕೇಂದ್ರಾಡಳಿತ ಸರ್ಕಾರಗಳು ಆಯಾ ರಾಜ್ಯದ/ ಕೇಂದ್ರಾಡಳಿತ ಪ್ರದೇಶದ ಮುಖ್ಯ ಯೋಜನೆಯಲ್ಲಿ ಬುಡಕಟ್ಟು ಜನಸಂಖ್ಯೆಯ ಅನುಪಾತಕ್ಕನುಗುಣವಾಗಿ ಬುಡಕಟ್ಟು ಉಪ ಯೋಜನೆಗೆ ಹಣವನ್ನ ಮೀಸಲಿರಿಸಬೇಕು, ಪ್ರಸ್ತುತ ನಮ್ಮ ದೇಶದಲ್ಲಿ ಬುಡಕಟ್ಟು ಉಪ ಯೋಜನೆಯನ್ನ ಈ ಕೆಳಗಿನಂತೆ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಜಾರಿಗೊಳಿಸುತ್ತಿವೆ.

ಕೋಷ್ಟಕ: ೨.೨ ಬುಡಕಟ್ಟು ಉಪ ಯೋಜನೆಯನ್ನ ಜಾರಿಗೊಳಿಸುತ್ತಿರುವ ರಾಜ್ಯಗಳು

ಆಂಧ್ರ ಪ್ರದೇಶ	ಹಿಮಾಚಲ ಪ್ರದೇಶ	ತಮಿಳುನಾಡು
ಅಸ್ಸಾಂ	ಜಮ್ಮು ಮತ್ತು ಕಾಶ್ಮಿರ	ತ್ರಿಪುರ
ಬಿಹಾರ	ಜಾರ್ಕಂಡ	ಉತ್ತರ ಪ್ರದೇಶ
ಛತ್ತಿಸಗಢ	ಕರ್ನಾಟಕ	ಉತ್ತರಾಂಚಲ
ಗೋವ	ಕೇರಳ	ಪಶ್ಚಿಮ ಬಂಗಾಳ
ಗುಜರಾತ್	ಒರಿಸ್ಸಾ	ಅಂಡಮಾನ & ನಿಕೂಬಾರ್
ಸಿಕ್ಕಿಂ	ರಾಜಸ್ತಾನ	ದಮನ & ಡಿಯು

ಆಧಾರ: ಬುಡಕಟ್ಟು ವ್ಯವಹಾರಗಳ ಮಂತ್ರಾಲಯ ವಾರ್ಷಿಕ ವರದಿ ೨೦೦೭-೦೮

ಬುಡಕಟ್ಟು ಉಪ ಯೋಜನೆಯು ಶೇ.೮೦% ಕ್ಕಿಂತ ಹೆಚ್ಚು ಜನಸಂಖ್ಯೆಯಿರುವ ರಾಜ್ಯ/ ಕೇಂದ್ರಾಡಳಿತ ಪ್ರದೇಶಗಳಿಗೆ ಅನ್ವಯವಾಗುವುದಿಲ್ಲವಾದ್ದರಿಂದ ಈ ಕೆಳಗಿನ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಈ ಯೋಜನೆಯ ಜಾರಿಯಿಂದ ವಿನಾಯಿತಿ ಪಡೆದಿವೆ.

ಕೋಷ್ಟಕ : ೨.೩ ಬುಡಕಟ್ಟು ಉಪ ಯೋಜನೆಯಿಂದ ವಿನಾಯ್ತಿ ಪಡೆದಿರುವ ರಾಜ್ಯಗಳು

ರಾಜ್ಯಗಳು	**ಕೇಂದ್ರಾಡಳಿತ ಪ್ರದೇಶಗಳು**
ಅರುಣಾಚಲ ಪ್ರದೇಶ	ಲಕ್ಷದ್ವೀಪ
ಮೇಘಾಲಯ	ದಾದ್ರ ಮತ್ತು ನಾಗರ ಹಾವೇಲಿ
ಮಿಜೊರಾಂ	
ನಾಗಾಲ್ಯಾಂಡ್	

ಆಧಾರ: ಬುಡಕಟ್ಟು ವ್ಯವಹಾರಗಳ ಮಂತ್ರಾಲಯ ವಾರ್ಷಿಕ ವರದಿ ೨೦೦೭-೦೮

ಶೇ.೮೦ ಕ್ಕಿಂತಲು ಹೆಚ್ಚು ಜನಸಂಖ್ಯೆಯಿರುವ ರಾಜ್ಯಗಳ ಎಲ್ಲಾ ಯೋಜನೆಗಳು ಬುಡಕಟ್ಟು ಜನರಿಗೆ ನೇರವಾಗಿ ಅನುಕೂಲ ಕಲ್ಪಿಸುವುದರಿಂದ ಮತ್ತು ಸಂಪನ್ಮೂಲದ ತಿರುವಿಕೆಗೆ ಅವಕಾಶವಿಲ್ಲದುದರಿಂದ ಮೇಲ್ಕಂಡ ರಾಜ್ಯಗಳಿಗೆ ಬುಡಕಟ್ಟು ಉಪ ಯೋಜನೆಯ ಮಾನದಂಡಗಳು ಅನ್ವಯಿಸುವುದಿಲ್ಲ.

೨.೪.ಆ ಬುಡಕಟ್ಟು ಉಪ ಯೋಜನೆಗೆ ವಿಶೇಷ ಕೇಂದ್ರೀಯ ನೆರವು

ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳ ಬುಡಕಟ್ಟು ಉಪ ಯೋಜನೆಗಳಿಗೆ ವಿಶೇಷ ಕೇಂದ್ರೀಯ ನೆರವನ್ನ ನೀಡುತ್ತದೆ, ಯಾವ ವಲಯಗಳಲ್ಲಿ ರಾಜ್ಯ ಸರ್ಕಾರಗಳು ತಮ್ಮ ಉಪ ಯೋಜನೆಗಳಲ್ಲಿ ಸಾಕಷ್ಟು ನೆರವನ್ನ ನೀಡಿಲ್ಲವೋ ಅಂತಹ ವಲಯಗಳಲ್ಲಿ ವಿಶೇಷ ಕೇಂದ್ರೀಯ ನೆರವನ್ನ ನೀಡಲಾಗುತ್ತದೆ. ಮುಖ್ಯವಾಗಿ ಬುಡಕಟ್ಟು ಕುಟುಂಬಾಧಾರಿತ ಆದಾಯದ ಮೂಲಗಳಿಗೆ ಒತ್ತನ್ನ ನೀಡಲಾಗುತ್ತದೆ.

ಉದ್ದೇಶಗಳು

ಹತ್ತನೆಯ ಪಂಚವಾರ್ಷಿಕ ಯೋಜನೆಯ ನಂತರ ವಿಶೇಷ ಕೇಂದ್ರೀಯ ನೆರವಿನ ವ್ಯಾಪ್ತಿಯನ್ನ ಉದ್ಯೋಗ ಮತ್ತು ಆದಾಯ ಗಳಿಸುವ ವಲಯಗಳಿಗೂ ವಿಸ್ತರಿಸಲಾಯಿತು ಮತ್ತು ಎಂದಿನಂತೆ ಕುಟುಂಬಾಧಾರಿತ ಕಸುಬುಗಳು ಮತ್ತು ಸ್ವಸಹಾಯ ಸಂಘಗಳು ನಡೆಸುವ ಕಾರ್ಯ ಚಟುವಟಿಕೆಗಳಿಗೆ ವಿಶೇಷ ಕೇಂದ್ರೀಯ ನೆರವನ್ನ ವಿಸ್ತರಿಸಿ ಬುಡಕಟ್ಟು ಜನರ ಆದಾಯವನ್ನ ಹೆಚ್ಚಿಸಿ, ಅವರ ಜೀವನ ಮಟ್ಟವನ್ನ ಸುಧಾರಿಸುವುದಾಗಿದೆ.

ನೆರವಿನ ವಿಧಾನ

ಕೇಂದ್ರ ಸರ್ಕಾರವು ಶೇ.೧೦೦ರಷ್ಟು ಅನುದಾನವನ್ನ ರಾಜ್ಯ ಸರ್ಕಾರಗಳಿಗೆ ಈ ಕೆಳಗಿನ ಮಾನದಂಡಗಳನ್ನಾಧರಿಸಿ ಬಿಡುಗಡೆಗೊಳಿಸುತ್ತದೆ.


- ಬುಡಕಟ್ಟು ಜನರ ಬಡತನ ರೇಖೆಯ ಪ್ರಮಾಣ.
- ಶೇ.೭೦ರಷ್ಟು ಅನುದಾನವನ್ನ ಕುಟುಂಬಾಧಾರಿತ ಆದಾಯಗಳಿಕೆ, ಸ್ವಸಹಾಯ ಸಂಘಗಳಿಗೆ /ಸಮುದಾಯಾಧರಿತ ಯೋಜನೆಗಳು, ಕೃಷಿ, ತೋಟಗಾರಿಕೆ, ಭೂಸುಧಾರಣೆ, ನೀರಾವರಿ

ಅಭಿವೃದ್ಧಿ, ಪಶುಸಂಗೋಪನೆ, ಪರಿಸರ ಸಂರಕ್ಷಣೆ, ಅರಣ್ಯ ಮತ್ತು ಅರಣ್ಯ ಗ್ರಾಮಗಳ ಅಭಿವೃದ್ಧಿ ಮತ್ತು ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ಬಳಸಬೇಕು.

- ಶೇ. ೩೦% ರಷ್ಟನ್ನ ಮೂಲಭೂತ ಸೌಕರ್ಯಗಳ ನಿರ್ಮಾಣಕ್ಕೆ ಖರ್ಚು ಮಾಡಬೇಕಿದೆ,
- ಪ್ರಥಮ ಆದ್ಯತೆಯನ್ನ ನಿರ್ಲಕ್ಷಕ್ಕೊಳಗಾದ ಅರಣ್ಯವಾಸಿ ಬುಡಕಟ್ಟು ಸಮುದಾಯಗಳಿಗೆ ನೀಡಬೇಕಾಗಿದೆ.
- ದೀರ್ಘ ಕಾಲದ ಯೋಜನೆಗಳನ್ನ ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆಗಳಲ್ಲಿ ರೂಪಿಸಬೇಕಾಗಿದೆ.
- ಶೇ. ೩೦% ರಷ್ಟು ಸೌಲಭ್ಯಾರ್ಥಿಗಳು ಮಹಿಳೆಯರಾಗಿರಬೇಕು.
- ವಿಶೇಷ ಕೇಂದ್ರೀಯ ನೆರವು ಸರ್ಕಾರಗಳ ಮುಖ್ಯ ಯೋಜನೆಯ ಒಂದು ಭಾಗವಾಗಿರಬೇಕು.
- ಶೇ.೧೦% ರಷ್ಟುನ್ನು ಗಿರಿಜನ ಉಪ ಯೋಜನೆಯನ್ನ ಯಶಸ್ವಿಯಾಗಿ ಜಾರಿಗೊಳಿಸಿದ ರಾಜ್ಯಗಳಿಗೆ ಪೂರಕ ಧನವಾಗಿ ಬಿಡುಗಡೆ ಮಾಡಲಾಗುತ್ತದೆ.
- ಸಂಪನ್ಮೂಲಗಳನ್ನ ಐ.ಟಿ.ಡಿ.ಪಿ.ಗಳಿಗೆ ಅನುಗುಣವಾಗಿ ಗುರ್ತಿಸಬೇಕು.
- ಉತ್ತಮವಾದ ರೀತಿಯ ಯೋಜನೆಯ ಮೇಲ್ವಚಾರಣೆ ಮತ್ತು ಮೌಲ್ಯಮಾಪನ ವ್ಯವಸ್ಥೆಯಿರಬೇಕು.

ವಿವಿಧ ಪಂಚವಾರ್ಷಿಕ ಯೋಜನೆಗಳಲ್ಲಿ ಬುಡಕಟ್ಟು ಉಪಯೋಜನೆಗೆ ಬಿಡುಗಡೆ ಮಾಡಿದ ವಿಶೇಷ ಕೇಂದ್ರೀಯ ನೆರವನ್ನ ಈ ಕೆಳಗಿನ ಚಿತ್ರದಲ್ಲಿ ಕಾಣಬಹುದು.

ಲಂಬಚಿತ್ರ :೨.೨ ಪಂಚವಾರ್ಷಿಕ ಯೋಜನೆಗಳಲ್ಲಿ ವಿಶೇಷ ಕೇಂದ್ರೀಯ ನೆರವು (ಕೋಟಿಗಳಲ್ಲಿ)



ಆಧಾರ: ಬುಡಕಟ್ಟು ವ್ಯವಹಾರಗಳ ಮಂತ್ರಾಲಯದ ವಾರ್ಷಿಕ ವರದಿ ೨೦೦೭-೦೮

ಲಂಬಚಿತ್ರವನ್ನ ಗಮನಿಸಿದಾಗ ತಿಳಿದು ಬರುವ ಅಂಶಗಳೆಂದರೆ ಬುಡಕಟ್ಟು ಉಪ ಯೋಜನೆ ಜಾರಿಗೊಳಿಸಿದ ೫ನೆಯ ಯೋಜನೆಯಲ್ಲಿ ರೂ ೨೦೦ ಕೋಟಿ, ೬ನೆಯ ಯೋಜನೆಯಲ್ಲಿ ೫೦೦ ಕೋಟಿ, ೭ನೆಯ ಯೋಜನೆಯಲ್ಲಿ ೮೫೦ ಕೋಟಿ, ೮ನೆಯ ಯೋಜನೆಯಡಿ ೧೫೦೦ ಕೋಟಿ, ೯ನೆಯ ಯೋಜನೆಯಡಿ ರೂ.೨೦೦ ಕೋಟಿ ಮತ್ತು ೧೦ನೆಯ ಯೋಜನೆಯಡಿ ೨೧೦೦ ಕೋಟಿಗಳನ್ನ ವಿವಿಧ ರಾಜ್ಯಗಳಿಗೆ ಭಾರತ ಸರ್ಕಾರ ಬಿಡುಗಡೆ ಮಾಡಿದ್ದು ೯ ಮತ್ತು

೧೦ ನೆಯ ಯೋಜನೆಯಡಿ ರಾಜ್ಯಗಳಿಗೆ ಬಿಡುಗಡೆ ಮಾಡಿರುವ ವಿಶೇಷ ಕೇಂದ್ರಿಯ ನೆರವಿನ ಏರಿಕೆ ಕೇವಲ ೧೦೦ ಕೋಟಿ ಮಾತ್ರವಿದೆ.

೨.೪.ಇ. ಸಂವಿಧಾನದ ಅನುಬಂಧ ೨೭೫(೧) ರಡಿಯಲ್ಲಿ ಅನುಧಾನ ಮತ್ತು ಕಾರ್ಯಕ್ರಮಗಳು

ಸಂವಿಧಾನದ ಅನುಬಂಧ ೨೭೫(೧) ರಡಿಯಲ್ಲಿ ಕೇಂದ್ರ ಸರ್ಕಾರ ಪ್ರತಿ ವರ್ಷ ತನ್ನ ಸಂಚಿತ ನಿಧಿಯಿಂದ ರಾಜ್ಯಗಳಿಗೆ ಬುಡಕಟ್ಟು ಕಲ್ಯಾಣ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಹಣ ಬಿಡುಗಡೆಗೊಳಿಸುತ್ತದೆ.ಈ ಯೋಜನೆಯ ಉದ್ದೇಶ ಬುಡಕಟ್ಟು ಜನರ ಕಲ್ಯಾಣವನ್ನ ಹೆಚ್ಚಿಸುವುದು ಮತ್ತು ಅನುಸೂಚಿತ ಕ್ಷೇತ್ರಗಳಲ್ಲಿ ಆಡಳಿತ ಸುಧಾರಣೆ ತರುವುದು, ಇದು ಸಂಪೂರ್ಣ ಕೇಂದ್ರ ಯೋಜನೆಯಾಗಿದ್ದು. ಶೇ.೧೦೦ರಷ್ಟು ಹಣವನ್ನ ಕೇಂದ್ರ ಸರ್ಕಾರ ರಾಜ್ಯದ/ ಕೇಂದ್ರಾಡಳಿತ ಪ್ರದೇಶದ ಬುಡಕಟ್ಟು ಜನಸಂಖ್ಯೆಯನ್ನಾಧರಿಸಿ ಬಿಡುಗಡೆ ಮಾಡುತ್ತದೆ.

- ಈ ಯೋಜನೆಯಡಿ ಶೇ. ೩೦% ರಷ್ಟು ಮಹಿಳೆಯರಿಗೆ ಸೌಲಭ್ಯವನ್ನೊದಗಿಸಬೇಕು,
- ಶೇ.೨ ರಷ್ಟು ಹಣವನ್ನ ತರಬೇತಿ ಮತ್ತು ಯೋಜನೆಗಳ ನಿರ್ವಹಣೆಗೆ ಬಳಸುವುದು,
- ಆಡಳಿತ ವೆಚ್ಚಗಳಿಗೆ ಮತ್ತು ಮೌಲ್ಯಮಾಪನ ಹಾಗೂ ವಿಶ್ಲೇಷಣೆಗೆ ಬಳಸಿಕೊಳ್ಳಬಹುದು.
- ಶೇ. ೧೦ರಷ್ಟರ ಅನುದಾನವನ್ನ ಮಂತ್ರಾಲಯದ ಅನುಮತಿ ಪಡೆದು, ಮೂಲಭೂತ ಸೌಕರ್ಯಗಳ ನಿರ್ಮಾಣಕ್ಕೆ ಖರ್ಚು ಮಾಡಬಹುದಾಗಿದೆ.
- ಶೇ. ೧೦ರಷ್ಟು ಹಣವನ್ನ ಬುಡಕಟ್ಟು ಉಪ ಯೋಜನೆಯನ್ನ ಅಳವಡಿಸಿಕೊಂಡಿರುವ ರಾಜ್ಯಗಳಿಗೆ ಉತ್ತೇಜಕವಾಗಿ ಬಿಡುಗಡೆ ಮಾಡಲಾಗುತ್ತದೆ.

೨.೪.ಈ. ಕೇಂದ್ರ ಸರ್ಕಾರದ ಶಿಕ್ಷಣ ಯೋಜನೆಗಳು

ಹಿಂದುಳಿದ ವರ್ಗಗಳ ಶೋಚನೀಯ ಸ್ಥಿತಿಗೆ ಶೈಕ್ಷಣಿಕ ಜ್ಞಾನದ ಕೊರತೆಯು ಒಂದು ಮುಖ್ಯ ಕಾರಣ. ಅವಿಧ್ಯಾವಂತನಿಗಿಂತ ವಿಧ್ಯಾವಂತನ ವ್ಯವಹಾರಿಕ ಜ್ಞಾನವು ಉತ್ತಮವಾಗಿರುವುದನ್ನ ನಾವು ಕಾಣಬಹುದಾಗಿದೆ ಹಿಂದುಳಿದಿರುವ ಬುಡಕಟ್ಟು ಜನರ ಶಿಕ್ಷಣದ ಪ್ರಗತಿಗಾಗಿ ಕೆಂದ್ರ ಸರ್ಕಾರವು ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಹಣಕಾಸಿನ ನೆರವನ್ನ ನೀಡುತ್ತದೆ.

೨.೪.ಈ.೧. ಬಾಲಕ ಬಾಲಕಿಯರಿಗೆ ವಸತಿ ನಿಲಯಗಳ ಯೋಜನೆ

ಕೇಂದ್ರ ಸರ್ಕಾರವು ಈ ಯೋಜನೆಯನ್ನ ೧೯೮೯-೯೦ ರಿಂದ ಜಾರಿಗೆ ತರುತ್ತಿದೆ. ಈ ಯೋಜನೆಯ ಉದ್ದೇಶ ಬುಡಕಟ್ಟು ವಿದ್ಯಾರ್ಥಿಗಳು ಹಣಕಾಸಿನ ಕೊರತೆಯಿಂದ ಶಿಕ್ಷಣವನ್ನ ಮುಂದುವರೆಸಿಕೊಂಡು ಹೋಗಲು ಕಷ್ಟವಾಗುವುದೆಂಬ ದೃಷ್ಟಿಯಿಂದ ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದು ಬಾಲಕ-ಬಾಲಕಿಯರಿಗೆ ವಸತಿ ನಿಲಯಗಳನ್ನ ನಿರ್ಮಿಸಲಾಗುತ್ತದೆ.

ಯೋಜನೆಯ ಸ್ವರೂಪ ಮತ್ತು ಲಕ್ಷಣಗಳು

ಈ ಯೋಜನೆಯನ್ನ ಕೇಂದ್ರ ಸರ್ಕಾರದಿಂದ ಶೇ. ೫೦ ಮತ್ತು ರಾಜ್ಯ ಸರ್ಕಾರಗಳಿಂದ ಶೇ.೫೦ರ ಅನುದಾನದಲ್ಲಿ ಜಾರಿಗೊಳಿಸಲಾಗುತ್ತಿದೆ.

- ಈ ಯೋಜನೆಯಡಿ ಹೊಸ ವಿದ್ಯಾರ್ಥಿ ನಿಲಯಗಳ ಸ್ಥಾಪನೆ, ಇರುವ ವಿದ್ಯಾರ್ಥಿ ನಿಲಯಗಳ ವಿಸ್ತರಣೆ ಇತ್ಯಾದಿ.
- ರಾಜ್ಯ ಸರ್ಕಾರಗಳು ಉಚಿತವಾಗಿ ನಿವೇಶನಗಳನ್ನ ವಸತಿ ನಿಲಯಗಳ ಸ್ಥಾಪನೆಗೆ ನೀಡುತ್ತವೆ.

- ಈ ಯೋಜನೆಯಲ್ಲಿ ಹಾಸ್ಟಲ್‌ಗಳ ನಿರ್ವಹಣೆಗೆ ತಗಲುವ ವೆಚ್ಚವನ್ನ ಭರಿಸುವುದಿಲ್ಲ.
- ವಿದ್ಯಾರ್ಥಿ ನಿಲಯಗಳ ನಿರ್ವಹಣೆ, ಮತ್ತು ನಿಯಂತ್ರಣದ ಜವಾಬ್ದಾರಿಯು ರಾಜ್ಯ ಸರ್ಕಾರದ್ದಾಗಿರುತ್ತದೆ.

೨.೪.ಈ.೨ ಆಶ್ರಮ ಶಾಲೆಗಳ ನಿರ್ಮಾಣ ಯೋಜನೆ

ಈ ಯೋಜನೆಯನ್ನು ೧೯೯೦-೯೧ ರಿಂದೀಚೆಗೆ ಜಾರಿಗೊಳಿಸಲಾಗುತ್ತಿದೆ.ಈ ಯೋಜನೆಯ ಮುಖ್ಯ ಉದ್ದೇಶ ಹಿಂದಿನ ಗುರುಕುಲಗಳ ಮಾದರಿಯಲ್ಲಿ ಬುಡಕಟ್ಟು ಮಕ್ಕಳ ಶಿಕ್ಷಣವನ್ನ ಮುಂದುವರೆಸಿಕೊಂಡು ಬರುವುದು. ಈ ಯೋಜನೆಯು ಬುಡಕಟ್ಟು ಉಪಯೋಜನೆಯನ್ನ ಜಾರುಗೊಳಿಸುತ್ತಿರುವ ಎಲ್ಲಾ ೨೨ ರಾಜ್ಯಗಳು ಮತ್ತು ಎರಡು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮುಂದುವರೆಸಿಕೊಂಡು ಬರಲಾಗುತ್ತಿದೆ. ಇದು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು ೫೦:೫೦ ವೆಚ್ಚಗಳನ್ನ ಎರಡು ಸರ್ಕಾರಗಳು ವಹಿಸಿಕೊಳ್ಳಬೇಕಾಗಿದೆ.

ಮುಖ್ಯಲಕ್ಷಣಗಳು

- ಹೊಸ ಆಶ್ರಮ ಶಾಲೆಗಳ ನಿರ್ಮಾಣ
- ಇರುವ ಆಶ್ರಮ ಶಾಲೆಗಳ ವಿಸ್ತರಣೆಗೆ ಹಣಕಾಸಿನ ನೆರವು
- ಶಾಲೆಗಳ ನಿರ್ಮಾಣದ ಜೊತೆಗೆ ವಸತಿ ನಿಲಯಗಳನ್ನ ಮತ್ತು ಸಿಬ್ಬಂದಿ ವಸತಿ ಗೃಹಗಳನ್ನ ನಿರ್ಮಿಸಲು ನೆರವು
- ಶಾಲೆಗಳಿಗೆ ಅವಶ್ಯವಿರುವ ಪೀಠೋಪಕರಣಗಳು, ಗ್ರಂಥಾಲಯಕ್ಕೆ ಪುಸ್ತಕಗಳು ಇತ್ಯಾದಿಗಳಿಗೆ ೫೦:೫೦ ರ ದರದಲ್ಲಿ ನೆರವು

ಹೊಸ ಶಾಲೆಗಳ ನಿರ್ಮಾಣವು ಬುಡಕಟ್ಟು ಜನರ ವಸತಿಗಳಿಗೆ ಸಮೀಪವಾಗಿಯೂ, ಬುಡಕಟ್ಟು ಹೆಣ್ಣುಮಕ್ಕಳಿಗೆ ಅನುಕೂಲಕರವಾಗಿಯೂ ಮತ್ತು ಆದಿವಾಸಿ ಮತ್ತು ಸ್ಥಳಾಂತರಕ್ಕೊಳಗಾದ ಬುಡಕಟ್ಟು ಮಕ್ಕಳಿಗೆ ಸಮೀಪ ಪ್ರದೇಶಗಳಲ್ಲಿರುವಂತೆ ನೊಡಿಕೊಳ್ಳುವುದು ರಾಜ್ಯ ಸರ್ಕಾರದ ಜವಾಬ್ದಾರಿಯಾಗಿರುತ್ತದೆ.

೨.೪.ಈ.೩ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಯೋಜನೆ

ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಯೋಜನೆಯು, ಕೇಂದ್ರ ಸರ್ಕಾರದ ಯೋಜನೆಯಾಗಿದ್ದು. ೧೯೪೪-೪೫ ರಿಂದಲೂ ಜಾರಿಯಲ್ಲಿದೆ.ಈ ಯೋಜನೆಯನ್ನ ಬುಡಕಟ್ಟು ವಿದ್ಯಾರ್ಥಿಗಳು ತಮ್ಮ ಶಿಕ್ಷಣವನ್ನ ಪೂರ್ಣಗೊಳಿಸಿಕೊಳ್ಳಲು ಸಹಾಯ ಮಾಡುವ ದೃಷ್ಟಿಯಿಂದ ಜಾರಿಗೊಳಿಸಲಾಗುತ್ತಿದೆ. ಈ ಯೋಜನೆಯಡಿ ರೂ.೧.೦೮ ಲಕ್ಷಕ್ಕಿಂತ ಕಡಿಮೆ ಆದಾಯವುಳ್ಳ ಎಲ್ಲಾ ಬುಡಕಟ್ಟು ಕುಟುಂಬಗಳ ವಿದ್ಯಾರ್ಥಿಗಳಿಗೆ ನೀಡಲಾಗುತ್ತದೆ.

ಮುಖ್ಯ ಲಕ್ಷಣಗಳು

ವಿವಿಧ ಕೋರ್ಸಗಳಿಗೆ ವಿವಿಧ ವಿದ್ಯಾರ್ಥಿವೇತನವನ್ನ ನೀಡಲಾಗುತ್ತದೆ. ನಾಲ್ಕು ಭಾಗಗಳಾಗಿ ವಿಂಗಡಿಸಿ ರೂ. ೧೪೦ ರಿಂದ ರೂ.೭೪೦ ರವರೆಗೆ ಮಾಸಿಕ ವೇತನ ನೀಡುವುದರೊಂದಿಗೆ ಕಡ್ಡಾಯ ಶುಲ್ಕವನ್ನೂ ಸಹ ಬಿಡುಗಡೆ ಮಾಡಲಾಗುತ್ತದೆ.

೨.೪.ಈ.೪. ಪುಸ್ತಕ ಭಂಡಾರ ಯೋಜನೆ

ವೃತ್ತಿಪರ ವಿಷಯಗಳಲ್ಲಿ ಪ್ರವೇಶ ಪಡೆದಂತಹ ವಿದ್ಯಾರ್ಥಿಗಳಿಗೆ ಪುಸ್ತಕಗಳ ಖರೀದಿಯ ಹೊರೆಯಾಗುವುದನ್ನ ತಪ್ಪಿಸಲು ಮತ್ತು ಅವರು ವೃತ್ತಿಪರ ವಿಷಯಗಳ ವ್ಯಾಸಾಂಗದಿಂದ ಹಿಂದೆ ಸರಿಯುವುದನ್ನ ತಪ್ಪಿಸಲು, ಎಲ್ಲಾ ಬುಡಕಟ್ಟು ವಿದ್ಯಾರ್ಥಿಗಳಿಗೂ ಸೌಲಭ್ಯವನ್ನ ಒದಗಿಸಲಾಗಿದೆ. ಈ ಯೋಜನೆಯಡಿ ಇಬ್ಬರು ವಿದ್ಯಾರ್ಥಿಗಳಿಗೆ ಒಂದು ಸೆಟ್ ಪುಸ್ತಕಗಳನ್ನ ಖರೀದಿಸಿ ಕೊಡಲಾಗುವುದು. ಈ ಯೋಜನೆಯಡಿಯಲ್ಲಿ ಕೆಲವು ನಿಯಮಗಳಿಗೂಳಪಟ್ಟು ಅನುದಾನವನ್ನ ಕೇಂದ್ರ ಸರ್ಕಾರವು ೫೦:೫೦ ಆಧಾರದ ಮೇಲೆ ಬಿಡುಗಡೆ ಮಾಡುತ್ತಿದೆ.

ಕೋಷ್ಟಕ ೨.೪: ವಿವಿಧ ವಿಷಯಗಳಿಗೆ ಸಂಬಂಧಿಸಿದ ವೆಚ್ಚವಾರು ವಿವರ (ರೂಪಾಯಿಗಳಲ್ಲಿ)

ವಿಷಯಗಳು ಇಬ್ಬರುವಿದ್ಯಾರ್ಥಿಗಳಿಗೆ ಒಂದುಸೆಟ್	**ಪುಸ್ತಕಗಳ ವೆಚ್ಚ**
ಪದವಿ ವಿಷಯಗಳು	೭,೫೦೦
ವೈದ್ಯಕೀಯ	೭,೫೦೦
ಇಂಜಿನಿಯರಿಂಗ್	೫,೦೦೦
ವೆಟರಿನರಿ	೪,೫೦೦
ಕೃಷಿ	೨,೪೦೦
ಪಾಲಿಟೆಕ್ನಿಕ್	೨,೪೦೦
ಸ್ನಾತಕಪದವಿ,ವೈದ್ಯಕೀಯಮತ್ತುಇಂಜಿನಿಯರಿಂಗ್ ಬ್ಯುಸಿನೆಸ್ ಮ್ಯಾನೆಜ್‌ಮೆಂಟ್ ಕಾನೂನು ಮತ್ತು ಬಯೊಸೈನ್ಸಸ್	೫,೦೦೦

ಆಧಾರ: ಬುಡಕಟ್ಟು ವ್ಯವಹಾರಗಳ ಮಂತ್ರಾಲಯದ ವಾರ್ಷಿಕ ವರದಿ ೨೦೦೭-೦೮

ಇದರೊಂದಿಗೆ ರೂ.೨೦೦೦ ಮಿತಿಗೊಳಪಟ್ಟು ಸ್ಟೀಲ್ ಅಲ್ಮೆರಾ ಖರೀದಿಸಲು ಮತ್ತು ಸಾಗಿಸಲು ವಿದ್ಯಾಸಂಸ್ಥೆಗೆ ಧನ ಸಹಾಯ ನೀಡಲಾಗುತ್ತದೆ.

೨.೪.ಈ.೪. ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಾಂಗಕ್ಕೆ ಪ್ರವೇಶ ಪಡೆಯುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಧನಸಹಾಯ

ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ಪಡೆಯುವ ಪ್ರತಿಭಾವಂತ ಬುಡಕಟ್ಟು ವಿದ್ಯಾರ್ಥಿಗಳಿಗೆ ಧನ ಸಹಾಯ ನೀಡಲಾಗುವುದು. ಈ ಯೋಜನೆಯು ೧೯೫೪-೫೫ ರಿಂದಲೂ ಇತ್ತಾದರೂ ೨೦೦೭-೦೮ ರಿಂದ ಜಾರಿಗೊಳಿಸಲಾಗುತ್ತಿದೆ. ಯೋಜನೆಯ ಮುಖ್ಯ ಉದ್ದೇಶವು ಆಯ್ಕೆಯಾದ ವಿದ್ಯಾರ್ಥಿಗಳಿಗೆ ಸ್ನಾತಕ, ಡಾಕ್ಟರಲ್ ಮತ್ತು ಪೊಸ್ಟ ಡಾಕ್ಟರಲ್ ವ್ಯಾಸಾಂಗಕ್ಕೆ ಹಾಗೂ ಕೆಲವು ನಿಗದಿಪಡಿಸಿದ ಇಂಜನಿಯರಿಂಗ್ ಟೆಕ್ನಾಲಜಿ ಮತ್ತು ವಿಜ್ಞಾನ ವಿಷಯಗಳ ಅಧ್ಯಯನಕ್ಕೆ ಹಣಕಾಸಿನ ನೆರವು ನೀಡಲಾಗುತ್ತದೆ. ಶೇ.೧೦೦ ರಷ್ಟು ಹಣವನ್ನ ಕೇಂದ್ರ ಸರ್ಕಾರದಿಂದಲೇ ಬಿಡುಗಡೆಗೊಳಿಸಲಾಗುತ್ತದೆ.

ಈ ಯೋಜನೆಯಡಿ, ೧೩ ಪರಿಶಿಷ್ಟ ಬುಡಕಟ್ಟು ವಿದ್ಯಾರ್ಥಿಗಳು ಮತ್ತು ೨ ಆದಿಮ ಸಮುದಾಯಗಳ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲಾಗುತ್ತಿದೆ. ೩೫ ವರ್ಷ ಒಳಗಿನ ವಯಸ್ಸಿನವರಿಗೆ ಮಾತ್ರ ಅವಕಾಶವಿದ್ದು, ತಂದೆ/ತಾಯಿ ಪೋಷಕರ ಮಾಸಿಕ ವರಮಾನ ರೂ.೨೫,೦೦೦ ಗಳಿಗಿಂತಲೂ ಹೆಚ್ಚಿರಬಾರದು. ಆಯ್ಕೆಯಾದ ಅಭ್ಯರ್ಥಿಗಳಿಗೆ ಶುಲ್ಕದ ಜೊತೆಗೆ

೧೪,೦೦೦ ಅಮೇರಿಕನ್ ಡಾಲರ್/೯೦೦೦ ಪೌಂಡ್‌ಗಳನ್ನ ವಾರ್ಷಿಕ ನಿರ್ವಹಣ ಭತ್ಯೆಯಾಗಿ ನೀಡಲಾಗುತ್ತದೆ.

೨.೪.ಈ.೫. ರಾಜೀವ್ ಗಾಂಧಿ ರಾಷ್ಟ್ರೀಯ ಫೆಲೋಷಿಪ್

ಈ ಯೋಜನೆಯನ್ನ ೨೦೦೫-೦೬ ರಿಂದ ಆರಂಭಿಸಲಾಗಿದ್ದು, ಈ ಯೋಜನೆಯಡಿ ಬುಡಕಟ್ಟು ವಿದ್ಯಾರ್ಥಿಗಳಿಗೆ ಎಂ ಫಿಲ್ ಅಥವಾ ಪಿಎಚ್ ಡಿ ವಿಷಯಗಳಲ್ಲಿ ಸಂಶೋಧನೆ ಮಾಡಲು ವಿದ್ಯಾರ್ಥಿವೇತನ ರೂಪದಲ್ಲಿ ಫೆಲೊಷಿಪ್‌ನ್ನ ನೀಡಲಾಗುತ್ತದೆ. ಈ ಯೋಜನೆಯು ಸಂಪೂರ್ಣವಾಗಿ ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು ವಿಶ್ವವಿದ್ಯಾಲಯಗಳ ಅನುದಾನ ಆಯೋಗದ ಫೆಲೊಷಿಪ್ ಮಾದರಿಯಲ್ಲಿ ನೀಡಲಾಗುತ್ತದೆ. ವಿವಿಧ ತರಗತಿಗಳಿಗೆ ವಿವಿಧ ರೀತಿಯ ದರಗಳಲ್ಲಿ ಸಹಾಯವನ್ನೊದಗಿಸಲಾಗುತ್ತದೆ. ಸಾಮಾಜಿಕ ಮತ್ತು ಮಾನವಿಕ ವಿಜ್ಞಾನಗಳಿಗೆ ಹೋಲಿಸಿದಲ್ಲಿ ವಿಜ್ಞಾನ ವಿಷಯಗಳ ದರ ಹೆಚ್ಚಾಗಿರುವುದನ್ನ ಕಾಣಬಹುದಾಗಿದೆ.

ಕೋಷ್ಟಕ:೨.೫ ವಿವಿಧ ವಿಷಯಗಳ ಫೆಲೋಷಿಪ್ ದರಗಳು

ವಿವರ	ಫೆಲೊಷಿಪ್	ಕಾಂಟಿನ್ಜನ್ಸಿ
ಸಮಾಜ ವಿಜ್ಞಾನಗಳಿಗೆ	ಆರಂಭದ ೨ ವರ್ಷಗಳಿಗೆ ಪ್ರತಿ ತಿಂಗಳಿಗೆ ರೂ.೮,೦೦೦ ಹಾಗೂ ರೂ.೯,೦೦೦ ಉಳಿದ ಅವಧಿಗೆ	ರೂ. ೨೦,೫೦೦ ಪ್ರತಿ ವರ್ಷಕ್ಕೆ
ಭಾಷಾಶಾಸ್ತ್ರಗಳಿಗೆ	ಆರಂಭದ ೨ವರ್ಷಗಳಿಗೆ ಪ್ರತಿ ತಿಂಗಳಿಗೆ ರೂ.೮,೦೦೦ ಹಾಗೂ ರೂ.೯,೦೦೦ ಉಳಿದ ಅವಧಿಗೆ	ರೂ. ೧೦,೦೦೦ ಪ್ರತಿ ವರ್ಷಕ್ಕೆ
ವಿಜ್ಞಾನ ವಿಷಯಗಳಿಗೆ	ಆರಂಭದ ೨ ವರ್ಷಗಳಿಗೆ ರೂ ೮೦೦೦ ಹಾಗೂ ಉಳಿದ ಅವಧಿಗೆ ರೂ ೯೦೦೦	ರೂ. ೧೨,೦೦೦ ಪ್ರತಿ ವರ್ಷಕ್ಕೆ ಆರಂಭದ ೨ ವರ್ಷಗಳಿಗೆ ಉಳಿದ ಅವಧಿಗೆ ೨೫,೦೦೦ ರೂ
ವಿಭಾಗದ ನೆರವು	ವಿಭಾಗಕ್ಕೆ ವಾರ್ಷಿಕ ನಿರ್ವಹಣ ವೆಚ್ಚವಾಗಿ ರೂ ೩೦,೦೦೦	
ಎಸ್ಕಾರ್ಟ್/ರೀಡರ್ ಭತ್ಯೆ	ಅಭ್ಯರ್ಥಿಯು ಅಂಗವಿಕಲನಾಗಿದ್ದರೆ ಎಸ್ಕಾರ್ಟ/ ರೀಡರ್ ಸಹಾಯ ವೆಚ್ಚವಾಗಿ ರೂ. ೧೦,೦೦೦ ಪ್ರತಿ ತಿಂಗಳಿಗೆ	

ಆಧಾರ: ಬುಡಕಟ್ಟು ವ್ಯವಹಾರಗಳ ಮಂತ್ರಾಲಯದ ವಾರ್ಷಿಕ ವರದಿ ೨೦೦೭-೦೮

ಪ್ರತಿವರ್ಷ ೬೬೭ ಫೆಲೊಷಿಪ್‌ಗಳನ್ನ ಬುಡಕಟ್ಟು ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದೆ. ಗರಿಷ್ಠ ಅವಧಿ ೫ ವರ್ಷಗಳು ಈ ಯೋಜನೆಯ ಜಾರಿಯ ಉಸ್ತುವಾರಿ ವಿಶ್ವವಿದ್ಯಾಲಯಗಳ ಧನಸಹಾಯ ಆಯೋಗದ ಜವಾಬ್ದಾರಿಯಾಗಿರುತ್ತದೆ.

೨.೪.ಈ.೬. ಪ್ರಖ್ಯಾತ ವಿದ್ಯಾ ಸಂಸ್ಥೆಗಳಲ್ಲಿ ಬುಡಕಟ್ಟು ಮಕ್ಕಳಿಗೆ ವಿದ್ಯಾಭ್ಯಾಸ

ಭಾರತ ಸರ್ಕಾರದ ಬುಡಕಟ್ಟು ವ್ಯವಹಾರಗಳ ಮಂತ್ರಾಲಯವು ಪ್ರತಿಭಾನ್ವಿತ ಪರಿಶಿಷ್ಟ ಪಂಗಡಗಳ ಮಕ್ಕಳಿಗೆ ಪ್ರತಿಭಾನ್ವಿತ ವಿದ್ಯಾಸಂಸ್ಥೆಗಳಲ್ಲಿ ಪದವಿ ಮತ್ತು ಸ್ನಾತಕ ಪದವಿ ಅಧ್ಯಯನ ಮಾಡಲು ಅನುಕೂಲ ಮಾಡಿಕೊಡುತ್ತದೆ. ಪ್ರಸ್ತುತ ೧೨೭ ವಿಧ್ಯಾಸಂಸ್ಥೆಗಳನ್ನ ಗುರುತಿಸಿಲಾಗಿದ್ದು ಅದರಲ್ಲಿ ಮುಖ್ಯವಾಗಿ ಮ್ಯಾನೇಜ್‌ಮೆಂಟ್, ವೈದ್ಯಕೀಯ, ಇಂಜಿನಿಯರಿಂಗ್, ಕಾನೂನು ಮತ್ತು ವಾಣಿಜ್ಯ ವಿಷಯಗಳಿಗೆ ಪ್ರೋತ್ಸಾಹ ನೀಡಲಾಗುತ್ತದೆ.

ಮುಖ್ಯ ಲಕ್ಷಣಗಳು

ಈ ಯೋಜನೆಯ ಸೌಲಭ್ಯವನ್ನ ಪಡೆಯಲು ಕುಟುಂಬದ ವಾರ್ಷಿಕ ವರಮಾನ ೨ ಲಕ್ಷಗಳನ್ನ ಮೀರಿರಬಾರದು, ಆಯ್ಕೆಯಾದ ಎಲ್ಲಾ ವಿದ್ಯಾರ್ಥಿಗಳಿಗೆ ಪೂರ್ವ ಪ್ರವೇಶ ಶುಲ್ಕ, ಭೋದನಾ ಶುಲ್ಕ ಮತ್ತು ಇತರೆ ವೆಚ್ಚಗಳನ್ನ ಭರಿಸಲಾಗುತ್ತದೆ, ಹೀಗಿದ್ದರೂ ವಾರ್ಷಿಕ ವೆಚ್ಚವನ್ನ ರೂ. ಎರಡು ಲಕ್ಷಕ್ಕೆ ಮಿತಿಗೊಳಪಡಿಸಲಾಗಿದ್ದು, ವಾಣಿಜ್ಯ ಪೈಲಟ್ ತರಬೇತಿಗೆ ರೂ ೩.೭೨ ಲಕ್ಷದ ಮಿತಿಗೊಳಪಡಿಸಲಾಗಿದೆ. ಈ ಯೋಜನೆಯಲ್ಲಿ ವಿದ್ಯಾರ್ಥಿಗಳಿಗೆ ಜೀವನ ಭತ್ಯೆಯಾಗಿ ಮಾಸಿಕ ರೂ. ೨,೨೨೦ ಗಳನ್ನ ಪುಸ್ತಕ ಮತ್ತು ಪಠ್ಯ ಕ್ರಮಗಳನ್ನ ಕೊಳ್ಳಲು ರೂ.೩,೦೦೦ ರೂಗಳನ್ನ ನೀಡಲಾಗುತ್ತದೆ.ಇದರೊಂದಿಗೆ, ಕಂಪ್ಯೂಟರ್ ಕೊಳ್ಳಲು ರೂ.೪೫.೦೦೦ ಗಳ ಮಿತಿಗೊಳಪಟ್ಟು ಧನ ಸಹಾಯ ನೀಡಲಾಗುತ್ತದೆ.

೨.೪.ಉ. ಬುಡಕಟ್ಟು ಪ್ರದೇಶಗಳಲ್ಲಿ ವೃತ್ತಿ ತರಬೇತಿಗಳು

ಬುಡಕಟ್ಟು ಯುವಕರ ಕೌಶಲ್ಯ ವೃದ್ಧಿಗೆ ಮತ್ತು ವಿವಿಧ ಸ್ವಯಂ ಉದ್ಯೋಗವನ್ನ ಕೈಗೊಂಡು ಆದಾಯ ವೃದ್ಧಿಗಾಗಿ ವಿವಿಧ ವೃತ್ತಿಪರ ತರಬೇತಿಗಳನ್ನ ನೀಡಲಾಗುತ್ತದೆ. ಈ ಯೋಜನೆಯು ೧೯೯೨-೯೩ ರಿಂದಲೂ ಜಾರಿಯಲ್ಲಿದೆ, ಇದೊಂದು ಕ್ಷೇತ್ರಗಳ ಯೋಜನೆಯಾಗಿರದೆ ರಾಜ್ಯದ ಎಲ್ಲಾ ಭಾಗಗಳಿಗೂ ಅನ್ವಯಿಸುತ್ತದೆ. ಈ ಯೋಜನೆಯಡಿ ಕೇಂದ್ರ ಸರ್ಕಾರ ಶೇ ೧೦೦ ರಷ್ಟು ಹಣವನ್ನ ಬಿಡುಗಡೆ ಮಾಡುತ್ತದೆ.ಈ ಕಾರ್ಯ ನಡೆಸುವ ಸ್ವಯಂ ಸೇವಾ ಸಂಸ್ಥೆಗಳಿಗೆ ಧನ ಸಹಾಯವನ್ನ ಕೇಂದ್ರ ಸರ್ಕಾರವು ನೀಡುತ್ತಿದೆ.

೨.೪.ಊ. ೨೦ ಅಂಶಗಳ ಕಾರ್ಯಕ್ರಮಗಳಡಿ ಸಹಾಯ

ಬುಡಕಟ್ಟು ಜನರನ್ನ ಆರ್ಥಿಕ ದೌರ್ಬಲ್ಯದಿಂದ ಮೇಲೆತ್ತಲು ರಾಜ್ಯ ಸರ್ಕಾರಗಳಿಗೆ ಕೇಂದ್ರ ಸರ್ಕಾರವು ಅನುದಾನವನ್ನ ೨೦ ಅಂಶಗಳ ಕಾರ್ಯಕ್ರಮದಡಿ ಬಿಡುಗಡೆ ಮಾಡಲಾಗುತ್ತಿದೆ ಸುಮಾರು ಕರ್ನಾಟಕವು ಸೇರಿದಂತೆ ೨೩ ಐಟಿಡಿಪಿ ರಾಜ್ಯಗಳು ೨೦ ಅಂಶಗಳ ಕಾರ್ಯಕ್ರಮಗಳಡಿ ಪ್ರತಿವರ್ಷ ಆರ್ಥಿಕ ಸಹಾಯವನ್ನ ಪಡೆಯುತ್ತಿವೆ.

೨.೪.ಋ. ಬುಡಕಟ್ಟು ಜನರು ಇತರೆ ಬುಡಕಟ್ಟು ಜನರೊಂದಿಗೆ ಸಂಪರ್ಕ ಯೋಜನೆ

ಬುಡಕಟ್ಟು ಜನರಲ್ಲಿನ ಹಿಂಬೀಳಿಕೆ/ನಾಚಿಕೆ ಸ್ವಾಭಾವವನ್ನ ಹೋಗಲಾಡಿಸಲು ಮತ್ತು ಇತರೆ ಅಭಿವೃದ್ಧಿ ಹೊಂದಿರುವ ಬುಡಕಟ್ಟುಗಳ ಜೀವನ ರೀತಿ, ತಂತ್ರಜ್ಞಾನ, ಪಶುಸಂಗೋಪನೆ, ಕೈಗಾರಿಕೆ, ಅರಣ್ಯ ಉತ್ಪನ್ನಗಳ ಸಂಸ್ಕರಣೆ ಇತ್ಯಾದಿಗಳ ಬಗೆಗೆ ಅರಿವು ಮೂಡಿಸಲು ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಬೇಟಿ ಕೊಡಿಸಲಾಗುತ್ತದೆ.ಈ ಯೋಜನೆಯು ಬುಡಕಟ್ಟು ಜನರನ್ನ ಒಂದೆಡೆ ಸೇರಿಸಿ ಅವರಲ್ಲಿನ ಕಲೆ, ಕ್ರೀಡಾ ಚಟುವಟಿಕೆಗಳನ್ನ ಪ್ರದರ್ಶಿಸಿದಂತಾಗುತ್ತದೆ ಹಾಗೂ ಅವರಲ್ಲಿನ ಕಲಾ ಕೌಶಲ್ಯತೆಯನ್ನ ಉತ್ತೆಜಿಸಿ ದಂತಾಗುತ್ತದೆ. ಈ ಯೋಜನೆಯಡಿ ೧೦ ಜನರ ಬುಡಕಟ್ಟು ಗುಂಪನ್ನು ಮೂರು ಜನ ಮಹಿಳೆಯರು, ಮೂರು ಜನ ಸ್ಥಳೀಯ

ಪಂಚಾಯಿತಿ ಸದಸ್ಯರನ್ನ ಪ್ರತಿ ಗುಂಪಿನಲ್ಲಿ ಒಂದೇ ಬುಡಕಟ್ಟಿನ ನಾಲ್ಕು ಸದಸ್ಯರಿಗಿಂತಲು ಹೆಚ್ಚಿಲ್ಲದಂತೆ ಆಯ್ಕೆ ಮಾಡಲಾಗುತ್ತದೆ.ಈ ರೀತಿಯ ಬೇಟಿಯ ವೇಳೆ ಅತಿಥೇಯ ರಾಜ್ಯವು ಅತಿಥಿಗಳ ಬೇಟಿಗೆ ಎಲ್ಲಾ ಅವಕಾಶಗಳನ್ನು ಮಾಡಿಕೊಡಬೇಕು. ಪ್ರತಿ ಭಾಗವರ್ತಿಗೆ ರೂ.೧೫೦ ಗಳ ದಿನಭತ್ಯೆಯನ್ನು ನೀಡಲಾಗುತ್ತದೆ. ಈ ಯೋಜನೆಯಡಿ ಶೇ ೧೦೦ ರಷ್ಟು ಅನುಧಾನವನ್ನ ಕೇಂದ್ರ ಸರ್ಕಾರವೆ ಬಿಡುಗಡೆ ಮಾಡುತ್ತದೆ*(ಬುಡಕಟ್ಟು ವ್ಯವಹಾರಗಳ ಮಂತ್ರಾಲಯದ ವಾರ್ಷಿಕ ವರದಿ ೨೦೦೭-೦೮).*

೨.೪. ಋ. ಸ್ವಯಂ ಸೇವಾ ಸಂಸ್ಥೆಗಳಿಗೆ ಅನುದಾನ ಯೋಜನೆ

ಬುಡಕಟ್ಟು ಜನರ ಸಮಗ್ರ ಅಭಿವೃದ್ಧಿಯ ದೃಷ್ಟಿಯಿಂದ ಮತ್ತು ಎಲ್ಲಾ ವಲಯಗಳಲ್ಲಿ ಸರ್ಕಾರ ಸ್ವಯಂ ಏಕಾಂಗಿಯಾಗಿ ಕೆಲಸ ಮಾಡಲಾಗುವುದಿಲ್ಲವೆಂದು ಅರಿತು ಹಾಗೂ ಸ್ವಯಂ ಸೇವಾ ಸಂಸ್ಥೆಗಳು ಬುಡಕಟ್ಟು ಜನರ ಶಿಕ್ಷಣ, ಆರೋಗ್ಯ ಹಾಗೂ ಆರ್ಥಿಕ ಅಭಿವೃದ್ಧಿಯ ವಿವಿಧ ವಲಯಗಳಲ್ಲಿ ನಡೆಸುತ್ತಿರುವ ಸೇವೆಯನ್ನು ಗುರ್ತಿಸಿ, ಸ್ವಯಂ ಸೇವಾ ಸಂಸ್ಥೆಗಳು ನಿರ್ವಹಿಸುವ ಕಾರ್ಯಗಳನ್ನು ಉತ್ತೇಜಿಸಲು ಕೇಂದ್ರ ಸರ್ಕಾರವು ಮೊದಲನೆ ಪಂಚವಾರ್ಷಿಕ ಯೋಜನೆಯ ಆರಂಭದಿಂದಲೂ ಅನುದಾನವನ್ನು ಒದಗಿಸುತ್ತಿದೆ.ಕರ್ನಾಟಕದಲ್ಲಿ ಬುಡುಕಟ್ಟು ಜನರ ಮಧ್ಯೆ ಕೆಲಸ ನಿರ್ವಹಿಸುತ್ತಿರುವ ಕೆಲವು ಮುಖ್ಯ ಸ್ವಯಂ ಸೇವಾ ಸಂಸ್ಥೆಗಳನ್ನು ಗುರ್ತಿಸಿದ್ದು. ಅವುಗಳಿಗೆ ಅನುದಾನವನ್ನ ಬಿಡುಗಡೆ ಮಾಡಲಾಗುತ್ತಿದೆ(ಬುಡಕಟ್ಟು ವ್ಯವಹಾರಗಳ ಮಂತ್ರಾಲಯದ ವಾರ್ಷಿಕ ವರದಿ ೨೦೦೭-೦೮).

೨.೪.ಎ. ಬುಡಕಟ್ಟು ಮಾರುಕಟ್ಟೆ ಮತ್ತು ಸಹಕಾರ ಸಂಘಗಳ ಅಭಿವೃದ್ಧಿ ಒಕ್ಕೂಟದ (ಟ್ರೈಫೆಡ್) ಕಾರ್ಯಕ್ರಮಗಳು

ಭಾರತೀಯ ಬುಡಕಟ್ಟು ಮಾರುಕಟ್ಟೆ ಮತ್ತು ಸಹಕಾರ ಸಂಘಗಳ ಅಭಿವೃದ್ಧಿ ಒಕ್ಕೂಟವನ್ನ (ಟ್ರೈಫೆಡ್) ೧೯೮೭ರಲ್ಲಿ ಸ್ಥಾಪಿಸಲಾಯಿತು.ಈ ಸಂಸ್ಥೆಯ ಸ್ಥಾಪನೆಯ ಮುಖ್ಯ ಉದ್ದೇಶ ಬುಡಕಟ್ಟು ಜನರು ಸಂಗ್ರಹಿಸುವ ಕಿರು ಅರಣ್ಯ ಉತ್ಪನ್ನಗಳಿಗೆ ಸೂಕ್ತವಾದ ಬೆಲೆಯನ್ನ ಕೊಟ್ಟು ಅವುಗಳ ಮಾರಾಟಕ್ಕೆ ಉತ್ತಮ ಮಾರುಕಟ್ಟೆಯನ್ನ ಕಲ್ಪಿಸುವುದು, ಮತ್ತು ಖಾಸಗಿ ಮಧ್ಯವರ್ತಿಗಳಿಂದಾಗುತ್ತಿದ್ದ ಶೋಷಣೆಯನ್ನ ತಪ್ಪಿಸುವುದು ಹಾಗೂ ಬುಡಕಟ್ಟು ಜನರಿಂದ ಕೊಂಡ ಉತ್ಪನ್ನಗಳನ್ನ ಸೂಕ್ತ ಬೆಲೆಗೆ ಮಾರುಕಟ್ಟೆಯಲ್ಲಿ ಮಾರಾಟ ಮಾಡುವುದು.

೨.೪.ಎ.೧. ಬುಡಕಟ್ಟು ಉತ್ಪನ್ನಗಳ ಮಾರುಕಟ್ಟೆ

ಈ ಯೋಜನೆಯನ್ನ ೨೦೦೭-೦೮ರಲ್ಲಿ ಪರಿಚಯಿಸಲಾಗಿದ್ದು ಈ ಯೋಜನೆಯಡಿಯಲ್ಲಿ (ಟ್ರೈಫೆಡ್) ಕೆಳಕಾಣುವ ನಾಲ್ಕು ಮುಖ್ಯ ಕಾರ್ಯಗಳನ್ನ ಸಾಧಿಸಲು ೫ ವರ್ಷಗಳ ಒಂದು ಯೋಜನೆಯನ್ನು ಹಾಕಿಕೊಂಡಿದೆ.

- ಸಗಟು ಮಾರುಕಟ್ಟೆ ಅಭಿವೃದ್ಧಿ
- ಕಿರು ಅರಣ್ಯ ಉತ್ಪನ್ನಗಳ ಮಾರುಕಟ್ಟೆ ಅಭಿವೃದ್ಧಿ
- ಬುಡಕಟ್ಟು ಜನರಲ್ಲಿ ವೃತ್ತಿ ತರಬೇತಿ, ಕೌಶಲ್ಯ ಅಭಿವೃದ್ದಿ ಮತ್ತು ಬುಡಕಟ್ಟು ಕುಶಲಕರ್ಮಿಗಳಲ್ಲಿ ಹಾಗೂ ಕಿರು ಅರಣ್ಯ ಉತ್ಪನ್ನಗಳ ಸಂಗ್ರಹಕರಲ್ಲಿ ಸಂಘಟನೆಯನ್ನ ಬೆಳೆಸುವುದು.
- ಸಂಶೋಧನೆ ಮತ್ತು ಅಭಿವೃದ್ದಿ ಹಾಗೂ ಈ ಕಾರ್ಯಕ್ರಮಗಳ ಸಾಧನೆಗೆ ಹನ್ನೊಂದನೆ ಪಂಚವಾರ್ಷಿಕ ಯೋಜನೆಯಲ್ಲಿ ಸುಮಾರು ೬೯.೫೯ ಕೋಟಿ ರೂಪಾಯಿಗಳನ್ನ ಅನುಧಾನವಾಗಿ ಟ್ರೈಫಡ್ ಸಂಸ್ಥೆಗೆ ಅನುಮೋದಿಸಲಾಗಿದೆ.

೨೦೦೭-೦೮ ಡಿಸೆಂಬರ್ ೨೦೦೭ರ ಅಂತ್ಯದವರೆಗೆ, ಬುಡಕಟ್ಟು ವ್ಯವಹಾರಗಳ ಮಂತ್ರಾಲಯವು ರೂ ೧೮-೬೯ ಕೋಟಿ ರೂಪಾಯಿಗಳನ್ನ ಈ ಯೋಜನೆಗಳಿಗೆ ಬಿಡುಗಡೆ ಮಾಡಿದೆ. ಕಾರ್ಯಕ್ರಮವಾರು ವೆಚ್ಚಗಳನ್ನ ಕೆಳಗಿನಂತೆ ಕಾಣಬಹುದು.

ಕೋಷ್ಟಕ: ೨.೬ ಬುಡಕಟ್ಟು ಉತ್ಪನ್ನಗಳಿಗೆ ಮಾರಕಟ್ಟೆ ಯೋಜನೆಯಡಿ ಕಾರ್ಯಕ್ರಮವಾರು ಹಣದ ಬಿಡುಗಡೆ (ರೂ ಲಕ್ಷಗಳಲ್ಲಿ)

ಕಾರ್ಯಕ್ರಮ	೨೦೦೭-೦೮	೨೦೦೮-೦೯	೨೦೦೯-೧೦	೨೦೧೦-೧೧	೨೦೧೧-೧೨	ಒಟ್ಟು
ಸಗಟು ಮಾರುಕಟ್ಟೆ ಅಭಿವೃದ್ಧಿ	೫೫೫೦	೬೨೩	೩೯೨	-೧೦	-೨೪೩	೧೩೧೨
ಕಿರು ಅರಣ್ಯ ಉತ್ಪನ್ನಗಳ ಮಾರುಕಟ್ಟೆ ಅಭಿವೃದ್ಧಿ	೭೬೧	೭೧೦	೫೦೦	೩೮೦	೪೧೪	೨೭೬೫
ಕೌಶಲ್ಯಅಭಿವೃದ್ದಿ ಮತ್ತು ಇತರೆ	೩೭೧	೪೦೩	೪೩೮	೪೮೮	೫೩೦	೨೨೩೦
ಸಂಶೋಧನೆ ಮತ್ತು ಅಭಿವೃದ್ದಿ	೧೮೭	೧೪೬	೧೧೯	೯೯	೧೦೧	೬೫೨
ಸಂಪನ್ಮೂಲಗಳ ಅಗತ್ಯತೆ	೧೮೬೯	೧೮೮೨	೧೪೪೯	೯೫೭	೮೦೨	೬೯೫೯

ಆಧಾರ: ಬುಡಕಟ್ಟು ವ್ಯವಹಾರಗಳ ಮಂತ್ರಾಲಯದ ವಾರ್ಷಿಕ ವರದಿ ೨೦೦೭-೦೮

೨.೪.ಎ.೨. ಒಟ್ಟು ಬಂಡವಾಳದಲ್ಲಿ ಕೇಂದ್ರಸರ್ಕಾರದ ಹೂಡಿಕೆ

ಈ ಯೋಜನೆಯು ೧೯೮೭ ರಿಂದಲೂ ಅಸ್ತಿತ್ವದಲ್ಲಿದ್ದು ಕೇಂದ್ರಸರ್ಕಾರವು ಟ್ರೈಫೆಡ್ ನ ಷೇರುಬಂಡವಾಳದಲ್ಲಿ ಪಾಲನ್ನು ತೂಡಗಿಸಿದೆ, ಪ್ರಸ್ತುತ ಟ್ರೈಫೆಡ್‌ನ ಒಟ್ಟು ಷೇರುಬಂಡವಾಳ ರೂ ೩೦೦ ಕೋಟಿಗಳು ಇದರಲ್ಲಿ ಕೇಂದ್ರಸರ್ಕಾರದ ಷೇರು ೯೯.೭೫ ಕೋಟಿಗಳು ಟ್ರೈಫೆಡ್ ನೇರವಾಗಿ ಬುಡಕಟ್ಟುಜನರಿಗೆ ಸಾಲವನ್ನೋದಗಿಸುವುದಿಲ್ಲ ಬದಲಾಗಿ ರಾಜ್ಯ ಬುಡಕಟ್ಟು ಹಣಕಾಸು ಅಬಿವೃದ್ಧಿ ನಿಗಮಗಳ ಮುಖಾಂತರ ಸಾಲವನ್ನೋದಗಿಸುತ್ತದೆ.

೨.೪.ಏ. ರಾಷ್ಟ್ರೀಯ ಪರಿಶಿಷ್ಟ ಪಂಗಡಗಳ ಹಣಕಾಸು ಅಭಿವೃದ್ದಿ ನಿಗಮಗಳು ಮತ್ತು ರಾಜ್ಯ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮಗಳು

ಭಾರತ ಸರ್ಕಾರ ೨೦೦೧ ಎಪ್ರಿಲ್ ತಿಂಗಳು ಬುಡಕಟ್ಟು ಜನರಿಗೆ ವಿವಿಧ ಸ್ವ ಉದ್ಯೋಗ ತರಬೇತಿ, ಸಣ್ಣ ಕೈಗಾರಿಕೆಗಳು ಹಾಗೂ ಇತರ ವ್ಯವಹಾರಗಳಿಗೆ ಹಣಕಾಸಿನ ನೆರವನ್ನ ಒದಗಿಸಲು ಕೇಂದ್ರದಲ್ಲಿ ರಾಷ್ಟ್ರೀಯ ಪರಿಶಿಷ್ಟ ಪಂಗಡಗಳ ಹಣಕಾಸು ಅಭಿವೃದ್ಧಿ ನಿಗಮವನ್ನು ಸ್ಥಾಪಿಸಿ ರಾಜ್ಯಗಳಲ್ಲಿಯೂ ರಾಜ್ಯ ಪರಿಶಿಷ್ಟ ಪಂಗಡಗಳ ಹಣಕಾಸು ಅಭಿವೃದ್ಧಿ ನಿಗಮಗಳನ್ನ ಸ್ಥಾಪಿಸಲು ಅನುವು ಮಾಡಿಕೊಟ್ಟಿತು.

೨.೪.ಏ.೧. ರಾಜ್ಯ ಬುಡಕಟ್ಟು ಸಹಕಾರ ಸಂಘಗಳಿಗೆ ಅನುದಾನ

ಬಹುಸಂಖ್ಯಾತ ಆದಿವಾಸಿ ಬುಡಕಟ್ಟು ಜನರು ಅರಣ್ಯ ವಾಸಿಗಳಾಗಿದ್ದು ಕಿರು ಅರಣ್ಯ ಉತ್ಪನ್ನಗಳಾದ, ಹುಣಸೆ, ಜೇನು, ಬಿದಿರು, ಸೌದೆ, ನಲ್ಲಿಕಾಯಿ, ಸೀಗೆಕಾಯಿ, ಅಂಟುವಾಳ ಇವೆ ಇತ್ಯಾದಿಗಳನ್ನ ಸಂಗ್ರಹಿಸಿ ಸಮೀಪದ ಮಾರುಕಟ್ಟೆಯಲ್ಲಿ ಮಾರಾಟಮಾಡಿ ತಮ್ಮ ಜೀವನವನ್ನ ನಡೆಸುತ್ತಿದ್ದಾರೆ. ಶೇ ೭೦% ರಷ್ಟು ಅರಣ್ಯವಾಸಿ ಬುಡಕಟ್ಟು ಜನರು ಈ ಕಾರ್ಯದಲ್ಲಿ ನಿರತರಾಗಿದ್ದಾರೆ. ಆರಂಭದಲ್ಲಿ ಬುಡಕಟ್ಟು ಜನರು ಕಿರು ಅರಣ್ಯ ಉತ್ಪನ್ನಗಳನ್ನ ತಮ್ಮ ಸ್ವಂತಕ್ಕೆ ಮಾತ್ರ ಬಳಸಿಕೊಳ್ಳುತಿದ್ದರು, ಈ ಉತ್ಪನ್ನಗಳಿಗೆ ಅರಣ್ಯದ ಹೊರ ಭಾಗಗಳಲ್ಲಿ ಹೆಚ್ಚು

ಬೇಡಿಕೆಯಿರುವುದರಿಂದ ಸಂಗ್ರಹಿಸಿದ ಎಲ್ಲಾ ಕಿರು ಅರಣ್ಯ ಉತ್ಪನ್ನಗಳು ವಾರದ ಸಂತೆಗಳಲ್ಲಿ ಉತ್ತಮ ಬೆಲೆಗೆ ಮಾರಾಟವಾಗುತ್ತಿವೆ.

ಬುಡಕಟ್ಟು ಜನರ ಹೊರಜಗತ್ತಿನ ಸಂಪರ್ಕದ ದೌರ್ಬಲ್ಯವನ್ನ ಅರ್ಥಮಾಡಿಕೊಂಡ ಕೆಲವು ವ್ಯಾಪಾರಿಗಳು ಮತ್ತು ಮಧ್ಯವರ್ತಿಗಳು ಬುಡಕಟ್ಟು ಜನರಿಂದ ತುಂಬಾ ಕಡಿಮೆ ಬೆಲೆಗೆ ಕಿರು ಅರಣ್ಯ ಉತ್ಪನ್ನಗಳನ್ನ ಕೊಂಡು ಹೊರ ಮಾರುಕಟ್ಟೆಯಲ್ಲಿ ಹೆಚ್ಚಿನ ಬೆಲೆಗೆ ಮಾರಟ ಮಾಡಿ ಲಾಭ ಗಳಿಸಿಕೊಳ್ಳತಿದ್ದರು. ಈ ರೀತಿಯ ಶೋಷಣೆಯನ್ನ ತಪ್ಪಿಸಲು ಸರ್ಕಾರಗಳು ಬುಡಕಟ್ಟು ಸಹಕಾರ ಸಂಘಗಳನ್ನ ಸ್ಥಾಪಿಸಿವೆ.

ಕೋಷ್ಟಕ ೨.೭: ರಾಷ್ಟ್ರೀಯ ಪರಿಶಿಷ್ಟ ಪಂಗಡಗಳ ಹಣಕಾಸು ಅಭಿವೃದ್ಧಿ ನಿಗಮದ ಸಾಲ ನೀತಿ

ಸಹಾಯದ ವಿಧಾನ	ಘಟಕ ವೆಚ್ಚ	ಎನ್.ಎಸ್.ಟಿ. ಎಫ್‌ಡಿ.ಸಿ.ಪಾಲು	ವಿಧಿಸುವಬಡ್ಡಿ ಸಿ.ಎ.ಎಸ್.	ಸೌಲಭ್ಯಾರ್ಥಿಗಳಿಗೆ
ಆದಾಯ ಗಳಿಸುವ ಚಟುವಟಿಕೆಗಳು ಅವಧಿ ಸಾಲ, ಸಂಪರ್ಕ ಸಾಲ	೧೦ ಲಕ್ಷ	ಘಟಕ ವೆಚ್ಚದ ಶೇ ೯೦ ರಷ್ಟು	೩% ೫ ಲಕ್ಷಗಳ ಮಿತಿ ೫% ಹೆಚ್ಚು	೬% ೫ ಲಕ್ಷಕ್ಕಿಂತ ಹೆಚ್ಚು ೮%
ಅವಧಿ ಸಾಲ	೫೦೦೦೦೦	ಘಟಕ ವೆಚ್ಚದ ಶೇ ೯೦ ರಷ್ಟು	೨%	೪%
ಸ್ವಸಹಾಯಸಂಘಗಳಿಗೆ ಅವಧಿ ಸಾಲ	೨೫ ಲಕ್ಷಗಳ ಮಿತಿ ಒಬ್ಬರಿಗೆ ೫೦೦೦೦	ಘಟಕ ವೆಚ್ಚದ ಶೇ ೯೦ ರಷ್ಟು	೫%	೮%
ಮೈಕ್ರೊ ಕ್ರೆಡಿಟ್	ಪ್ರತಿಸದಸ್ಯನಿಗೆ ೫೦೦೦ ದಂತೆ ಸಂಘಕ್ಕೆ ೩ ಲಕ್ಷ ದಂತೆ	ಘಟಕ ವೆಚ್ಚದ ಶೇ ೯೦ ರಷ್ಟು	೩%	೬%

ಆಧಾರ: ಬುಡಕಟ್ಟು ವ್ಯವಹಾರಗಳ ಮಂತ್ರಾಲಯದ ವಾರ್ಷಿಕ ವರದಿ ೨೦೦೭--೦೮

೨.೪.ಐ. ಆದಿಮ ಬುಡಕಟ್ಟುಗಳಿಗಿರುವ ಕೇಂದ್ರ ಸರ್ಕಾರದ ಯೋಜನೆಗಳು

ಕೇಂದ್ರ ಸರ್ಕಾರವು ಬುಡಕಟ್ಟು ಜನರ ಸಾಮಾಜಿಕ ಆರ್ಥಿಕ ಸ್ಥಿತಿಗತಿಯನ್ನು ಆಧರಿಸಿ ೧೭ ರಾಜ್ಯಗಳಲ್ಲಿ ೭೫ ಬುಡಕಟ್ಟುಗಳನ್ನು ಈ ಮಾನದಂಡಗಳನ್ನಾಧರಿಸಿ ಆದಿವಾಸಿ ಬುಡಕಟ್ಟುಗಳೆಂದು ಘೋಷಿಸಿದೆ

೧. ಇಳಿಮುಖ/ಬದಲಾಗದ ಜನಸಂಖ್ಯಾ ಪ್ರಮಾಣ
೨. ಆದಿಮ ಕೃಷಿ ತಂತ್ರಜ್ಞಾನ
೩. ಆರ್ಥಿಕವಾಗಿ ಹಿಂದುಳಿದಿರುವುದು
೪. ಕಡಿಮೆ ಸಾಕ್ಷರತೆ

ಆದಿಮ ಜನಸಂಖ್ಯೆಯು ತುಂಬಾ ಕಡಿಮೆಯಿದ್ದು ಒಟ್ಟುಬುಡಕಟ್ಟು ಜನಸಂಖ್ಯೆಯ ಶೇ ೨ ರಷ್ಟು ದೇಶದ ಒಟ್ಟು, ಜನಸಂಖ್ಯೆ ೦.೦೧ ರಷ್ಟನ್ನು ಹೊಂದಿದ್ದಾರೆ . ಆದಿಮ ಸಮುದಾಯದ ಸಮಸ್ಯೆಗಳು ಮತ್ತು ಅಗತ್ಯತೆಗಳು ಇತರೆ ಬುಡಕಟ್ಟುಗಳಿಗಿಂತ ಭಿನ್ನವಾಗಿವೆ, ಆದಿವಾಸಿ ಬುಡಕಟ್ಟು ಜನರು ಇತರ ಬುಡಕಟ್ಟು ಜನರಿಗಿಂತ ತುಂಬಾ ಶೋಷಣಾತ್ಮಕ ಜೀವನ ನಡುಸುತ್ತಿರುವುದರಿಂದ ಅವರಿಗೆ ವಿಶೇಷ ಯೋಜನೆಗಳನ್ನು ರೂಪಿಸುವ ಅಗತ್ಯತೆಯನ್ನು

ಮನಗಂಡ ಕೇಂದ್ರ ಸರ್ಕಾರವು ೧೯೭೮-೭೯ರಿಂದ ೧೦೦ ರಷ್ಟು ಅನುಧಾನವನ್ನು ಆದಿವಾಸಿ ಬುಡಕಟ್ಟು ಜನರ ಆರ್ಥಿಕ ಅಭಿವೃದ್ಧಿಗೆ ಬಿಡುಗಡೆ ಮಾಡಲಾಗುತ್ತಿದೆ.

ಆದಿಮ ಬುಡಕಟ್ಟುಗಳ ಅಭಿವೃದ್ದಿ ಯೋಜನೆಯಡಿ ಬುಡಕಟ್ಟು ಜನರಿಗೆ ವಸತಿ, ಭೂ ವಿತರಣೆ, ಕೃಷಿ ಅಭಿವೃದ್ಧಿ, ಪಶುಸಂಗೋಪನೆ, ಆದಾಯ ವೃದ್ಧಿ ಚಟುವಟಿಕೆಗಳು, ಆರೋಗ್ಯ ಸುಧಾರಣೆ, ಮೂಲಭೂತ ಸೌಕರ್ಯಗಳ ವೃದ್ಧಿ ಮತ್ತು ವಿಮೆ ಇತ್ಯಾದಿ ಕಾರ್ಯಕ್ರಮಗಳನ್ನು ರೂಪಿಸಬಹುದಾಗಿದೆ. ಈ ಯೋಜನೆಯನ್ನು ರಾಜ್ಯ/ ಕೇಂದ್ರಾಡಳಿತ ಪ್ರದೇಶಗಳಲ್ಲಿರುವ ಐ.ಟಿ.ಡಿ.ಪಿ.ಗಳು/ಐ.ಟಿ.ಡಿ.ಪಿ.ಎಸ್./ಬುಡಕಟ್ಟು ಸಂಶೋಧನಾ ಸಂಸ್ಥೆಗಳು ಮತ್ತು ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ಜಾರಿಗೊಳಿಸಲಾಗುತ್ತಿದೆ. ಈ ಯೋಜನೆಯಡಿ ರಾಜ್ಯ ಸರ್ಕಾರವು ಸಂಪೂರ್ಣ ಜವಾಬ್ದಾರಿಯನ್ನು ಹೊತ್ತು ಕಾರ್ಯ ನಿರ್ವಹಿಸಬೇಕಾಗಿದೆ.

೨.೪.ಐ.೧. ಆದಿವಾಸಿ ಬುಡಕಟ್ಟುಗಳಿಗೆ ಜನಶ್ರೀ ವಿಮಾ ಯೋಜನೆ

ಬಹಳಷ್ಟು ಬುಡಕಟ್ಟು ಜನರು ಅರಣ್ಯ ಮತ್ತು ಅರಣ್ಯದಂಚಿನ ಗ್ರಾಮವಾಸಿಗಳಾಗಿದ್ದು ಕ್ರೂರಮೃಗಗಳ ಹಾವಳಿಗೆ ತಮ್ಮ ಪ್ರಾಣ ತೆತ್ತಿರುವುದನ್ನ ಮನಗಂಡು ಭಾರತ ಸರ್ಕಾರವು ೨೦೦೪-೦೫ರಲ್ಲಿ ಕುಟುಂಬದ ದುಡಿಯುವ ಸದಸ್ಯನನ್ನು ಈ ವಿಮಾ ಯೋಜನೆಯಡಿ ಒಳಪಡಿಸಲು ನಿರ್ಧರಿಸಿತು.ಈ ಯೋಜನೆಯನ್ನ ಭಾರತೀಯ ಜೀವ ವಿಮಾ ನಿಗಮವು ಜಾರಿಗೆ ತರಲಾಗುತ್ತಿದ್ದು ಎಲ್ಲಾ ಆದಿವಾಸಿ ಕುಟುಂಬಗಳಿಗೂ ಈ ಯೋಜನೆಯಡಿ ರಕ್ಷಣೆಯನ್ನ ಹತ್ತನೆ ಪಂಚವಾರ್ಷಿಕ ಯೋಜನೆಯಡಿ ವಿಸ್ತರಿಸಲಾಗಿದೆ, ಈ ಯೋಜನೆಯಡಿ ಸೌಲಭ್ಯಾರ್ಥಿಗಳಿಗೆ ಈ ಕೆಳಗಿನ ಸೌಲಭ್ಯಗಳನ್ನು ಒದಗಿಸಲಾಗುವುದು.

- ಆಕಸ್ಮಿಕ ಮರಣ/ಆಕಸ್ಮಿಕ ಶಾಶ್ವತ ಅಂಗವಿಕಲತೆಯಾದರೆ ರೂ ೫೦.೦೦೦ಗಳನ್ನ ಕುಟುಂಬದ ಸದಸ್ಯರಿಗೆ ಒದಗಿಸುವುದು.
- ಸ್ವಾಭಾವಿಕ ಮರಣ ಹೊಂದಿದಲ್ಲಿ ರೂ ೨೦.೦೦೦ಗಳನ್ನ ಕುಟುಂಬದ ಸದಸ್ಯರಿಗೆ ಒದಗಿಸುವುದು.
- ಅಂಗವೈಕಲ್ಯವಾದಲ್ಲಿ ರೂ ೨೦.೦೦೦ಗಳನ್ನ ಒದಗಿಸುವುದು
- ಈ ಯೋಜನೆಯಡಿ ಸೌಲಭ್ಯ ಪಡೆದ ಸೌಲಭ್ಯಾರ್ಥಿಯ ಕುಟುಂಬದ ಇಬ್ಬರು ಮಕ್ಕಳಿಗೆ ಒಂಭತ್ತನೆ ತರಗತಿಗಿಂತ ಹೆಚ್ಚಿನ ತರಗತಿಯಲ್ಲಿ ವ್ಯಾಸಂಗ ಮಾಡುವವರಿಗೆ ೩೦೦ರೂಗಳ ವಿಧ್ಯಾರ್ಥಿ ವೇತನವನ್ನ ನೀಡಲಾಗುತ್ತದೆ.

ಕೋಷ್ಟಕ ೨.೮ ಹತ್ತನೇ ಪಂಚವಾರ್ಷಿಕ ಯೋಜನೆಯಲ್ಲಿ ಹಣಕಾಸಿನ ಹಂಚಿಕೆ ಮತ್ತು ಬಿಡುಗಡೆ

ವರ್ಷ	ಹಂಚಿಕೆ	ಬಿಡುಗಡೆ
೨೦೦೨-೦೩	೨೦.೦೦	೧೩.೭೫
೨೦೦೩-೦೪	೨೦.೦೦	೧೬.೧೩
೨೦೦೪-೦೫	೨೧.೫೦	೨೧.೦೬
೨೦೦೫-೦೬	೨೪.೭೫	೨೨.೭೭
೨೦೦೬-೦೭	೩೧.೫೦	೨೨.೬೦

ಆಧಾರ: ಬುಡಕಟ್ಟು ವ್ಯವಹಾರಗಳ ಮಂತ್ರಾಲಯದ ವಾರ್ಷಿಕ ವರದಿ ೨೦೦೭-೦೮

ಹತ್ತನೆ ಪಂಚವಾರ್ಷಿಕ ಯೋಜನೆಯಡಿ ಸುಮಾರು ೩೧.೫೦ ಕೋಟಿಗಳನ್ನ ಹಂಚಿಕೆ ಮಾಡಿದ್ದು ಕೇವಲ ೨೨.೬೦ (೨೦೦೭ ರ ಡಿಸೆಂಬರ್ ಅಂತ್ಯಕ್ಕೆ) ಕೋಟಿಗಳನ್ನ ಮಾತ್ರ ಬಿಡುಗಡೆ ಮಾಡಲಾಗಿದೆ.

೨.೫. ಕರ್ನಾಟಕ ಸರ್ಕಾರಕ್ಕೆ ವಿವಿಧ ಯೋಜನೆಗಳಲ್ಲಿ ಕೇಂದ್ರ ಸರ್ಕಾರದಿಂದ ದೊರೆತ ಅನುದಾನ

ಕೇಂದ್ರ ಸರ್ಕಾರವು ಮುಖ್ಯವಾಗಿ ಈ ಕೆಳ ಕಾಣುವ ನಾಲ್ಕು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವ ಸಂಸ್ಥೆಗಳಗೆ ಅನುದಾನವನ್ನ ಬಿಡುಗಡೆ ಮಾಡುತ್ತಿದೆ.

೧. ಬುಡಕಟ್ಟು ಜನರ ಕಲ್ಯಾಣ ಕಾರ್ಯಗಳಲ್ಲಿ ನಿರತವಾಗಿರುವ ಸಂಸ್ಥೆಗಳಿಗೆ: ತರಬೇತಿ ಮತ್ತು ಮೂಲ ಸೌಕರ್ಯ ವೃದ್ಧಿಯನ್ನು ಸೇರಿದಂತೆ.
೨. ಮಹಿಳಾ ಸಾಕ್ಷರತೆ ಕಡಿಮೆಯಿರುವ ವಲಯಗಳಲ್ಲಿ ಸಾಕ್ಷರತೆಯನ್ನು ಹೆಚ್ಚಿಸುವ ಕಾರ್ಯಕ್ರಮಗಳು.
೩. ವೃತ್ತಿ ತರಬೇತಿ ಕೇಂದ್ರಗಳು
೪. ಆದಿವಾಸಿ/ಆದಿಮ ಬುಡಕಟ್ಟುಗಳ ಅಭಿವೃದ್ಧಿ

ಪ್ರಸ್ತುತ ಚಾಲನೆಯಲ್ಲಿರುವ ಮುಖ್ಯ ಕಾರ್ಯಕ್ರಮಗಳೆಂದರೆ
೧. ವಸತಿ ಶಾಲೆಗಳು
೨. ನಿರ್ವಸತಿ ಶಾಲೆಗಳು
೩. ವಸತಿ ನಿಲಯಗಳು
೪. ಸಂಚಾರಿ ಆರೋಗ್ಯ ಘಟಕಗಳು
೫. ಹತ್ತು ಬೆಡ್ಡಿನ ಹಾಸಿಗೆಗಳುಳ್ಳ ಆಸ್ಪತ್ರೆಗಳು
೬. ಕಂಪ್ಯೂಟರ್ ತರಬೇತಿ ಕೇಂದ್ರಗಳು

ಕೋಷ್ಟಕ:೨.೯ ಹತ್ತನೇ ಪಂಚವಾರ್ಷಿಕ ಯೋಜನೆಯಲ್ಲಿ ಸ್ವಯಂಸೇವಾ ಸಂಸ್ಥೆಗಳಿಗೆ ಬಿಡುಗಡೆ ಆದ ಹಣ ಮತ್ತು ವೆಚ್ಚ

ವರ್ಷ	ಬಿಡುಗಡೆ	ವೆಚ್ಚ
೨೦೦೨-೦೩	೩೨.೦೦	೩೦.೮೪
೨೦೦೩-೦೪	೩೨.೦೦	೨೬.೯೦
೨೦೦೪-೦೫	೩೨.೦೦	೨೯.೮೮
೨೦೦೫-೦೬	೨೩.೪೦	೨೬.೮೯
೨೦೦೬-೦೭	೨೬.೦೦	೩೧.೬೦
೨೦೦೭-೦೮	೩೭.೦೦	೨೦.೮೩

ಆಧಾರ: ಬುಡಕಟ್ಟು ವ್ಯವಹಾರಗಳ ಮಂತ್ರಾಲಯದ ವಾರ್ಷಿಕ ವರದಿ ೨೦೦೭-೦೮

೨.೫.ಅ. ಬುಡಕಟ್ಟು ಅಭ್ಯರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ

ಪರಿಶಿಷ್ಟ ಬುಡಕಟ್ಟಿನ ವಿದ್ಯಾರ್ಥಿಗಳನ್ನು ಸ್ಪರ್ಧಾತ್ಮಕ ಪರೀಕ್ಷೆಗಳು ಮತ್ತು ಇತರ ವೃತ್ತಿಪರ ಪರೀಕ್ಷೆಗಳ ತಯ್ಯಾರಿಗೆ ತರಬೇತಿ ನೀಡುವ ಯೋಜನೆಯನ್ನು ಕೇಂದ್ರ ಸರ್ಕಾರವು ೨೦೦೭-೦೮ರಲ್ಲಿ ಪುನರ್ ಪರಿಶೀಲಿಸಿದೆ.ಈ ಯೋಜನೆಯ ಮುಖ್ಯ ಉದ್ದೇಶವು ಬುಡಕಟ್ಟು

ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಜ್ಞಾನದ ಅರಿವನ್ನು ಮೂಡಿಸುವಂತಹ ಉತ್ತಮ ತರಬೇತಿ ನೀಡಲಾಗುತ್ತದೆ. ಈ ಯೋಜನೆಯನ್ನು ರಾಜ್ಯ / ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳ ಮತ್ತು ನೊಂದಾಯಿಸಿದ ಖಾಸಗಿ ತರಬೇತಿ ಸಂಸ್ಥೆಗಳ ಮುಖಾಂತರ ಶೇ ೮೦:೧೦೦ ರ ಅನುಪಾತದಂತೆ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ. ಅನುದಾನದಲ್ಲಿ ತರಬೇತಿ ಶುಲ್ಕ, (ತರಬೇತಿದಾರರ ಶುಲ್ಕ, ಪ್ರಚಾರ ಶುಲ್ಕ, ಅಭ್ಯರ್ಥಿಗಳಿಗೆ ಶಿಷ್ಯವೇತನ ಹೊರಭಾಗದ ವಿದ್ಯಾರ್ಥಿಗಳಿಗೆ ವಾಸಸ್ಥಳ ಮತ್ತು ಭೋಜನಾ ಭತ್ಯ ಇತ್ಯಾದಿ).

ಯೋಜನೆಯ ಮುಖ್ಯ ಲಕ್ಷಣಗಳು

- ಈ ಯೋಜನೆಯಡಿ ಪ್ರಸ್ತಾವನೆಗಳನ್ನ ತರಬೇತಿ ಸಂಸ್ಥೆಗಳಿಂದ ಮತ್ತು ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಿಂದ ನೇರವಾಗಿ ಜಾಹಿರಾತು ಮೂಲಕ ಆಹ್ವಾನಿಸಲಾಗುತ್ತದೆ.
- ಸಂಸ್ಥೆಗಳ ಸಾಧನೆ ಮತ್ತು ತರಬೇತಿಯ ದಕ್ಷತೆಯನ್ನು ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳ ಮೂಲಕ ಪರೀಕ್ಷಿಸಲಾಗುತ್ತದೆ.
- ಒಂದು ಸಮಿತಿಯನ್ನು ರಚಿಸಿ ಆ ಸಮಿತಿಯ ಮುಂದೆ ಸಂಸ್ಥೆಗಳು ತಮ್ಮ ಸಂಸ್ಥೆಯ ವಿವರಗಳನ್ನು ಮುಂದಿಡುವಂತೆ ಸೂಚಿಸಲಾಗುತ್ತದೆ.
- ತರಬೇತಿ ಸಂಸ್ಥೆಗಳನ್ನು ಐದು ವರ್ಷಗಳ ಅವಧಿಗೆ ಆಯ್ಕೆ ಮಾಡಲಾಗುತ್ತದೆ. ಒಮ್ಮೆ ಆಯ್ಕೆ ಮಾಡಲ್ಪಟ್ಟ ತರಬೇತಿ ಸಂಸ್ಥೆಗಳು ಮತ್ತೆ ಪ್ರಸ್ತಾವನೆಗಳನ್ನು ಸಲ್ಲಿಸುವ ಅಗತ್ಯವಿರುವುದಿಲ್ಲ.
- ತರಬೆತಿ ಸಂಸ್ಥೆಗಳು ಕನಿಷ್ಠ ಶೇ ೧೦ ರಷ್ಟು ಸಾಧನೆಯ ಫಲಿತಾಂಶವನ್ನು ನೀಡಬೇಕಾಗುತ್ತದೆ. ತರಬೇತಿ ಸಂಸ್ಥೆಗಳು ನಿಗದಿತ ಅರ್ಜಿಯನ್ನು ಭರ್ತಿಮಾಡಿ ನಿಗದಿತ ವೆಚ್ಚಕ್ಕೆ ಅನುಗುಣವಾಗಿ ಅರ್ಜಿಗಳನ್ನು ಒಪ್ಪಿಸ ಬೇಕಾಗುತ್ತದೆ.
- ಒಂದು ತರಗತಿಗೆ ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳನ್ನೊಳಗೊಂಡಂತೆ ೪೦ ವಿದ್ಯಾರ್ಥಿಗಳಿಗಿಂತ ಹೆಚ್ಚಿರ ಬಾರದು. ಅದರಲ್ಲಿ ಶೇ ೩೦ರಷ್ಟು ಬುಡಕಟ್ಟು ಮಹಿಳಾ ಅಭ್ಯರ್ಥಿಗಳು ಮತ್ತು ೫% ಅಂಗವಿಕಲ ಬುಡಕಟ್ಟು ಅಭ್ಯರ್ಥಿಗಳಿರುವಂತೆ ಕ್ರಮವಹಿಸಬೇಕು.
- ಒಂದು ವೇಳೆ ಅಗತ್ಯಕ್ಕಿಂತ ಹೆಚ್ಚು ಅರ್ಜಿಗಳಿದ್ದಲ್ಲಿ ಅಭ್ಯರ್ಥಿಗಳ ವಿದ್ಯಾರ್ಹತೆ ಮತ್ತು ಅರ್ಹ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಆಧರಿಸಿರಬೇಕು.
- ತರಬೇತಿ ಆರಂಭವಾದ ಒಂದು ವಾರದಲ್ಲಿ ಸಂಸ್ಥೆಯು ವಿಷಯಾದಾರಿತ ಅಭ್ಯರ್ಥಿಗಳ ಪಟ್ಟಿಯನ್ನು ಸಲ್ಲಿಸಬೇಕು.
- ಸಂಬಂಧಿತ ಸ್ಪರ್ಧಾತ್ಮಕ ಪರೀಕ್ಷೆಗೆ ಅರ್ಹ ವಿದ್ಯಾಭ್ಯಾಸವನ್ನು ಹೊಂದಿರುವ ಅಭ್ಯರ್ಥಿಗಳು ಸಂಸ್ಥೆಗೆ ಅರ್ಜಿಯನ್ನು ಸಲ್ಲಿಸಬಹುದು. ಸಂಸ್ಥೆಗಳು ಮೊದಲು ಬಂದವರಿಗೆ ಆದ್ಯತೆ ಮೇರೆಗೆ ಅವಕಾಶ ಕಲ್ಪಿಸಿ ಕೊಡಬೇಕು, ಹಾಗೂ ಸ್ಥಳಾವಕಾಶವಿರುವವರೆಗೆ ಅಭ್ಯರ್ಥಿಗಳನ್ನು ಸೇರಿಸಿಕೊಳ್ಳಬೇಕು.
- ಅಭ್ಯರ್ಥಿಗಳು ತರಬೇತಿಯನ್ನು ಒಮ್ಮೆ ಮಾತ್ರ ಪಡೆಯಲು ಅವಕಾಶವಿರುತ್ತದೆ. ಮತ್ತು ಅಭ್ಯರ್ಥಿಗಳು ಒಂದು ಮುಚ್ಚಳಿಕೆಯನ್ನು ಬರೆದು ಕೊಡಬೇಕಾಗಿರುತ್ತದೆ.
- ತರಬೇತಿಗೆ ಆಯ್ಕೆ ಮಾಡಲು ಅಭ್ಯರ್ಥಿಯ ತಂದೆ/ತಾಯಿ/ಪೋಷಕರ ವಾರ್ಷಿಕ ವರಮಾನವು ೨.೫೦ ಲಕ್ಷಗಳನ್ನು ಮೀರಿರಬಾರದು.
- ಪರಿಶೀಲಿಸಲ್ಪಟ್ಟಿರುವ ಪ್ರಸ್ತುತ ಯೋಜನೆಯು ಹಲವಾರು ಸ್ಪರ್ಧಾತ್ಮಕ ಪರೀಕ್ಷೆಗಳನ್ನೊಳಗೊಂಡಿದೆ.

- ತರಬೇತಿ ಸಂಸ್ಥೆಗಳಿಗೆ ಅವರು ನೀಡುವ ತರಬೇತಿಗಳ ಪ್ರಚಾರ ಮಾಡಲು ವಾರ್ಷಿಕವಾಗಿ ರೂ. ೨೦,೦೦೦ಗಳ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ. ಸಂಬಂಧಿಸಿದ ರಾಜ್ಯ / ಕೇಂದ್ರಾಡಳಿತ ಸರ್ಕಾರಗಳಿಗೆ ರೂ. ೨೫.೦೦೦ ಗಳ ಅನುದಾನವನ್ನ ಪ್ರಚಾರಕ್ಕಾಗಿ ನೀಡಲಾಗುತ್ತದೆ.
- ಆಯ್ಕೆಯಾದ ಅಭ್ಯರ್ಥಿಗಳಿಗೆ ತರಬೇತಿ ಮುಗಿಯುವವರೆಗೆ ರೂ. ೧೦೦೦ ರಷ್ಟು ವೇತನವನ್ನು ನೀಡಲಾಗುತ್ತದೆ. ಮತ್ತು ಹೊರವಿದ್ಯಾರ್ಥಿಗಳ ವಸತಿ ಊಟಕ್ಕಾಗಿ ರೂ. ೨೦೦೦ ರೂ.ಗಳನ್ನು ನೀಡಲಾಗುತ್ತದೆ.

೨.೬. ಕರ್ನಾಟಕದಲ್ಲಿ ಬುಡಕಟ್ಟು ಅಭಿವೃದ್ಧಿ ಯೋಜನೆಗಳು

೨.೬.ಅ. ಆರ್ಥಿಕ ಅಭಿವೃದ್ಧಿ ಯೋಜನೆಗಳು

ಕರ್ನಾಟಕದ ಆದಿಮ ಸಮುದಾಯಗಳಾದ ಜೇನುಕುರುಬರು ಮತ್ತು ಕೊರಗ ಸಮುದಾಯಗಳ ಕಲ್ಯಾಣ ಮತ್ತು ಅಭಿವೃದ್ಧಿಗೆ ಹೆಚ್ಚು ಒತ್ತನ್ನು ಕೊಟ್ಟು, ಎರಡನೆ ಪಂಚವಾರ್ಷಿಕ ಯೋಜನೆಯಡಿಯಲ್ಲಿ ೨೨೫೮ ಕುಟುಂಬಗಳಿಗೆ ಸಹಾಯ ಧನದ ರೂಪದಲ್ಲಿ ಬಿದಿರು, ಕರಕುಶಲ ವಸ್ತುಗಳ ಉತ್ಪಾದನೆ, ಜೇನುಸಾಕಣಿಕೆ ಇತ್ಯಾದಿ ಚಟುವಟಿಕೆಗಳಿಗೆ ಕಚ್ಚಾ ಸಾಮಗ್ರಿಗಳನ್ನ ನೀಡಲಾಗಿದೆ. ಕೃಷಿ ಚಟುವಟಿಕೆಯನ್ನ ಕೈಗೊಳ್ಳಲು ೧,೫೭೯ ಜೊತೆ ಉಳುವ ಎತ್ತುಗಳನ್ನ, ಕೃಷಿ ಉಪಕರಣಗಳಾದ ನೇಗಿಲು, ಬಿತ್ತನೆ ಬೀಜ, ಗೊಬ್ಬರ ಇತ್ಯಾದಿಗಳನ್ನ ೨೦೦೦ ಕುಟುಂಬಗಳಿಗೆ ನೀಡಲಾಗಿದೆ.

ಮೂರನೆ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಕರ್ನಾಟಕದಲ್ಲಿ ರೂ.೧೦.೧೯ ಲಕ್ಷಗಳ ವೆಚ್ಚದಲ್ಲಿ ನಾಲ್ಕು ಬಿದಿರು ಮತ್ತು ಕರಕುಶಲ ತರಬೇತಿ ಕೇಂದ್ರಗಳನ್ನ ಸ್ಥಾಪಿಸಲಾಯಿತು. ಸುಮಾರು ೯೦೦ ಬುಡಕಟ್ಟು ಜನರಿಗೆ ಸಹಾಯ ಧನವನ್ನ ವಿಸ್ತರಿಸಲಾಯಿತು, ೨೨೦೦ ಕುಟುಂಬಗಳಿಗೆ ಕೃಷಿ ಸಲಕರಣೆಗಳನ್ನ ನೀಡಲಾಗಿದೆ, ವಿವಿದೊದ್ಧೇಶ ಸಹಕಾರ ಪುನರ್ವಸತಿ ಯೋಜನೆಗಳಡಿ ೭ ಕೃಷಿಕರ ಕಾಲೋನಿಗಳನ್ನ ಸ್ಥಾಪಿಸಲಾಗಿದೆ. ನಾಲ್ಕನೆ ಪಂಚವಾರ್ಷಿಕ ಯೋಜನೆಯ ನಂತರ ಎಲ್ಲಾ ಅಭಿವೃದ್ದಿ ಕಾರ್ಯಕ್ರಮಗಳನ್ನ ಬುಡಕಟ್ಟು ಉಪ ಯೋಜನೆಯ ಮಾನದಂಡಗಳಿಗನುಸಾರವಾಗಿ ಜಾರಿಗೊಳಿಸಲಾಗುತ್ತಿದೆ.

೨.೬.ಆ. ಶೈಕ್ಷಣಿಕ ಯೋಜನೆಗಳು

ಮೊದಲನೆ ಪಂಚವಾರ್ಷಿಕ ಯೋಜನೆಯಡಿಯಲ್ಲಿ ಶಿಕ್ಷಣದ ಅಭಿವೃದ್ಧಿಗಾಗಿ ೧೪ ಆಶ್ರಮ ಶಾಲೆಗಳನ್ನ ಆರು ವಸತಿ ಗೃಹಗಳನ್ನ ಸ್ಥಾಪಿಸಲಾಗಿದ್ದು ಸುಮಾರು ೨೯೦೦ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟ, ಬಟ್ಟೆ, ಮತ್ತು ಪುಸ್ತಕ ಸಲಕರಣೆಗಳನ್ನ ಒದಗಿಸುವುದರೊಂದಿಗೆ ಸುಮಾರು ೨೦೦೦ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನದ ಸೌಲಭ್ಯವನ್ನ ವಿಸ್ತರಿಸಲಾಗಿದೆ.

ಎರಡನೆ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಕರ್ನಾಟಕದ ಬುಡಕಟ್ಟು ಜನರಲ್ಲಿ ಶಿಕ್ಷಣದ ಅರಿವನ್ನ ಹೆಚ್ಚಿಸಲು ೯.೯೮ ಲಕ್ಷಗಳನ್ನ ಖರ್ಚು ಮಾಡುವುದರ ಮುಖಾಂತರ ಆಶ್ರಮ ಶಾಲೆಗಳು ಮತ್ತು ಮೂರು ವಸತಿ ನಿಲಯಗಳನ್ನ ನಿರ್ಮಿಸಲಾಗಿದೆ. ೨೪ ಹೊಸ ಶಾಲೆಗಳು ಮತ್ತು ವಸತಿ ನಿಲಯಗಳನ್ನ ಕಟ್ಟಿಸಲಾಗಿದ್ದು ಸುಮಾರು ೬೦೦೦ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ಪುಸ್ತಕಗಳು ಮತ್ತು ಇತರೆ ಪರಿಕರಗಳನ್ನೊದಗಿಸಲಾಗಿದೆ. ೧೨.೦೩ ಲಕ್ಷಗಳಲ್ಲಿ ಸುಮಾರು ೯.೮೬ ಲಕ್ಷ ರೂ.ಗಳನ್ನ ಈ ಕಾರ್ಯಗಳಿಗಾಗಿ ವಾರ್ಷಿಕ ಯೋಜನೆಗಳಲ್ಲಿ ಖರ್ಚುಮಾಡಲಾಗಿದ್ದು ನಾಲ್ಕು ನರ್ಸರಿ ಶಾಲೆಗಳು, ಎರಡು ಆಶ್ರಮ ಶಾಲೆಗಳನ್ನ

ತೆರೆಯುವುದರೊಂದಿಗೆ ಸುಮಾರು ೯೩೦೦ ಮಕ್ಕಳಿಗೆ ಬಟ್ಟೆ ಮತ್ತು ಪುಸ್ತಕ ಪರಿಕರಗಳನ್ನ ನೀಡಲಾಗಿದೆ. ೧,೩೪೩ ವಿಧ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿಧ್ಯಾರ್ಥಿ ವೇತನವನ್ನ ನೀಡಲಾಗಿದೆ.

ಮೂರನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ನಾಲ್ಕು ನರ್ಸರಿ ಶಾಲೆಗಳು, ಎರಡು ಅಶ್ರಮ ಶಾಲೆಗಳನ್ನ ತೆರೆಯುವುದರೊಂದಿಗೆ ಸುಮಾರು ೯೩೦೦ ಮಕ್ಕಳಿಗೆ ಬಟ್ಟೆ ಮತ್ತು ಪರಿಕರಗಳನ್ನ, ೧೩೪೩ ಮಕ್ಕಳಿಗೆ ವಿಧ್ಯಾರ್ಥಿ ವೇತನವನ್ನ ನೀಡಲಾಗಿದೆ.

೧೯೭೩-೭೪ರಲ್ಲಿ ೩೨ರಷ್ಟಿದ್ದ ನರ್ಸರಿ ಮತ್ತು ಮಹಿಳಾ ಕಲ್ಯಾಣ ಕೇಂದ್ರಗಳು ೧೯೮೧-೮೨ರ ವೇಳೆಗೆ ೯೫ ರಷ್ಟಾದವು, ಈ ಅವಧಿಯಲ್ಲಿ ೧೧.೯೮ ಲಕ್ಷಗಳನ್ನ ಖರ್ಚುಮಾಡಲಾಗಿದೆ. ೧೭ ಸರ್ಕಾರಿ ವಿದ್ಯಾರ್ಥಿ ನಿಲಯಗಳನ್ನ ರೂ.೮.೫೫ ಲಕ್ಷಗಳನ್ನ ನಿರ್ವಹಣೆಗಾಗಿ ಖರ್ಚು ಮಾಡಲಾಗಿದೆ. ರೂ.೨.೩೭ ಲಕ್ಷಗಳನ್ನ ವಸತಿ ನಿಲಯಗಳ ನಿರ್ವಹಣೆ ಅನುದಾನವಾಗಿ ೫ ಖಾಸಗಿ ಸಂಸ್ಥೆಗಳಿಗೆ ನೀಡಲಾಗಿದೆ. ೮೭೯ ವಿದ್ಯಾರ್ಥಿಗಳಿಗೆ ಮೆರಿಟ್ ವಿದ್ಯಾರ್ಥಿ ವೇತನ, ೧೨೭೧೧ ವಿದ್ಯಾರ್ಥಿಗಳಿಗೆ ಮೆಟ್ರಿಕ್‌ಪೂರ್ವ ವಿದ್ಯಾರ್ಥಿ ವೇತನ, ೫೪ ಆಶ್ರಮ ಶಾಲೆಗಳ ನಿರ್ವಹಣೆಗೆ ೨೮.೨೦ ಲಕ್ಷಗಳನ್ನ ಖರ್ಚು ಮಾಡಲಾಗಿದೆ. ೨೦೬೬ ವಿದ್ಯಾರ್ಥಿಗಳಿಗೆ ಕೇಂದ್ರ ಸರ್ಕಾರದ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನವನ್ನ ಈ ಅವಧಿಯಲ್ಲಿ ನೀಡಲಾಗಿದೆ.

೨.೬.ಇ. ವಸತಿ ಆರೋಗ್ಯ ಮತ್ತು ಇತರೆ ಯೋಜನೆಗಳು

ಎರಡನೆ ಪಂಚವಾರ್ಷಿಕ ಯೋಜನೆಯಡಿ ವಸತಿ ಸೌಕರ್ಯವನ್ನ ಕಲ್ಪಿಸಲು ವಸತಿ ಯೋಜನೆಯಡಿ ಸುಮಾರು ೧೦೦ ಕುಟುಂಬಗಳಿಗೆ ವಸತಿಯನ್ನ, ೩೪ ಕುಡಿಯುವ ನೀರಿನ ಬಾವಿಗಳನ್ನ ,೧೧ ಸಮುದಾಯ ಕೇಂದ್ರಗಳನ್ನ, ೧೭ ಸಂಪರ್ಕ ರಸ್ತೆಗಳನ್ನ ರಚಿಸಿ ಬುಡಕಟ್ಟು ಗ್ರಾಮಗಳಿಗೆ ಸಂಪರ್ಕ ಕಲ್ಪಿಸಲಾಗಿದೆ, ಇದೇ ಸಂದರ್ಭದಲ್ಲಿ ಮೂರು ಸಂಚಾರಿ ಆರೋಗ್ಯ ಘಟಕಗಳನ್ನ ಸ್ಥಾಪಿಸಿ ಬುಡಕಟ್ಟು ಜನರನ್ನ ಭಯಾನಕ ರೋಗಗಳಿಂದ ರಕ್ಷಿಸುವ ಕೆಲಸಗಳು ಆರಂಭವಾದವು.

ಮೂರನೆಯ ಪಂಚವಾರ್ಷಿಕ ಯೋಜನೆಯಡಿಯಲ್ಲಿ ವಸತಿ ಯೋಜನೆಗಾಗಿ ರೂ.೧೧.೫೪ ಲಕ್ಷಗಳನ್ನ ಖರ್ಚು ಮಾಡಲಾಗಿದ್ದು ೭೫೦ ಕುಟುಂಬಗಳಿಗೆ ಮನೆಗಳ ನಿರ್ಮಾಣಕ್ಕೆ ಸಹಾಯಧನವನ್ನ ವಿಸ್ತರಿಸಲಾಗಿದೆ, ೫೫ ಕುಡಿಯುವ ನೀರಿನ ಬಾವಿಗಳು, ೧೫ ಶಿಶು ವಿಹಾರಗಳು ಮತ್ತು ಮಹಿಳಾ ಕಲ್ಯಾಣ ಕೇಂದ್ರಗಳನ್ನ ಸ್ಥಾಪಿಸಲಾಯಿತು. ಸುಮಾರು ನಾಲ್ಕು ಮೈಲಿಗಳಷ್ಟು ಸಂಪರ್ಕ ರಸ್ತೆಗಳನ್ನ ನಿರ್ಮಿಸಲಾಯಿತು.

ವಾರ್ಷಿಕ ಯೋಜನೆಗಳಡಿಯಲ್ಲಿ ४೮೯ ಮನೆಗಳ ನಿರ್ಮಾಣಕ್ಕೆ ಸಹಾಯಧನ, ೮ ಕುಡಿಯುವ ನೀರಿನ ಬಾವಿಗಳ ನಿರ್ಮಾಣ, ಒಂದು ಸಂಚಾರಿ ಆರೋಗ್ಯ ಘಟಕ ಹಾಗೂ ವಸತಿಗಳ ನಿರ್ಮಾಣಕ್ಕೆ ಒಂದು ಎಕರೆ ಜಮೀನಿನ ಖರೀದಿಗಾಗಿ ರೂ.೩೫೧ ಲಕ್ಷಗಳನ್ನ ಖರ್ಚುಮಾಡಲಾಗಿದೆ.

೨.೬.ಈ. ಇತರೆ ಯೋಜನೆಗಳು

ಮೂರನೆ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಬುಡಕಟ್ಟು ಕೂಲಿಗಳ ರಕ್ಷಣೆಗಾಗಿ ಅರಣ್ಯ ಕೂಲಿಗಳ ಸಹಕಾರ ಸಂಘಗಳನ್ನ ಆರಂಭಿಸಲಾಯಿತು, ಇದರ ಮುಖ್ಯ ಉದ್ದೇಶ ಅರಣ್ಯ ಕೂಲಿಗಳನ್ನ ಶೋಷಣೆಯಿಂದ ರಕ್ಷಿಸುವುದು, ಮೂಲಭೂತ ಸೌಲಭ್ಯಗಳನ್ನ ಒದಗಿಸುವುದರ

ಮುಖೇನ ಬುಡಕಟ್ಟು ಜನರನ್ನ ಅಭಿವೃದ್ಧಿಪಡಿಸುವುದು. ೧೯೬೭ರಲ್ಲಿ ಪ್ರತಿ ಸಂಘಕ್ಕೆ ರೂ.೪೦,೦೦೦ ಗಳನ್ನ ಅನುದಾನವಾಗಿ ನೀಡಲಾಯಿತು. ಅವುಗಳೆಂದರೆ ಪುತ್ತೂರು ಬುಡಕಟ್ಟು ಸಂಘ (ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು, ಬೆಳ್ತಂಗಡಿ, ಸುಳ್ಯ ತಾಲ್ಲೂಕುಗಳಿಗೆ), ಕುಶಾಲನಗರ ಬುಡಕಟ್ಟು ಸಂಘ (ಸೋಮುವಾರಪೇಟೆ, ಮಡಿಕೇರಿ ಕುಶಾಲನಗರ ತಾಲ್ಲೂಕುಗಳಿಗೆ), ಗುಂಡ್ಲುಪೇಟೆ ಬುಡಕಟ್ಟು ಸಂಘ (ಗುಂಡ್ಲುಪೇಟೆ ಮತ್ತು ನಂಜನಗೂಡು ತಾಲ್ಲೂಕುಗಳಿಗೆ), ಕನಕಪುರ ಬುಡಕಟ್ಟು ಸಂಘ (ಕನಕಪುರ ಮತ್ತು ಆನೇಕಲ್ ತಾಲ್ಲೂಕುಗಳಿಗೆ), ಬಿಳಿಗಿರಿ ರಂಗನ ಬೆಟ್ಟ ಬುಡಕಟ್ಟು ಸಂಘ (ಯಳಂದೂರು ಮತ್ತು ಚಾಮರಾಜನಗರ ತಾಲ್ಲೂಕುಗಳಿಗೆ)

ಈ ಸಂಘಗಳ ಮುಖ್ಯ ಉದ್ದೇಶಗಳು

- ಕಿರು ಅರಣ್ಯ ಉತ್ಪನ್ನಗಳ ಸಂಗ್ರಹಣೆ
- ಮರಗಳ ಬೀಳಿಸುವಿಕೆ,ಮತ್ತು ಸಾಗಾಣಿಕೆಯ ಒಪ್ಪಂದಗಳನ್ನ ತೆಗೆದುಕೊಳ್ಳುವುದು
- ನಶಿಸಿದ ಮರಗಳನ್ನ ಸಂಗ್ರಹಿಸುವುದು
- ಬುಡಕಟ್ಟು ಜನರಿಗೆ ಅವಶ್ಯವಿರುವ ದಿನನಿತ್ಯದ ಸರಕುಗಳ ವ್ಯಾಪಾರ ಕೇಂದ್ರಗಳ ಸ್ಥಾಪನೆ
- ಅರಣ್ಯ ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ಸಾರ್ವಜನಿಕ ಕೆಲಸಗಳಾದ ಬುಡಕಟ್ಟು ವಸತಿ ಯೋಜನೆ, ಅರಣ್ಯಗಳಲ್ಲಿ ಕೆಲಸ ಮಾಡುವ ಒಪ್ಪಂದ ಇತ್ಯಾದಿ.

೧೯೭೩-೭೪ರ ವೇಳೆಗೆ ರಾಜ್ಯದಲ್ಲಿ ಸುಮಾರು ೮ ವಿವಿದೊದ್ದೇಶ ಅರಣ್ಯ ಕೂಲಿಗಳ ಸಹಕಾರ ಸಂಘಗಳು ಕಾರ್ಯನಿರ್ವಹಸುತ್ತಿದ್ದವು. ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ನಂತರ ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳನ್ನ ಬುಡಕಟ್ಟು ಉಪ ಯೋಜನೆಯ ಮಾನದಂಡಗಳಿಗನುಸಾರವಾಗಿ ಜಾರಿಗೋಳಿಸಲಾಗುತ್ತಿದೆ.

೨.೬.೮. ಬುಡಕಟ್ಟು ಉಪಯೋಜನೆಯ ವಲಯಗಳು

ಬುಡಕಟ್ಟು ಉಪ ಯೋಜನೆಯ ಮಾನದಂಡಗಳಲ್ಲಿ ಮೂಲವಾದದು ಬುಡಕಟ್ಟು ಜನರು ಕೇಂದ್ರಿಕೃತವಾಗಿರುವ ಪ್ರದೇಶಗಳನ್ನ ಗುರ್ತಿಸುವುದು ಮತ್ತು ಅಂತಹ ಪ್ರದೇಶಗಳಲ್ಲಿ ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆಗಳನ್ನ ಜಾರಿಗೊಳಿಸುವುದು.

ಕರ್ನಾಟಕದಲ್ಲಿ ಅಂತಹ ಐದು ವಲಯಗಳನ್ನ ಗುರ್ತಿಸಲಾಗಿದ್ದು ಐದು ಜಿಲ್ಲೆಗಳಾದ ಮೈಸೂರು, ಕೊಡಗು, ದಕ್ಷಿಣ ಕನ್ನಡ ಉಡುಪಿ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆಯನ್ನ ಜಾರಿಗೊಳಿಸಲಾಗಿದೆ.ಭಾರತ ಸರ್ಕಾರವು ಬುಡಕಟ್ಟು ಉಪ ಯೋಜನೆಯ ಮಾನದಂಡಗಳನ್ನಾದರಿಸಿ ಅತ್ಯಂತ ಹಿಂದುಳಿದಿರುವ ಪರಿಶಿಷ್ಟ ಬುಡಕಟ್ಟುಗಳನ್ನ ಆದಿವಾಸಿ ಬುಡಕಟ್ಟುಗಳು ಎಂದು ಗುರ್ತಿಸಿದೆ.

ಮಾನದಂಡಗಳು

೧) ಕಿರಿದಾದ, ನಿಶ್ಚಲ ಅಥವಾ ಇಳಿಮುಖವಾಗುತ್ತಿರುವ ಜನಸಂಖ್ಯೆ

೨) ಇತರೆ ವರ್ಗಗಳಿಗಿಂತ ಹಿಂದುಳಿದಿರುವುದು ಮತ್ತು ಏಕಾಂಗಿತನದ ಬದುಕು

೩) ಆದಿಮ ಕೃಷಿ/ಬೇಸಾಯ ಪದ್ಧತಿಯ ಅನುಕರಣೆ

೪) ಕಡಿಮೆ ಸಾಕ್ಷರತಾ ಪ್ರಮಾಣ

ಕರ್ನಾಟಕದಲ್ಲಿ ಆ ರೀತಿ ಗುರ್ತಿಸಲ್ಪಟ್ಟಿರುವ ಪರಿಶಿಷ್ಟ ಬುಡಕಟ್ಟುಗಳೆಂದರೆ ಜೇನುಕುರುಬ ಮತ್ತು ಕೊರಗ ಬುಡಕಟ್ಟುಗಳು.

ಕೊಷ್ಟಕ: ೨.೧೦ ಕರ್ನಾಟಕದ ಆದಿಮ ಬುಡಕಟ್ಟುಗಳ ಜನಸಂಖ್ಯೆ (೧೯೬೧-೨೦೦೧)

ಬುಡಕಟ್ಟು	ವರ್ಷ				
	೧೯೬೧	೧೯೭೧	೧೯೮೧	೧೯೯೧	೨೦೦೧
ಜೇನು ಕುರುಬ	೩೬೨೩	೬೬೫೬	೩೪೭೪೭	೨೯೩೭೧	೨೯೮೨೮
ಕೊರಗ	೬೩೮೨	೭೬೨೦	೧೫೧೪೬	೧೬೩೨೨	೧೬೩೨೨
ಒಟ್ಟು	೧೧,೦೦೫	೧೪೨೭೬	೪೯೮೯೩	೪೫೬೯೩	೪೫೮೯೯

ಆಧಾರ: ಬುಡಕಟ್ಟು ವ್ಯವಹಾರಗಳ ಮಂತ್ರಾಲಯದ ವಾರ್ಷಿಕ ವರದಿ ೨೦೦೭-೦೮

೨.೬.ಅ. ಕರ್ನಾಟಕದಲ್ಲಿ ಬುಡಕಟ್ಟು ಉಪಯೋಜನೆಯ ಜಾರಿ

ಭಾರತ ಸರ್ಕಾರವು ಬುಡಕಟ್ಟು ಉಪಯೋಜನೆಯ ಮಾನದಂಡಗಳಿಗನುಗುಣವಾಗಿ ಬುಡಕಟ್ಟು ಜನಸಂಖ್ಯೆ ರಾಜ್ಯದಲ್ಲಿ ಕೇಂದ್ರಿಕೃತವಾಗಿಲ್ಲದಿದ್ದರೂ ಸಹ ಕೇಂದ್ರ ಸರ್ಕಾರದ ಅನುಮತಿಯನ್ನು ಪಡೆದು ಪ್ರಪ್ರಥಮವಾಗಿ ೧೯೬೩ ರಲ್ಲಿ ಹೆಗ್ಗಡದೇವನಕೋಟೆ, ಮೈಸೂರು, ನಾಗರಹೊಳೆ (ಕೊಡಗು) ಗಳಲ್ಲಿ ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆಯನ್ನ ಜಾರಿಗೆ ತರಲಾಯಿತು. ಕ್ರಮೇಣವಾಗಿ ೧೯೬೩ರಲ್ಲಿ ಮತ್ತೆರಡು ಐಟಿಡಿಪಿ ವಲಯಗಳನ್ನ ಸೊಮವಾರಪೇಟೆ ಮತ್ತು ಕಾರ್ಕಳಗಳಲ್ಲಿ ತೆರೆಯಲಾಯಿತು.

ಬುಡಕಟ್ಟು ಅಭಿವೃದ್ಧಿ ವಲಯಗಳು/ ಕ್ಷೇತ್ರಗಳು ೧೯೭೧ರ ಹಿಂದೆ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ ನಡೆಯುತ್ತಿದ್ದವು. ೧೯೭೧ರಲ್ಲಿ ಈ ಕ್ಷೇತ್ರಗಳನ್ನ ಪರಿಶಿಷ್ಟ ಮತ್ತು ಇತರ ಬುಡಕಟ್ಟು ವಿಶೇಷಾಧಿಕಾರಿಗಳಿಗೆ ವರ್ಗಾಯಿಸಲಾಗಿದೆ ಹಾಗೂ ಯೋಜನೆಗಳನ್ನ ಕಾರ್ಯರೂಪಗೊಳಿಸುವ ಸಂಪೂರ್ಣ ಜವಾಬ್ದಾರಿಯನ್ನ ಅವರಿಗೆ ಹೊರೆಸಲಾಗಿತ್ತು, ಮತ್ತು ಇದರ ಮುಖ್ಯ ಕಛೇರಿಯನ್ನ ಮೈಸೂರು ಜಿಲ್ಲೆಯ ಹುಣಸೂರಿನಲ್ಲಿ ತೆರೆಯಲಾಗಿತ್ತು ೧೯೭೩ರಲ್ಲಿ ವಿಶೇಷಾಧಿಕಾರಿಗಳ ದರ್ಜೆಯನ್ನ ಎರಡನೇ ಶ್ರೇಣಿಯಿಂದ ಒಂದನೆಯ ಶ್ರೇಣಿ ಅಧಿಕಾರಿಯಾಗಿ ಅಧಿಸೂಚನೆಯನ್ನ ಹೊರಡಿಸಲಾಗಿದೆ.

ಬುಡಕಟ್ಟು ಜನರ ಸಮಗ್ರ ಅಭಿವೃದ್ಧಿಯ ಅವಶ್ಯಕತೆಯನ್ನ ಮನಗಂಡು ರಾಜ್ಯದಲ್ಲಿ ಐದನೇ ಪಂಚ ವಾರ್ಷಿಕ ಯೋಜನೆಯ ಅವಧಿಯಿಂದೀಚೆಗೆ ಬುಡಕಟ್ಟು ಉಪ ಯೋಜನೆಯ ರೂಪುರೇಷೆಗಳನ್ನ ನಿರ್ಧರಿಸಲಾಗಿದೆ, ತಾತ್ಕಾಲಿಕ ಬುಡಕಟ್ಟು ಅಭಿವೃದ್ಧಿ ಕ್ಷೇತ್ರಗಳಾದ ಹೆಗ್ಗಡದೇವನಕೋಟೆ, ನಾಗರಹೊಳೆ, ಉಡುಪಿ ಮತ್ತು ಇತರೆ ಕ್ಷೇತ್ರಗಳನ್ನ ಬುಡಕಟ್ಟು ಉಪಯೋಜನೆಯ ವ್ಯಾಪ್ತಿಗೂಳಪಡಿಸಲಾಗಿದೆ. ವಾಸ್ತವಿಕವಾಗಿ ಬುಡಕಟ್ಟು ಉಪ ಯೋಜನೆಯನ್ನ ಕಾರ್ಯಗತಗೊಳಿಸಲು ಆರಂಭಿಸಿದ್ದು ೧೯೭೬-೭೭ರ ನಂತರ, ೧೯೭೪ ರಿಂದ ೧೯೭೮ರ ಅವಧಿಯಲ್ಲಿ ರೂ ೨೮೦.೫೦ ಲಕ್ಷಗಳನ್ನ ಈ ಯೋಜನೆಯಡಿ ಮೀಸಲಿಡಲಾಯಿತಾದರೂ ಕೇವಲ ೯೮.೬೮೪ ಲಕ್ಷಗಳನ್ನ ಮಾತ್ರ ಖರ್ಚು ಮಾಡಲಾಗಿದೆ. ಅಂದು ಬುಡಕಟ್ಟು ಜನರು ಮುಖ್ಯವಾಗಿ ಮೈಸೂರು, ಕೊಡಗು, ದಕ್ಷಿಣ ಕನ್ನಡ, ಚಿಕ್ಕಮಗಳೂರು ಗಳಲ್ಲಿ ಶೇ. ೫೨% ಕೇಂದ್ರಿಕೃತವಾಗಿದ್ದು ಉಳಿದವರು ರಾಜ್ಯಾದ್ಯಂತ ಹಂಚಿ ಹೋಗಿದ್ದರು.

ಬುಡಕಟ್ಟು ಉಪಯೋಜನೆಯಡಿ ಬುಡಕಟ್ಟು ಸಮಗ್ರ ಅಭಿವೃದ್ಧಿ ಯೋಜನೆಗಳನ್ನ ಜಾರಿಗೆ ತರಲಾಯಿತು ಅಂತಹ ವಲಯಗಳೆಂದರೆ ಮೈಸೂರು, ಕೊಡಗು, ದಕ್ಷಿಣ ಕನ್ನಡ,

ಚಿಕ್ಕಮಗಳೂರು ಈ ಯೋಜನೆಯ ಮುಖ್ಯ ಕಛೇರಿಗಳನ್ನ ಹೆಗ್ಗಡದೇವನಕೋಟೆ, ಪೊನ್ನಂಪೇಟೆ, ಉಡುಪಿ, ಪುತ್ತೂರು, ಮೂಡಿಗೆರೆಗಳಲ್ಲಿ ತೆರೆಯಲಾಯಿತು.

ಕೋಷ್ಟಕ: ೨.೧೧ ಬುಡಕಟ್ಟು ಸಮಗ್ರ ಅಭಿವೃದ್ಧಿ ಯೋಜನೆಯ ಕ್ಷೇತ್ರಗಳವಾರು ಬುಡಕಟ್ಟು ಕುಟುಂಬಗಳ ಜನಸಂಖ್ಯೆ (೧೯೭೬)

ಐಟಿಡಿಪಿ ಮುಖ್ಯಕಛೇರಿ	ಬುಡಕಟ್ಟು ಕೇಂದ್ರಿಕೃತ ಕ್ಷೇತ್ರಗಳು	ಕುಟುಂಬಗಳು	ಬುಡಕಟ್ಟು ಜನಸಂಖ್ಯೆ
ಹೆಗ್ಗಡದೇವನಕೋಟೆ	ಅಂದಿನ ಮೈಸೂರು ಜಿಲ್ಲೆ	೫೧೨೫	೨೨೮೯೨
ಪೊನ್ನಂಪೇಟೆ	ಕೊಡಗು ಜಿಲ್ಲೆ	೬೦೬೬	೨೫೯೨೮
ಉಡುಪಿ	ಉಡುಪಿ, ಬೆಳ್ತಂಗಡಿ, ಕಾರ್ಕಳ, ಕುಂದಾಪುರ ತಾಲೂಕುಗಳು	೬೭೫೯	೪೧೬೫೬
ಪುತ್ತೂರು	ಪುತ್ತೂರು,ಸುಳ್ಯ,ಬಂಟ್ವಾಳ ಮತ್ತು ಮಂಗಳೂರು ತಾಲೂಕುಗಳು	೫೨೧೮	೩೧೬೦೨
ಮೂಡಿಗೆರೆ	ಚಿಕ್ಕಮಗಳೂರು ಜಿಲ್ಲೆಯ ಎಲ್ಲಾ ತಾಲೂಕುಗಳು	೧೫೫೫	೭೯೬೫
	ಒಟ್ಟು	೧೩೦೦೭೩	೨೪೭೨೩

ಆಧಾರ : ಕರ್ನಾಟಕ ಗೆಜೆಟಿಯರ್ ಭಾಗ ೧ ಸೂರ್ಯನಾಥ್ ಕಾಮತ್ ೧೯೮೨

ಕರ್ನಾಟಕ ರಾಜ್ಯದಲ್ಲಿ ೧೯೭೭ರಲ್ಲಿ ನವೀಕರಿಸಿದ ಪರಿಶಿಷ್ಟ ಪಂಗಡಗಳ ಪಟ್ಟಿಯಂತೆ ಮುಖ್ಯವಾದ ಬುಡಕಟ್ಟುಗಳೆಂದರೆ, ಸೋಲಿಗ, ಇರುಳಿಗ, ಹಕ್ಕಿಪಿಕ್ಕಿ, ಯರವರು, ಮಲೆಕುಡಿಯ, ಮೇದ, ನಾಯಕ, ಕೊರಗ, ಅಡಿಯ, ಹಸಲರು, ಗೌಡಲು, ಪಾರ್ಧಿ, ಮಲೇರು ಮತ್ತು ಭಿಲ್ಲರು, ಸೋಲಿಗ ಮತ್ತು ಇರುಳಿಗರನ್ನ ಮಂಡ್ಯಜಿಲ್ಲೆಗಳಲ್ಲಿ, ಹಕ್ಕಿಪಿಕ್ಕಿಗಳನ್ನ ಮೈಸೂರು ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಕಾಡುಕುರುಬ, ಜೇನುಕುರುಬ ಮತ್ತು ಬೆಟ್ಟಕುರುಬರು ಮೈಸೂರು,ಕೊಡಗು, ಹಾಸನ, ಚಿತ್ರದುರ್ಗ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ, ಯರವರು ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿ, ಪಾರ್ಧಿಗಳನ್ನ ಬಿಜಾಪುರ, ಧಾರವಾಡ,ಬಳ್ಳಾರಿ ಜಿಲ್ಲೆಗಳಲ್ಲಿ, ಗೌಡಲು, ಮಲೇರು ಮತ್ತು ಹಸಲರನ್ನ ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕಾಣಬಹುದಾಗಿದೆ.

ಕೋಷ್ಟಕ: ೨.೧೨ ಬುಡಕಟ್ಟು ಸಮಗ್ರ ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿಯ ಆದಿಮ ಬುಡಕಟ್ಟುಗಳ ಜನಸಂಖ್ಯೆ (೧೯೭೧)

ಕ್ಷೇತ್ರ/ ವಲಯ	ಜೇನು ಕುರುಬ	ಕೊರಗ
ಹೆಗ್ಗಡದೇವನಕೋಟೆ	೭೭೮೫	----
ಪೊನ್ನಂಪೇಟೆ	೬೮೯೭	೬೧
ಉಡುಪಿ	---	೭೭೭೩
ಪುತ್ತೂರು	---	೨೩೨೨
ಮೂಡಿಗೆರೆ	---	೧೫
ಒಟ್ಟು	೧೪೬೮೨	೧೦೧೭೧

ಆಧಾರ : ಕರ್ನಾಟಕ ಗೆಜೆಟಿಯರ್ ಭಾಗ ೧ ಸೂರ್ಯನಾಥ್ ಕಾಮತ್ ೧೯೮೨

೨.೬.ಅ. ತರಬೇತಿ ಮತ್ತು ಸಂಬಂಧಿತ ಯೋಜನೆಗಳು (ಕೇಂದ್ರ ಪುರಸ್ಕೃತ ಯೋಜನೆ)

ಅರ್ಹ ಪರಿಶಿಷ್ಟ ವರ್ಗದ ಅಭ್ಯರ್ಥಿಗಳಿಗೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಪರಿಕ್ಷಾ ಪೂರ್ವ ತರಬೇತಿಯನ್ನು ನೀಡಲಾಗುತ್ತದೆ.ಪ್ರಮುಖವಾಗಿ ಕೇಂದ್ರ ಲೋಕಸೇವಾ ಆಯೋಗದಿಂದ ನಡೆಸಲಾಗುತ್ತಿರುವ ಕೇಂದ್ರ ನಾಗರೀಕ ಸೇವೆಗಳ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ (ಐ.ಎ.ಎಸ್., ಐ.ಪಿ.ಎಸ್) ಹಾಗೂ ಸಿಬ್ಬಂದಿ ನೇಮಕಾತಿ ಆಯೋಗ, ರೈಲ್ವೆ ಹಾಗೂ ಬ್ಯಾಂಕಿಂಗ್ ನೇಮಕಾತಿ ಆಯೋಗಗಳು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಜರಾಗುವ ಪರಿಶಿಷ್ಟ ವರ್ಗದ ಅಭ್ಯರ್ಥಿಗಳಿಗೆ ಸರ್ಕಾರಿ ಅಥವಾ ಪ್ರತಿಷ್ಠಿತ ಖಾಸಗಿ ತರಬೇತಿ ಸಂಸ್ಥೆಗಳ ಮುಖಾಂತರ ಪರೀಕ್ಷಾ ಪೂರ್ವ ತರಬೇತಿಯನ್ನ ನೀಡಲಾಗುತ್ತದೆ.

೨.೬.ಉ. ತರಬೇತಿ

ಈ ಕಾರ್ಯಕ್ರಮದಡಿಯಲ್ಲಿ ಗಿರಿಜನರ ಪ್ರದೇಶಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಇಲಾಖೆಯ ಅಧಿಕಾರಿಗಳು, ಗಿರಿಜನ ಯುವಕರು, ಗಿರಿಜನ ಪ್ರತಿನಿದಿಗಳು ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಸದಸ್ಯರಿಗೆ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಕೆಳಕಾಣುವ ವಿಷಯಗಳಲ್ಲಿ ತರಬೇತಿ ನೀಡಲು ಅಗಿವಿ ಮೈಸೂರು ಇವರ ಮೂಲಕ ಹಮ್ಮಿಕೊಳ್ಳಲಾಗುತಿದೆ.

೧ ಕರ್ನಾಟಕ ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗದವರ ದೌರ್ಜನ್ಯ ಕಾಯ್ದೆ.

೨ ಪರಿಶಿಷ್ಟ ವರ್ಗದವರ ಭೂಮಿ ಅತಿಕ್ರಮಣ ಕಾಯ್ದೆ.

ಸರ್ಕಾರದ ವತಿಯಿಂದ ನಡೆಯುತ್ತಿರುವ ಆಶ್ರಮ ಶಾಲೆ ಹಾಗೂ ವಿದ್ಯಾರ್ಥಿನಿಲಯಗಳು, ಬಾಡಿಗೆ ಕಟ್ಟಡಗದಲ್ಲಿ ನಡೆಯುತ್ತಿದ್ದಲ್ಲಿ ಅಂತಹ ಆಶ್ರಮ ಶಾಲೆ ಮತ್ತು ವಿದ್ಯಾರ್ಥಿನಿಲಯಗಳಿಗೆ ಸ್ವಂತ ಕಟ್ಟಡವನ್ನು ಕಟ್ಟಲು ಸರ್ಕಾರದ ಜಮೀನು ಲಭ್ಯವಿಲ್ಲದಿದ್ದ ಪಕ್ಷದಲ್ಲಿ ಖಾಸಗಿಯವರಿಂದ ನಿವೇಶನವನ್ನು ಖರೀದಿಸಲು ಹಾಗೂ ಇಲಾಖಾ ಕಛೇರಿಗಳಿಗೆ ಸ್ವಂತ ಕಟ್ಟಡವನ್ನು ಕಟ್ಟಲು ಸಹಾ ನಿವೇಶನ ಖರೀದಿಸಲು ಅನುದಾನವನ್ನು ಉಪಯೋಗಿಸಿಕೊಳ್ಳಲಾಗುತ್ತಿದೆ.

೨.೬.ಊ. ವಿದ್ಯಾರ್ಥಿ ನಿಲಯ ಹಾಗೂ ಆಶ್ರಮ ಶಾಲೆಗಳ ಕಟ್ಟಡಗಳ ನಿರ್ಮಾಣ (ಕೇಂ.ಪು.ಯೋ)

ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವ ಇಲಾಖೆಯ ವಿದ್ಯಾರ್ಥಿ ನಿಲಯಗಳು ಹಾಗೂ ಆಶ್ರಮ ಶಾಲೆಗಳಲ್ಲಿ ವಾಸ ಮಾಡುತ್ತಿರುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸ್ವಂತಕಟ್ಟಡಗಳನ್ನು ನಿರ್ಮಿಸುವ ಕೇಂದ್ರ ಪುರಸ್ಕೃತ ಯೋಜನೆಯಾಗಿದೆ.

೨.೬. ಋ. ಗಿರಿಜನ ಉಪಯೋಜನೆ ಅನುದಾನ

ಪರಿಶಿಷ್ಟ ವರ್ಗದವರ ಕಲ್ಯಾಣಕ್ಕಾಗಿ ಗಿರಿಜನ ಉಪಯೋಜನೆಯಡಿ ನೀಡಿದ ಹಣವನ್ನ ಇತರೆ ಇಲಾಖೆಗಳು ಖರ್ಚುಮಾಡದಿದಲ್ಲಿ ಅಂತಹಾ ಇಲಾಖೆಗಳಿಂದ ಕ್ರೂಢಿಕರಿಸಿದ ಅನುದಾನದಿಂದ ಅಧ್ಯತಾವಲಯದ ಕಾರ್ಯಕ್ರಮಗಳಾದ ವಸತಿ, ಶಿಕ್ಷಣ ಮತ್ತು ನೀರಾವರಿ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

೨.೬.ೠ. ಗಿರಿಜನ ಉಪಯೋಜನೆಗೆ ವಿಶೇಷ ಕೇಂದ್ರೀಯ ಸಹಾಯಧನ

ಭಾರತ ಸರ್ಕಾರವು ಬಡತನರೇಖೆಯಿಂದ ಕೆಳಗಿರುವ ಪರಿಶಿಷ್ಟ ವರ್ಗದವರಿಗೆ ಆರ್ಥಿಕ ಉನ್ನತಿ ಕಾರ್ಯಕ್ರಮಗಳ ಅನುಷ್ಠಾನಕ್ಕೆ ವಿಶೇಷ ಕೇಂದ್ರೀಯ ಸಹಾಯಧನವನ್ನ, ಪರಿಶಿಷ್ಟ ವರ್ಗದವರ ಕಾಲೋನಿಗಳಿಗೆ ಮೂಲಭೂತ ಸೌಲಭ್ಯ ಒದಗಿಸಲು ಭಾರತ ಸಂವಿಧಾನ ಅನುಚ್ಛೇಧ ೨೭೫(೧) ರಡಿ ಮತ್ತು ಮೂಲನಿವಾಸಿ ಬುಡಕಟ್ಟು ಜನಾಂಗದ ಸರ್ವತೋಮುಖ ಅಭಿವೃದ್ಧಿಗೆ ಅನುದಾನವನ್ನು ಬಿಡುಗಡೆ ಮಾಡುತ್ತಿದೆ.

೨.೬.ಎ. ಮೊರಾರ್ಜಿ ದೇಸಾಯಿ ವಸತಿಶಾಲೆ

ಪರಿಶಿಷ್ಟ ವರ್ಗದ ಪಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗಾಗಿ ಮೊರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆಗಳನ್ನು ಪ್ರಾರಂಭಿಸಲಾಗುತ್ತಿದೆ.ಹೊಸದಾಗಿ ಮಂಜೂರಾದ ವಸತಿ ಶಾಲೆಗಳ ನಿರ್ವಹಣೆಗಾಗಿ ಮೊದಲ ವರ್ಷದಲ್ಲಿ ಈ ಕಾರ್ಯಕ್ರಮದಡಿ ಹಣ ಬಿಡುಗಡೆ ಮಾಡಲಾಗುತ್ತದೆ.

೨.೬.ಏ. ಹೊಸ ವಿದ್ಯಾರ್ಥಿನಿಲಯಗಳ ಪ್ರಾರಂಬ

ಹೊಸ ಪಿದ್ಯಾರ್ಥಿನಿಲಯಗಳ ಪ್ರಾರಂಭಕ್ಕಾಗಿ ೨೦೦೭-೦೮ ನೇ ಸಾಲಿನ ರಾಜ್ಯವಲಯ ಆಯವ್ಯಯದಲ್ಲಿ ರೂ.೮೦.೦೦ ಲಕ್ಷಗಳನ್ನು ನಿಗದಿಪಡಿಸಲಾಗಿದ್ದು.ಹೊಸದಾಗಿ ಮಂಜೂರಾದ ೧೦ ಪಿದ್ಯಾರ್ಥಿನಿಲಯಗಳ ನಿರ್ವಹಣೆಗಾಗಿ ರೂ.೪.೦೦ ಲಕ್ಷಗಳಂತೆ ೧೦ ಪಿದ್ಯಾರ್ಥಿನಿಲಯಗಳಿಗೆ ರೂ.೪೦.೦೦ ಲಕ್ಷಗಳನ್ನು ಡಿಸೆಂಬರ್ ೨೦೦೭ರ ಅಂತ್ಯಕ್ಕೆ ಬಿಡುಗಡೆ ಮಾಡಲಾಗಿದೆ.

೨.೬.ಐ. ವಸತಿ ಶಾಲೆ ಕಟ್ಟಡಗಳ ನಿರ್ಮಾಣ

ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ವಸತಿ ಹಾಗೂ ಇನ್ನಿತರೆ ಸೌಲಭ್ಯ ಕಲ್ಪಿಸುವ ಸಲುವಾಗಿ ಮೊರಾರ್ಜಿ ದೇಸಾಯಿ ವಸತಿಶಾಲೆಗಳ ಕಟ್ಟಡ ನಿರ್ಮಾಣ ಕೈಗೊಳ್ಳಲು ಈ ಯೋಜನೆಯಡಿ ಅವಕಾಶವಿದೆ.

೨.೬.ಒ. ಆಶ್ರಮಶಾಲೆ ಮತ್ತು ಹಾಸ್ಟೆಲ್‌ಗಳ ನಿರ್ಮಾಣ

ಬುಡಕಟ್ಟು ಮಕ್ಕಳ ಪಿಧ್ಯಾಭ್ಯಾಸಕ್ಕಾಗಿ ರಾಜ್ಯವಲಯದ ಈ ಯೋಜನೆಯಡಿ ಅವಕಾಶ ಕಲ್ಪಿಸಲಾಗಿದೆ ರಾಜ್ಯದಲ್ಲಿ ಇಂದು ಒಟ್ಟಾರೆ ೧೨೫ ಆಶ್ರಮ ಶಾಲೆಗಳಿವೆ.

೨.೬.ಓ. ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಪ್ರತಿಷ್ಠಿತ ವಸತಿ/ವಸತಿಯೇತರ ಶಾಲೆಗಳಲ್ಲಿ ಪ್ರವೇಶಯೋಜನೆ

ಮೈಸೂರಿನ ಶ್ರೀ ರಾಮಕೃಷ್ಣ ವಿದ್ಯಾಶಾಲೆ ಮತ್ತು ಬೆಂಗಳೂರಿನ ಜನಸೇವಾ ವಿದ್ಯಾಕೇಂದ್ರದಂತಹ ಪ್ರತಿಷ್ಠಿತ ವಸತಿ/ವಸತಿಯೇತರ ಶಾಲೆಗಳಿಗೆ ಪ್ರತಿಭಾನ್ವಿತ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಪ್ರತಿಷ್ಠಿತ ವಸತಿ/ವಸತಿಯೇತರ ಶಾಲೆಗಳಲ್ಲಿ ಪ್ರವೇಶ ಕಲ್ಪಿಸಿ ೫ ಹಾಗು ೬ನೇ ತರಗತಿಯಿಂದ ಶೈಕ್ಷಣಿಕ ಶುಲ್ಕ ಹಾಗೂ ಇತರೆ ನಿರ್ವಹಣಾ ವೆಚ್ಚಗಳನ್ನು ಭರಿಸಲಾಗುತ್ತಿದೆ.

೨.೬.ಔ. ಜಿಲ್ಲಾವಲಯ ಕಾರ್ಯಕ್ರಮಗಳು (ಯೋಜನೆ)

೨.೬.ಔ. ೧. ವಿದ್ಯಾರ್ಥಿ ನಿಲಯಗಳು: ವಿದ್ಯಾರ್ಥಿ ವೇತನಗಳು ಹಾಗೂ ಸಹಾಯಧನ

ಕರ್ನಾಟಕದಲ್ಲಿ ಬುಡಕಟ್ಟು ಬಾಲಕರ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಹಾಗೂ ಅವುಗಳ ಮೊದಲನೆಯ ವರ್ಷದ ನಿರ್ವಹಣೆಯನ್ನು ಈ ಯೋಜನೆಯಡಿ ನಿಗಧಿಪಡಿಸಿಲಾಗುತ್ತದೆ, ಜೊತೆಗೆ ಈಗಾಗಲೆ ನಡೆಯುತ್ತಿರುವ ಪಿದ್ಯಾರ್ಥಿನಿಲಯಗಳ ದುರಸ್ತಿ ಹಾಗೂ ಸುಧಾರಣಾ ಕಾರ್ಯಕ್ರಮಗಳನ್ನು ಈ ಅನುದಾನದಲ್ಲಿ ಭರಿಸಲಾಗುತ್ತಿದೆ.

ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ಪಿದ್ಯಾರ್ಥಿನಿಯರ ಸಂಖ್ಯೆ ಗಮನಾರ್ಹವಾಗಿ ಕಡಿಮೆ ಆಗಿರುವುದರಿಂದ, ಈ ಹೆಣ್ಣುಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರೌಢಶಾಲಾ ವ್ಯಾಸಂಗ ಮುಂದುವರೆಸುವಂತೆ ಉತ್ತೇಜಿಸಲು ರೂ. ೫೦೦.೦೦ಗಳ ವಾರ್ಷಿಕ ಹೆಚ್ಚುವರಿ ಶಿಷ್ಯವೇತನವನ್ನ ಹಾಲಿ ನೀಡಲಾಗುತ್ತಿರುವ ರೂ. ೧೦೦.೦೦ಗಳ ವಾರ್ಷಿಕ ಶಿಷ್ಯ ವೇತನದೊಂದಿಗೆ ಸೇರಿಸಿ ಈ ಕಾರ್ಯಕ್ರಮದಡಿಯಲ್ಲಿ ನೀಡಲಾಗುತ್ತಿದೆ.

ಸೌಲಭ್ಯ ವಂಚಿತ ಬಡ ಪರಿಶಿಷ್ಟ ವರ್ಗದ ಮಕ್ಕಳ ಶೈಕ್ಷಣಿಕ ಅನುಕೂಲಕ್ಕಾಗಿ ಆಶ್ರಮ ಶಾಲೆಗಳನ್ನು ಪ್ರಾರಂಭಿಸಲು ಹಾಗೂ ಅವುಗಳ ಮೊದಲನೆ ವರ್ಷದ ನಿರ್ವಹಣಾ ವೆಚ್ಚವನ್ನು ಈ ಯೋಜನೆಯಡಿಯಲ್ಲಿ

ಭರಿಸಲಾಗುತ್ತಿದೆ.ಈಗಾಗಲೆ ನಡೆಯುತ್ತಿರುವ ಆಶ್ರಮ ಶಾಲೆಗಳ ದುರಸ್ತಿ ಹೆಚ್ಚುವರಿ ಕಟ್ಟಡ ಹಾಗೂ ಅವುಗಳ ಸುಧಾರಣೆಯನ್ನು ಈ ಯೋಜನೆಯಡಿಯಲ್ಲಿ ಕೈಗೊಳ್ಳಲಾಗುತ್ತಿದೆ.

ಬುಡಕಟ್ಟು ಜನಾಂಗದ ವಿದ್ಯಾರ್ಥಿಗಳ ಪೋಷಕರು ಅವರ ಮಕ್ಕಳನ್ನು ಶಾಲೆಗಳಿಗೆ ಸೇರಿಸುವಂತೆ ಉತ್ತೇಜನವನ್ನು ನೀಡಲು ಒಬ್ಬ ಪೋಷಕರಿಗೆ ವಾರ್ಷಿಕ ರೂ.೨೦೦ ರಂತೆ ಪ್ರೋತ್ಸಾಹಧನವನ್ನು ಈ ಯೋಜನೆಯಡಿಯಲ್ಲಿ ನೀಡಲಾಗುತ್ತಿದೆ. ಖಾಸಗಿ ಸಂಸ್ಥೆಯವರು ಸರ್ಕಾರದಿಂದ ಮಾನ್ಯತೆಯನ್ನು ಪಡೆದು, ಪರಿಶಿಷ್ಟ ವರ್ಗದ ಮಕ್ಕಳಿಗೆ ವಿದ್ಯಾರ್ಥಿ ನಿಲಯವನ್ನು ಬಾಡಿಗೆ ಕಟ್ಟಡದಲ್ಲಿ ನಡೆಸುತ್ತಿದ್ದಲ್ಲಿ, ಅಂತಹ ಸಂಸ್ಥೆಗಳಿಗೆ ನಿಯಮಾನುಸಾರ ಸ್ವಂತ ಕಟ್ಟಡವನ್ನು–ಕಟ್ಟಿಸಲು ಅನುದಾನವನ್ನು ಈ ಯೋಜನೆಯಲ್ಲಿ ನೀಡಲಾಗುವುದು.ಹಾಗೂ ಹೊಸದಾಗಿ ಸರ್ಕಾರದಿಂದ ಮಾನ್ಯತೆ ಪಡೆಯುವ ಅನುದಾನಿತ ವಿದ್ಯಾರ್ಥಿ ನಿಲಯಗಳಿಗೂ ಸದರಿ ಕಾರ್ಯಕ್ರಮದಡಿ ಅನುದಾನ ಮಂಜೂರು ಮಾಡಲಾಗುತ್ತಿದೆ.

ರಾಜ್ಯದಲ್ಲಿ ಕೃಷಿ ವಿಶ್ವವಿದ್ಯಾನಿಲಯವೂ ಸೇರಿದಂತೆ ಒಟ್ಟು ೯ ವಿಶ್ವವಿದ್ಯಾನಿಲಯಗಳಲ್ಲಿ ವಿವಿಧ ವಿಷಯಗಳಲ್ಲಿ ಸಂಶೋಧನೆಗೆ ತೊಡಗಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಸಂಶೋಧನೆ ಮತ್ತು ಮಾಹಿತಿ ಸಂಗ್ರಹಣೆಗೆ ಬೇಕಾಗಿರುವ ಅನುದಾನವನ್ನು – ಎಂಫಿಲ್ ಕೋರ್ಸ್‌ಗೆ ರೂ.೮೦೦೦.೦೦ ರಂತೆ ಹಾಗೂ ಪಿ.ಎಚ್.ಡಿ ಕೋರ್ಸಿಗೆ ರೂ.೧೦,೦೦೦.೦೦ ರಂತೆ ಈ ಯೋಜನೆಯಡಿಯಲ್ಲಿ ನೀಡಲಾಗುತ್ತಿದೆ.ಇದರ ಜೊತೆಯಲ್ಲಿ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಅಂದರೆ ಐ.ಐ.ಟಿ., ಐ.ಐ.ಎಂ., ಐ.ಐ.ಎಸ್ಸಿ ಮತ್ತು ಎನ್.ಐ.ಐ.ಟಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಒಂದು ಸಾಲಿನ ವಿದ್ಯಾಭ್ಯಾಸದ ವೆಚ್ಚ ರೂ.೫೦,೦೦೦.೦೦ ರಂತೆ ನೀಡಲಾಗುತ್ತಿದೆ.

ಪರಿಶಿಷ್ಟ ವರ್ಗದ ಕಾನೂನು ಪದವೀಧರರಿಗೆ ಆಡಳಿತ ನ್ಯಾಯಧಿಕರಣದಲ್ಲಿ ೪ ವರ್ಷಗಳ ತರಬೇತಿಯನ್ನು ನೀಡಲಾಗುತ್ತಿದೆ. ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಸದರಿ ಯೋಜನೆಯಡಿಯಲ್ಲಿ ಅನುದಾನ ವಿನಿಯೋಗಿಸಲಾಗುತ್ತಿದೆ.

೨.೬.೮. ೨. ನವಚೇತನ ಯೋಜನೆ

ಈ ಯೋಜನೆಯಲ್ಲಿ ಪರಿಶಿಷ್ಟ ವರ್ಗಕ್ಕೆ ಸೇರಿದ ವಿದ್ಯಾವಂತ ನಿರುದ್ಯೋಗಿ ಯುವಕ/ಯುವತಿಯರಿಗೆ ವೃತ್ತಿಪರ ಕೌಶಲ್ಯಗಳನ್ನು ಹೆಚ್ಚಿಸಿ, ವಿವಿಧ ವೃತ್ತಿಗಳಲ್ಲಿ ತರಬೇತಿಯನ್ನು ನೀಡುವ ಮೂಲಕ ಅವರಿಗೆ ಸೂಕ್ತ ಉದ್ಯೋಗ ದೊರಕುವಂತಾಗಲು ಹಾಗು ಅವರು ತರಬೇತಿಯನ್ನು ಪಡೆದು ಸ್ವಯಂ ಉದ್ಯೋಗ ಕೈಗೊಳ್ಳುವಲ್ಲಿ ಸಹಾಯಕವಾಗುವಂತಹ ತರಬೇತಿಯನ್ನು ಸಾರ್ವಜನಿಕ ಸಂಸ್ಥೆ, ಉದ್ದಿಮೆ ಇತರೆ ಸಂಸ್ಥೆಗಳ ಮುಖಾಂತರ ನೀಡಲಾಗುತ್ತಿದೆ.

೨.೬.೮. ೩. ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಮುಂತಾದ ವೃತ್ತಿಪರ ಕಾಲೇಜುಗಳಲ್ಲಿ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಪುಸ್ತಕ ಭಂಡಾರ ಸ್ಥಾಪನೆ (ಕೇಂದ್ರ ಪುರಸ್ಕೃತ ಯೋಜನೆ)

ವೈದ್ಯಕೀಯ, ತಾಂತ್ರಿಕ, ಕೃಷಿ, ಪಶುವೈದ್ಯಕೀಯ, ಕಾನೂನು ಮುಂತಾದ ವೃತ್ತಿಪರ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಅವರ ಪಠ್ಯ ಪುಸ್ತಕದ ಕ್ರಮಕ್ಕೆ ಅನುಗುಣವಾಗಿ ಇರುವ ಪಠ್ಯ ಪುಸ್ತಕಗಳ ಬೆಲೆ ದುಬಾರಿ ಇರುವುದರಿಂದ, ಅವುಗಳನ್ನು ಖರೀದಿಸಲು ಅವರು ಅಶಕ್ತರಾಗಿರುವುದರಿಂದ ಅಂತಹ ವಿದ್ಯಾರ್ಥಿಗಳ ಉಪಯೋಗಕ್ಕೆ ಆಯಾ ಕಾಲೇಜುಗಳಲ್ಲಿ ಅವರ ಪಠ್ಯಪುಸ್ತಕದ ಕ್ರಮಕ್ಕೆ ಸಂಬಂಧಪಟ್ಟ ಪುಸ್ತಕ ಭಂಡಾರವನ್ನು ಸ್ಥಾಪಿಸಲು ಉದ್ದೇಶಿಸಿ.ಈ ಯೋಜನೆಯಡಿಯಲ್ಲಿ ಎರಡು ವಿದ್ಯಾರ್ಥಿಗಳ ಒಂದು ತಂಡಕ್ಕೆ ರೂ.೭,೫೦೦.೦೦ ದರದಲ್ಲಿ ಪಠ್ಯ ಪುಸ್ತಕಗಳನ್ನು ಖರೀದಿಸಿ ಉಪಯೋಗಿಸಲು ನೀಡಲಾಗುವುದು.

೨.೬.೮. ೩. ವಿದ್ಯಾರ್ಥಿ ನಿಲಯ ಹಾಗೂ ಆಶ್ರಮ ಶಾಲೆಗಳ ಕಟ್ಟಡಗಳ ನಿರ್ಮಾಣ

ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವ ಇಲಾಖೆಯ ವಿದ್ಯಾರ್ಥಿನಿಲಯಗಳು ಹಾಗೂ ಆಶ್ರಮ ಶಾಲೆಗಳಲ್ಲಿ ವಾಸ ಮಾಡುತ್ತಿರುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸ್ವಂತ ಕಟ್ಟಡಗಳನ್ನು ನಿರ್ಮಿಸುವುದು ಈ ಯೋಜನೆಯಗುರಿಯಾಗಿದೆ.

೨.೬.೮. ೪. ವಿದ್ಯಾರ್ಥಿ ನಿಲಯಗಳ ನಿರ್ವಹಣೆ

೧ ರಿಂದ ೭ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ, ವಸತಿ ಹಾಗು ಇನ್ನಿತರೆ ಸೌಲಭ್ಯಗಳನ್ನು ಆಶ್ರಮ ಶಾಲೆಗಳಲ್ಲಿ ಒದಗಿಸಲು.೩೦ ಆಶ್ರಮ ಶಾಲೆಗಳ ನಿರ್ವಹಣೆಗಾಗಿ ಹಾಗೂ ಸಿಬ್ಬಂದಿಯವರ ವೇತನಕ್ಕಾಗಿ ಈ ಯೋಜನೆಯಡಿ ಒದಗಿಸಿದ ಅನುದಾನವನ್ನು ಉಪಯೋಗಿಸಿಕೊಳ್ಳಲಾಗುತ್ತಿದೆ ಹಾಗೂ ೫೫ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ನಿರ್ವಹಣೆ ಹಾಗೂ ಸಿಬ್ಬಂದಿ ವೇತನಕ್ಕಾಗಿ ಈ ಕಾರ್ಯಕ್ರಮದಡಿ ಅನುದಾನವನ್ನು ಒದಗಿಸಿಲಾಗಿದೆ. ಸದರಿ ವಿದ್ಯಾರ್ಥಿಗಳಿಗೆ ಈ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ನೀಡಿ ಉಚಿತವಾಗಿ ಊಟ, ವಸತಿ, ಲೇಖನಸಾಮಗ್ರಿಗಳು ಮತ್ತು ಸಮವಸ್ತ್ರ ಮುಂತಾದ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.ಈ ವಿದ್ಯಾರ್ಥಿ ನಿಲಯಗಳಲ್ಲಿ ೫ ರಿಂದ ೧೦ನೇ ತರಗತಿಗಳಲ್ಲಿ ಓದುತ್ತಿರುವ ೫ ಕಿ.ಮೀ.ದೂರದಿಂದ ಬರುವವರಿಗೆ ಮಾತ್ರ ಅವಕಾಶ ನೀಡಲಾಗುತ್ತಿದೆ.

೨.೬.೮. ೫. ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಗಳು

ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ಇತರೆ ವಿದ್ಯಾರ್ಥಿಗಳ ಜೊತೆಯಲ್ಲಿ ಸ್ಪರ್ಧಾತ್ಮಕ ಮನೋಬಾವ ಬೆಳೆಸಿಕೊಂಡು ಹೆಚ್ಚು ಹೆಚ್ಚು ಅಂಕಗಳನ್ನು ಪಡೆಯುವ ಉದ್ದೇಶಕ್ಕಾಗಿ ಉತ್ತೇಜನ ನೀಡಲು ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ ಹಾಗೂ ಅರ್ಹತಾ ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡಲಾಗುತ್ತಿದೆ. ಎಸ್.ಎಸ್.ಎಲ್.ಸಿ., ದ್ವಿತೀಯ ಪಿ.ಯು.ಸಿ., ಪದವಿ, ಸ್ನಾತಕೋತ್ತರ ಪದವಿ ಪರೀಕ್ಷೆಯನ್ನು ಪ್ರಥಮ ಬಾರಿಗೆ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಇಲಾಖಾವತಿಯಿಂದ ನಗದು ಬಹುಮಾನದ ಹಣವನ್ನು ಮಂಜೂರು ಮಾಡಲಾಗುತ್ತಿದೆ.

೨.೬.೮. ೬. ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಊಟ ಮತ್ತು ವಸತಿ ವೆಚ್ಚ ಮಂಜೂರಾತಿ

ಭಾರತ ಸರ್ಕಾರ ನಿಗದಿಪಡಿಸಿರುವ ವಿದ್ಯಾರ್ಥಿ ವೇತನ ದರಕ್ಕಿಂತಲೂ ಆಯಾ ನಿಲಯದ ವಿದ್ಯಾರ್ಥಿಗಳಿಗೆ ಆಹಾರಕ್ಕಾಗಿ ಹೆಚ್ಚಿಗೆ ಖರ್ಚು ಮಾಡಿದ್ದಲ್ಲಿ, ರಾಜ್ಯ ಸರ್ಕಾರದಿಂದ ಹೆಚ್ಚುವರಿ ಊಟ ಮತ್ತು ವಸತಿ ವೆಚ್ಚಕ್ಕಾಗಿ ಅನುದಾನ ನೀಡಲಾಗುತ್ತದೆ.

೨.೬.೮. ೭. ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು

೬ ರಿಂದ ೧೦ನೇ ತರಗತಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಸದರಿ ಶಾಲೆಯಲ್ಲಿ ಪ್ರವೇಶ ನೀಡಿ ಉಚಿತ ಶಿಕ್ಷಣ, ವಸತಿ, ವ್ಯವಸ್ಥೆಯನ್ನು ಕಲ್ಪಿಸಲಾಗುವುದು.

೨.೬.೮. ೮. ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ (ಶೇ. ೧೦೦ ಕೇಂದ್ರ)

ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗೆ ಭಾರತ ಸರ್ಕಾರದಿಂದ ನಿಗದಿ ಮಾಡಿರುವ ದರದಲ್ಲಿ ವಿದ್ಯಾರ್ಥಿ ವೇತನ ಮಂಜೂರು ಮಾಡಲಾಗುತ್ತಿದೆ.

೨.೬.೮. ೯. ಐ.ಟಿ.ಐ./ಐ.ಟಿ.ಸಿ ತರಬೇತಿದಾರರಿಗೆ ಸ್ಟೈಫಂಡ್

ಪರಿಶಿಷ್ಟ ವರ್ಗದ ಯುವಕ/ಯುವತಿಯರಿಗೆ ಉದ್ಯೋಗಾವಕಾಶ ಕಲ್ಪಿಸಲು ಔದ್ಯೋಗಿಕ ಕೇಂದ್ರಗಳಲ್ಲಿ ಬೆರಳಚ್ಚು /ಶೀಘ್ರಲಿಪಿ ಮುಂತಾದ ತರಬೇತಿಗಳಿಗೆ ಶಿಷ್ಯವೇತನ ಮಂಜೂರು ಮಾಡಲಾಗುತ್ತಿದೆ.

೨.೬.೮. ೧೦. ಪರಿಶಿಷ್ಟ ವರ್ಗದವರಿಗೆ ಇತರೆ ರಿಯಾಯಿತಿಗಳು

ಪರಿಶಿಷ್ಟ ವರ್ಗದ ಕಾನೂನು ಪದಪೀಧರರಿಗೆ ಆಡಳಿತ ನ್ಯಾಯಾಧಿಕರಣದಲ್ಲಿ ೪ ವರ್ಷಗಳ ತರಬೇತಿಯನ್ನು ಈ ಯೋಜನೆಯಡಿಯಲ್ಲಿ ನೀಡಲಾಗುತ್ತಿದೆ. ತರಬೇತಿ ಅವಧಿಯಲ್ಲಿ ತರಬೇತಿದಾರರಿಗೆ ಪ್ರತಿ ತಿಂಗಳು ರೂ.೧೦೦೦.೦೦ ರಂತೆ ಶಿಷ್ಯ ವೇತನವನ್ನು ನೀಡಲಾಗುವುದು.ಇದರ ಜೊತೆಯಲ್ಲಿ ಕಾನೂನು ಪುಸ್ತಕಗಳನ್ನು ಖರೀದಿಸಲು ಹಾಗೂ ನ್ಯಾಯವಾದಿ ಸಂಘದಲ್ಲಿ ಹೆಸರನ್ನು ನೊಂದಾಯಿಸಲು ರೂ.೫೦೦೦.೦೦ಗಳ ಅನುದಾನವನ್ನು ನೀಡಲಾಗುತ್ತಿದೆ.

ಪರಿಶಿಷ್ಟ ವರ್ಗದ ನಿರುದ್ಯೋಗಿ ಯುವಕ/ಯುವತಿಯರಿಗೆ ಉದ್ಯೋಗ ಅವಕಾಶ ಕಲ್ಪಿಸಲು ವಿವಿಧ ವೃತ್ತಿಪರ ಕೋರ್ಸುಗಳಲ್ಲಿ ತರಬೇತಿ ನೀಡಲು ಶಿಷ್ಯವೇತನ ಮಂಜೂರು ಮಾಡಲಾಗುತ್ತಿದೆ. ತಾಂತ್ರಿಕ ಮತ್ತು ವೃತ್ತಿ ಶಿಕ್ಷಣ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪ್ರವಾಸವು ಕಡ್ಡಾಯವಾಗಿದ್ದ ಪಕ್ಷದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ರಾಜ್ಯ ಸರ್ಕಾರದ ಯೋಜನೆಯಲ್ಲಿ ಪ್ರತಿಯೊಬ್ಬರಿಗೆ ರೂ. ೧೦೦೦.೦೦ ಗಳಿಗೆ ಮೀರದಂತೆ ಅಧ್ಯಯನ ಪ್ರವಾಸ ಭತ್ಯೆ ಮಂಜೂರು ಮಾಡಲಾಗುತ್ತಿದೆ.

೨.೬.೮. ೧೧. ವಿದ್ಯಾರ್ಥಿ ನಿಲಯಗಳು (ಸೇರ್ಪಡೆ ಮತ್ತು ಮಾರ್ಪಾಡು)

ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಲಯಗಳ ಸಂಖ್ಯಾಬಲವನ್ನು ಹೆಚ್ಚಿಸಿದಲ್ಲಿ ವಿದ್ಯಾರ್ಥಿಗಳಿಗೆ ಸ್ಥಳಾವಕಾಶ ಸಾಕಾಗದಿರುವುದರಿಂದ ಅಂತಹ ನಿಲಯಗಳಲ್ಲಿ ಹೆಚ್ಚುವರಿ ಕೊಠಡಿ, ಊಟದ ಕೋಣೆ ಹಾಗೂ ಶೌಚಾಲಯಗಳನ್ನು ನಿರ್ಮಿಸಲು ಈ ಯೋಜನೆಯಲ್ಲಿ ಕ್ರಮ ತೆಗೆದುಕೊಳ್ಳಲಾಗುತ್ತದೆ.

೨.೬.೮. ೧೨. ರುದ್ರಭೂಮಿಗಾಗಿ ಭೂ ಸ್ವಾಧೀನತೆ

ಪರಿಶಿಷ್ಟ ವರ್ಗದ ಜನರಿಗಾಗಿ ರುದ್ರಭೂಮಿ ಇಲ್ಲದಿದ್ದ ಪಕ್ಷದಲ್ಲಿ ಭೂಮಿ ಖರೀದಿಸಲು ಈ ಯೋಜನೆಯಡಿ ಅವಕಾಶ ಮಾಡಿಕೊಳ್ಳಲಾಗಿದೆ.

೨.೬.೮. ೧೩. ಪರಿಶಿಷ್ಟ ವರ್ಗದ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯಗಳು

ಪರಿಶಿಷ್ಟ ವರ್ಗದವರ ಕಾಲೋನಿಗಳಿಗೆ ಕುಡಿಯುವ ನೀರು ಮತ್ತು ಸಂಪರ್ಕ ರಸ್ತೆ, ಅಭಿವೃದ್ಧಿ ಕಾಮಗಾರಿಗಳನ್ನು ಜಿಲ್ಲಾವಲಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

೨.೬.೮. ೧೪. ಪರಿಶಿಷ್ಟ ವರ್ಗದ ಕುಟುಂಬಗಳಿಗೆ ಸಹಾಯ

ಪರಿಶಿಷ್ಟ ವರ್ಗದ ಕುಟುಂಬಗಳಿಗೆ ಬಡತನ ರೇಖೆಯಿಂದ ಮೇಲೆ ಬರಲು ಸಹಕಾರಿಯಾಗುವಂತೆ ವಿವಿಧ ಅಭಿವೃದ್ಧಿ ಇಲಾಖೆಗಳಾದ ಕೃಷಿ, ತೋಟಗಾರಿಗೆ, ಪಶುಸಂಗೋಪನೆ, ರೇಷ್ಮೆ, ಕೈಗಾರಿಕೆ ಮತ್ತು ವಾಣಿಜ್ಯ ಇತ್ಯಾದಿ ಇಲಾಖೆಗಳ ಮೂಲಕ ಆದಾಯ ಉತ್ಪನ್ನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು.

೨.೬.೮. ೧೫. ಗಿರಿಜನ ಉಪಯೋಜನೆಯಡಿ ವಿಶೇಷ ಕೇಂದ್ರೀಯ ಸಹಾಯಧನ

ಪರಿಶಿಷ್ಟ ವರ್ಗದವರ ಸರ್ವತೋಮುಖ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಕೇಂದ್ರ ಸರ್ಕಾರವು ಮಂಜೂರು ಮಾಡಿರುವ ಈ ಅನುದಾನವನ್ನು ಈ ಯೋಜನಾ ಲೆಕ್ಕ ಶೀರ್ಷಿಕೆಯಡಿ ಉಪಯೋಗಿಸಲಾಗುತ್ತಿದ್ದು. ೨೦೦೭-೦೮ನೇ ಸಾಲಿನಲ್ಲಿ ಈ ಯೋಜನೆಯ ಅನುಷ್ಠಾನಕ್ಕಾಗಿ ರೂ. ೧೬೯೫.೪೧ ಲಕ್ಷಗಳನ್ನು ನೀಡಲಾಗಿದೆ.

೨.೬.೩೦. ಜಿಲ್ಲಾವಲಯ ಕಾರ್ಯಕ್ರಮಗಳು (ಯೋಜನೇತರ)

೨.೬.೩೦.೧. ಮಹಿಳಾ ಕಲ್ಯಾಣ ಕೇಂದ್ರಗಳು

ಪರಿಶಿಷ್ಟ ವರ್ಗದವರ ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲೆ ಶಾಲೆಗೆ ಹೋಗುವ ಅಭ್ಯಾಸ ರೂಢಿಸಲು ಈ ಯೋಜನೆಯನ್ನು ರೂಪಿಸಲಾಗಿದ್ದು. ರಾಜ್ಯದಲ್ಲಿ ಇಂತಹ ೩೮ ನರ್ಸರಿ ಮತ್ತು ಮಹಿಳಾ ಕಲ್ಯಾಣ ಕೇಂದ್ರಗಳಿದ್ದು

೧೮೦೦ ಮಕ್ಕಳಿಗೆ ಈ ಯೋಜನೆಯಡಿ ಸೌಲಭ್ಯ ಒದಗಿಸಲಾಗುತ್ತಿದೆ ಪ್ರತಿ ಕೇಂದ್ರದಲ್ಲಿ ಮಕ್ಕಳ ಮಧ್ಯಾಹ್ನದ ಭೋಜನಕ್ಕಾಗಿ ಪ್ರತಿ ವಿದ್ಯಾರ್ಥಿಗೆ ಪ್ರತಿ ದಿನಕ್ಕೆ ರೂ. ೧.೦೦ ರಂತೆ ನಿಗಧಿಪಡಿಸಲಾಗಿದ್ದು ವರ್ಷಕ್ಕೆ ಒಬ್ಬ ವಿದ್ಯಾರ್ಥಿಗೆ ೨ ಜೊತೆ ಸಮವಸ್ತ್ರವನ್ನು ನೀಡಲಾಗುತ್ತಿದೆ.

೨.೬.೫೦.೨. ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ

ಭಾರತ ಸರ್ಕಾರ ರೂಪಿಸಿರುವ ನಿಯಮಾವಳಿಗನುಗುಣವಾಗಿ ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಈ ಯೋಜನೆಯಡಿ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಮಂಜೂರು ಮಾಡಲಾಗುತ್ತದೆ.

೨.೬.೫೦.೩. ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ನಿರ್ವಹಣೆ

ಸಾಮಾನ್ಯವಾಗಿ ದೂರದ ಹಳ್ಳಿಗಳಿಂದ ಬಂದು ಶಾಲೆಗಳಲ್ಲಿ ವಿದ್ಯಾಭ್ಯಾಸ ಮುಂದುವರಿಸಲು ಸಾಧ್ಯವಿಲ್ಲದಂತಹ ಪರಿಶಿಷ್ಟ ವರ್ಗದ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಈ ವಿದ್ಯಾರ್ಥಿ ನಿಲಯಗಳಲ್ಲಿ ಉಚಿತವಾಗಿ ಊಟ, ವಸತಿ ಒದಗಿಸುವುದರೊಂದಿಗೆ ಶಿಕ್ಷಣಕ್ಕೆ ಪೂರಕವಾಗಿ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.ಈ ವಿದ್ಯಾರ್ಥಿ ನಿಲಯಗಳಲ್ಲಿ ೫ ರಿಂದ ೧೦ನೇ ತರಗತಿಗಳಲ್ಲಿ ಓದುತ್ತಿರುವ ೫ ಕಿ.ಮೀ.ಗೂ ದೂರದಿಂದ ಬರುವವರಿಗೆ ಮಾತ್ರ ಅವಕಾಶ ನೀಡಲಾಗುತ್ತಿದೆ.

೨.೬.೫೦.೪. ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ

ಮೆಟ್ರಿಕ್ ಪೂರ್ವ ತರಗತಿಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳವ್ಯಾಸಂಗ ಪ್ರೋತ್ಸಾಹಿಸಲು ೧ ರಿಂದ ೭ನೇ ತರಗತಿ ವಿದ್ಯಾರ್ಥಿಗಳಿಗೆ ವಾರ್ಷಿಕ ತಲಾ ರೂ.೭೫.೦೦ ಹಾಗೂ ೮ ರಿಂದ ೧೦ನೇ ತರಗತಿ ವಿದ್ಯಾರ್ಥಿಗಳಿಗೆ ತಲಾ ರೂ.೧೦೦.೦೦ ರಂತೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡಲಾಗುತ್ತಿದೆ.

೨.೬.೫೦.೫. ಖಾಸಗಿ ವಿದ್ಯಾರ್ಥಿ ನಿಲಯಗಳಿಗೆ ಸಹಾಯಧನ

ವಿದ್ಯಾರ್ಥಿ ನಿಲಯಗಳನ್ನು ನಡೆಸುವ ಸ್ವಯಂ ಸೇವಾ ಸಂಸ್ಥೆಗಳಿಗೆ ಉತ್ತೇಜನ ನೀಡಲು ಖಾಸಗಿ ವಿದ್ಯಾರ್ಥಿ ನಿಲಯಗಳಿಗೆ ಧನ ಸಹಾಯ ನೀಡಲಾಗುತ್ತದೆ.ರಾಜ್ಯದಲ್ಲಿರುವ ಒಟ್ಟು ೩೦ ಅನುದಾನಿತ ವಿದ್ಯಾರ್ಥಿನಿಲಯಗಳಿದ್ದು, ಇದರಲ್ಲಿ ೧೪೪೮ ವಿದ್ಯಾರ್ಥಿಗಳು ಪ್ರಯೋಜನ ಪಡೆಯುತ್ತಿದ್ದಾರೆ.ಭೋಜನ ವೆಚ್ಚಕ್ಕಾಗಿ ಪ್ರತಿ ವಿದ್ಯಾರ್ಥಿಗೆ ಪ್ರತಿ ತಿಂಗಳಿಗೆ ರೂ.೩೫೦.೦೦ ರಂತೆ ಅನುದಾನ ನೀಡಲಾಗುತ್ತಿದೆ.

೨.೬.೫೦.೬. ಗಿರಿಜನ ಪ್ರದೇಶ ಉಪ ಯೋಜನೆಗಳ ನಿರ್ವಹಣೆ

ರಾಜ್ಯದ ಮೈಸೂರು, ಉಡುಪಿ, ದಕ್ಷಿಣ ಕನ್ನಡ, ಕೊಡಗು ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ ಕಾರ್ಯಾಲಯಗಳು ಕಾರ್ಯನಿರ್ವಹಿಸುತ್ತಿದ್ದು. ಸದರೀ ಕಾರ್ಯಾಲಯಗಳ ನಿರ್ವಹಣೆ ವೆಚ್ಚ, ಅಧಿಕಾರಿ ಸಿಬ್ಬಂದಿ ವೇತನ ವೆಚ್ಚಗಳನ್ನು ಈ ಕಾರ್ಯಕ್ರಮದಡಿ ಒದಗಿಸಿ ಅನುದಾನದಲ್ಲಿ ಭರಿಸಲಾಗುತ್ತಿದೆ.

೨.೬.೫೦.೭. ಗಿರಿಜನ ಉಪ ಯೋಜನೆ

ಪರಿಶಿಷ್ಟ ವರ್ಗದವರ ಸರ್ವತೋಮುಖ ಅಭಿವೃದ್ಧಿಗಾಗಿ ಗಿರಿಜನ ಉಪ ಯೋಜನೆಯನ್ನು ರಾಜ್ಯದಲ್ಲಿ ೧೯೭೬-೭೭ರಿಂದ ಪ್ರಾರಂಭಿಸಲಾಗಿದೆ. ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆಯು ಮೈಸೂರು, ಚಾಮರಾಜನಗರ, ಚಿಕ್ಕಮಗಳೂರು, ಕೊಡಗು, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ೧೯೯೨ ರಿಂದ ಗಿರಿಜನ ಉಪಯೋಜನೆಯ ಕಾರ್ಯಕ್ರಮಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸಲಾಗಿದೆ.

ರಾಜ್ಯದ ಗಿರಿಜನ ಉಪಯೋಜನೆಯ ಧ್ಯೇಯೋದ್ದೇಶಗಳು

- ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಪ್ರದೇಶಗಳು ಹಾಗೂ ಇತರೆ ಪ್ರದೇಶಗಳಲ್ಲಿರುವ ಪರಿಶಿಷ್ಟ ವರ್ಗದ ಕುಟುಂಬಗಳನ್ನು ಬಡತನರೇಖೆಯಿಂದ ಮೇಲೆ ತರಲು ಸಹಕಾರಿಯಾಗುವಂತಹ ಸವಲತ್ತುಗಳನ್ನು ಒದಗಿಸುವುದು.
- ಪರಿಶಿಷ್ಟ ವರ್ಗದವರ ಕಲೆ ಮತ್ತು ಸಂಸ್ಕೃತಿಗಳನ್ನು ಕಾಪಾಡಲು ಸಹಕಾರಿಯಾಗುವಂತಹ ನೀತಿ ನಿಯಮಗಳನ್ನು ಜಾರಿಗೊಳಿಸುವುದು.
- ಪರಿಶಿಷ್ಟ ವರ್ಗದ ಕಾಲೋನಿ/ಹಾಡಿಗಳಿಗೆ ಕನಿಷ್ಟ ಮೂಲಭೂತ ಸೌಲಭ್ಯ ಒದಗಿಸುವುದು.
- ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನವನ್ನು ತೀವ್ರಗೊಳಿಸುವುದು ಮತ್ತು ಆ ದಿಸೆಯಲ್ಲಿ ಎದುರಾಗುವ ತೊಡಕುಗಳನ್ನು ನಿವಾರಿಸುವುದು.
- ಪರಿಶಿಷ್ಟ ವರ್ಗದವರ ಅಭಿವೃದ್ಧಿಗಾಗಿ ಆರ್ಥಿಕ ಸೌಲಭ್ಯಗಳು, ಶೈಕ್ಷಣಿಕ ಕಾರ್ಯಕ್ರಮಗಳು, ವಸತಿ, ಕುಡಿಯುವ ನೀರು, ಕಾಲೋನಿಗಳಿಗೆ ವಿದ್ಯುತ್ ಸಂಪ ರ್ಕ, ರಸ್ತೆ, ಚರಂಡಿ ಕಾಮಗಾರಿಗಳು, ಆರೋಗ್ಯ ಕೇಂದ್ರ ಇತ್ಯಾದಿ ಸೌಲಭ್ಯಗಳನ್ನು ಗಿರಿಜನ ಉಪ ಯೋಜನೆಯಡಿ ಒದಗಿಸಲಾಗುತ್ತದೆ.

ಕೆಳಕಾಣುವ ಅಭಿವೃದ್ಧಿ ಇಲಾಖೆ/ನಿಗಮ/ಮಂಡಳಿಗಳ ಮೂಲಕ ಗಿರಿಜನ ಉಪಯೋಜನೆ ಕಾರ್ಯಕ್ರಮಗಳನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸುತ್ತಿವೆ.

ಕೃಷಿ ಮತ್ತು ಭೂಸಾರ ಸಂರಕ್ಷಣ, ತೋಟಗಾರಿಕೆ, ಪಶುಸಂಗೋಪನ, ಅರಣ್ಯ, ಸಹಕಾರ, ಪ್ರದೇಶಾಭಿವೃದ್ಧಿ – ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು (ಎಸ್.ಜಿ.ಎಸ್.ವೈ), ಸಣ್ಣ ನೀರಾವರಿ (ಮೇಲ್ಮೈ ಜಲ), ವಿದ್ಯುತ್ ಸರಬರಾಜು (ಕೆ.ಪಿ.ಟಿ.ಸಿ.ಎಲ್), ಕೈಗಾರಿಕೆ ಮತ್ತು ವಾಣಿಜ್ಯ (ಗ್ರಾಮೀಣ ಮತ್ತು ಸಣ್ಣ ಉದ್ಯಮ), ರೇಷ್ಮೆ ಕೈಮಗ್ಗ ಮತ್ತು ಜವಳಿ, ಕರ್ನಾಟಕ ಔದ್ಯಾಮಿಕ ಪ್ರದೇಶಾಭಿವೃದ್ಧಿ ಮಂಡಳಿ, ಸೀರೆ ಮತ್ತು ಪಂಚೆ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ವಿಶ್ವವಿದ್ಯಾಲಯ ಶಿಕ್ಷಣ, ಕನ್ನಡ ಮತ್ತು ಸಂಸ್ಕೃತಿ, ನಮ್ಮ ಹೊಲ ತಾಂತ್ರಿಕ ಶಿಕ್ಷಣ, ಸಮಗ್ರ ಗ್ರಾಮೀಣ ಇಂಧನ ಯೋಜನೆ, ಕರ್ನಾಟಕ ಪಂಚಾಯತ್ ಅನುದಾನ, ಐರೋಪ್ಯ ಆರ್ಥಿಕ ಸಮುದಾಯ, ಕರ್ನಾಟಕ ಗ್ರಾಮೀಣ ಸೇವಾ ವಿತರಣಾ ಯೋಜನೆ, ಗ್ರಾಮೀಣ ಪ್ರದೇಶಗಳಲ್ಲಿ ನಗರ ಸೌಲಭ್ಯಗಳ ಪೂರೈಕೆ, ಸಂಪ್ರದಾಯವಲ್ಲದ ಇಂಧನ ಮೂಲಗಳು, ಗ್ರಾಮೀಣ ನೀರು ಸರಬರಾಜು, ಕೆರೆಗಳ ಅಭಿವೃದ್ಧಿ, ರಾಷ್ಟ್ರೀಯ ಸಮವಿಕಾಸ ಯೋಜನೆ, ಗ್ರಾಮೀಣ ರಸ್ತೆಗಳು, ಗ್ರಾಮೀಣ ಸಂಪರ್ಕ, ಗ್ರಾಮೀಣ ಉದ್ಯೋಗ, ರಾಷ್ಟ್ರೀಯ ಉದ್ಯೋಗ ಭರವಸೆ ಯೋಜನೆ, ಪಂಚಾಯತ್ ರಾಜ್ ಸಂಸ್ಥೆಗಳಿಗೆ ಅನುದಾನ, ರಸ್ತೆ ಸಾರಿಗೆ, ಪೋಲಿಸ್ ಗೃಹ ನಿರ್ಮಾಣ ನಿಗಮ, ಕೊಳಚೆಗಳ ಸುಧಾರಣೆ, ವಸತಿ, ಸಾಲ ಮತ್ತು ಬಡ್ಡಿ ಸಂದಾಯ–ಆಶ್ರಯ, ಇಂದಿರಾ ಅವಾಜ್ ಯೋಜನೆ, ಪರಿಶಿಷ್ಟ ವರ್ಗಗಳ ಕಲ್ಯಾಣ, ಗಿರಿಜನ ಉಪಯೋಜನೆ ಕ್ರೂಢೀಕರಿಸಿದ ಅನುದಾನ, ಕಾರ್ಮಿಕ (ಉದ್ಯೋಗ ಮತ್ತು ತರಬೇತಿ), ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಲೋಕೋಪಯೋಗಿ ಇಲಾಖೆ– ರಸ್ತೆ ಮತ್ತು ಸೇತುವೆಗಳು, ಪೌಷ್ಟಿಕ ಆಹಾರ, ನೀರು ಸರಬರಾಜು ಮತ್ತು ನೈರ್ಮಲ್ಯ, ನಗರಾಭಿವೃದ್ಧಿ, ಬಾರಿ ಮತ್ತು ಮದ್ಯಮ ನೀರಾವರಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ.

ಯೋಜನೆ ಅನುಷ್ಠಾನ

ಗಿರಿಜನ ಉಪಯೋಜನೆ ಕಾರ್ಯಕ್ರಮಗಳಿಗೆ ವಿವಿಧ ಅಭಿವೃದ್ಧಿ ಇಲಾಖೆಗಳಿಗೆ ರಾಜ್ಯ ಮುಖ್ಯಯೋಜನೆಯಲ್ಲಿ ಬುಡಕಟ್ಟು ಜನಸಂಖ್ಯೆಗೆ ಅನುಗುಣವಾಗಿ ಸಂಪನ್ಮೂಲಗಳನ್ನ ಹಂಚಿಕೆ ಮಾಡಲಾಗುತ್ತದೆ

೨.೬.ಅಂ.೭.ಅ. ಕೃಷಿ ಇಲಾಖೆಯ ಕಾರ್ಯಕ್ರಮಗಳು

ಕೃಷಿ ಇಲಾಖೆಯವತಿಯಿಂದ ಪರಿಶಿಷ್ಟ ವರ್ಗದ ಫಲಾನುಭವಿಗಳಿಗೆ ಕೃಷಿ ಪರಿಕರಗಳು, ಬೀಜಗಳ ವಿತರಣೆ, ಸಸ್ಯ ಸಂರಕ್ಷಣಾ ಉಪಕರಣಗಳೂ, ರಸಗೊಬ್ಬರ ಇತ್ಯಾದಿಗಳನ್ನು ವಿತರಿಸಲಾಗುತ್ತಿವೆ. ಇದಲ್ಲದೆ, ಕೃಷಿ ಉತ್ಪನ್ನಗಳ ಸಂಸ್ಕರಣೆ ಮತ್ತು ಮಾರಾಟಕ್ಕೆ ಉತ್ತೇಜನ ನೀಡಲಾಗುತ್ತಿದೆ.

೨.೬.ಅಂ.೭.ಆ. ತೋಟಗಾರಿಕೆ ಇಲಾಖೆಯ ಕಾರ್ಯಕ್ರಮಗಳು

ತೋಟಗಾರಿಕೆ ಇಲಾಖೆಯುವತಿಯಿಂದ ಪರಿಶಿಷ್ಟ ವರ್ಗದ ಫಲಾನುಭವಿಗಳಿಗೆ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

- ಹಿಂದಿನ ೨ ವರ್ಷಗಳಲ್ಲಿ ನಿರ್ಮಿಸಲಾದ ತೋಟಗಳ ನಿರ್ವಹಣೆ.
- ತೆಂಗು ಮತ್ತು ಹಣ್ಣಿನ ತೋಟಗಳ ನಿರ್ಮಾಣ
- ೨–೪ ತೆಂಗಿನ ಗಿಡಗಳ ವಿತರಣೆ ಮತ್ತು ಹಣ್ಣಿನ ಗಿಡಗಳ ವಿತರಣೆ.

೨.೬.ಅಂ.೭.ಇ. ರೇಷ್ಮೆ ಇಲಾಖೆಯ ಕಾರ್ಯಕ್ರಮಗಳು

ರೇಷ್ಮೆ ಇಲಾಖೆಯುವತಿಯಿಂದ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

- ಹಿಪ್ಪುನೇರಳೆ ಬೇಸಾಯಕ್ಕೆ ಸಹಾಯಧನ
- ರೇರಿಂಗ್ ಹೌಸ್‌ಗಳ ನಿರ್ಮಾಣಕ್ಕೆ ಸಹಾಯಧನ
- ರೇಷ್ಮೆಹುಳುಗಳನ್ನು ಸಾಕುವ ಸಲಕರಣೆಗಳ ಸರಬರಾಜು.

೨.೬.ಅಂ.೭.ಈ. ಪಶುಸಂಗೋಪನೆ ಇಲಾಖೆಯ ಕಾರ್ಯಕ್ರಮಗಳು

ಪಶುಸಂಗೋಪನೆಯು ಒಂದು ಪ್ರಮುಖ ಆದಾಯ ಉತ್ಪನ್ನ ಕಾರ್ಯಕ್ರಮವಾಗಿರುತ್ತದೆ. ಈ ಯೋಜನೆಯಡಿ, ಪರಿಶಿಷ್ಟ ವರ್ಗದ ಫಲಾನುಭವಿಗಳಿಗೆ ನಬಾರ್ಡ್ ದರಗಳಲ್ಲಿ ಶೇಕಡ ೭೫ರ ಸಹಾಯಧನ ಮತ್ತು ಶೇಕಡ ೨೫ರ ಸಾಲದೊಂದಿಗೆ ಮಿಶ್ರತಳಿ ಹಸುಘಟಕ, ಎಮ್ಮೆ ಘಟಕ ಮತ್ತು ಹಂದಿ ಘಟಕಗಳನ್ನು ಪೂರೈಸಲಾಗುತ್ತಿದೆ.

೨.೬.ಅಂ.೭.ಉ. ಅರಣ್ಯ ಇಲಾಖೆಯ ಕಾರ್ಯಕ್ರಮಗಳು

ಈ ಯೋಜನೆಯಡಿ ಪರಿಶಿಷ್ಟ ವರ್ಗದ ಫಲಾನುಭವಿಗಳ ಜಮೀನಿನಲ್ಲಿ ಸಾಮಾಜಿಕ ಭದ್ರತಾ ನೆಡುತೋಪು ಸ್ಥಾಪಿಸುವುದು ಹಾಗೂ ೨ ವರ್ಷಗಳವರೆಗೆ ಪೋಷಣೆ (ಪ್ರತಿ ಫಲಾನುಭವಿಗೆ ರೂ. ೨೭೫೦/- ರಂತೆ ಅರ್ಧ ಹೆಕ್ಟೇರ್) ಈ ಸಾಮಾಜಿಕ ಭದ್ರತಾ ನೆಡುತೋಪಿನ ಪೂರ್ಣ ಫಲವನ್ನು ಫಲಾನುಭವಿಗಳಿಗೆ ನೀಡಲಾಗುವುದಲ್ಲದೆ, ಕುಶಲಕರ್ಮಿಗಳಿಗೆ ಉಚಿತ ಬಿದಿರು–ಬೆತ್ತ ಸರಬರಾಜು ಮಾಡಲಾಗುತ್ತಿದೆ.

೨.೬.ಅಂ.೭.ಊ. ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆಗಳ ಇಲಾಖೆಯ ಕಾರ್ಯಕ್ರಮಗಳು

ಪರಿಶಿಷ್ಟ ವರ್ಗದ ಫಲಾನುಭವಿಗಳ ಆರ್ಥಿಕ ಮಟ್ಟ ಸುಧಾರಣೆಗಾಗಿ ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆ ಇಲಾಖೆಯುವತಿಯಿಂದ ಸ್ವಯಂ ಉದ್ಯೋಗ ಕೈಗೊಳ್ಳಲು ಸಹಕಾರಿಯಾಗುವಂತಹ ಜೇನುಸಾಕಾಣಿಕೆ, ಬಡಗಿತನ, ಬಿದಿರು, ಬೆತ್ತ ಮತ್ತು ಇತರೆ ವೃತ್ತಿಗಳಲ್ಲಿ ತರಬೇತಿ ನೀಡಲಾಗುತ್ತಿದೆ. ಅಲ್ಲದೇ, ವಿವಿಧ ವೃತ್ತಿಗಳನ್ನು ನಿರ್ವಹಿಸುವ ಗ್ರಾಮೀಣ ಪರಿಶಿಷ್ಟ ಪಂಗಡದ ನಿರುದ್ಯೋಗಿ ಯುವಕರಿಗೆ ಉಪಕರಣಗಳ ವಿತರಣೆ ಹಾಗು ಪರಿಶಿಷ್ಟ ಪಂಗಡದವರಿಗೆ ಗುಡಿ ಕೈಗಾರಿಕೆಗಳನು ಸ್ಥಾಪಿಸಲು ಲಿವಿಂಗ್ ಕಮ್ ವರ್ಕ್‌ಶೆಡ್‌ಗಳನ್ನು ನಿರ್ಮಿಸಲು ಘಟಕಕ್ಕೆ ರೂ. ೨೫೦೦೦/- ಗಳ ಸಹಾಯಧನ ಮಂಜೂರಾತಿ ನೀಡಲಾಗುತ್ತಿದೆ.

೨.೬.ಅಂ.೭.ಋ. ಗ್ರಾಮೀಣ ಅಭಿವೃದ್ಧಿ ಇಲಾಖೆಯ ಕಾರ್ಯಕ್ರಮಗಳು

ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯಡಿ ಎಸ್.ಜೆ.ಜಿ.ಎಸ್.ವೈ., ಎಸ್.ಜಿ.ಆರ್.ವೈ ಗ್ರಾಮ ಪಂಚಾಯತ್‌ಗಳಿಗೆ ಅನುದಾನ, ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಅನುದಾನ, ಅಭಿವೃದ್ಧಿ ಅನುದಾನ, ಗ್ರಾಮೀಣ ಇಂಧನ ಯೋಜನೆ ಇತ್ಯಾಧಿಗಳಿಗೆ ಅನುದಾನವನ್ನು ಒದಗಿಸಿ ಪರಿಶಿಷ್ಟ ವರ್ಗದ ಫಲಾನುಭವಿಗಳಿಗೆ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಆರ್ಥಿಕ ಸಹಾಯ, ಉದ್ಯೋಗಾವಕಾಶ ಮತ್ತು ಜೀವನ ಮಟ್ಟ ಸುಧಾರಿಸಲು ನೆರವಾಗುವಂತಹ ಆದಾಯ ಉತ್ಪನ್ನ ಕಾರ್ಯಕ್ರಮಗಳನ್ನು ಜಾರಿಗೆ ತರುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

೨.೬.ಅಂ.೭.ಋ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಾರ್ಯಕ್ರಮಗಳು

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯವತಿಯಿಂದ ಪರಿಶಿಷ್ಟ ವರ್ಗದವರಿಗೆ ಆರೋಗ್ಯ ಸುಧಾರಣೆ ಕಾರ್ಯಕ್ರಮಗಳಾದ ಉಚಿತ ತಪಾಸಣೆ, ಉಪಚಾರ ವೈದ್ಯಕೀಯ ಸೌಲಭ್ಯ ಹಾಗೂ ಗರ್ಭಿಣಿ ಮಹಿಳೆಯರಿಗೆ ಹೆಲ್ತ್ ಕಿಟ್‌ಗಳನ್ನು ಒದಗಿಸಲಾಗುತ್ತಿದೆ.

೨.೬.ಅಂ.೭.ಎ. ವಸತಿ ಇಲಾಖೆಯ ಕಾರ್ಯಕ್ರಮಗಳು

ಆಶ್ರಯ ಯೋಜನೆಯಡಿ ಪರಿಶಿಷ್ಟ ವರ್ಗದ ವಸತಿರಹಿತರಿಗೆ ಉಚಿತವಾಗಿ ನಿವೇಶನಗಳನ್ನು ವಿತರಿಸಲಾಗುತ್ತಿದೆ ಹಾಗೂ ಮನೆಗಳನ್ನು ನಿರ್ಮಿಸುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

೨.೬.ಅಂ.೭.ಏ. ಪೂರಕ ಸೌಲಭ್ಯಗಳು

ಮೇಲ್ಕಂಡ ಮುಖ್ಯ ಆರ್ಥಿಕ ಸೌಲಭ್ಯಗಳಲ್ಲದೇ ಪರಿಶಿಷ್ಟ ವರ್ಗದವರಿಗೆ ಕೆಳಕಂಡ ಇತರ ಪೂರಕ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

ಕೋಷ್ಟಕ:೨.೧೩ ಪೂರಕ ಸೌಲಭ್ಯಗಳು

೧.	ಶಿಕ್ಷಣ ಇಲಾಖೆಯ ಕಾರ್ಯಕ್ರಮಗಳು	ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ಶೈಕ್ಷಣಿಕ ಮಟ್ಟ ಸುಧಾರಿಸಲು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಉಚಿತವಾಗಿ ನೀಡಲಾಗುತ್ತಿದೆ.
೨.	ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ಕಾರ್ಯಕ್ರಮಗಳು	ಪರಿಶಿಷ್ಟ ಪಂಗಡದ ಕಾಲೋನಿಗಳ ವಿದ್ಯುದ್ದೀಕರಣ, ನೀರಾವರಿ ಪಂಪ್ ಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವುದು ಮತ್ತು ಕುಟೀರ ಜ್ಯೋತಿ ಯೋಜನೆಯಡಿ ಪರಿಶಿಷ್ಟ ಪಂಗಡದವರ ಮನೆಗಳಿಗೆ ವಿದ್ಯುತ್ ಸೌಲಭ್ಯ ಒದಗಿಸುವುದು.
೩.	ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ	ಪರಿಶಿಷ್ಟ ವರ್ಗದ ಮಕ್ಕಳಿಗೆ ಪೌಷ್ಟಿಕ ಆಹಾರ ಒದಗಿಸಲು ವಿಶೇಷ ಪೌಷ್ಟಿಕ ಆಹಾರ ವಿತರಣಾ ಕೇಂದ್ರಗಳನ್ನು ಪರಿಶಿಷ್ಟ ವರ್ಗಗಳ ಕಾಲೋನಿಗಳಲ್ಲಿ ನಿರ್ವಹಿಸಲಾಗುತ್ತಿದೆ.
೪.	ಸಂಪರ್ಕ	ಪರಿಶಿಷ್ಟ ವರ್ಗದ ಕಾಲೋನಿಗಳಿಗೆ ಸಂಪರ್ಕ ರಸ್ತೆಗಳನ್ನು ನಿರ್ಮಿಸಲಾಗುತ್ತಿದೆ.

೨.೬.ಅಂ.೮. ಕ್ರೋಢೀಕರಿಸಿದ ಹಣದ ಕಾರ್ಯಕ್ರಮಗಳು

- ಕರ್ನಾಟಕದಲ್ಲಿ ಗಿರಿಜನ ಉಪಯೋಜನೆಯಡಿ ವಿವಿಧ ಅಭಿವೃದ್ಧಿ ಇಲಾಖೆಗಳಿಗೆ ಒದಗಿಸಿರುವ ಅನುದಾನವನ್ನು ಕ್ರೋಢೀಕರಿಸುವ ಪದ್ಧತಿಯನ್ನು ೧೯೮೪-೮೫ ರಿಂದ ಜಾರಿಗೆ ತರಲಾಗಿದೆ. ಅಭಿವೃದ್ಧಿ ಇಲಾಖೆಗಳು ಅನುಷ್ಠಾನಗೊಳಿಸುವ ಗಿರಿಜನ ಉಪಯೋಜನೆ ಕಾರ್ಯಕ್ರಮಗಳ ಸಾಧನೆಯನ್ನು ಗಮನದಲ್ಲಿಟ್ಟುಕೊಂಡು ಪೂರ್ಣ ಅಥವಾ ಭಾಗಶಃ ಅನುದಾನವನ್ನು ಹಿಂದಕ್ಕೆ ಪಡೆದು ಕ್ರೋಢೀಕರಿಸಿ, ಪರಿಶಿಷ್ಟ ವರ್ಗದವರ ಅಭಿವೃದ್ಧಿಗೆ ಹೆಚ್ಚು ಸಹಕಾರಿಯಾಗುವಂತಹ ವಸತಿ, ನೀರಾವರಿ ಮತ್ತು ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳಾದ ವೃತ್ತಿಪರ ಶಿಕ್ಷಣ ಪಡೆಯುತ್ತಿರುವ ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ, ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ ಇತ್ಯಾದಿ ಕಾರ್ಯಕ್ರಮಗಳಿಗೆ ಮರುಹಂಚಿಕೆ ಮಾಡಿ ವಿನಿಯೋಗಿಸಲಾಗುತ್ತಿದೆ.

- ಅಂಬೇಡ್ಕರ್ ವಸತಿ ಯೋಜನೆಯ ಪರಿಷ್ಕೃತ ಮಾರ್ಗಸೂಚಿಯನ್ವಯ ಹೆಚ್ಚು ವಸತಿರಹಿತ ಮತ್ತು ನಿವೇಶನ ರಹಿತ ಪರಿಶಿಷ್ಟ ವರ್ಗದ ಕುಟುಂಬಗಳು ವಾಸಿಸುವ ಪ್ರತಿ ಪಂಚಾಯತ್‌ಗೆ ೨೦ ಮನೆಗಳಂತೆ ೨೦೦ ಪಂಚಾಯತ್‌ಗಳಲ್ಲಿ ೪೦೦೦ ಮನೆಗಳನ್ನು ನಿರ್ಮಾಣ ಮಾಡಲು ಗುರಿ ಹೊಂದಲಾಗಿದ್ದು .

೨೦೦೭-೦೮ನೇ ಸಾಲಿನಲ್ಲಿ ಈ ಯೋಜನೆಗೆ ಗಿರಿಜನ ಉಪಯೋಜನೆಯಡಿ ಕ್ರೂಢೀಕರಿಸಿದ ಹಣದಲ್ಲಿ ರೂ.೧೫೫೦೦ ಲಕ್ಷಗಳನ್ನು ಒದಗಿಸಲಾಗಿದ್ದು, ವಸತಿ ಕಾರ್ಯಕ್ರಮದ ಜೊತೆಗೆ ಮೂಲಭೂತ ಸೌಲಭ್ಯಗಳಾದ ವಿದ್ಯುತ್, ಕುಡಿಯುವ ನೀರು ಮತ್ತು ರಸ್ತೆ ಸಂಪರ್ಕಗಳನ್ನು ಒದಗಿಸಲಾಗುತ್ತಿದೆ.

- ಪರಿಶಿಷ್ಟ ವರ್ಗದವರಿಗೆ ಗಂಗಾಕಲ್ಯಾಣ ಯೋಜನೆಯಡಿ ವೈಯಕ್ತಿಕ ನೀರಾವರಿ ಕೊಳವೆಬಾವಿ ಮತ್ತು ಸಾಮೂಹಿಕ ನೀರಾವರಿ ಕೊಳವೆಬಾವಿ ಯೋಜನೆಗೆ ರೂ. ೭೦೦.೦೦ ಲಕ್ಷಗಳನ್ನು ನಿಗದಿಪಡಿಸಿದೆ.
- ವೃತ್ತಿಪರ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿಗಾಗಿ ರೂ. ೫೦.೦೦ ಲಕ್ಷಗಳನ್ನು ನಿಗದಿಪಡಿಸಿದೆ.
- ಕೌಶಲ್ಯ ಯೋಜನೆಯಡಿ ಪರಿಶಿಷ್ಟ ವರ್ಗದ ಮಹಿಳೆಯರಿಗೆ ವಿವಿಧ ಟ್ರೇಡ್‌ಗಳಲ್ಲಿ ವೃತ್ತಿ ತರಬೇತಿ ನೀಡಲು ರೂ. ೧೦೦.೦೦ ಲಕ್ಷಗಳನ್ನು ನಿಗದಿಪಡಿಸಿದೆ.
- ಪರಿಶಿಷ್ಟ ವರ್ಗದ ನಿರುದ್ಯೋಗಿ ಅಭ್ಯರ್ಥಿಗಳಿಗೆ ವೃತ್ತಿ ತರಬೇತಿ ಕಾರ್ಯಕ್ರಮಗಳಿಗೆ ರೂ. ೧೦೦.೦೦ ಲಕ್ಷಗಳನ್ನು ನಿಗದಿಪಡಿಸಿದೆ.
- ಪರಿಶಿಷ್ಟ ವರ್ಗದ ಕಾನೂನು ಪದವೀಧರರಿಗೆ ಶಿಷ್ಯವೇತನ ಪಾವತಿಸಲು ರೂ. ೧೦.೦೦ ಲಕ್ಷಗಳನ್ನು ನಿಗದಿಪಡಿಸಿದೆ.
- ಪರಿಶಿಷ್ಟ ವರ್ಗದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡಲು ರೂ. ೨೦.೨೫ ಲಕ್ಷಗಳನ್ನು ನಿಗದಿಪಡಿಸಿದೆ.
- ವಿದೇಶಿ ವಿಶ್ವವಿದ್ಯಾನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಸಹಾಯಧನ ಮಂಜೂರು ಮಾಡಲು ರೂ. ೨೫.೦೦ ಲಕ್ಷಗಳನ್ನು ನಿಗದಿಪಡಿಸಿದೆ.
- ಚಾಮರಾಜನಗರ ಜಿಲ್ಲೆಯಲ್ಲಿ ಸೋಲಿಗ ಜನಾಂಗದವರ ಮನೆಗಳ ದುರಸ್ತಿ ಕಾರ್ಯಕ್ರಮಕ್ಕೆ ರೂ. ೧೦೦.೦೦ ಲಕ್ಷಗಳನ್ನು ನಿಗದಿಪಡಿಸಿದೆ.
- ೭ ಮತ್ತು ೧೦ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಆದಿವಾಸಿ ಜನಾಂಗದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡಲು ರೂ. ೨೦.೦೦ ಲಕ್ಷಗಳನ್ನು ನಿಗದಿಪಡಿಸಿದೆ.
- ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಭೋಜನ ಮತ್ತು ವಸತಿ ವೆಚ್ಚ ಭರಿಸಲು ರೂ. ೫೦.೦೯ ಲಕ್ಷಗಳನ್ನು ನಿಗದಿಪಡಿಸಿದೆ.
- ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಲಯ / ಆಶ್ರಮಶಾಲೆಗಳ ಸುಧಾರಣೆಗೆ ರೂ. ೧೦೦.೦೦ ಲಕ್ಷಗಳನ್ನು ನಿಗದಿಪಡಿಸಿದೆ.
- ಪರಿಶಿಷ್ಟ ವರ್ಗದ ಅಭ್ಯರ್ಥಿಗಳಿಗೆ ಪ್ರೋಫೆಷನಲ್ ಪೈಲೆಟ್ ತರಬೇತಿ ಕಾರ್ಯಕ್ರಮಕ್ಕೆ ರೂ. ೯೮.೦೦ ಲಕ್ಷಗಳನ್ನು ನಿಗದಿಪಡಿಸಿದೆ.
- ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ನರ್ಸಿಂಗ್ ತರಬೇತಿ ಕಾರ್ಯಕ್ರಮಕ್ಕೆ ರೂ. ೨೦೦.೦೦ ಲಕ್ಷಗಳನ್ನು ನಿಗದಿಪಡಿಸಿದೆ.
- ಡಾ|| ಡಿ.ಎಂ. ನಂಜುಂಡಪ್ಪ ವರದಿಯನ್ವಯ ಹಿಂದುಳಿದ ಪ್ರದೇಶಗಳಲ್ಲಿ ಕೊರೆಯಲಾದ ಗಂಗಾಕಲ್ಯಾಣ ನೀರಾವರಿ ಕೊಳವೆಬಾವಿಗಳ ವಿದ್ಯುದ್ದೀಕರಣ ಕಾರ್ಯಕ್ರಮಕ್ಕೆ ರೂ. ೨೬೧೫-೨೫ ಲಕ್ಷಗಳನ್ನು ನಿಗದಿಪಡಿಸಲಾಗಿದೆ.
- ೬ ಮತ್ತು ೭ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಯರಿಗೆ ಪ್ರೋತ್ಸಾಹಧನ ಮಂಜೂರು ಮಾಡಲು ರೂ. ೫೦.೦೦ ಲಕ್ಷಗಳನ್ನು ನಿಗದಿಪಡಿಸಲಾಗಿದೆಸಿದೆ.

೨.೬.ಎ. ಗಿರಿಜನ ದೊಡ್ಡ ಪ್ರಮಾಣದ ವಿವಿದೋದ್ದೇಶ ಸಹಕಾರ ಸಂಘಗಳು (ಲ್ಯಾಂಪ್ಸ್)

ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಪ್ರದೇಶಗಳಾದ ಮೈಸೂರು, ಚಾಮರಾಜನಗರ, ದಕ್ಷಿಣ ಕನ್ನಡ, ಕೊಡಗು ಹಾಗೂ ಚಿಕ್ಕಮಗಳೂರು ಜಿಲ್ಲೆ ಹಾಗೂ ಮಂಡ್ಯ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಸಹಕಾರಿತತ್ವದ ಆಧಾರದ ಮೇಲೆ ೨೧ ಗಿರಿಜನ ದೊಡ್ಡ ಪ್ರಮಾಣದ ವಿವಿದೋದ್ದೇಶ ಸಹಕಾರ ಸಂಘಗಳು (ಲ್ಯಾಂಪ್ಸ್) ಕಾರ್ಯನಿರ್ವಹಿಸುತ್ತಿವೆ. ಈ ಸಂಘಗಳಲ್ಲಿ ಪರಿಶಿಷ್ಟ ಪಂಗಡದ ಜನರನ್ನು ಸದಸ್ಯರನ್ನಾಗಿ ನೊಂದಾಯಿಸಿಕೊಂಡು ಅವರಿಗೆ ವಿವಿಧ ಸವಲತ್ತುಗಳನ್ನು ಒದಗಿಸಲಾಗುತ್ತಿದೆ. ಸದಸ್ಯರು ಸಂಗ್ರಹಿಸುವ ಕಿರು ಅರಣ್ಯ ಉತ್ಪನ್ನಗಳನ್ನು ಸ್ಪರ್ಧಾತ್ಮಕ ಬೆಲೆಗೆ ಮಾರಾಟ ಮಾಡಿ ಲಾಭಾಂಶವನ್ನು ಸದಸ್ಯರಿಗೆ ವಿತರಿಸಲಾಗುತ್ತಿದೆ. ಅವಶ್ಯವಿರುವ ಸದಸ್ಯರಿಗೆ ಅಲ್ಪಾವಧಿ ಸಾಲವನ್ನು ಕೂಡ ಈ ಸಂಘಗಳು ನೀಡುತ್ತವೆ. ಇದಲ್ಲದೆ ಜೇನುಸಂಸ್ಕರಣಾ ಘಟಕಗಳನ್ನು ಕೇಂದ್ರದ ನೆರವಿನಡಿ ಪ್ರಾರಂಭಿಸಲಾಗಿದೆ.

೨.೬.ಬಿ. ಕರ್ನಾಟಕ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ

ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮವು ೨೦೦೭ ರಿಂದ ಪ್ರತ್ಯೇಕವಾಗಿ ಕಾರ್ಯಾರಂಭ ಮಾಡಿದೆ. ನಿಗಮದ ಮೂಲ ಉದ್ದೇಶ ರಾಜ್ಯದ ಪರಿಶಿಸ್ಟ ಪಂಗಡಗಳ ಗುಂಪಿನ ಆರ್ಥಿಕ ಅಭಿವೃದ್ಧಿಗಾಗಿ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುವುದಾಗಿದೆ. ನಿಗಮದ ಅಧಿಕೃತ ಷೇರು ಬಂಡವಾಳ ರೂ. ೫೦೦.೦೦ ಲಕ್ಷಗಳು

ಕೋಷ್ಟಕ:೨.೧೪ ಆಯವ್ಯಯದಲ್ಲಿ ಒದಗಿಸಿರುವ ಅನುದಾನದ ವಿವರ (೨೦೦೭-೦೮)

ಕ್ರ. ಸಂ.	ಯೋಜನೆ	ಅಯವ್ಯಯದಲ್ಲಿ ನಿಗದಿಪಡಿಸಿರುವ ಅನುದಾನ		ಒಟ್ಟು (ರೂ. ಲಕ್ಷಗಳಲ್ಲಿ)
		ರಾಜ್ಯ ಸರ್ಕಾರ	ಕೇಂದ್ರ ಸರ್ಕಾರ	
೧.	ಸ್ವಯಂ ಉದ್ಯೋಗ ಯೋಜನೆ	೭೦೦.೦೦	೦.೦೦	೭೦೦.೦೦
೨.	ಗಂಗಾ ಕಲ್ಯಾಣ ಯೋಜನೆ	೩೫೫೦.೦೦	೦.೦೦	೩೫೫೦.೦೦
೩.	ಷೇರು ಬಂಡವಾಳ	೧೫೦.೦೦	೧೪೪	೨೯೪.೦೦
೪.	ಮೈಕ್ರೋ ಕ್ರೆಡಿಟ್	೩೨.೫೦	೦.೦೦	೩೨.೫೦
೫.	ಮೈಕ್ರೋ ಕ್ರೆಡಿಟ್ ಯೋಜನೆ (ಅಂಚಿನ ಹಣ ಕಿರುಸಾಲ)	೩೨.೫೦	೦.೦೦	೩೨.೫೦
	ಒಟ್ಟು	**೪೪೬೫.೦೦**	**೧೪೪.೦೦**	**೪೬೦೯.೦೦**

ಕಾರ್ಯಕ್ರಮಗಳು

ಕರ್ನಾಟಕ ಸರ್ಕಾರವು ೨೦೦೭-೦೮ ನೇ ಸಾಲಿನಲ್ಲಿ ನಿಗಮಕ್ಕೆ ರೂ. ೪೪೬೫.೦೦ ಲಕ್ಷಗಳನ್ನು ಅಯವ್ಯಯದಲ್ಲಿ ಒದಗಿಸಿದ್ದು, ಡಿಸೆಂಬರ್ ೨೦೦೭ ಅಂತ್ಯಕ್ಕೆ ರೂ. ೩೩೬೨.೦೦ ಲಕ್ಷಗಳನ್ನು ಬಿಡುಗಡೆ ಮಾಡಿದೆ, ಅದರಲ್ಲಿ ರೂ. ೨೨೬೮.೦೦ ಲಕ್ಷಗಳನ್ನು ಖರ್ಚುಮಾಡಲಾಗಿದೆ. ನಿಗಮದಿಂದ ೨೦೦೭-೦೮ ನೇ ಸಾಲಿನಲ್ಲಿ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನ ಗೊಳಿಸಲಾಗುತ್ತಿದೆ.

- ಸ್ವಯಂ ಉದ್ಯೋಗ ಯೋಜನೆ
- ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆ
- ನೇರಸಾಲ ಯೋಜನೆ
- ಮೈಕ್ರೋಕ್ರೆಡಿಟ್ ಯೋಜನೆ
- ತರಬೇತಿ ಯೋಜನೆ
- ಭೂ ಒಡೆತನ ಯೋಜನೆ
- ಗಂಗಾ ಕಲ್ಯಾಣ ಯೋಜನೆ

- ಸಾಮೂಹಿಕ ನೀರಾವರಿ (ಏತ ನೀರಾವರಿ) ಯೋಜನೆ
- ವೈಯಕ್ತಿಕ ನೀರಾವರಿ ಯೋಜನೆ

೨.೬. ಎ.೧. ಸ್ವಯಂ ಉದ್ಯೋಗ ಯೋಜನೆ:

ಈ ಯೋಜನೆಯಡಿ ಪರಿಶಿಷ್ಟ ವರ್ಗದ ನಿರುದ್ಯೋಗಿ ಜನರಿಗೆ ಸಣ್ಣ ವ್ಯಾಪಾರ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಚಿಲ್ಲರೆ ಅಂಗಡಿ, ಸೈಕಲ್ ಶಾಪ್, ಹೈನುಗಾರಿಕೆ, ಎತ್ತಿನಗಾಡಿ ಮತ್ತು ಇತರೆ ಆರ್ಥಿಕ ಅಭಿವೃದ್ಧಿ ಚಟುವಟಿಕೆಗಳ ಘಟಕ ವೆಚ್ಚ ರೂ. ೫೦,೦೦೦/- ಒಳಗಿನ ಉದ್ದೇಶಗಳಿಗೆ ಬ್ಯಾಂಕ್ ಮುಖೇನ ಸಾಲ ಸೌಲಭ್ಯ ಒದಗಿಸಲಾಗುತ್ತದೆ. ಸದರಿ ಯೋಜನೆಯಲ್ಲಿ ನಿಗಮದಿಂದ ಘಟಕ ವೆಚ್ಚದ ಶೇ ೫೦ ಭಾಗ ಅಥವಾ ಗರಿಷ್ಟ ರೂ. ೧೦,೦೦೦/- ಗಳು ಸಹಾಯಧನವನ್ನು ಮಂಜೂರು ಮಾಡಲಾಗುತ್ತದೆ. ಉಳಿದ ಭಾಗ ಬ್ಯಾಂಕ್ ಸಾಲವಾಗಿರುತ್ತದೆ.

೨.೬. ಎ.೨. ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆ

ನಿರುದ್ಯೋಗಿ ಪರಿಶಿಷ್ಟ ಪಂಗಡದ ಜನರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಘಟಕ ವೆಚ್ಚ ರೂ. ೫೦,೦೦೦/- ದಿಂದ ರೂ. ೧೦.೦೦ ಲಕ್ಷದವರೆಗೆ ಸಣ್ಣ ಕೈಗಾರಿಕೆ, ಪ್ರಯಾಣಿಕರ / ಸರಕು ಸಾಮಗ್ರಿಗಳ ಸಾಗಣಿಕೆ ವಾಹನ, ಟ್ರ್ಯಾಕ್ಟರ್ ಮತ್ತು ಇತ್ತರೆ ಉದ್ದೇಶಗಳಿಗೆ ಬ್ಯಾಂಕ್ ಸಹಯೋಗದೊಂದಿಗೆ ಬ್ಯಾಂಕ್ ಸಾಲ ಮಂಜೂರಾತಿಗೆ ಅನುಗುಣವಾಗಿ ನಿಗಮದಿಂದ ಶೇ ೨೦ ಭಾಗ ಅಥವಾ ಗರಿಷ್ಟ ರೂ. ೧.೦೦ ಲಕ್ಷದವರೆಗೆ ಅಂಚಿನ ಹಣ ಮಂಜೂರು ಮಾಡಲಾಗುವುದು. ಶೇ ೭೫ ಬಾಗ ಭ್ಯಾಂಕ್ ಸಾಲವಾಗಿದ್ದು, ಉಳಿದ ಶೇ ೫ ಭಾಗ ಫಲಾನುಭವಿಯು ಭರಿಸಬೇಕಿರುತ್ತದೆ ಈ ಯೋಜನೆಯಡಿ ಡಿಸೆಂಬರ್ ೨೦೦೭ ರ ಅಂತ್ಯಕ್ಕೆ ೭೫ ಫಲಾನುಭವಿಗಳಿಗೆ ರೂ. ೪೯.೩೦ ಲಕ್ಷಗಳ ಸಾಲ ಸೌಲಭ್ಯದ ನೆರವನ್ನು ಕಲ್ಪಿಸಲಾಗಿದೆ.

ಹೀಗೆ ಹಲಾವರು ಇಲಾಖೆಗಳು ಬುಡಕಟ್ಟು ಕಲ್ಯಾಣ ಮತ್ತು ಅಭಿವೃದ್ಧಿಗಾಗಿ ಹಲವು ಯೋಜನೆಗಳನ್ನ ಹಾಕಿಕೋಂಡು ಕಾರ್ಯನಿರ್ವಹಿಸುತ್ತಿವೆಯಾದರು ಬುಡಕಟ್ಟುಜನರ ಬದುಕಿನಲ್ಲಿ ನಿರೀಕ್ಷಿತ ಗುರಿಮುಟ್ಟುವಲ್ಲಿ ವಿಫಲವಾಗಿವೆ ಎಂಬುದನ್ನ ಈ ಮಹಾಪ್ರಬಂಧದ ಐದನೆ ಅಧ್ಯಾಯದಲ್ಲಿ ವಿವರವಾಗಿ ವಿಮರ್ಶಿಸಲಾಗಿದೆ (ಸಮಾಜ ಕಲ್ಯಾಣ ಇಲಾಖೆಯ ವಾರ್ಷಿಕ ವರದಿ ೨೦೦೭-೦೮).

ಮೇಲಿನ ಎಲ್ಲಾ ಯೋಜನೆಗಳನ್ನ ಗಮನಿಸಿದಾಗ ತಿಳಿದುಬರುವ ಅಂಶವೆಂದರೆ ಎಲ್ಲಾಯೋಜನೆಗಳನ್ನ ಕಾರ್ಯಗತಗೋಳಿಸವ ಜವಾಬ್ದಾರಿಯು ಸ್ಥಳೀಯ ಸಂಸ್ಥೆಗಳದ್ದಾಗಿದ್ದು ಬಹಳುಷ್ಟು ಯೋಜನೆಗಳು ಪುನರಾವರ್ತನೆಯನ್ನ ಕಾಣಬಹುದಾಗಿದೆ ಕೇಂದ್ರ ಸರ್ಕಾರದಿಂದ ಹಂಚಿಕೆಯಾದ ಸಂಪನ್ಮೂಲಗಳು ಸ್ಥಳೀಯ ಸಂಸ್ಥೆಗಳಿಗೆ ತಲಪುವ ವೇಳೆಗೆ ಸಾಕಷ್ಟು ವಿಳಂಬ ಮತ್ತು ಹಣಕಾಸಿನ ತಿರುವಿಕೆಯಾಗುವುದನ್ನ (Diversion of Funds) ಕಾಣಬಹುದಾಗಿದೆ.

ಆಧಾರಗಳು

Suryanath V Kamath (ed)., (1982), *Karnataka State Gazteer Part 1*, Govt. of Karnataka, Bangalore.

Verma R.C.,(1995) *Indian Tribes Through the Ages*, Publication Division Ministry of Information and Broad Casting, Government of India, Patiala House, New-Delhi.

Vidyarthi L.P., (1968), *Applied Anthropology in India*, Allahabad Kitab Mahal,Alhabad

ವರದಿಗಳು

ಕರ್ನಾಟಕ ಸರ್ಕಾರ ಸಮಾಜ ಕಲ್ಯಾಣ ಇಲಾಖೆಯ ವಾರ್ಷಿಕ ವರದಿ ೨೦೦೭-೦೮
ಭಾರತ ಸರ್ಕಾರ ಬುಡಕಟ್ಟು ವ್ಯವಹಾರಗಳ ಮಂತ್ರಾಲಯ ವಾರ್ಷಿಕ ವರದಿ ೨೦೭-೦೮
ಕರ್ನಾಟಕ ಮಾನವ ಅಭಿವೃದ್ಧಿ ವರದಿ, ೨೦೦೫, ಕರ್ನಾಟಕ ಸರ್ಕಾರ ಯೋಜನಾ ಇಲಾಖೆ

ಅಧ್ಯಾಯ ೩

ಜೇನು ಕುರುಬರು

೩. ಹಿನ್ನೆಲೆ

ಅಧ್ಯಯನಕ್ಕೆ ಆಯ್ದುಕೋಂಡಿರುವ ಎರಡು ಆದಿಮ ಸಮುದಾಯಗಳಲ್ಲಿ ಜೇನು ಕುರುಬ ಸಮುದಾಯವೂ ಒಂದಾಗಿದೆ. ಜೇನು ಕುರುಬರು ಕರ್ನಾಟಕ ರಾಜ್ಯದ ಅತ್ಯಂತ ಹಿಂದುಳಿದಿರುವ ಬುಡಕಟ್ಟುಗಳಲ್ಲಿ ಒಂದಾಗಿದ್ದು ಈ ಬುಡಕಟ್ಟನ್ನು ಕೇಂದ್ರ ಸರ್ಕಾರವು ೭೫ ಆದಿಮ ಬುಡಕಟ್ಟುಗಳಲ್ಲಿ ಒಂದೆಂದು ಗುರ್ತಿಸಿದೆ. ಕೆಲವು ಬರವಣಿಗೆಗಳಲ್ಲಿ 'ಕುರುಬರು' 'ಊರು ಕುರುಬರು,' ಕಾಡು ಕುರುಬರು' 'ಜೇನು ಕುರುಬರು' ಹೆಸರಿನ ಭಿನ್ನತೆಗಳಾಗಿದ್ದು ಪ್ರಾದೇಶಿಕವಾಗಿ ಮಾತ್ರವಷ್ಟೆ ಬಿನ್ನವಾಗಿದ್ದಾರೆ ಮೂಲತಃ ಇವರೆಲ್ಲರೂ ಒಂದೇ ಗುಂಪಿಗೆ ಸೇರಿದವರೆನ್ನಲಾಗಿದೆ(ಲಲಿತ, ಎ ಸಿ:೧೯೯೩:೨೯). ಇದೇ ಅಭಿಪ್ರಾಯವನ್ನು ಲೂಯಿಸ್ ರೈಸ್ ಮತ್ತು ಸರ್ ಡಬ್ಲ್ಯು ಇಲಿಯಟ್‌ರವರು ಕೂಡ ವ್ಯಕ್ತಪಡಿಸಿದ್ದಾರೆ. ಇವರ ಕೃಷಿ ಪದ್ದತಿ, ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕನ್ನ ಅಧ್ಯನಿಸಿದಾಗ ಇವರು ಆದಿಮ ಬುಡಕಟ್ಟೆಂದು ತಿಳಿದುಬರುತ್ತದೆ.

೩.೧. ಜೇನು ಕುರುಬರ ಮೂಲ ಮತ್ತು ಇತಿಹಾಸ

ಜೇನು ಕುರುಬರು ದೈಹಿಕವಾಗಿ ಗಿಡ್ಡರಾಗಿದ್ದು ಹಗಲವಾದ ಹಣೆ, ಗುಂಡಾದ ತಲೆ ಹಗಲವಾದ ಮುಖವನ್ನೊಂದಿದ್ದು ಇವರು ಇತರೆ ಬುಡಕಟ್ಟುಗಳಂತೆ ಮೂಲತಃ ವೆಡ್ಡಾಯಿಡ್ ವಂಶದ ಮೂಲಿಗರೆಂದು ನಂಬಲಾಗಿದೆ. ಅರಣ್ಯವಾಸಿ ಬುಡಕಟ್ಟಾದ ಜೇನು ಕುರುಬರು ಪೂರ್ವ ದ್ರಾವಿಡ ಬುಡಕಟ್ಟಿಗೆ ಸೇರಿದವರಾಗಿದ್ದಾರೆ ಎಂದು ತಿಳಿಸುತ್ತವೆ. ಅಲ್ಲದೆ ಅವರ ಪ್ರಾಚೀನತೆಯನ್ನು ಕುರಿತ ಐತಿಹಾಸಿಕ ವಿಚಾರಗಳು, ಇವರು ಬಹಳ ಪರಾಕ್ರಮಶಾಲಿಯಾಗಿ ಬಹಳ ವರ್ಷಗಳವರೆಗೂ ದಕ್ಷಿಣ ಭಾರತವನ್ನಾಳಿದ ಪಲ್ಲವ ವಂಶಕ್ಕೆ ಸೇರಿದವರು ಎಂದು ತಿಳಿಸುವುದಲ್ಲದೆ ಕಾಲಾನಂತರ ಕೊಂಗ, ಚೋಳ ಮತ್ತು ಚಾಲುಕ್ಯರ ಪ್ರಬಲವಾದ ದಾಳಿಯಿಂದ ೭ನೇ ಅಥವಾ ೮ನೇ ಶತಮಾನದ ಸುಮಾರಿಗೆ ಅವನತಿ ಹೊಂದಿ ಸಮೀಪದ ಗುಡ್ಡಬೆಟ್ಟಗಳಿಂದಾವೃತವಾದ ಮಲಬಾರ್, ನೀಲಗಿರಿ, ಕೊಡಗು, ವೈನಾಡು ಮತ್ತು ಮೈಸೂರು ಪ್ರದೇಶಗಳಲ್ಲಿನ ದಟ್ಟವಾದ ಅರಣ್ಯಗಳನ್ನು ಸೇರಿಕೊಂಡು ಬಹಳ ಕಾಲದವರೆಗೂ ತಲೆಮರೆಸಿಕೊಂಡಿದ್ದು ಕಾಲಕ್ರಮೇಣ ಯಾವುದೇ ಸಂಪರ್ಕವಿಲ್ಲದ ಇವರ ಸಹಜವಾದ ಏಕಾಂಗಿತನ ಅವರನ್ನು ಕಾಡುಜನರನ್ನಾಗಿ ಮಾಡಿ, ತಮ್ಮ ಗತಕಾಲದ ಭವ್ಯ ಸಂಸ್ಕೃತಿಯನ್ನು ಕಳೆದು ಕೊಳ್ಳುವುದಕ್ಕೆ ಕಾರಣವಾಗಿರಬಹುದೆಂದು ತಿಳಿಸುತ್ತವೆ.

ಈ ರೀತಿಯಾಗಿ ಬಹಳ ಹಿಂದೆ ಊರು ಕುರುಬರು ಮತ್ತು ಈ ಕಾಡು ಕುರುಬರು ಒಂದೇ ಆಗಿದ್ದಿರಬಹುದು ಹಾಗೂ ಇತ್ತೀಚಿನ ಇವರುಗಳಲ್ಲಿನ ಭಿನ್ನತೆ ಬಹುಶಃ ಅವರು ವಾಸಿಸುವ ಭೌಗೋಳಿಕ ಪ್ರಬೇಧಗಳಿಂದಾಗಿರಬಹುದೆಂದು ಬಲ್ಲಮೂಲಗಳು ತಿಳಿಸುತ್ತವೆ. ಅವರು ಕನ್ನಡ,

ತಮಿಳು ಮತ್ತು ಮಲೆಯಾಳಂ ಭಾಷೆಗಳ ಮಿಶ್ರಭಾಷೆಯನ್ನ ಮಾತನಾಡುತ್ತಿದ್ದರೆಂದು ನಂಬಲರ್ಹವಾದ ಮೂಲಗಳಿಂದ ತಿಳಿದುಬರುತ್ತದೆ.

ಜೇನು ಕುರುಬರೆ ಹೇಳುವಂತೆ, ಅವರ ಮೂಲ ಪ್ರಪಂಚದ ಆರಂಭದ ದಿನಗಳಲ್ಲಿ ಇಡೀ ಭೂಮಂಡಲ ನೀರಿನಿಂದಾವೃತವಾಗಿದ್ದು ಒಂದು ಬಾಟಲಿಯ ತುದಿಯಷ್ಟು ಜಾಗ ಕಂಡು ಬಂತು. ಆನಂತರ ಒಂದು ಅಂಗೈಯಷ್ಟು ಜಾಗಕಂಡುಬಂದು ಅಲ್ಲಿ ಅಣ್ಣ ತಂಗಿಯರ ಜನನವಾಗಿ ಅವರು ಅಲ್ಲಿಯ ಮಣ್ಣನ್ನ ತೆಗೆದುಕೊಂಡು ಎರಡು ಗೊಂಬೆಗಳನ್ನ ಮಾಡಿ ಅವಕ್ಕೆ ಕೊಂತ ಮತ್ತು ಕೊಂತಿ ಎಂದು ಹೆಸರಿಟ್ಟು ಅವರೆ ತಮ್ಮ ಪೂರ್ವಜರೆಂದು ನಂಬಿದರು. ಅವರು ವಸಂತಕಾಲದಲ್ಲಿ ಜನಿಸಿದ್ದರಿಂದ ಇಂದಿಗೂ ಜೇನು ಕುರುಬರು ಪ್ರತಿವರ್ಷ ಇದೇ ಅವಧಿಯಲ್ಲಿ ಕೊಂತ ಪೂಜೆಯನ್ನ ಮಾಡುತ್ತಾರೆ.

೩.೨. ಭೌಗೋಳಿಕ ಹಂಚಿಕೆ

ಜೇನು ಕುರುಬರು ಕರ್ನಾಟಕದ ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಮುಖ್ಯವಾಗಿ ನಾಗರಹೊಳೆ, ಬಂಡೀಪುರ, ಕಾಕನಕೊಟೆ ಮತ್ತು ಕಬಿನಿ ನದಿಯ ದಡದಲ್ಲಿ ಕಂಡುಬರುತ್ತಾರೆ. ಇವರು ವಾಸ ಮಾಡುವ ಜಿಲ್ಲೆಗಳು, ಕರ್ನಾಟಕ ರಾಜ್ಯದ ಅತ್ಯಂತ ದಕ್ಷಿಣ ಭಾಗಕ್ಕೆ ಇರುವ ಪ್ರದೇಶವಾಗಿದೆ. ಮೈಸೂರು ಜಿಲ್ಲೆಯ ಉತ್ತರಕ್ಕೆ ಹಾಸನ ಮತ್ತು ಮಂಡ್ಯ ಜಿಲ್ಲೆಗಳಿವೆ; ಪೂರ್ವಕ್ಕೆ ಮಂಡ್ಯ ಜಿಲ್ಲೆ ಮತ್ತು ಚಾಮರಾಜನಗರ ಜಿಲ್ಲೆಗಳು, ದಕ್ಷಿಣಕ್ಕೆ ನೀಲಗಿರಿ ಮತ್ತು ಮಲಬಾರ್, ಪಶ್ಚಿಮಕ್ಕೆ ಕೊಡಗು ಜಿಲ್ಲೆಯನ್ನು ಹೊಂದಿದೆ. ಮೈಸೂರು ರಾಜ್ಯದ ಪಶ್ಚಿಮ ಮತ್ತು ಪೂರ್ವ ಘಟ್ಟಗಳಲ್ಲಿ ಸರಹದ್ದಿನಂತೆ ಹರಿಯುವ ಕಾವೇರಿಯ ನದಿ, ಜಿಲ್ಲೆಯ ಉತ್ತರ– ಪಶ್ಚಿಮ ಭಾಗದಿಂದ ಪೂರ್ವಾಭಿಮುಖವಾಗಿ ಹರಿಯುವ ಹೇಮಾವತಿ, ಲೋಕ ಪಾವನಿ, ಉತ್ತರಕ್ಕೆ ಶಿಂಷಾ ಮತ್ತು ಲಕ್ಷ್ಮಣ ತೀರ್ಥ, ಕಬಿನಿ, ದಕ್ಷಿಣಕ್ಕೆ ಹೊನ್ನು ಹೊಳೆ ಅಥವಾ ಸುವರ್ಣಾವತಿ ಹೆಸರುಗಳಲ್ಲಿ ಕವಲುಗಳಾಗಿ ಒಡೆದಿವೆ. ಅರಣ್ಯಾವೃತ ಬಾಗದಲ್ಲಿ ಜೇನುಕುರುಬರನ್ನ ಕಾಣಬಹುದಾಗಿದೆ.

ಬೆಟ್ಟಗಳಿಂದಾವೃತವಾದ ದಟ್ಟವಾದ ಹಚ್ಚಹಸುರಿನ ಕಾಡುಗಳು, ಈ ಜಿಲ್ಲೆಗಳ ಪಶ್ಚಿಮ ಭಾಗ, ದಕ್ಷಿಣ ಭಾಗ ಹಾಗೂ ಪೂರ್ವದ ಕೆಲವು ಪ್ರಾಂತ್ಯಗಳನ್ನು ಅರಣ್ಯಗಳು ಆಕ್ರಮಿಸಿಕೊಂಡಿವೆ. ಅತ್ಯಮೂಲ್ಯವಾದ ಮರಗಳ ಸಂಪತ್ತನ್ನು ಹೊಂದಿರುವ ಈ ಹಸಿರು ಕಾಡುಗಳು ಹುಣಸೂರು ತಾಲ್ಲೂಕಿನ ಪಶ್ಚಿಮದಿಂದ ಪ್ರಾರಂಭಗೊಂಡು ದಕ್ಷಿಣಭಾಗದ ಕೆಲವು ಪ್ರಾಂತ್ಯಗಳಲ್ಲಿ ಹರಡಿಕೊಂಡು ಉತ್ತರಭಾಗಕ್ಕೆ ಬಂದಂತೆಲ್ಲಾ ಕಿರಿದಾಗಿದೆ. ಇವುಗಳಲ್ಲಿ ಹೆಗ್ಗಡದೇವನಕೋಟೆ ತಾಲ್ಲೂಕಿನ ಬಿಸಲವಾಡಿ, ಕಾಕನಕೋಟೆ, ಬೇಗೂರು ಮತ್ತು ಐನೂರು ಮಾರಿಗುಡಿ ದಟ್ಟವಾದ ಹಾಗೂ ಶ್ರೀಮಂತವಾದ ಅರಣ್ಯಗಳೆಂದು ಕರೆಸಿಕೊಂಡಿವೆ. ಇವರು ತಮ್ಮ ಮೂಲದ ಬಗೆಗೆ ಇತರೆ ಬುಡಕಟ್ಟುಗಳಂತೆ ತಾವು ಕೇರಳದ ವೈನಾಡು ಮೂಲದವರೆಂದು ಹೇಳಿಕೊಳ್ಳುವುದಿಲ್ಲ. ಈ ಭಾಗದ ಇತರೆ ಬುಡಕಟ್ಟು ಜನರಿಗಿಂತ ಇವರು ದೈಹಿಕವಾಗಿ ಉದ್ದವಾಗಿದ್ದು ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ, ಹುಣಸೂರು, ಪಿರಿಯಾಪಟ್ಟಣ ಮತ್ತು ನಂಜನಗೂಡು ಹಾಗು ಕೊಡಗು ಜಿಲ್ಲೆಯ ವಿರಾಜಪೇಟೆ, ಸೋಮವಾರಪೇಟೆ ತಾಲ್ಲೂಕುಗಳಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ.

ಜೇನು ಕುರುಬರು ವಾಸಿಸುವ ಪ್ರದೇಶಗಳನ್ನು 'ಹಾಡಿ' ಗಳೆಂದು ಕರೆಯುತ್ತಾರೆ. ಒಂದೊಂದು ಹಾಡಿಯಲ್ಲಿ ಕನಿಷ್ಠಪಕ್ಷ ೨೦ ರಿಂದ ೫೦ ಕುಟುಂಬಗಳು ಕೆಲವೊಮ್ಮೆ ಅದಕ್ಕೂ


ಹೆಚ್ಚಿನ ಸಂಖ್ಯೆಯ ಕುಟುಂಬಗಳು ಕಂಡುಬರುತ್ತವೆ. ಇತ್ತೀಚಿನ ಪುನರ್ವಸತಿಯಾಗಿರುವ ಹಾಡಿಗಳಲ್ಲಿ/ಗ್ರಾಮಗಳಲ್ಲಿ ಹೆಚ್ಚಿನ ಕುಟುಂಬಗಳನ್ನ ಕಾಣಬಹುದಾಗಿದೆ. ಅರಣ್ಯದಂಚಿನ ಹಾಡಿಗಳಲ್ಲಿನ ಜನರು ಕಾಡಿನಲ್ಲಿ ದೊರೆಯುವ ಬಿದಿರು, ಹುಲ್ಲು, ಗರಿಗಳನ್ನು ಬಳಸಿಕೊಂಡು ಮಣ್ಣು, ನೀರು, ನಾರುಗಳನ್ನು ಸೇರಿಸಿಕೊಂಡು ಗುಡಿಸಲುಗಳನ್ನು ನಿರ್ಮಿಸಿಕೊಂಡಿದ್ದಾರೆ. ಜೇನು ಕುರುಬರು "ಹಾಡಿ ಕಟ್ಟುವ ಮುನ್ನ ಆ ಜಾಗದಲ್ಲಿ ಕಲ್ಲುಗಳ ಮೇಲೆ ಕಲ್ಲುಗಳನ್ನು ಪೇರಿಸಿ ಇಟ್ಟು ಪೂಜೆಮಾಡಿ ವಾಪಸ್ಸಾಗುತ್ತಾರೆ, ಮಾರನೆಯ ದಿನದವರೆಗೂ ಪೇರಿಸಿದ ಕಲ್ಲುಗಳು ಹಾಗೇ ಇದ್ದರೆ ಆ ಪ್ರದೇಶ ಗಾಳಿ, ಗರಗಳಿಂದ ಮುಕ್ತವಾದ ಪ್ರದೇಶವೆಂಬುದು ಅವರ ನಂಬಿಕೆ. ಆ ಪೇರಿಸಿದ ಕಲ್ಲುಗಳೇನಾದರೂ ಉರುಳಿ ಬಿದ್ದಿದ್ದರೆ ಅಲ್ಲಿ ಹಾಡಿ ನಿರ್ಮಿಸುವುದು ಅಪಾಯಕರವೆಂಬುದು ಅವರ ನಂಬಿಕೆ(ಲಲಿತ, ಎ ಸಿ: ೧೯೯೩:೧೪).

ಜೇನುಕುರುಬರ ಹಾಡಿಗಳು ಚಿಕ್ಕದಾಗಿ, ಚೊಕ್ಕವಾಗಿದ್ದು. ಸಂಜೆಯ ವೇಳೆ ಗುಡಿಸಲ ಹೊರ ಭಾಗದಲ್ಲಿ ಸಾಮಾನ್ಯವಾಗಿ ಬೆಂಕಿ ಹಾಕಿರುತ್ತಾರೆ. ಇದು ಅವರನ್ನ ಕ್ರೂರ ಪ್ರಾಣಿಗಳಿಂದ ರಕ್ಷಿಸಿಕೋಳ್ಳಲು ಮತ್ತು ಸಂಜೆಯ ವೇಳೆಗೆ ಸ್ನಾನಮಾಡುವ ನೀರನ್ನು ಕಾಯಿಸಲಿಕ್ಕೆ ಮತ್ತು ಚಳಿಗಾಲದಲ್ಲಿ ಚಳಿಯಿಂದ ರಕ್ಷಿಸಿಕೊಳ್ಳಲು ಕೂಡ ಬೆಂಕಿಯನ್ನು ಬಳಸುತ್ತಾರೆ. ಗುಡಿಸಲ ಹೊರ ಭಾಗ ಇನ್ನೊಂದೆಡೆ ಅರೆಯುವ ಕಲ್ಲು, ಕೆಲವೊಮ್ಮೆ ಕೋಳಿಗಳನ್ನ ಕೂಡಿಸಲು ಸಣ್ಣ ಬುಟ್ಟಿಗಳು ಇರುವುದನ್ನು ಗಮನಿಸಬಹುದು. ಗುಡಿಸಲ ಒಳಭಾಗ ಒಂದು ಅಥವಾ ಎರಡು, ಇಲ್ಲವೆ ಮೂರು ಅಂಕಣ ಇರುತ್ತದೆ. ಹಳೆ ಗುಡಿಸಲುಗಳು ಬಿದಿರು ಬಂಬುಗಳನ್ನ ಸೀಳಿ ಕಟ್ಟಿರುತ್ತಾರೆ. ಇವು ಬಹಳ ತಗ್ಗಿನವಾಗಿದ್ದು ಒಳಗೆ ನುಗ್ಗುವುದಕ್ಕೆ ಬಾಗಿಲು ಬಿಟ್ಟರೆ ಬೇರೆ ಯಾವುದೇ ತೆರನಾದ ಕಿಟಕಿಯ ವ್ಯವಸ್ಥೆಯನ್ನು ಹೊಂದಿಲ್ಲ. ಕೆಲವು ಹೊಸದಾಗಿ ಇತ್ತೀಚೆಗೆ ನಿರ್ಮಾಣಗೊಂಡ ಗುಡಿಸಲುಗಳು ಸ್ವಲ್ಪ ಮಟ್ಟಿಗೆ ಎತ್ತರವಾಗಿ ವಿಶಾಲವಾಗಿರುವುದನ್ನು ಕಾಣಬಹುದು. ಕೆಲವು ಗುಡಿಸಲುಗಳು ಮಣ್ಣಿನಿಂದ ಮಾಡಲ್ಪಟ್ಟ ಗೋಡೆಗಳನ್ನು ಹೊಂದಿವೆ. ಗುಡಿಸಲ ಮುಂಭಾಗಕ್ಕೆ ಗುಡಿಸಲ ಗೋಡೆಗೆ ಹೊಂದಿಕೊಂಡಂತೆ ಮಣ್ಣಿನಿಂದ ಮಾಡಿದ ಹಾಗೂ ಅಚ್ಚುಕಟ್ಟಾಗಿ ಸಾರಿಸಿದ ಜಗುಲಿಗಳನ್ನ ಕಾಣಬಹುದಾಗಿದೆ. ಹೀಗೆ ಗುಡಿಸಲುಗಳು ಅವರ ಸಂಪ್ರದಾಯದಂತೆ ನಿರ್ಮಾಣಗೊಂಡಿವೆ ಹಾಗೂ ಮೊದಲ ಬಾರಿಗೆ ಪ್ರವೇಶಿಸುವಾಗ ಇದನ್ನು 'ಹೊಸಮನೆ ಸೇರುವುದು' ಎಂದು ಕರೆಯುತ್ತಾರೆ. ಸರ್ಕಾರದಿಂದ ಇತ್ತೀಚಿನ ದಿನಗಳಲ್ಲಿ ಮನೆಗಳನ್ನ ಕಟ್ಟಿಸಿಕೊಟ್ಟಿದ್ದು ಹೆಚ್ಚಿನ ಜನರು ಅದರೊಳಗಡೆ ವಾಸಮಾಡಲು ಇಷ್ಟಪಡುವದಿಲ್ಲ. ಬಹುಶಃ ಇದಕ್ಕೆ ಕಾರಣ ಅವರಿಗಿರುವ ಕಾಡಿನ ನಂಟು.

೩.೩. ಜೇನು ಕುರುಬರ ಜನಸಂಖ್ಯೆ ಮತ್ತು ಲಕ್ಷಣಗಳು

ಜನಗಣತಿಯ ದಾಖಲೆಗಳಲ್ಲಿ ಜೆನುಕುರುಬರು ರಾಜ್ಯಾದ್ಯಂತ ಕಂಡುಬಂದರೂ ಸಹ ಅವರ ಜನಸಂಖ್ಯೆಯು ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಕೇಂದ್ರಿಕೃತವಾಗಿರುವುದನ್ನ ಕಾಣಬಹುದಾಗಿದೆ. ಕೆಲವೊಮ್ಮೆ ಅವರು ತಮ್ಮ ಮೂಲ ಸಂಸ್ಕೃತಿಯನ್ನ ಮರೆತು ಕುರುಬರಾಗಿ ಪರಿವರ್ತಿತರಾಗಿರುವುದರಲ್ಲೇನೂ ಸಂಶಯವಿಲ್ಲ. ೧೯೬೧ ರಿಂದ ೨೦೦೧ ರವರೆಗೆ ರಾಜ್ಯದಲ್ಲಿ ಜೇನು ಕುರುಬರ ಜನಸಂಖ್ಯೆಯನ್ನ ಸ್ಥಂಬಚಿತ್ರ ೩.೧ರಲ್ಲಿ ಕಾಣಬಹುದಾಗಿದೆ.

ಸ್ಥಂಬಚಿತ್ರ ೩.೧. ಜೇನು ಕುರುಬರ ಜನಸಂಖ್ಯೆ (೧೯೬೧–೨೦೦೧)



ಆಧಾರ: ಭಾರತ ಜನಗಣತಿ ವರದಿಗಳು ೧೯೬೧ ರಿಂದ ೨೦೦೧

ಮೇಲಿನ ಸ್ಥಂಬಚಿತ್ರವನ್ನ ಗಮನಿಸಿದಾಗ ೫ ದಶಕಗಳಲ್ಲಿ ಜೇನು ಕುರುಬರ ಜನಸಂಖ್ಯೆಯು ಗಣನೀಯವಾಗಿ ಹೆಚ್ಚಾಗಿರುವದನ್ನ ಕಾಣಬಹುದಾಗಿದೆ. ೧೯೬೧ ರಲ್ಲಿ ಕೇವಲ ೩೬೨೩ ರಷ್ಟಿದ್ದದ್ದು ೧೯೮೧ ರ ವೇಳೆಗೆ ೩೪೭೪೭ ರಷ್ಟಾಗಿದ್ದು ಆನಂತರದ ೧೯೯೧ ಮತ್ತು ೨೦೦೧ ರ ವೇಳೆಗೆ ಕ್ರಮೇಣವಾಗಿ ೨೯೩೭೧ ಮತ್ತು ೨೯೮೨೮ ರಷ್ಟಾಗಿದೆ.

೩.೪. ಉಡುಗೆ ತೊಡುಗೆಗಳು


ಜೇನುಕುರುಬ ಗಂಡಸರು ಲುಂಗಿ ಮತ್ತು ಮೇಲಂಗಿ (ಷರ್ಟು) ಧರಿಸುತ್ತಾರೆ. ಗಂಡುಮಕ್ಕಳು ಚಡ್ಡಿ ಮತ್ತು ಮೇಲಂಗಿ ಧರಿಸುತ್ತಾರೆ. ಹೆಣ್ಣುಮಕ್ಕಳು ಲಂಗ ಮತ್ತು ಕುಪ್ಪಸ (ಜಾಕೀಟ್) ಹಾಕುತ್ತಾರೆ. ಚಿಕ್ಕಮಕ್ಕಳು ಚೆಡ್ಡಿ ಮತ್ತು ಅಂಗಿ ಧರಿಸುತ್ತಾರೆ ಇಲ್ಲವೆಂದರೆ ಅರೆಬೆತ್ತಲೆಯಾಗಿಯೇ ಅಡ್ಡಾಡುತ್ತಾರೆ. ಛಳಿ, ಬಿಸಿಲು ಮಳೆಯ ಪರಿವೇ ಇರುವುದಿಲ್ಲ. ಕೆಲವು ಹೆಂಗಸರು ಎದೆಯ ಭಾಗವೂ ಸೇರಿದಂತೆ ಸೀರೆಯನ್ನು ಸುತ್ತುವುದು ರೂಢಿಯಲ್ಲಿದೆ. ಈ ಸಂರ್ಭದಲ್ಲಿ ಯಾವುದೇ ತೆರನಾದ ಕುಪ್ಪಸ (ಜಾಕೀಟು) ವಾಗಲಿ ಇರುವುದಿಲ್ಲ. ಇನ್ನು ಕೆಲವರು ಬಲಗಡೆಯ ಭುಜದ ಮೇಲೆ ಹಾಯ್ದುಬರುವಂತೆ ಸೆರಗನ್ನು ಸೇರಿಸಿ ಸಣ್ಣ ಗಂಟು ಹಾಕುತ್ತಾರೆ.

ಚಿತ್ರ: ೩.೧ ಹೊಸಹಳ್ಳಿಯ ಜೇನುಕುರುಬರ ಸಣ್ಣಯ್ಯ ಮತ್ತು ಆತನ ಪತ್ನಿ



೩.೫. ಆಹಾರ ಪದ್ದತಿ

ಜೇನು ಕುರುಬರ ಆಹಾರ ಪದ್ಧತಿಯು ತುಂಬಾ ಸರಳ. ಕಾಡಿನಲ್ಲಿ ದೊರೆಯುವ ಗೆಡ್ಡೆ-ಗೆಣಸು, ನಾರು ಬೇರು ಸೊಪ್ಪುಗಳನ್ನು ಆಹಾರವಾಗಿಯೂ ಔಷಧಿಯಾಗಿಯೂ ಬಳಸುವುದುಂಟು. ಇದರ ಜೊತೆಗೆ ಇತ್ತೀಚೆಗೆ ರಾಗಿ, ಜೋಳ, ಅಕ್ಕಿ, ಸಾಂಬಾರಗಳ ಬಳಕೆಯನ್ನು ಗಮನಿಸಬಹುದು. ಜೇನು ಕುರುಬರು ತಿನ್ನಬಹುದಾದ ೪೭ ರೀತಿಯ ಗೆಡ್ಡೆಗೆಣಸುಗಳನ್ನ, ತಿಳಿದಿರುವರು' (ಮುಳ್ಳು-ಗೆಣಸು, ನೋಪಳ-ಗೆಣಸು ಇತ್ಯಾದಿ) ಹಾಗೂ '೬೦ ಜಾತಿಯ





ಹಣ್ಣುಗಳನ್ನು ಮತ್ತು ತಿನ್ನಲು ಮತ್ತು ಔಷಧಿಗೆ ಉಪಯೋಗಿಸಬಹುದಾದ ೬೦ ಜಾತಿಯ ಸೊಪ್ಪುಗಳನ್ನ ತಿಳಿದಿರುವರು. ಈ ವಸ್ತುಗಳನ್ನು ಆಹಾರವಾಗಿ ಬಳಸುವುದಷ್ಟಲ್ಲದೆ ಕೆಲವು ನಿರ್ದಿಷ್ಟ ತರಕಾರಿಗಳೊಂದಿಗೆ ಒಂದು ಭಾವನಾತ್ಮಕ ಸಂಬಂಧವನ್ನು ವ್ಯಕ್ತಪಡಿಸುವುದು ಅವರ ಕೆಲವು ಕಥೆಗಳಲ್ಲಿ, ಹಾಡುಗಳಲ್ಲಿ ಅಭಿವ್ಯಕ್ತಿಗೊಳ್ಳುವುದನ್ನು ಗಮನಿಸಬಹುದು. ಇದರೊಂದಿಗೆ ಜೇನು ಕುರುಬರ ಪ್ರಧಾನವೃತ್ತಿಯಾದ ಜೇನುಕುಯ್ಯುವ ಕ್ರಿಯೆ 'ಜೇನುತತ್ತಿಯನ್ನು' ಅತ್ಯಂತ ಪೌಷ್ಟಿಕ ಆಹಾರವಾಗಿ ಬಳಸುತ್ತಾರೆ.

೩.೬. ಆಹಾರ ಸಂಗ್ರಹಣೆ

ಜೇನು ಕುರುಬರು ಸಸ್ಯಹಾರಿ ಹಾಗೂ ಮಾಂಸಹಾರಿಗಳಾಗಿರುವುದರಿಂದ ಸಹಜವಾಗಿ ಚಿಕ್ಕಚಿಕ್ಕ ಕಾಡುಪ್ರಾಣಿಗಳನ್ನು ಹಿಡಿದು ತರುವುದು ಮತ್ತು ಆಹಾರವಾಗಿ ಬಳಸುವುದನ್ನು ಕಾಣಬಹುದಾಗಿದೆ ಇವರ ಬೇಟೆಯ ಉದ್ದೇಶ, ತಂತ್ರ, ವಿಧಾನಗಳಲ್ಲಿ ಗಮನಿಸಬಹುದು. ಹಾಗಾಗಿ ಜೇನು ಕುರುಬರು ರಾಗಿ, ಸೊಪ್ಪು, ಗೆಣಸು, ಬಿದಿರಕ್ಕಿ, ಅಕ್ಕಿ, ಜೋಳವನ್ನು ಆಹಾರವಾಗಿ ಬಳಸುತ್ತಾರೆ. ಇನ್ನು ಸೊಪ್ಪುಗಳಲ್ಲಿ ಮುಳ್ಳುಗೀರೆ, ಒನಗನೆಸೊಪ್ಪು, ಗಂಡು ಒನಗನೆಸೊಪ್ಪು, ಜಗಟೆಸೊಪ್ಪು, ಕೀರೆಸೊಪ್ಪು, ಸೀಗೆಸೊಪ್ಪು, ಬೊಸಗೆರೆಸೊಪ್ಪು ಮತ್ತು ಅದರ ಕಾಯಿ, ಕಾಡು ಸಾಸಿವೆಸೊಪ್ಪು, ಕಾಡುನುಗ್ಗೆಸೊಪ್ಪು ಇತ್ಯಾದಿಗಳನ್ನು ಬಳಸುತ್ತಾರೆ. ಅವರು ತಿನ್ನುವ ಪ್ರತಿಯೊಂದು ಸಸ್ಯದ ಬಗೆಗೆ ಪೂರ್ಣವಾದ ಪರಜ್ಞಾನವಿದ್ದು, ಸಸ್ಯದ ಸಿಹಿ, ಒಗರು ಗುಣಗಳನ್ನು ಅವುಗಳ ಸಿಪ್ಪಿಯನ್ನು ಎರೆಯುವುದರಿಂಧ್ಹಿಡಿದು, ಬೇಯಿಸಿ ನೀರು ಬಸಿಯುವುವರೆಗೆ ತಿಳದುಕೊಂಡಿದ್ದಾರೆ. ಉದಾ:

೧. ಬಿದಿರುಕಳ್ಳೆ- ಇದನ್ನು ಕೊಚ್ಚಿತೆಗೆದು ನೀರಿನಲ್ಲಿ ಎರಡು ದಿನ ನೆನಸಿ ಇಡುತ್ತಾರೆ. ಆಗ ಅದು ಹುಳಿ ಬರುತ್ತೆ, ಮೂರನೇ ದಿನ ಅದನ್ನು ತೊಳೆಯುತ್ತಾರೆ (ಅದರ ಕಹಿ ತೆಗೆಯಲು) ನಂತರ ಚೆನ್ನಾಗಿ ಕುದಿಸಿದಾಗ ಪುನಃ ಕಹಿ ಬರಲು, ಅದನ್ನು ಪುನಃ ಬಸಿಯುತ್ತಾರೆ ನಂತರವೇ ಸಾರುಮಾಡಲು ಇದು ಸಿದ್ಧವಾಗುತ್ತದೆ.
೨. ಕಾಡು ಸಾಸಿವೆಸೊಪ್ಪು-ಸಾಸಿವೆ ರೀತಿ ಕಡ್ಡಿ ಇರುವ ಈ ಸೊಪ್ಪನ್ನು ಕಡ್ಡಿ ತೆಗೆದು ಸೊಪ್ಪು ಮಾತ್ರ ಬಿಡಿಸಿಕೊಂಡು ಬೇಯಿಸಿ ತಿನ್ನುತ್ತಾರೆ.
೩. ಬೊನಗೆರೆಸೊಪ್ಪು ಮತ್ತು ಅದರ ಕಾಯಿ- ಈ ಕಾಯಿ ಕತ್ತರಿಸಿ ತೊಗಟೆ ತೆಗೆದು, ಬೀಜ ತೆಗೆದು ನಂತರ ಸಾರುಮಾಡುತ್ತಾರೆ. ಹೀಗೆ ದಿನನಿತ್ಯದ ಅಡುಗೆ ವಿಧಾನಗಳು ಸರಳವೂ ಹಾಗೂ ಆರೋಗ್ಯವನ್ನು ವೃದ್ಧಿಸುವ ಕ್ರಿಯಗಳಲ್ಲಿ ಸಹಕಾರಿ. ಅಕ್ಕಿ, ರಾಗಿ, ಜೋಳದ ಗಂಜಿ, ರೊಟ್ಟಿ ಮೀನು ಇತ್ಯಾದಿಗಳು ಅವರ ಆಹಾರವಸ್ತುಗಳಾಗಿವೆ.

ಜೇನು ಕುರುಬರಲ್ಲಿ ಆಹಾರ ವಿಧಾನಗಳು ಮಕ್ಕಳಿಂದ ಹಿಡಿದು ವಯೋವೃದ್ಧರವರೆಗೆ ಅವರವರ ವಯೋಮಿತಿಗನುಗುಣವಾಗಿ ಇರುವುದು ಕಂಡುಬರುತ್ತದೆ. ಉದಾ: ಹುಡುಗಿ ಋತುಮತಿಯಾದಾಗ, ಹೆಣ್ಣು ಬಸಿರಾದಾಗ, ಆಕೆ ಮಗುವಿಗೆ ಜನ್ಮವಿತ್ತಾಗ ಅಷ್ಟೇ ಅಲ್ಲದೆ ಕೆಲವೊಮ್ಮೆ ಆರೋಗ್ಯವನ್ನು ಕಾಪಾಡಿಕೊಳ್ಳಲೋಸ್ಕರವಾಗಿ ಊಟದ ಕೆಲವು ಆಯ್ಕೆ ಪದ್ಧತಿಗಳು ರೂಢಿಯಲ್ಲಿವೆ ಇದನ್ನ ಜೇನು ಕುರುಬರು ಪತ್ಯಯಿರುವುದು ಎನ್ನುತ್ತಾರೆ (ಮಾ: ಸಣ್ಣಯ್ಯ ಹೊಸಹಳ್ಳಿ ಹಾಡಿ, ಎಚ್ ಡಿ ಕೊಟೆ ತಾಲ್ಲೂಕು).

೩.೬. ಧರ್ಮ

ಜೇನು ಕುರುಬರು ಪ್ರತಿಯೊಂದು ಮರ, ಗಿಡ, ಪ್ರಾಣಿ, ಪಕ್ಷಿಗಳಲ್ಲಿಯು ದೈವತ್ವವನ್ನ ಕಾಣುತ್ತಾರೆ ಅವರ ನಂಬಿಕೆಗಳು ಪವಿತ್ರವು ಮತ್ತು ಶಕ್ತಿದಾಯಕವು ಆಗಿವೆ ಅವರು ದೇವತೆಗಳಿಗೆ ಮತ್ತು ಹಿರಿಯರಿಗೆ ಪ್ರಮುಖ ಸ್ಥಾನವನ್ನ ಕೊಡುತ್ತಾರೆ ಏಕೆಂದರೆ ಅವರು ಕಾಡಿನ ಎಲ್ಲಾ ದುಷ್ಟ ಶಕ್ತಿಗಳಿಂದ ಇವರನ್ನ ರಕ್ಷಿಸುತ್ತಾರೆಂಬ ಗಾಢವಾದ ನಂಭಿಕೆ. ಜೇನುಕುರುಬರಲ್ಲಿರುವ ಮತ್ತೊಂದು ನಂಬಿಕೆಯೆಂದರೆ ಅವರ ಪೂರ್ವಜರು ಅವರೊಂದಿಗೆ ಜೀವನ ನಡೆಸುತ್ತಿದ್ದಾರೆಂದು ಹೇಳುತ್ತಾರೆ. ಅವರ ಈ ನಂಬಿಕೆಯ ಶಕ್ತಿ 'ಅಜ್ಜಪ್ಪ' ಅಂದರೆ ತಾತ ಎಲ್ಲರು ಮೃತರಾದಮೇಲೆ ಅವನಲ್ಲಿ ವಿಲೀನರಾಗಿ ಇವರನ್ನ ರಕ್ಷಿಸುತ್ತಾರೆಂದು ಹೇಳುತ್ತಾರೆ, ಕುಟುಂಬದ ಯಾವುದೆ ಕಾರ್ಯಕ್ರಮದಲ್ಲೂ ಅವರು ಹಿರಿಯರನ್ನ ಕರೆಯುತ್ತಾರೆ ಇವರ ಧರ್ಮವು ಒಂದು ರೀತಿಯಲ್ಲಿ ಸರ್ವಚೇತನವಾದ ಧರ್ಮವಾಗಿದ್ದು ಎಲ್ಲದರಲ್ಲು ನಂಬಿಕೆಯಿಟ್ಟಿದ್ದಾರೆ ಮತ್ತು ಅವರು ಕಾಡಿನಲ್ಲೆ ಸುರಕ್ಷಿತ ರಾಗಿರುತ್ತಾರೆಂದು ಸಹ ಹೇಳುತ್ತಾರೆ.

ಸಂದರ್ಶಿಗಳ ಹೇಳಿಕೆಯಂತೆ 'ಅಣಪೆ ನೂರಾಳ್ ಒಡೆಯ' ಅವರ ಕುಲದೈವ. 'ನಂಗ ದೇವರು ನಂಗೆ ಕಾಪಾಡತ್ತೆ' ಎನ್ನುವ ಇವರು ನಮಗೂ 'ದೈಯ್ಯ, ದೇವರು ಇದೆ' 'ಸಣಮ್ಮ' ನಮ್ಮ ಹೆಣ್ಣುದೇವರು ಎನ್ನುತ್ತಾರೆ. 'ಅಣಪೆ ನೂರಾಲ್ ಒಡೆಯ'ನ ಬಗ್ಗೆ ಇರುವ ಇವರ ಕಲ್ಪನೆ ಸಸ್ಯಕುಲದೊಡನೆ ಅವರ ಭಾವಾತ್ಮಕ ಸಂಬಂಧಕ್ಕೊಂದು ಉದಾಹರಣೆಯಾಗಿದೆ. 'ಅಜ್ಜಯ್ಯ', 'ತಾತ' . ಅವರು ಹಾಡುವ ಕೆಲವು ಹಾಡುಗಳಲ್ಲಿ ಇದರ ಉಲ್ಲೇಖವಿದೆ. " ಅಣಬೆಗಳು ಹೆಚ್ಚು ಬೆಳೆಯುವ ಅಣಬೆತೋಡು ಹತ್ತಿರದ ಮರವೊಂದನ್ನು ಒಂದು ಸಾರಿಕಡಿಯಲು ಹೋದಾಗ ಕೊಡಲಿ ಏಟಿಗೆ ಆ ಮರದಿಂದ ರಕ್ತ ಸುರಿಯಿತಂತೆ. ಜೀವವಿರುವ ಮರವನ್ನು ಕಂಡು ಅಲ್ಲಿ ತಮ್ಮ ಒಡೆಯ ನೆಲೆಸಿದ್ದಾನೆಂಬ ನಂಬಿಕೆಯನ್ನಿಟ್ಟುಕೊಂಡು ಅಣಪೆ ನೊರಾಳ್ ಒಡೆಯನೆಂಬ ಹೆಸರು ಕೊಟ್ಟು ಪೂಜಿಸಲು ತೊಡಗಿದರು ಹೀಗೆ ಯಾವುದೇ ಹಬ್ಬದಲ್ಲೂ ಇವರಿಗೆ ಪೂಜೆಸಲ್ಲಿಸುತ್ತಾರೆ (ಲಲಿತ, ಎ ಸಿ).

ಇವರು ಹಸಿರುಮರಗಳನ್ನ ಕಡಿಯುವುದಿಲ್ಲ ದೇವರಲ್ಲಿ ಮರೆಹೋಗಿ ತಮ್ಮನ್ನ ದುಷ್ಟಶಕ್ತಿಗಳಿಂದ ರಕ್ಷಸುವಂತೆ ಬೇಡಿಕೊಳ್ಳುತ್ತಾರೆ ಮತ್ತು ಅವರಿಗೆ ಅವರ ನಂಬಿಕೆಯಲ್ಲಿ ಪರಿಹಾರ ಸಿಗುತ್ತದೆಂದು ಹೇಳುತ್ತಾರೆ. ಅವರ ಮುಖ್ಯ ದೈವಗಳೆಂದರೆ 'ಅಣಪೆ ನೂರಳ್ ಒಡೆಯ' ಎಲ್ಲಿ ಅಣಬೆಗಳು ಬೆಳೆಯುತ್ತವೊ ಅಲ್ಲಿಪೂಜಿಸುತ್ತಾರೆ, ಅಂಬಾಳಮ್ಮ, ಸೊಣ್ಣಮ್ಮ ಮತ್ತು ಮಾರಮ್ಮ ಈ ದೇವತೆಗಳು ಬಹಳ ಪರಾಕ್ರಮಶಾಲಿಗಳಾಗಿದ್ದು ಅವರ ಶಕ್ತಿಯಿಂದ ಇವರನ್ನ ರಕ್ಷಿಸುತ್ತಾರೆಂಬ ನಂಬಿಕೆಯಿದೆ, ನಾನು ಭೇಟಿಕೊಟ್ಟ ಶೇ.೯೦ ರಷ್ಟು ಹಾಡಿಗಳಲ್ಲಿ ಒಂದು ಸಣ್ಣಗುಡಿಸಲಿದ್ದು ಅಲ್ಲಿ ದೇವರನ್ನ ಕರೆಯುವ ಕೆಲಸ ನಡೆಯುತ್ತದೆ. ಅದರ ನಿರ್ವಹಣೆಯ ಹೋಣೆ ಹಾಡಿಯ ಯಜಮಾನರದಾಗಿರುತ್ತದೆ. ಹಲವು ಮಹಿಳೆಯರು ಸಹ ಹೊಟ್ಟೆನೊವು, ಜ್ವರ ಇತ್ಯಾದಿಗಳನ್ನ ಮಂತ್ರಗಳಿಂದ ಬಿಡಿಸುತ್ತಾರೆ.

೩.೬.ಅ. ದೇವರಗುಡ್ಡ / ಬುಂಡೆದೇವರು

ಜೇನು ಕುರುಬರಲ್ಲಿ ಹಿರಿಯರಾದವರನ್ನ ದೇವರಗುಡ್ಡ ಎಂದು ಕರೆಯುತ್ತಾರೆ ಅವರಲ್ಲಿ ಮಂತ್ರ ಶಕ್ತಿ ಮತ್ತು ಔಷದೋಪಚಾರನೀಡುವ ತಂತ್ರಗಾರಿಕೆಯು ಇರುತ್ತದೆ, ಅವರ ಪ್ರಕಾರ ಹಿರಿಯನಾದ ಅಜ್ಜಪ್ಪನು ಕನಸಿನಲ್ಲಿ ಬಂದು ಅವನಿಗೆ ದೈವಕಾರ್ಯವನ್ನ ಕೈಗೊಳ್ಳಲು ಆದೇಶ

ನೀಡುತ್ತಾನೆ. ಆನಂತರ ಆ ವ್ಯಕ್ತಿಗೆ ದೇವರು ಮೈಮೇಲೆಬಂದು ಮಾತನಾಡುತ್ತಾನೆ ಮತ್ತು ದುಷ್ಟಶಕ್ತಿಗಳಿಂದಾಗುವ ಕಾಯಿಲೆಯನ್ನ ವಾಸಿಮಾಡುತ್ತಾನೆ. ಹೊಸ ದೇವರ ಗುಡ್ಡ ಹಿರಿಯ ದೇವರಗುಡ್ಡನ ಬಳಿ ತರಬೇತಿಯನ್ನ ಪಡೆದ ನಂತರ ತನ್ನ ಸೇವೆಯನ್ನಾರಂಭಿಸುತ್ತಾನೆ.

೩.೬.ಆ. ದೈವವನ್ನ ಕರೆಯುವುದು / ಬುರುಡೆಕರೆಯುವುದು

ಜೇನು ಕುರುಬರಲ್ಲಿ'ಬುರುಡೆ ಕರೆಯುವುದು' ಇಲ್ಲವೇ 'ಬುಂಡೆಕರೆಯುವುದು' ಎಂಬ ದೈವದರ್ಶನ ಮತ್ತು ದೈವದೊಡನೆ ಸಂಭಾಷಣೆ ಮಾಡುವ ಒಂದು ವಿಶಿಷ್ಟವಾದ ಆಚರಣೆ ಜೇನು ಕುರುಬರಲ್ಲಿದೆ. ಅವರ ಬಳಿಯಿರುವ ಮೌಲ್ಯಯುತವಾದ ವಸ್ತು ಎಂದರೆ 'ದೇವರ ಬುರುಡೆ' (ಒಣಗಿದ ಸೊರೆಕಾಯಿ) ಅದರೊಳಗೆ ಗುರಗಂಜಿ ಬೀಜಗಳನ್ನ ತುಂಬಿ ಅದನ್ನ ಜೇನಿನ ಮೇಣದಿಂದ ಮುಚ್ಚಲಾಗುತ್ತದೆ. ಆನಂತರ ಇದನ್ನ ದೇವರನ್ನ ಕರೆಯಲು ಬಳಸಲಾಗುತ್ತದೆ. ಇವರಲ್ಲಿ ಯಾರಿಗಾದರು ಅನಾರೋಗ್ಯವಾದಾಗ, ಜಗಳವಾದಾಗ ದೇವರಗುಡ್ಡನನ್ನು ಅವರು ತಮ್ಮ ಹಾಡಿ ಅಥವಾ ಮನೆಗೆ ಕರೆಸಿಕೊಂಡು ಸಂಪ್ರದಾಯದಂತೆ ಸಮುದಾಯದ ಬೆಂಕಿ ಹೊಂಡದಲ್ಲಿ ಬೆಂಕಿಹಾಕಿ ಮಹಿಳೆಯರು ಹಾಡುಗಳನ್ನ ಹಾಡುತ್ತಿರುತ್ತಾರೆ. ಆ ಮೂಲಕ ದೇವರ ಗುಡ್ಡ ಬುರುಡೆಗೆ ನಮಸ್ಕರಿಸಿದ ನಂತರ ಅದನ್ನ ಕೈಗೆತ್ತಿಕೊಂಡು ಜೊರಾಗಿ ಸುತ್ತಲು ಅಲುಗಾಡಿಸುವುದರ ಮೂಲಕ ದೈವವನ್ನ ಸ್ವಾಗತಿಸಲಾಗುತ್ತದೆ. ದೇವರು ಮೈಮೇಲೆ ಬಂದಂತೆ ಶಬ್ದ ಕಡಿಮೆಯಾಗುತ್ತದೆ ಮಹಿಳೆಯರು ಹಾಡುವದನ್ನ ನಿಲ್ಲಿಸಿ ದೇವರ ಹೇಳಿಕೆಯನ್ನ ಗಮನವಿಟ್ಟು ಕೇಳಿಸಿಕೊಳ್ಳುತ್ತಾರೆ, ಆ ನಂತರ ಜನರ ಬೇಡಿಕೆಗಳನ್ನ ಕೇಳಿಸಿಕೊಂಡು ಪರಿಹಾರವನ್ನ ಸೂಚಿಸುತ್ತಾರೆ.

೩.೬.ಇ. ಮಾಟ-ಮಂತ್ರ

ಹಾಡಿಗಳಲ್ಲಿನ ಇತರೆ ಬುಡಕಟ್ಟು ಜನರಂತೆ ಜೇನು ಕುರುಬರು ಸಹ ಮಾಟ-ಮಂತ್ರಗಳಲ್ಲಿ ಆಗಾಧ' ನಂಬಿಕೆಯನ್ನಿಟ್ಟಿದ್ದಾರೆ, ಪರಿಣಿತರಾದ ದೇವರಗುಡ್ಡಗಳು ದುಷ್ಟಶಕ್ತಿಗಳಿಂದಾಗುವ ಕೆಡಕುಗಳನ್ನ ಗುಣಪಡಿಸುವುದರಲ್ಲಿ ಯಶಸ್ವಿಯಾಗಿದ್ದಾರೆ. ಅವರ ಹೇಳಿಕೆಗಳಂತೆ ಕೆಡಕನ್ನ ಮಾಡಲು ವಿರುದ್ದ ವ್ಯಕ್ತಿಯ ಕೂದಲಿನ ತುಂಡು/ಧರಿಸಿರುವ ಬಟ್ಟೆಯ ಒಂದು ದಾರದ ತುಂಡು/ಉಗುರಿನ ಒಂದು ಭಾಗ ಸಾಕು, ಔಷಧಿಗಳನ್ನ ತಯ್ಯಾರಿಸಲು ಗಿಡಮೂಲಿಕೆಗಳು ಮತ್ತು ಪ್ರಾಣಿಗಳ ಉತ್ಪನ್ನಗಳನ್ನ ಬಳಸುತ್ತಾರೆ. ಮುಖ್ಯವಾಗಿ ನೊಣ, ಊಸರವಳ್ಳಿ, ಹಾವಿನ ಹಲ್ಲು, ನಾಗರಹಾವಿನ ಮಣಿ, ಮರ ಕಪ್ಪೆ ಹಾಗು ದೊಡ್ಡಿರುವೆಗಳನ್ನ ಬಳಸಿ ಮರದ ತೊಗಟೆಯೊಂದಿಗೆ ಮಿಶ್ರಣಮಾಡಿ ಹಲವಾರು ಔಷಧಿಗಳನ್ನು ತಯ್ಯಾರಿಸಲಾಗುತ್ತದೆ.

ಚಿತ್ರ: ೩.೨ ನಾಗಾಪುರ ಹಾಡಿ ಮೂರರಲ್ಲಿ ಜೇನು ಕುರುಬರ ಪೂಜಾಸ್ಥಳ



ಇಲ್ಲಿ ಗಮನಿಸಿದ ಅಂಶವೆಂದರೆ ಸ್ವಾಭಾವಿಕವಾಗಿ ಜನಿಸಿರುವ ಗೋಣಿ ಮರದ ಕೆಳಗಡೆ ಲಿಂಗಾಕೃತಿಯ ಕಲ್ಲಿನ ವಿಗ್ರಹದ ಬಳಿಯಿರುವ ತ್ರಿಶೂಲಕ್ಕೆ ಹತ್ತಿಯಲ್ಲಿ ಹಾರಮಾಡಿ ಅದಕ್ಕೆ ಅರಿಶಿನ ಕುಂಕುಮವಿಟ್ಟು ಮನೆಯಿಂದ ತೆಂಗಿನಕಾಯಿ, ಹೂವು ತೆಗೆದುಕೊಂಡು ಬಂದು ಪೂಜೆ ಸಲ್ಲಿಸುತ್ತಾರೆ

೩.೭. ಹಬ್ಬಗಳು

೩.೭.ಅ. ಅಂಬಾಳಮ್ಮನ ಜಾತ್ರೆ

ಜೇನು ಕುರುಬರು ಇತರೆ ಜನರಂತೆ ಸಂಕ್ರಾಂತಿ, ಉಗಾದಿ ಮತ್ತು ದೀಪಾವಳಿ ಹಬ್ಬಗಳನ್ನ ಆಚರಿಸುತ್ತಾರೆ. ಹಬ್ಬದ ದಿನ ಮನೆಯನ್ನ ಶುಚಿಯಾಗಿ ತೊಳೆದು ವಿವಿಧ ಬಗೆಯ ತಿನಿಸುಗಳನ್ನ ಮಾಡಿ ದೇವರಿಗೆ ಎಡೆ ಹಾಕಿ ಪೂಜೆ ಮುಗಿದ ನಂತರ ಎಲ್ಲರೂ ಊಟ ಮಾಡುತ್ತಾರೆ. "ಇವರು ಶಕ್ತಿ ದೇವತೆಗಳಾದ ಅಂಬಾಳಮ್ಮ ಮತ್ತು ಬಿಸಿಲಾಡಿ ಮಾರಿಯಮ್ಮನನ್ನು ಬಹಳ ಶ್ರದ್ದೆ ಭಕ್ತಿಯಿಂದ ಪೂಜಿಸುತ್ತಾರೆ(ಲಲಿತ, ಎ ಸಿ:೧೯೯೩:೨೦). ಇವರು ಪೂಜಿಸುವ ಅಂಬಾಳಮ್ಮನ ದೇವಸ್ಥಾನವು ನಾಗರಹೊಳೆ ಕಾಡಿನಲ್ಲಿದ್ದು ವರ್ಷಕ್ಕೆ ಒಮ್ಮೆ ಮಾರ್ಚ ತಿಂಗಳಲ್ಲಿ ಜಾತ್ರೆ ನಡೆಯುತ್ತದೆ. ಅಂದು ದೇವಿಗೆ ಆನೆ, ಕುದುರೆಯಾಕಾರದ ಗೊಂಬೆಗಳನ್ನ ಮತ್ತು ಹಿತ್ತಾಳೆ ದೀಪಗಳನ್ನು ಹರಕೆಯ ರೂಪದಲ್ಲಿ ಅರ್ಪಿಸುತ್ತಾರೆ. ಅಲ್ಲದೆ ಅವರು ಕಾರೆ ಹಬ್ಬ, ಕಕ್ಕಟ, ಗೌರಿಕನ್ನೆರಿ, ಕಿರುದೀವಳಿಗೆ ದೊಡ್ಡದೀವಳಿಗೆ, ಮಹಾನವಮಿ (ಮಾರ್ಲಮಿ)ಗಳನ್ನ ಆಚರಿಸುತ್ತಾರೆ.

೩.೭.ಆ. ಕೊಂತ ಪೂಜೆ

ಜೇನು ಕುರಬರಲ್ಲಿ ಕೊಂತ ಪೂಜೆಯು ಒಂದು ಮುಖ್ಯ ಹಬ್ಬವಾಗಿದ್ದು ಈ ಹಬ್ಬವನ್ನ ತಮ್ಮ ಹಿರಿಯರಿಗೆ ಗೌರವಸೂಚಕವಾಗಿ ಮಾಡುತ್ತಾರೆ "ಹಬ್ಬದ ದಿನವನ್ನ ಕಾಡಿನ ಬೆಳವಣಿಗೆಯನ್ನಾಧರಿಸಿ ಯಜಮಾನ ನಿಗದಿಪಡಿಸುತ್ತಾನೆ. ನಿಗದಿಪಡಿಸಿದ ರಾತ್ರಿ ಯಜಮಾನ ನದಿಗೆ ತೆರಳಿ ನದಿಯ ತಳದ ಬುದುರೆ ಮಣ್ಣನ್ನ ತನ್ನ ಅಂಗೈಯಲ್ಲಿ ತೆಗೆದುಕೊಂಡು ಪೂಜಾ ಸ್ಥಳಕ್ಕೆ(ಚಪ್ಪರ) ಮುಂದುಗಡೆಯಿಂದ ಪ್ರವೇಶ ಮಾಡಿ ತಾನು ತಂದ ಮಣ್ಣನ್ನ ನಿರ್ಮಿಸಿದ್ದ ಜಗುಲಿಯ ಮೇಲಿಟ್ಟು ಎರಡು ಗೊಂಬೆಗಳನ್ನ ಮಾಡಿ ಅದನ್ನ ಕೊಂತ ಮತ್ತು ಕೂಂತಿ ಎಂದು ಹೆಸರಿಟ್ಟು, ಬಟ್ಟೆ ಉಡಿಸಿ, ಅರಿಷಿಣ, ಕುಂಕುಮವಿಟ್ಟು ಇಡೀ ಹಾಡಿಯ ಜನ ಭಾಗವಹಿಸಿ ಮಹಿಳೆಯರು ಕೊಂತಿ ಹಾಡನ್ನ ಹಾಡುವುದರ ಮೂಲಕ ಪೂಜೆ ಸಲ್ಲಿಸುತ್ತಾರೆ(ಕಿಕ್ಕೇರಿ, ನಾರಾಯಣ:೨೦೦೦:೨೩). ಹೀಗೆ ಇದು ೩೯ ದಿನಗಳವರೆಗೆ ನಡೆದ ನಂತರ ಕೊನೆಯ ದಿನ ದೇವರಗುಡ್ಡ ಪ್ರವೇಶ ಮಾಡಿ ಪೂಜೆ ಸಲ್ಲಿಸುತ್ತಾರೆ. ಆ ಮೂಲಕ ಕೊನೆಗೆ ದೇವರಗುಡ್ಡ ಕೊಂತ ಮತ್ತು ಕೊಂತಿಯನ್ನ ಚಪ್ಪರದ ಹಿಂದಿನಿಂದ ತೆಗೆದುಕೊಂಡು ಹೋಗಿ ನದಿ ನೀರನಲ್ಲಿ ಮುಳುಗಿಸಲಾಗುತ್ತದೆ ಇದನ್ನ ಕೊಂತ ಪೂಜೆಯೆಂದು ಕರೆಯಲಾಗುತ್ತದೆ.

೩.೮. ಸಾಮಾಜಿಕ ರಚನೆ ಮತ್ತು ಕೌಟಂಬಿಕ ಜೀವನ

೩.೮.ಅ. ಸಾಮಾಜಿಕ ರಚನೆ

ಜೇನು ಕುರುಬರ ಬಗೆಗಿನ ಕೆಲವು ವರದಿಗಳ ಪ್ರಕಾರ ಜೇನು ಕುರುಬರಲ್ಲಿ ೧೨ (ಕೊತಿ) ಮನೆತನಗಳಿದ್ದು ಅದು ಅವರ ವಾಸ್ಥಾನದ ಮೇಲೆ ನಿರ್ಧರಿತವಾಗುತಿತ್ತು ಎಂದು ಹೇಳುತ್ತಾರೆ. ಆದರೆ ಜೇನು ಕುರುಬರನ್ನ ಇದರ ಬಗೆಗೆ ವಿಚಾರಿಸಿದಾಗ ಯಾವುದೆ ಮಾಹಿತಿಯನ್ನ ಅವರು ನೀಡಲಿಲ್ಲ. ಆದರೆ, ಅವರಲ್ಲಿ ಪ್ರಾಂತೀಯ ಗುಂಪುಗಳಿವೆ. ಅವನ್ನ ಅವರು 'ಜಮ್ಮ' ಎಂದು ಕರೆಯುತ್ತಾರೆ, ಪ್ರತಿಯೊಬ್ಬರು ತಮ್ಮ ಜಮ್ಮದ ಹೆಸರನ್ನ ಮುಂದುವರೆಸಿಕೊಂಡು ಬರುತ್ತಾರೆ.

ಜಮ್ಮ ಎಂದರೆ ಅವರ ಮೂಲ ಜನ್ಮಸ್ಥಳ ಮನೆಯ ದೊಡ್ಡಮಗ ತಂದೆಯ ಜಮ್ಮವನ್ನ ಮುಂದುವರೆಸಿಕೊಂಡು ಬರುತ್ತಾನೆ.

ಜೇನು ಕುರುಬರಲ್ಲಿ ಸಾಮಾನ್ಯವಾಗಿ ತಂದೆ ತಾಯಿ ಮತ್ತು ಅವಿವಾಹಿತ ಮಕ್ಕಳು ಒಂದೇ ಮನೆಯಲ್ಲಿ ವಾಸಮಾಡುತ್ತಾರೆ. ಮದುವೆಯಾದ ನಂತರ ವಿವಾಹಿತರು ಬೇರೆ ಮನೆಯಲ್ಲಿ ವಾಸಮಾಡುವುದು ಇವರಲ್ಲಿ ಸಂಪ್ರದಾಯ. ಈ ರೀತಿಯ ಹಲವು ಕುಟುಂಬಗಳು ಸೇರಿ ಹಾಡಿಯಾಗುತ್ತದೆ. ಈ ಹಾಡಿಯ/ಹಾಡಿಗಳ ಮುಖ್ಯಸ್ಥನನ್ನ ಯಜಮಾನನೆಂದು ಕರೆಯಲಾಗುತ್ತದೆ. ಯಜಮಾನನಿಗೆ ಹಾಡಿಯನ್ನ ನಿಯಂತ್ರಿಸುವ ಪೂರ್ಣ ಅಧಿಕಾರವಿರುತ್ತದೆ ಮತ್ತು ಹಾಡಿಯ ಪ್ರತಿಯೊಂದು ಕಾರ್ಯಕ್ರಮಗಳನ್ನ ಯಜಮಾನನೆ ನಿರ್ಧರಿಸುತ್ತಾನೆ. ಕೆಲವೊಮ್ಮೆ ನಾಲ್ಕೈದು ಹಾಡಿಗಳಿಗೆ ಒಬ್ಬನೆ ಯಜಮಾನನಿರುತ್ತಾನೆ.

೩.೯. ನ್ಯಾಯ ಪದ್ದತಿ

ಜೇನು ಕುರುಬರ ಹಾಡಿಗಳಲ್ಲಿ ಪರಸ್ಪರ ಎರಡು ಕುಟುಂಬಳ ನಡುವೆ ಅಥವಾ ಅದಕ್ಕಿಂತಲೂ ಹೆಚ್ಚಿನ ಕುಟುಂಬಗಳ ನಡುವೆ ಆಸ್ತಿ, ಬೇಟೆ, ಹೆಣ್ಣಿನ ವಿಚಾರಗಳಿಗೆ ಸಂಬಂಧಿಸಿದಂತೆ ಏನಾದರು ಜಗಳ, ವಂಚನೆ ಮೊಸದಂತಹ ಘಟನೆಗಳು ಜರುಗಿದಾಗ ಹಾಡಿಯ ಯಜಮಾನ ಸಭೆಯನ್ನ ಕರೆಯುತ್ತಾನೆ. ಸಭೆಯಲ್ಲಿ ಯಜಮಾನನ ಮುಂದೆ ಎರಡು ಕಡೆಯವರು ತಮ್ಮ ಅಳಲುಗಳನ್ನ ಹೇಳಿಕೊಳ್ಳುತ್ತಾರೆ ಎರಡು ಕಡೆಯ ವಾದಗಳನ್ನ ಕೇಳಿದ ನಂತರ ಯಜಮಾನರು ನಿಸ್ಪಕ್ಷಪಾತವಾದ ನಿರ್ಧಾರವನ್ನ ತೆಗೆದುಕೊಳ್ಳುತ್ತಾರೆ. ಅವರ ನಿರ್ಧಾರವೆ ಅಂತಿಮ, ಯಜಮಾನನ ತೀರ್ಪನ್ನ ಯಾರೂ ಉಲ್ಲಂಗಿಸುವಂತಿಲ್ಲ. ಉಲ್ಲಂಗಿಸಿದಲ್ಲಿ ಅಂಥವರಿಗೆ ಹಾಡಿಯಿಂದ ಬಹಿಷ್ಕರಿಸಲಾಗುತ್ತದೆ ಹಾಗೂ ಅಂಥವರ ಮನೆಯಲ್ಲಿ ಯಾರಿಗಾದರೂ ರೋಗ ಬರುತ್ತದೆಂದು ಹೇಳುತ್ತಾರೆ, ನ್ಯಾಯ ಪಂಚಾಯ್ತಿಗೆ ಮಹಿಳೆಯರು ಭಾಗವಹಿಸುವಂತಿಲ್ಲ.

೩.೧೦. ಕುಟುಂಬ

ಜೇನು ಕುರುಬರ ಕೌಟುಂಬಿಕ ವ್ಯವಸ್ಥೆಯು ಪಿತೃಪ್ರಧಾನ ವ್ಯವಸ್ಥೆಯಾಗಿದ್ದು ತಂದೆಯು ಕುಟುಂಬದ ಎಲ್ಲಾ ಕೆಲಸಗಳನ್ನ ನೆರವೇರಿಸಿಕೊಂಡು ಬರುತ್ತಾನೆ. ಮನೆಯಲ್ಲಿ ತಾಯಿ ಮತ್ತು ಮಕ್ಕಳು ತಂದೆಗೆ ಎದುರುನಿಂತು ಉತ್ತರಿಸುವುದಿಲ್ಲ. ಕುಟುಂಬದಲ್ಲಿ ತಂದೆ, ತಾಯಿ, ಸೊಸೆ, ಅಳಿಯರ ಸಂಬಂಧಗಳು ನಿಯಮಗಳಿಗನುಸಾರವಾಗಿ ನಡೆದುಕೊಂಡುಬರುತ್ತವೆ. ತಂದೆಯು ಕುಟುಂಬದ ಯಜಮಾನನಾಗಿದ್ದು ಕುಟುಂಬದ ದಿನ ನಿತ್ಯದ ಅವಶ್ಯಕತೆಗಳನ್ನ ಪೂರೈಸಲು ಅಗತ್ಯವಿರುವ ಆದಾಯದ ಗಳಿಕೆ, ಮಕ್ಕಳ ಶಿಕ್ಷಣ, ಹೆಣ್ಣುಮಕ್ಕಳ ಮದುವೆ, ಎಲ್ಲದರ ಜವಾಬ್ದಾರಿಯನ್ನ ತಾನೇ ವಹಿಸಿಕೋಳ್ಳುತ್ತಾನೆ. ತಾಯಿಯು ಕುಟುಂಬದ ಯಜಮಾನನಿಗೆ ಸಂಸಾರದ ನಿರ್ವಹಣೆಯಲ್ಲಿ ಸ್ವಲ್ಪಮಟ್ಟಿಗೆ ಆದಾಯವನ್ನ ತಂದುಕೊಡುವುದರೊಂದಿಗೆ ಮಕ್ಕಳ ಪಾಲನೆ ಮತ್ತು ಪೋಷಣೆಯ ಜವಾಬ್ದಾರಿಯನ್ನ ಹೊರುತ್ತಾಳೆ. ಜೇನು ಕುರುಬರ ಬಹಳಷ್ಟು ಮಹಿಳೆಯರು ಕೂಲಿ ಕೆಲಸದಲ್ಲಿ ದುಡಿದ ಹಣವನ್ನ ಸಂಸಾರ ನಿರ್ವಹಣೆಗಾಗಿ ಬಳಸುವುದಾಗಿ ಕ್ಷೇತ್ರಕಾರ್ಯದಲ್ಲಿ ವಕ್ತೃಗಳು ತಿಳಿಸಿದರು.

೩.೧೧. ಪುಂದಾಲ ಮನೆ ಮತ್ತು ಪುನದ್ಯಾರ್ ಮನೆ

ಜೇನು ಕುರಬರಲ್ಲಿ ವಿವಾಹವಾಗದ ಯುವಕರಿಗೆ ಮತ್ತು ಯುವತಿಯರಿಗೆ ವಾಸ ಮಾಡಲು ಒಂದು ಪ್ರತ್ಯೇಕ ಸ್ಥಳವಿರುತ್ತದೆ. ಯುವಕರು ವಾಸಮಾಡುವ ಸ್ಥಳವನ್ನ ಪುಂದ(ಡಾ)ಲ್

ಮನೆಯೆಂದು. ಯುವತಿಯರು ವಾಸಮಾಡುವ ಸ್ಥಳವನ್ನ ಪುಂದಾ(ಡಾ)ಯಿರ್ ಮನೆಯೆಂದು ಕರೆಯಲಾಗುತ್ತದೆ. ಇಲ್ಲಿ ಯುವಕ ಯುವತಿಯರು ಪರಸ್ಪರರನ್ನ ಭೇಟಿಯಾಗಲು ಅವಕಾಶಗಳಿರುತ್ತವೆ ಮತ್ತು ಮುಕ್ತವಾಗಿ ತಮಗಿಷ್ಟವಾದವರೊಂದಿಗೆ ಲೈಂಗಿಕ ಸಂಬಂಧಗಳನ್ನ ಬೆಳಸಿಕೊಳ್ಳಬಹುದಾಗಿದ್ದು ಅವರೊಂದಿಗೆ ವಿವಾಹ ಸಂಬಂಧವನ್ನ ಬೆಳಸಿಕೊಳ್ಳಲು ಅವಕಾಶವಿರುತ್ತದೆ. ವಿವಾಹವಾದ ನಂತರ ಅವರಿಗೆ ಪ್ರವೇಶವಿರುವುದಿಲ್ಲ. ಇವರಲ್ಲಿ ಹಿರಿಯರಾದವರನ್ನ ದೊಡ್ಡಪುಂದಾ(ಡಾ)ಲ್ ಮತ್ತು ದೊಡ್ಡಪುಂದಾ(ಡಾ)ಟಿಯೆಂದು ಕರೆಯುತ್ತಾರೆ. ಆದರೆ ಇತ್ತೀಚಿನ ದಿನಗಳಲ್ಲಿ ವಿದ್ಯಾವಂತರ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಮತ್ತು ಭವಿಷ್ಯದ ದೃಷ್ಟಿಯಿಂದ ಈ ಒಂದು ಸಂಪ್ರದಾಯವನ್ನ ಎಲ್ಲಾ ಹಾಡಿಗಳಲ್ಲಿ ಕಾಣಲಾಗುತ್ತಿಲ್ಲ. ಅಲ್ಲದೆ ಬುಡಕಟ್ಟಿನ ಹೆಣ್ಣು ಮಕ್ಕಳನ್ನ ಇತರೆ ಸಮಾಜಘಾತುಕ ಶಕ್ತಿಗಳಿಂದ ತಪ್ಪಿಸಲು ಪುಂಡಲಮನೆ ಮತ್ತು ಪುನಡೈರ್ ಮನೆಗಳನ್ನ ಕೇವಲ ಜೇನು ಕುರುಬರೆ ವಾಸಮಾಡುವ ಹಾಡಿಗಳಲ್ಲಿ ಕಾಣಬಹುದಾಗಿದೆ.

೩.೧೨. ಹುಟ್ಟು ಸಂಬಂಧಿ ಆಚರಣೆಗಳು

ಜೇನು ಕುರುಬರಲ್ಲಿ ಹೆಣ್ಣು ಗರ್ಭಧರಿಸಿದಾಗ ರೂಢಿಯಲ್ಲಿರುವ ಸಂಪ್ರದಾಯದಂತೆ ತಾಯಿ ಮತ್ತು ಗರ್ಭದಲ್ಲಿರುವ ಮಗುವಿನ ಆರೋಗ್ಯಕ್ಕಾಗಿ ಗರ್ಭಿಣಿ ಸ್ತ್ರೀಗೆ ಜೇನು ಕುರುಬರು ಅವರವರ ಶಕ್ತ್ಯಾನುಸಾರ ೭ನೇ ತಿಂಗಳಲ್ಲಿ ಬಸುರಿ ಹೆಂಗಸನ್ನು ತಾಯಿ ಮನೆಗೆ ಕರೆತರುತ್ತಾರೆ. ಕರೆತರುವಾಗ 'ಭತ್ತದ ಮಡಿಲಕ್ಕಿ ತುಂಬುತ್ತಾರೆ' ವಿಶೇಷವಾದ ಆರೈಕೆ ಕಂಡುಬರುತ್ತದೆ. ಮಗುವಿನ ಜನನದ ನಂತರ ಬರುವ ಸತ್ತೆ (ಮಾಸು) ಬಿದ್ದ ಮೇಲೆ ಅಳತೆ ಮಾಡಿ ಮಗಿವಿನ ಹೊಕ್ಕಳ ಬಳ್ಳಿಯನ್ನು ಕತ್ತರಿಸುತ್ತಾರೆ. 'ಪಾಲಭೋದಕಜ್ಜ' ಎಂಬ ಸಸ್ಯವನ್ನು ಬಾಣಂತಿ ತಲೆದಸಿ ಇಟ್ಟು ಮಲಗಿಸಿದರೆ 'ತಾಯಿಗೆ ಹೆಚ್ಚು ಹಾಲು ಬರುತ್ತದೆ ಎಂದು ನಂಬುತ್ತಾರೆ. ಮಗುವಿಗೆ ಏನಾದರೂ ಹೊಟ್ಟೆ ನೋವು ಕಾಣಿಸಿಕೊಂಡರೆ ಹಾಗಲ ಸೊಪ್ಪು, ಕೈಸುಂಡೆ ಸೊಪ್ಪು, ಬಿಳಿಗಣಿಕ ಇವುಗಳಲ್ಲಿ ಯಾವುದಾದರು ಒಂದನ್ನು ಅರೆದು ಸ್ವಲ್ಪ ಮಗುವಿಗೆ ಕೊಡುತ್ತಾರೆ. ಕಿಪ್ಪೆಸುಂಡ್ಲಾಕಾಯನ್ನು ಶೀತ ನಿವಾರಣೆಗಾಗಿ ಬಳಸುತ್ತಾರೆ. ಮಗು ಮತ್ತು ಬಾಣಂತಿಗೆ ಒಂದು ತಿಂಗಳವರೆಗೆ ದಿನಾಲು ಸ್ನಾನಮಾಡಿಸುತ್ತಾರೆ. ಆ ಮೇಲೆ ದಿನ ಬಿಟ್ಟು ದಿನ ಸ್ನಾನ ಮಾಡಿಸುತ್ತಾರೆ. ಮಗುವಿನ ಹೊಕ್ಕಳು ವಾಸಿ ಆಗುವವರೆಗೆ ಕಾರ ಕೊಡುವುದಿಲ್ಲ, ಬರೀ ಬೇಳೆ ಕಟ್ಟಿನಲ್ಲಿ ಅನ್ನ ಕೊಡುವುದು ರೂಡಿಯಿಥೆ. ಇದರೊಂದಿಗೆ ಮಗುವಿಗೆ ದೃಷ್ಟಿ ನಿವಾರಣೆಗಾಗಿ ಕರಿಬೊಟ್ಟು, ಕೈಕಾಲಿಗೆ ಕರಿದಾರ ಕಟ್ಟುತ್ತಾರೆ. ಬಾಣಂತಿ ಬಳಿ ಒಂದು 'ಕುಡ್ಲು' ಒಂದು ಹಿಡ್ಗಲು ಯಾವಾಗಲೂ ಇಡುತ್ತಾರೆ. ಒಂದು ವೇಳೆ ತಾಯಿಯಲ್ಲಿ ಹಾಲು ಬರದಿದ್ದರೆ ಮಗುವಿಗೆ ಹಾಲು ಬರುವ ಇನ್ನೊಂದು ಬಾಣಂತಿಯ ಹಾಲು ಕುಡಿಸುತ್ತಾರೆ. ಇಲ್ಲದಿದ್ದರೆ ಮಗುವಿನ ಬಾಯಿಗೆ, ಕೈವಣ್ಣೆದು' ಎನ್ನುವ ಇವರಲ್ಲಿ ಸ್ವಾವಲಂಬನೆಯ ಧ್ವನಿಯನ್ನು ಗುರುತಿಸಬಹುದು. ಇದಲ್ಲದೇ ಇನ್ನು ೨೦ ದಿವಸದವರೆಗೆ ಬಾಣಂತಿಗೆ ಬಸಿದ ಅನ್ನ, ಮೆಣಸಿನ ನೀರು ಸೇರಿಸಿ ಕೊಡುತ್ತಾರೆ. ೨೦ ದಿನಗಳು ಕಳೆದ ಮೇಲೆ ಬೇಳೆ ಕೊಡುತ್ತಾರೆ. ಮಾಂಸ ಕೊಡುವುದಿಲ್ಲ .ಕೆಲವೊಮ್ಮೆ ಶಕ್ತಿಬರಲೆಂದು ಕುರಿ /ಮೇಕೆ ಕಾಲಿನ ಸಾರು ಮಾಡಿಕೊಡುತ್ತಾರೆ. ಮಗುವಿಗೆ ಸಾಕಷ್ಟು ಹಾಲು ಸಿಗಲೆಂದು ಬಾಣಂತಿಗೆ (ತಾಯಿಗೆ) 'ಕೊಂಟಗ ಸೊಪ್ಪಿನ' ರಸವನ್ನು ಕುಡಿಸುತ್ತಾರೆ.

ಜೇನುಕುರುಬರ ಮಹಿಳೆಯರು ಹೆರಿಗೆಗೆ ಮೂರುತಿಂಗಳು ಮುನ್ನ ತಮ್ಮ ಮನೆಯನ್ನು ತೊರೆದು ಒಂದು ಸಣ್ಣ ಗುಡಿಸಿಲಿನಲ್ಲಿ ವಾಸ ಮಾಡಲಾರಂಬಿಸುತ್ತಾರೆ. ಹಾಡಿಯ ಹಿರಿಯ ಮಹಿಳೆಯರು ಅವರ ಸಹಾಯಕ್ಕೆ ಬರುವುದುಂಟು, ಹೆರಿಗೆಯಾದ ನಂತರ ಸಂಪ್ರದಾಯದಂತೆ

ಎಲ್ಲಾ ಕರ್ಮಗಳು ಕಳೆದ ನಂತರ ಮನೆಯೊಳಗೆ ಕರೆಸಿಕೊಳ್ಳುತ್ತಾರೆ ಹೆರಿಗೆಯಾದ ನಂತರ ಮೂರು ತಿಂಗಳವರೆಗೆ ಮಹಿಳೆಯರು ತಣ್ಣೀರನ್ನ ಮುಟ್ಟುವಂತಿಲ್ಲ. ಅದ್ದರಿಂದ ಮನೆಯಲ್ಲಿ ಯಾರಾದರು ಅವರ ಸೇವೆಗಾಗಿ ನಿರತರಾಗಿರಬೇಕು ಹಾಗೂ ಶೀತದಿಂದ ದೂರವಿರುವಂತೆ ನೊಡಿಕೊಳ್ಳುವುದು ಕಡ್ಡಾಯವಾಗಿರುತ್ತದೆ. ಮೂರು ತಿಂಗಳಾದ ನಂತರ ಮಹಿಳೆಯರು ನದಿಯಲ್ಲಿ ಸ್ನಾನಮಾಡಿ ಎಲೆಶಾಸ್ತ್ರ ಮಾಡಿದ ನಂತರ ಮನೆಯನ್ನ ತೊಳೆದು ಒಳಗಡೆ ಪ್ರವೇಶ ಮಾಡಿಸಿಕೊಳ್ಳಲಾಗುತ್ತದೆ.

೩.೧೩. ನಾಮಕರಣ ಶಾಸ್ತ್ರ

ಜೇನು ಕುರುಬರಲ್ಲಿ ಮಗು ಹುಟ್ಟಿದ ೧೧ ನೆಯ ದಿನ ಮಗುವಿನ ಕಿರು ಬೆರಳನ್ನಿಡಿದು ಮಗುವಿನ ಹೆಸರನ್ನ ಕರೆದು ನಾಮಕರಣ ಶಾಸ್ತ್ರಮಾಡುತ್ತಾರೆ. ಮಕ್ಕಳಿಗೆ ಸಾಮಾನ್ಯವಾಗಿ ದೇವರ ಹೆಸರನ್ನಿಡಲಾಗುತ್ತದೆ. ಇವರ ಹೆಸರುಗಳು ಸಾಮಾನ್ಯವಾಗಿ ಬೊಮ್ಮ, ಬೊಮ್ಮಿ, ಕಾಳ, ಕಾಳಿ, ಕೆಂಚ, ಮಾರ, ಮಾರಿ ಇತ್ಯಾದಿಯಾಗಿರುತ್ತವೆ. ಆದರೆ ಇತ್ತೀಚಿನ ದಿನಗಳಲ್ಲಿ ಅವರ ಹೆಸರುಗಳು ಬದಲಾಗಿವೆ. ಅವರ ಹೆಸರುಗಳು ರಾಜು, ನಾಗರಾಜ. ನಾರಾಯಣ, ಶಿವ ಎಂದಿಡುತ್ತಿದ್ದಾರೆ.

೩.೧೪. ಋತು ಸಂಬಂಧಿ ಆಚರಣೆಗಳು

ಜೇನು ಕುರುಬರ ಹೆಣ್ಣುಮಕ್ಕಳು ಋತುಮತಿಯಾದಾಗ ಅವರಿಗಾಗಿ ಮನೆಯ ಹೊರಗಡೆ ಹೆಣ್ಣಿನ ಸೋದರಮಾವನು ಒಂದು ಗುಡಿಸಲನ್ನ (ಹಸಿರು ಚಪ್ಪರ/ ಗೂಡ್ಲು) ನಿರ್ಮಿಸುತ್ತಾನೆ. ಈ ಗುಡ್ಲನ್ನು ಮಾವು, ಹತ್ತಿ, ಹಲಸಿನ ಸೊಪ್ಪುಗಳಿಂದ ನಿರ್ಮಿಸಿರುತ್ತಾರೆ. ಹೀಗೆ ೯ ದಿವಸದವರೆಗೂ ಅಥವಾ ತಿಂಗಳವರೆಗೂ ಈಕೆ ಆ ಗುಡಿಸಿಲಿನಲ್ಲಿಯೇ ಇರಬೇಕು. ಹೊರಗೆ ಎಲ್ಲೂ ಹೋಗಬಾರದು. ಒಂದು ವೇಳೆ ಹೊರಬಂದರೆ ಸೋಂಕು ಆಗಬಹುದೆಂದು ನಂಬುತ್ತಾರೆ. ಹೀಗೆ ಹುಡುಗಿ ದೊಡ್ಡವಳಾದಳು ಎನ್ನುವುದಕ್ಕೆ 'ಕನ್ನೆಸೂತಕ' ಎನ್ನುತ್ತಾರೆ ಕನ್ಯೆಗೆ ಊಟದ ನಿಯಮಗಳು ಸಹಜವಾಗಿಯೇ ನಿಯಂತ್ರಣಗೊಂಡು ವಿಶೇಷತೆಯನ್ನು ಪಡೆಯುತ್ತದೆ. ಇಲ್ಲಿ ಹುಡುಗಿಯು ದೈಹಿಕವಾಗಿ ಮುಂಬರಬಹುದಾದ ವೈವಾಹಿಕ ಬಂಧನ ಹಾಗೂ ತಾಯ್ತನಕ್ಕೆ ಮಾನಸಿಕವಾಗಿ ಸಿದ್ದತೆಗೊಳ್ಳುವುದನ್ನು ಕಲಿಸುತ್ತಾರೆ. ತಲೆಗೆ ನೀರು ಮೀಯಿಸುವುದು ಮತ್ತು ತಲೆಗೆ ಬಟ್ಟೆ ಕಟ್ಟಿಕೊಂಡು ಮಲಗುವುದು, ತೂತು ಮಾಡಿದ ಕೊಬ್ಬರಿಯೊಳಗೆ ಬೇಯಿಸಿದ ಉದ್ದಿನಕಾಳನ್ನು ಒಳ್ಳೆಣ್ಣೆ ಬಿಟ್ಟು ನೆನಸಿ ಮೂರು ದಿನದ ನಂತರ ತಿನ್ನುವುದು. ಕನ್ಯೆಯ ನಂಟರಿಷ್ಟರೆಲ್ಲರೂ ಬಂದು ಎಲೆ ಅಡಿಕೆ, ಕಡಲೆ ಬೆಲ್ಲ, ಕೊಬ್ಬರಿ, ಚಿಕ್ಕಿಉಂಡೆ (ಎಳ್ಳುಂಡೆ) ಇವೆಲ್ಲವನ್ನು ಮಡಿಲಿಗೆ ಕಟ್ಟುವುದು. ಸ್ವಾಭಾವಿಕವಾಗಿಯೇ ಕನ್ಯೆಯ ಆರೋಗ್ಯವನ್ನು ಈ ದಿನಗಳಲ್ಲಿ ಕಾಪಾಡಿಕೊಳ್ಳುವಂತಹವು. ಅದರಡಿ ಎಲೆ ಬಿಡಿಸುವಶಾಸ್ತ್ರ ಮಾಡುವವರೆಗೆ ಇರಿಸಲಾಗುತ್ತದೆ. ಈ ಅವಧಿಯು ಸಾಮಾನ್ಯವಾಗಿ ಮೂರು ತಿಂಗಳಿಂದ ಒಂದು ವರ್ಷದವರೆಗಿರುತ್ತದೆ.

೩.೧೫. ವಿವಾಹ ಸಂಬಂಧಿ ಆಚರಣೆಗಳು

ಜೇನು ಕುರುಬರು ಮದುವೆಯಾಗಲಿಚ್ಚಿಸುವ ಯುವಕ ಯುವತಿಯರಿಗೆ ಮದುವೆಯೆಂಬ ಒಂದು ಸಮಾರಂಭವನ್ನ ಅತ್ಯಂತ ಸರಳ ರೀತಿಯಲ್ಲಿ ಏರ್ಪಡಿಸಿ ಅವರಿಗೆ ಒಂದು ಪ್ರತ್ಯೇಕ ಮನೆಮಾಡಿ ಬಿಟ್ಟು ಬಿಡುತ್ತಾರೆ. ಜೇನು ಕುರುಬರ ಕೌಟುಂಬಿಕ ವ್ಯವಸ್ಥೆಯು ಪಿತೃಪ್ರಧಾನ ವ್ಯವಸ್ಥೆಯಾಗಿದ್ದು ಏಕಪತಿತ್ವ ವ್ಯವಸ್ಥೆಯನ್ನ ಕಾಣಬಹುದಾಗಿದೆ. ಇವರಲ್ಲಿ ಇತರೆ ಹಿಂದು ಸಂಪ್ರದಾಯದಂತೆ ಹೆಣ್ಣನ್ನ ತರುವ ಮತ್ತು ಕೊಡುವ ಪದ್ದತಿಯನ್ನ ಕಾಣಬಹುದು. ಒಂದೇ ದೈವದ ಹೆಸರಿನ ಕುಲದವರಲ್ಲಿ ವಿವಾಹ ಜರುಗುವುದಿಲ್ಲ. ಇವರಲ್ಲಿ ಐದು ಜನ ಹೆಣ್ಣು ಕೇಳಲು

ಹೋಗುತ್ತಾರೆ. ಹೆಣ್ಣಿನ ಮನೆತನ ಮತ್ತು ಹೆಣ್ಣು ಒಪ್ಪಿಗೆ ಆದರೆ 'ಹೂ–ಸೋಡುವ' ಶಾಸ್ತ್ರ ಅಂದರೆ ಹೆಣ್ಣಿಗೆ ಹೂ ಮುಡಿಸೋದು ಮಾಡುತ್ತಾರೆ. ಹಾಗಾಗಿ ಸಮ ಸಮ ಖರ್ಚನ್ನು ಹಾಕಿಕೊಂಡು ಎರಡೂ ಕಡೆಯವರು ಜವಾಬ್ದಾರಿ ತೆಗೆದುಕೊಂಡು ವಿವಾಹ ಮಾಡಲು ಒಪ್ಪಿಕೊಳ್ಳುತ್ತಾರೆ. ಹೆಣ್ಣಿನ ಮನೆಯಲ್ಲಿಯೆ ಮದುವೆ ಶಾಸ್ತ್ರಗಳು ಸಾಮಾನ್ಯವಾಗಿ ನಡೆಯುತ್ತವೆ. ಮದುವೆ ಎನ್ನುವುದಕ್ಕೆ 'ಕೂಡೋದು' ಎಂಬ ಪದವನ್ನ ಜೇನು ಕುರುಬರು ಬಳಸುತ್ತಾರೆ.

ವಿವಾಹವಾದ ನಂತರ ಹೆಣ್ಣು ಗಂಡಿನ ಮನೆತನಕ್ಕೆ ಸೇರುತ್ತಾಳೆ. ಹಾಗಾಗಿ ಮಕ್ಕಳಿಗೆ ತಂದೆಯ ಮನೆ ಕಡೆಯ ಹೆಸರು ಬರುತ್ತದೆ. ಹೀಗಾಗಿ ಸಾಮಾಜಿಕ ವ್ಯವಸ್ಥೆಯು ಸಾಮಾನ್ಯವಾಗಿ ವಿವಿಧ ಹೆಸರಿನ ಕುಟುಂಬಗಳಿಂದ ರಚಿತವಾಗಿದೆ. ಇದು ಸಹಜವಾಗಿಯೇ ವಂಶಾಭಿವೃದ್ಧಿ ಹಾಗೂ ಸೌಹಾರ್ಧದ ಸಂಬಂಧಕ್ಕೆ ಸಾಕ್ಷಿಯಾಗಿದೆ. ಹೊಸಹಳ್ಳಿಯ ನಾಗಪ್ಪನವರ ಹೇಳಿಕೆಯ ಪ್ರಕಾರ ಗಂಡಿನ ಮನೆಯಿಂದ ಎಲೆ, ಅಡಿಕೆ, ಸೀರೆ, (ಹಸೆ) ಮಣೆ ಹೊಗೆಸೊಪ್ಪು ಇತ್ಯಾದಿಗಳನ್ನು ಹೆಣ್ಣಿನ ಮನೆಗೆ ತಂದು ಇರಿಸುತ್ತಾರೆ. ಆನಂತರ ಹೆಣ್ಣಿಗೆ ಸೀರೆ ಉಡಿಸಿ, ಕರಿಮಣಿ ಕಟ್ಟಿ ಚಾವಡಿಗೆ ಹೆಣ್ಣು ಮತ್ತು ಗಂಡು ಇಬ್ಬರನ್ನೂ ಕರೆದು ತಂದು ಕೂಡಿಸುತ್ತಾರೆ, ಈ ಸಂದರ್ಭದಲ್ಲಿ ಗಂಡಿಗೂ ಕೂಡ ಪಂಚೆ, ಮೇಲಂಗಿ, ಟವಲ್ ಇತ್ಯಾದಿಗಳನ್ನು ಹೆಣ್ಣಿನ ಮನೆಯವರು ನೀಡಿರುತ್ತಾರೆ. ಅಲ್ಲಿಗೆ ಬಂದ ನೆಂಟರಿಷ್ಟರೆಲ್ಲರಿಗೂ ಎಲೆ ಅಡಿಕೆಯನ್ನು 'ಕುಲಕ್ಕೆ ಒಬ್ಬರಂಗೆ' ಕೊಡ್ತಾರೆ. ಮಧುವೆ ಸಂದರ್ಭದಲ್ಲಿ ಎಲ್ಲರಿಗೂ ಊಟದ ವ್ಯವಸ್ಥೆಯಿದ್ದು, ಮುದ್ದೆ, ಅನ್ನ, ಸಾರು, ಪಾಯಸ ನೀಡಲಾಗುತ್ತದೆ. ಆದರೆ ಇತ್ತೀಚೆಗೆ ಬೂಂದಿ ಅಥವ ಇತರೆ ಸಿಹಿ ತಿನಿಸುಗಳನ್ನ ಮಾಡುವ ರೂಢಿ ಇದೆ ಎಂದು ಹೇಳುತ್ತಾರೆ.

ಮದುವೆಯ ನಂತರ ಗಂಡಿನ ಮನೆಯಲ್ಲಿ ಹೊಸಲು ದಾಟುವ ('ಹೊಸಲ್‌ದಾಟ್‌ಗ') ಶಾಸ್ತ್ರ ಮಾಡುತ್ತಾರೆ. ಇಲ್ಲಿ ಒಂದು ಕೈ ಎಣ್ಣೆ (ಹರಳೆಣ್ಣೆ) ದೀಪಹಚ್ಚಿ ಇಡುತ್ತಾರೆ. ಪಡಿ ಅಕ್ಕಿಯನ್ನು ಬಲದ ಕಾಲಲ್ಲಿ ಒದ್ದು ಮನೆಯ ಒಳಗೆ ಹೆಣ್ಣು ಬರಬೇಕು. ಪ್ರಸ್ತ ಶಾಸ್ತ್ರವನ್ನು 'ರೂಂ ಕೂಟಗ' ಎಂದು ಕರೆಯುತ್ತಾರೆ. ಇದು ತಾಯಿಯ ಮನೆಯಲ್ಲಿ ನಡೆಯುವ ಕಾರ್ಯ. 'ಕ್ವಾಳಿಭೋಗು' (ಕರಿಮಣಿ ಪೋಣಿಸುವುದು) ಈ ಸಂದರ್ಭದಲ್ಲಿ ನಡೆಯುವ ಸಂಪ್ರದಾಯ, 'ರೂಂ ಕೂಟಗ ಶಾಸ್ತ್ರ' ವನ್ನು 'ರೂಂ ಮಜ್ಜಿಗೆ ಬಿಡು' ಎಂತಲೂ ಕರೆಯುತ್ತಾರೆ. ಎಲೆಅಡಿಕೆ, ಹಣ್ಣು ಇತ್ಯಾದಿಗಳನ್ನು ಕೋಣೆಯಲ್ಲಿ ಜೋಡಿಸಿರುತ್ತಾರೆ. 'ಹಿರಿಯರ ಕಾಲಿಡಿದು' ನಂತರ ಗಂಡು ಹೆಣ್ಣು ಒಳಗೆ ಹೋಗಬೇಕು. ಐದು ದಿನಗಳ ನಂತರ ಹುಡುಗನ ಮನೆಯವರು ಅವರನ್ನು ಕರೆದೊಯ್ಯಲು ಬರುತ್ತಾರೆ. ಆಗ ಮಡಿಲಕ್ಕಿಯನ್ನು (ಒಂದು ಅಚ್ಚು ಬೆಲ್ಲ, ತೆಂಗಿನಕಾಯಿ, ಬಾಳೆ ಹಣ್ಣು, ಎಲೆ ಅಡಿಕೆ, ಅರಿಸಿನ–ಕುಂಕುಮ) ಹುಡುಗಿಗೆ ನೀಡುತ್ತಾರೆ*(ಮಾ: ಭೊಮ್ಮಿ ನಾಗಾಪುರ ಹಾಡಿ).*

ಇವರಲ್ಲಿ ವಿವಾಹ ವಿಚ್ಛೇದನ ಮತ್ತು ಮರುಮದುವೆಗೆ ಮುಕ್ತ ಅವಕಾಶವಿದೆ. ವಿಧವೆ ಅಥವಾ ವಿಧುರರ ಇಚ್ಛೆಗನುಸಾರವಾಗಿ 'ಕೂಡಾವಾಳಿ' ನಡೆದು ಹೋಗುತ್ತದೆ. ಇದಕ್ಕೆ 'ಕೂಡಾವಳಿ ಕೆಲ್ಪುಗ' ಎಂದು ಕರೆಯುತ್ತಾರೆ. ಅವರವರ ಆಸೆಗನುಗುಣವಾಗಿ ಮರು ಮದುವೆಯ ಸಂಬಂಧಗಳು ಜರುಗುತ್ತವೆ. ಆ ಸಮಯದಲ್ಲಿ ಯಾವುದೇ ಸಂಪ್ರದಾಯವಿಲ್ಲ. ಸುಮ್ಮನೆ ಹಾಗೇ ಜೊತೆಯಲ್ಲಿ, ಗಂಡ ಇಲ್ಲದವಳು ಮತ್ತು ಹೆಂಡತಿ ಇಲ್ಲದವನು ಹಾಗೇ ಕೂಡಿಕೊಳ್ಳುತ್ತಾರೆ. ಅಂದರೆ ಮನೆಯಲ್ಲಿ ತಂದು ಇಟ್ಟುಕೊಳ್ಳುತ್ತಾರೆ ಎಂದು ಹೇಳುತ್ತಾರೆ.

೩.೧೬. ಮರಣ ಸಂಬಂಧಿ ಆಚರಣೆಗಳು

ಜೇನು ಕುರುಬರು ಸಾವಿನಂಚಿನಲ್ಲಿರುವ ವ್ಯಕ್ತಿಯನ್ನ ಮನೆಯಿಂದ ಹೊರಗಿರುವ ಗುಡಿಸಿಲಿನಲ್ಲಿಡಲಾಗುತ್ತದೆ. ಮರಣದ ನಂತರ ಆ ಗುಡಿಸಲನ್ನ ಬೆಂಕಿಯಿಟ್ಟು ಸುಡಲಾಗುತ್ತದೆ. ಕೆಲವೆಡೆ ನೆರಳೆತ್ತುವ ಶಾಸ್ತ್ರ ಮಾಡುತ್ತಾರೆ. ಇದರ ಪ್ರಕಾರ ಸತ್ತ ಮೇಲೆ ಕೆಲವು ದಿನಗಳು ಕಳೆದ ನಂತರ ಬಿದಿರು ಬೊಂಬಿನಲ್ಲಿ ಮೂಳೆಗಳನ್ನಿಟ್ಟು ಪೂಜೆಸಲ್ಲಿಸುತ್ತಾರೆ ಹಾಗೂ ಸತ್ತ ೧೫ ನೆ ದಿವಸ ಸತ್ತವರ ಹೆಸರಿನಲ್ಲಿ ಅವರ ಸಮಾದಿಯ ಬಳಿ ಎಡೆಹಾಕುವ ಶಾಸ್ತ್ರ ಮಾಡುತ್ತಾರೆ. ವ್ಯಕ್ತಿಯ ಮರಣದ ನಂತರ ಬಿಳಿ ಬಟ್ಟೆಯಲ್ಲಿ ಸುತ್ತಿ ಮಣ್ಣಿನಲ್ಲಿ ಹೂಳಲಾಗುತ್ತದೆ. ಸತ್ತ ೧೫ನೆಯ ದಿನ ಸಂಪ್ರದಾಯದಂತೆ ದೇವರಗುಡ್ಡ ಮನೆಗೆ ಬಂದು ಸತ್ತ ವ್ಯಕ್ತಿ ಯ ಆತ್ಮವನ್ನ ಬರಮಾಡಿಕೊಂಡು ಸಾವಿಗೆ ಕಾರಣವನ್ನ ಕೇಳಿ ಅವರ ಬಯಕೆಗಳೇನಾದರು ಇದ್ದಲ್ಲಿ ಅದನ್ನ ಈಡೇರಿಸಲು ಕ್ರಮ ಕೈಗೊಳ್ಳುತ್ತಾರೆ.

೩.೧೭. ಬೇಟೆಯ ವಿಧಾನ

ಜೇನು ಕುರುಬರು ಜೇನಿನ ಬೇಟೆಯೊಂದಿಗೆ ಪ್ರಾಣಿ ಪಕ್ಷಿಗಳ ಬೇಟೆಯನ್ನು ಬಲ್ಲವರು. ಅವರ ಬೇಟೆಯ ಕೆಲವು ತಂತ್ರಗಳನ್ನು ಈ ರೀತಿ ಹೇಳುತ್ತಾರೆ, ಸಣ್ಣ ಹಕ್ಕಿಪಕ್ಷಿಗಳನ್ನು ಹಿಡಿಯಲು ಸಾಮಾನ್ಯವಾಗಿ ಬಿದಿರಿನಿಂದ ಮಾಡಿದ ಬಿಲ್ಲು ಹಾಗೂ ಬೀಸಲಿಕ್ಕೆ ಬಾಣದ ಬದಲಿಗೆ ಸಣ್ಣ ಸಣ್ಣ ಕಾಯಿಗಳನ್ನು ಹಾಗೂ ಸಣ್ಣ ಸಣ್ಣ 'ಮಣ್ಣುಂಡೆ' /ಕಲ್ಲುಗಳನ್ನ ಬಳಸುತ್ತಾರೆ. ಅವರು ಬೀಸುವ ವೇಗಕ್ಕೆ ಬಹು ಎತ್ತರದಲ್ಲಿನ ಮಾವಿನಕಾಯಿಯು ಕೆಳಗೆ ಬೀಳುತ್ತದೆ ಹಾಗೂ ಹಕ್ಕಿ ಪಕ್ಷಿಗಳನ್ನು ಹೊಡೆಯುತ್ತಾರೆ. ಕೆಲವೊಮ್ಮೆ ಇವರುಗಳು ಒಂದು ಬಗೆಯ ಕಳಿ (ಅಂಟು) ಮಾಡುತ್ತಾರೆ. ಈ ಕಳಿಯನ್ನು ಸಾಮಾನ್ಯವಾಗಿ ಹಣ್ಣು ಬಿಡುವ ಗಿಡಮರಗಳಿಗೆ ಅಂಟಿಸುತ್ತಾರೆ. ಹಣ್ಣಿನ ಆಸೆಗಾಗಿ ಬರುವ ಹಕ್ಕಿ ಪಕ್ಷಿಗಳು ಈ ಅಂಟಿನ ಮೇಲೆ ರೆಕ್ಕೆ ಬಡಿಯುತ್ತಾ ಕುಳಿತುಕೊಂಡಾಗ, ರೆಕ್ಕೆಗಳು ಈ ಕಳಿಗೆ ಅಂಟಿಕೊಂಡು ಹೊರಬರಲಾರದೇ ಇರುವದನ್ನು ನೋಡಿಕೊಂಡು ಬಲವಾದ ಬಿದಿರಿನ ಕಡ್ಡಿಯ ಸಹಾಯದಿಂದ ಆ ಹಕ್ಕಿಯನ್ನು ಹೊಡೆಯುತ್ತಾರೆ. ಆಗ ಪಕ್ಷಿಗಳು ಕೆಳಗೆ ಬೀಳುತ್ತವೆ. ಪಕ್ಷಿಗಳು ದೊಡ್ಡವಾಗಿದ್ದರೆ ಅದನ್ನ ತೆಗೆದು ಸುಟ್ಟು ಮಸಾಲೆ ಬೆರಸಿ ಸಾರುಮಾಡಿತ್ತಾರೆ. ಸಣ್ಣವಾಗಿದ್ದರೆ ಸುಟ್ಟು ಅರಿದು, ಆನಂತರ ಕಾರದಪುಡಿ ಮತ್ತು ಉಪ್ಪನ್ನ ಬೆರಸಿ ಹಾಗೆಯೆ ಹಂಚಿಕೊಂಡು ತಿನ್ನುತ್ತಾರೆ.

ಉರುಳು ಹಾಕಿ ಮೊಲ, ಕಾಡುಬೆಕ್ಕು, ಅಳಿಲು ಇತ್ಯಾದಿ ಪ್ರಾಣಿಗಳನ್ನು ಹಿಡಿಯುತ್ತಾರೆ. ಬಹಳ ಸೂಕ್ಷ್ಮ ಮತಿಯಾದ ಮೀನು ಹಿಡಿಯುವ ಕಲಾತಂತ್ರವೂ ಇವರಿಗೆ ಕರಗತವಾಗಿದೆ. ಕಾರೇಕಾಯಿಗಳನ್ನು ತಂದು ಜಜ್ಜಿ ನೀರಿನಲ್ಲಿ ಕದಡಿ ಬಿಡುತ್ತಾರೆ. ಆಗ ಇದರ ಆಸೆಗಾಗಿ ಮೀನುಗಳು ಮೇಲೆ ಬಂದು ತಿನ್ನಲು ತೊಡಗಿದಾಗ ಮೀನಿಗೆ ಒಂದು ರೀತಿಯ ಮತ್ತು ಬಂದು ಮೇಲೆ ತೇಲತೊಡಗಿದ ಕೊಡಲೇ ಹಿಡಿಯುತ್ತಾರೆ. ಅಮಾವಾಸ್ಯೆಯ ರಾತ್ರಿ ವೇಳೆಯಲ್ಲಿ (ಬೆಂಕಿ ಒತ್ತೆಕಟ್ಟಿ) ಜೇನು ತೆಗಿಯುವುದು ಇವರ ರೂಢಿ ಹಾಗೂ ಇದಕ್ಕೆ ತಮ್ಮದೇ ಆದ ಕಾರಣಗಳನ್ನು ಕೊಡುತ್ತಾರೆ. ಜೂನ್ ಮತ್ತು ಜುಲೈ ತಿಂಗಳು ಇದಕ್ಕೆ ಪ್ರಶಸ್ತ ಕಾರಣ ಆ ಅವಧಿಯು ಚೈತ್ರ ಮಾಸವಾಗಿದ್ದು ಜೇನಿನ ಸಂಗ್ರಹಣೆ ಹೆಚ್ಚಾಗಿರುತ್ತದೆ.

೩.೧೮. ನಾಟ ವೈಧ್ಯ ಮತ್ತು ಆರೋಗ್ಯ ಸುಧಾರಣೆ

ಜೇನು ಕುರುಬರಿರುವ ಹಾಡಿಗಳಲ್ಲಿ/ಊರುಗಳಲ್ಲಿ ಅಮ್ಮ, ಕರ್ಜಿ, ಕುರ, ಕಾಯಿಲೆ ಇತ್ಯಾದಿಗಳು ಬಂದಾಗ ಪೂಜೆಗಳು ಮಾಡುವುದು, ದೇವರು ಕರೆಯುವುದು ಮುಂತಾದವುಗಳನ್ನ ಮಾಡುತ್ತಾರೆ. ಕೊಂತಿ ಪೂಜೆಯನ್ನು, ಆರೋಗ್ಯವನ್ನು ಮರಳಿ

ಪಡೆಯುವುದಕ್ಕಾಗಿ ಹೆಣ್ಣುಮಕ್ಕಳು ಪೂಜಿಸುತ್ತಾರೆ. ಗೋಣಿಮರದ ಕೆಳಗೆ ದೇವರು ಬರುವುದು (ಅಯ್ಯಪ್ಪ) ಇವರಲ್ಲಿನ ಒಂದು ನಂಬಿಕೆ. ಇನ್ನು ನಿಸರ್ಗದಲ್ಲಿನ ಗಿಡ ಮರ ಬಳ್ಳಿಗಳ, ನಾರು, ಬೇರು, ಕಾಯಿ ಸೊಪ್ಪುಗಳನ್ನು ಬಳಸಿ 'ಪ್ರಥಮ ವೈದ್ಯ' ಮಾಡಿಕೊಳ್ಳುವುದು ರೂಢಿಯಲ್ಲಿದೆ. ಗೀಚುಗಾಯ ಅಥವಾ ಕೈಗೆ ಪೆಟ್ಟಾದರೆ ಜೊನ್ನೆ ಮರದ ಚಕ್ಕೆಯನ್ನು ಜಜ್ಜಿ ಗಾಯದ ಸುತ್ತ ಲೇಪಿಸಿ ಬೆಂಕಿಯ ಶಾಖ ಮುಟ್ಟಿಸುತ್ತಾರೆ. ಕಜ್ಜಿ, ಹುಣ್ಣು ಇತ್ಯಾದಿಗಳು ಬೇರೆ ಹಾಡಿಗೆ ಹೋಗಿಬಂದು ಅಂಟಿಸಿಕೊಂಡರೆ. 'ರೋಜಾ-ಸೊಪ್ಪನ್ನು ಅರೆದು ಗಾಯಕ್ಕೆ ಪಟ್ಟು ಹಾಕುತ್ತಾರೆ. ಗಾಯ ವಾಸಿ ಆಗುವವರೆಗೂ ಈ ಪಟ್ಟು ಬೀಳುವುದಿಲ್ಲ ಎಂದು ಹೇಳುತ್ತಾರೆ. ಮೆಣಸು, ಬೆಳ್ಳುಳ್ಳಿ ಜಜ್ಜಿ ಕೈ ಔಷಧಿ ತಯ್ಯಾರು ಮಾಡಿಕೊಳ್ಳುತ್ತಾರೆ. ಮುಳ್ಳು ಹೊಕ್ಕಿಕೊಂಡು ನೋವು ಬಂದಾಗ ಬೆಣಚು ಕಲ್ಲು ಬೆಂಕೀಲಿ ಕಾಸಿ ಆ ಜಾಗವನ್ನು ಸುಡೋದು ಒಂದು ಚಿಕಿತ್ಸಾ ವಿಧಾನವಾಗಿದೆ. ಕಾಫಿ ಪುಡಿಯನ್ನು ಗಾಯಕ್ಕೆ ಕಟ್ಟುವುದು, ಕೈಬೇವಿನಸೊಪ್ಪು (ಕಹಿ-ಬೇವಿನಸೊಪ್ಪು) ಅರೆದು ಗಾಯಕ್ಕೆ ತೆಯ್ದು ಹಚ್ಚುವುದು. ಅಲ್ಲದೆ 'ಸಣ್ಣಸೂರಾಲ್ ಸೊಪ್ಪನ್ನು' ಜ್ವರ ಬಂದಾಗ ಕಷಾಯದ ರೂಪದಲ್ಲಿ ಬಳಸುತ್ತಾರೆ.

೩.೧೯. ಸಮಾಜೊ-ಆರ್ಥಿಕ ಸ್ಥಾನಮಾನ

ಜೇನು ಕುರುಬರು ಈ ಹಿಂದೆ ಆದಿಮ ಜೀವನವನ್ನ ನಡೆಸುತ್ತಿದ್ದರು. ಜೇನುಕುರುಬರು ತಮ್ಮ ಜೀವನಕ್ಕಾಗಿ ಜೇನುಬೇಟೆ ಮತ್ತು ಆಹಾರ ಸಂಗ್ರಹಣೆಯಲ್ಲಿ ತೊಡಗಿದ್ದರೆ ಬೆಟ್ಟಕುರುಬರು ಕುಮ್ರಿ ಬೇಸಾಯ ಮತ್ತು ಬುಟ್ಟಿ ಹೆಣೆಯುವ ಕಾಯಕದಲ್ಲಿ ತೊಡಗಿದ್ದರೆಂದು ಗೆಜೆಟಿಯರ್ ಆಫ್ ಕೂರ್ಗ(Richter, R G: ೧೮೭೦) ನಲ್ಲಿ ಹೇಳಿದ್ದಾರೆ. ಐತಿಹಾಸಿಕ ವರದಿಗಳ ಪ್ರಕಾರ ಜೇನುಕುರುಬರು ನೀಲಗಿರಿ ಮತ್ತು ವೈನಾಡು ಭಾಗಗಳಲ್ಲಿ ಸಂಚರಿಸುತ್ತಿದ್ದರೆಂದು (ಥರ್ಸ್ಟನ್ ಮತ್ತು ರಂಗಾಚಾರಿ:೧೯೦೯) ತಿಳಿಸಿದ್ದಾರೆ. ಈಗಿನ ಪರಿಸ್ಥಿತಿಯಲ್ಲಿ ಇವರು ಕೊಡಗು ಭಾಗದ ಕಾಫಿ ತೋಟಗಳಲ್ಲಿ ದಿನ ಗೂಲಿಗಳಾಗಿ ದುಡಿಯುತ್ತಿದ್ದಾರೆ (ಅಯ್ಯಪ್ಪನ್:೧೯೭೩) ಹಾಗೂ ನಾಗರಹೊಳೆಯ ಭಾಗದ ಅರಣ್ಯ ಇಲಾಖೆಯಡಿ ಕೂಲಿಗಳಾಗಿ ಕೆಲಸಮಾಡುತ್ತಿದ್ದಾರೆ.

ಜೇನು ಕುರುಬರಲ್ಲಿ ಕೆಲವರು ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಬರುವ ಅರಣ್ಯ ಇಲಾಖೆಯಲ್ಲಿ 'ಗಾರ್ಡ್', 'ವಾಚರ್' ಕೆಲಸವನ್ನು ಮಾಡುತ್ತಿದ್ದಾರೆ. ಇವರಲ್ಲಿ 'ಖಾಯಂ' ಮತ್ತು 'ತಾತ್ಕಾಲಿಕ' ಹುದ್ದೆಗಳನ್ನು ಉಳ್ಳವರು ಇದ್ದಾರೆ. ಇನ್ನು ಕೆಲವರು ಆನೆಗಳನ್ನು ನೋಡಿಕೊಳ್ಳುವ 'ಮಾವುತನ' ವೃತ್ತಿಯನ್ನು ಮಾಡುವುದನ್ನು ಕಾಣಬಹುದು. ಮತ್ತೇ ಕೆಲವರು ಅವರ ಬುಡಕಟ್ಟಿನ ವೃತ್ತಿಯಾದ ಗೆಡ್ಡೆ, ಗೆಣಸು, ಜೇನು ಇತ್ಯಾದಿಗಳನ್ನು ಸಂಗ್ರಹಿಸಿ ತಂದು ಹತ್ತಿರದ 'ಸಂತೆ' ದಿನಗಳಲ್ಲಿ ಮಾರಿ ಬಂದ ಹಣದಿಂದ ಅಗತ್ಯ ವಸ್ತುಗಳನ್ನು ಕೊಂಡುಕೊಳ್ಳುವುದು ರೂಢಿಯಲ್ಲಿದೆ. ಇದರೊಂದಿಗೆ ಹೆಂಗಸರುಗಳು ಸರ್ಕಾರದ ವತಿಯಿಂದ ಕಾಡಿನ ಒಳಗೆ ನಿರ್ಮಾಣವಾಗುವ ರಸ್ತೆಕೆಲಸಕ್ಕಾಗಿ ಹೋಗುತ್ತಾರೆ. ಕೂಲಿ-ಗಂಡಸರಿಗೆ ೭೫ ರೂ. ಹಾಗೂ ಹೆಂಗಸರಿಗೆ ೫೦ ರೂ. ಇನ್ನು ಕೆಲವರು ತಮ್ಮ ಹಾಡಿಗಳಲ್ಲಿ ಕೋಳಿ, ಮೇಕೆ, ಹಸು, ಕುರಿಗಳನ್ನ ಸಾಕುತ್ತಿದ್ದಾರೆ. ಮೊರ, ಕುಕ್ಕೆಗಳನ್ನು ಕೂಡ ಮಾಡುತ್ತಾರೆ. ಪ್ರೌಢ ಶಾಲೆಯವರೆಗೆ ಶಿಕ್ಷಣ ಪಡೆದಿರುವ ಕೆಲವರು ಆಶ್ರಮ ಶಾಲೆಗಳಲ್ಲಿ ಅರೆಕಾಲಿಕ ಶಿಕ್ಷಕರಾಗಿ, ಮಹಿಳೆಯರು ಆರೋಗ್ಯ ಇಲಾಖೆಯ ಸಹಾಯಕ ಸಿಬ್ಬಂದಿಯರಾಗಿ ಕೆಲಸಮಾಡುತ್ತಿದ್ದಾರೆ.

ಜೇನು ಕುರುಬರಲ್ಲಿ ಕೆಲವರು ಕುಲ ಕಸುಬುನ್ನ ಅವಲಂಬಿಸಿರುವವರಿದ್ದಾರೆ' ಇತ್ತೀಚೆಗೆ ಸರ್ಕಾರದ ವತಿಯಿಂದ ನೀಡಲಾಗಿರುವ ಜಮೀನುಗಳನ್ನು ಸಾಗುವಳಿ ಮಾಡಿ ಹತ್ತಿ, ಜೋಳ, ಹರಳು ಇತ್ಯಾದಿಗಳನ್ನು ವ್ಯವಸಾಯ ಮಾಡುವುದನ್ನು ಕಾಣಬಹುದು. ಆದರೆ ಕಾಡು ಪ್ರಾಣಿಗಳ

ಕಾಟದಿಂದ ಸುಮಾರು ಜನ ವ್ಯವಸಾಯವನ್ನ ತೊರೆದು ಕೃಷಿ ಕೂಲಿಗಳಾಗಿ ದುಡಿಯುತ್ತಿದ್ದಾರೆ. ಪುನರ್ವಸತಿ ನಿರ್ಮಾಣ ಕಾರ್ಯವು ಸಹಜವಾಗಿಯೇ ಈ ಬುಡಕಟ್ಟುಗಳ ಬದುಕಿನಲ್ಲಿ ಹೊಸ ತಿರುವನ್ನು ತರುವ ಸಾಹಸ ಮಾಡಿದರೂ ಇನ್ನು ಕೆಲವರಿಗೆ ಕಾಡಿನಲ್ಲಿ ಮುಕ್ತ ಪ್ರವೇಶ ನಿಯಂತ್ರಣಗೊಂಡಿರುವುದಕ್ಕೆ ಅಸಮಾಧಾನವಿದೆ. ನಾವು ಕಾಡಿನ ಮಕ್ಕಳು ('ಕಾಡರಸ್ ಮಕ್ಕನಂಗ') ಎನ್ನುವ ಇವರು ನಮಗೆ/ನನಗೆ (ನಂಗ) ಹುಲಿ, ಕರಡಿ ಆನೆಗಳ ಭಯವಿರುವುದಿಲ್ಲ ಎಂದು ತಮಗೆ ತಾವೆ ಹೆಮ್ಮೆಯಿಂದ ಹೇಳುತ್ತಾರೆ. ಕಾಡಿನ ಮೂಲೆ ಮೂಲೆಯೂ ಪರಿಚಯವಿರುವ ಇವರು ಒಬ್ಬೊಬ್ಬರೆ ಧೈರ್ಯವಾಗಿ ಕಾಡಿನಲ್ಲಿ ಓಡಾಡುವ ಹಾಗೇ ಯಾರೂ ಓಡಾಡಲಾರರು ಇವರಲ್ಲಿ ತುಂಬಾ ಆತ್ಮವಿಶ್ವಾಸ ಮತ್ತು ಅವರ ಸ್ವಾವಲಂಬಿ ಬದಕು ಸಹಜವಾಗಿಯೇ ಇವರಲ್ಲಿ ಕೆಲವರನ್ನು ಇನ್ನೂ ಕಾಡಿನೊಳಗೆ ವಾಸವಾಗಿರಲು ಪ್ರೇರೇಪಿಸಿದೆ.

೩.೨೦. ಶಿಕ್ಷಣ

ಜೇನು ಕುರುಬರಲ್ಲಿ ಇತ್ತೀಚಿನ ದಿನಗಳಲ್ಲಿ ಶಿಕ್ಷಣದ ಬಗೆಗೆ ಅರಿವು ಮೂಡಿದ್ದು ತಮ್ಮ ಮಕ್ಕಳನ್ನ ಶಾಲೆಗಳಿಗೆ ಕಳುಹಿಸಲು ಆಸಕ್ತರಾಗಿರುವುದು ಕಂಡುಬರುತ್ತದೆ. ಆಶ್ರಮ ಶಾಲೆಗಳಲ್ಲಿ ಮತ್ತು ನವೋದಯ ಮಾದರಿ ವಸತಿ ಶಾಲೆಗಳಲ್ಲಿ ಜೇನು ಕುರುಬ ಬುಡಕಟ್ಟಿನ ಮಕ್ಕಳು ಓದುತ್ತಿದ್ದಾರೆ. ಅವರಲ್ಲಿ ಕೆಲವರು ಈಗಾಗಲೇ ಎಸ್.ಎಸ್.ಎಲ್.ಸಿ. ಯನ್ನು ಮುಗಿಸಿ ಕಾಲೇಜು ಶಿಕ್ಷಣ ಮಾಡಲು ಹಿಂಜರಿದರೆ ಕೆಲವರು ಮುಂದೆ ಓದುವ ಆಸಕ್ತಿಯನ್ನು ತೋರಿದ್ದಾರೆ. ಆದರೆ ಹಲವಾರು ಕಾರಣಗಳಿಂದ ವಿದ್ಯಾಭ್ಯಾಸವನ್ನ ಮೊಟಕುಗೊಳಿಸುವವರ ಸಂಖ್ಯೆಯೇ ಹೆಚ್ಚಾಗಿದೆ.

೩.೨೧. ಅಭಿವೃದ್ಧಿಯ ಪ್ರಸ್ತುತ ಸ್ಥಿತಿ

ಜೇನು ಕುರುಬರು ಇತರೆ ಬುಡಕಟ್ಟುಗಳಿಗೆ ಹೋಲಿಸಿದಲ್ಲಿ ಹೊರಗಿನವರೊಂದಿಗೆ ಬೆರೆಯಲು ಹಿಂಜರಿಯುತ್ತಾರೆ. ಇವರ ಹಾಡಿಗಳು ಅರಣ್ಯದ ಅಂಚಿನಲ್ಲಿ/ಅರಣ್ಯದ ಒಳಗಡೆಯಿರುವುದರಿಂದ ಸರ್ಕಾರದ ಯೋಜನೆಗಳು ಇವರಿಗೆ ನಿರೀಕ್ಷಿತ ಮಟ್ಟದಲ್ಲಿ ತಲುಪಲು ವಿಫಲವಾಗಿವೆ. ಅಲ್ಲದೆ ಕೆಲವು ಸ್ವಯಂ ಸೇವಾ ಸಂಸ್ಥೆಗಳಾದ ಕಾರ್ಡ, ಡೀಡ್ಸ, ಫೆಡೀನ, ಸ್ವಾಮಿ ವಿವೇಕಾನಂದ ಯೂತ್ ಮೂವಮೆಂಟ್, ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ ಇತ್ಯಾದಿಗಳು ಈ ಸಮುದಾಯದ ಸೇವೆಗಾಗಿ ದುಡಿಯುತ್ತಿವೆ. ಅಭಿವೃದ್ಧಿಯ ವಿವರವಾದ ವಿಮರ್ಶೆಯನ್ನ ಅಧ್ಯಾಯ ೫ ರಲ್ಲಿ ಕಾಣಬಹುದಾಗಿದೆ.

೩.೨೨. ಸಂಶೋಧನೆಯ ಅವಧಿಯಲ್ಲಿ ಕಂಡುಬಂದ ಸತ್ಯಾಂಶಗಳು

ಅಧ್ಯಯನದ ಅನುಕೂಲಕ್ಕಾಗಿ ಈ ಕೆಳಗಿನ ಹಾಡಿಗಳನ್ನ ಯಾಧೃಚಿಕ ಮಾದರಿ ಸಮೀಕ್ಷೆಯ ವಿಧಾನದ ಮೂಲಕ ಆಯ್ದುಕೊಂಡು ಸಮೀಕ್ಷೆ ಮಾಡಲಾಗಿದೆ.

ವೃತ್ತಚಿತ್ರ3.1. ಸಂಶೋದನೆಗೆ ಆಯ್ದುಕೊಂಡ ಜೇನುಕುರುಬ ಕುಟುಂಬಗಳ ಲಿಂಗವಾರು ಜನಸಂಖ್ಯೆ



ಕೋಷ್ಟಕ: ೩.೧ ಜೇನು ಕುರುಬರ ಹಾಡಿಗಳವಾರು ಜನಸಂಖ್ಯೆ ಮತ್ತು ಸಾಕ್ಷರತೆ


ಜಿಲ್ಲೆ /ತಾಲ್ಲೂಕ/ ಹಾಡಿ	ಕುಟುಂಬ	ಜನಸಂಖ್ಯೆ	ಪುರುಷರು	ಮಹಿಳೆಯರು	ಸಾಕ್ಷರರು
ಮೈಸೊರು ಜಿಲ್ಲೆ					
ನಂಜನಗೂಡುತಾಲ್ಲೂಕು					
ಚಿಲಕಹಳ್ಳಿ	೧೩	೬೯	೩೮	೩೧	೨೯
ದೋರನಕಟ್ಟೆ	೩೧	೧೫೩	೭೭	೭೬	೬೪
ಹುಣಸೂರು ತಾಲ್ಲೂಕು					
ನಾಗಾಪುರ ೩	೨೭	೧೪೩	೬೮	೭೫	೭೧
ಉದ್ದೂರು ಕಾವಲು	೬	೩೩	೧೮	೧೫	೧೪
ವೀರನಹೋಸಹಳ್ಳಿ	೪೧	೧೬೫	೮೩	೮೨	೭೪
ಭರತವಾಡಿ	೩೧	೧೩೧	೬೯	೬೨	೫೪
ದಾಸನಪುರ	೩೦	೧೧೯	೫೬	೬೩	೪೭
ಚಿಕ್ಕಹೆಜ್ಜೂರು	೩೧	೧೩೫	೬೩	೭೨	೬೧
ಕೊಳವಿಗೆ	೨೮	೧೦೬	೫೯	೪೭	೪೩
ಪೆಂಜಳ್ಳಿ	೧೭	೯೨	೪೫	೪೭	೪೧
ಕಾಳೆನಹಳ್ಳಿ	೨೦	೯೬	೫೩	೪೩	೩೪
ಬಲ್ಲೆನಹಳ್ಳಿ	೨೩	೯೯	೪೬	೫೩	೪೨
ಮಾದಯ್ಯನಕಟ್ಟೆ	೨೦	೯೨	೫೨	೪೦	೩೯
ನೇರಳೆಕುಪ್ಪೆ ಬಿ	೨೬	೧೦೯	೪೯	೬೦	೪೮
ಬೆಲನಹೂಸಹಳ್ಳಿ	೩೨	೧೩೩	೭೧	೬೨	೪೪
ಹೆಚ್ ಡಿ ಕೋಟೆ ತಾಲ್ಲೂಕು					
ಪೆಂಜಳ್ಳಿ ಹಾಡಿ	೨೧	೮೭	೪೩	೪೪	೪೧
ಭೀಮನಹಳ್ಳಿ	೧೮	೫೩	೩೧	೨೨	೨೧
ಹುಣಸೆ ಕುಪ್ಪೆ ಹಾಡಿ	೩೨	೧೩೫	೭೩	೬೨	೮೧
ಕಬ್ಬೆಪುರಹಾಡಿ	೨೪	೧೧೫	೫೨	೫೩	೫೪
ಕೊತ್ತನಹಳ್ಳಿ ಹಾಡಿ	೧೭	೮೪	೩೭	೪೭	೪೩
ಮಾಲದಹಾಡಿ (ಉದ್ದೂರು)	೨೬	೧೩೫	೬೭	೬೮	೫೬
ಬೋಮ್ಮಾಲಾಪುರಹಾಡಿ	೨೦	೧೦೧	೫೪	೪೭	೪೫
ಸೀಗೂರುಹಾಡಿ	೩೫	೧೬೭	೮೭	೮೦	೭೬
ಬ್ರಹ್ಮಗಿರಿಹಾಡಿ	೩೧	೧೫೩	೮೦	೭೩	೮೪
ಉದ್ದೂರು ಕೆರೆಹಾಡಿ	೧೪	೫೪	೩೧	೨೩	೨೬
ಮೆಟಿಕುಪ್ಪೆ ಹಾಡಿ	೨೮	೧೩೨	೭೧	೬೧	೬೭
ದೇವನಹಾಡಿ	೨೭	೧೪೬	೬೯	೭೭	೮೩
ವಡಕನಮಾಲ	೩	೧೩	೮	೫	೬
ದಾಮನಕಟ್ಟೆ ಹಾಡಿ	೨೧	೧೦೩	೫೧	೫೨	೪೫
ಹುಸ್ಕೂರುಹಾಡಿ	೩೬	೧೮೭	೯೭	೯೦	೮೩

ಹೊಸಹಳ್ಳಿ ಹಾಡಿ	೨೩	೧೧೮	೫೩	೬೫	೪೪
ಕಾರಾಪುರದ ಹಾಡಿ	೩೧	೧೧೮	೬೧	೫೭	೪೯
ಇಂಡವಾಳುಹಾಡಿ	೩೩	೧೬೭	೮೭	೮೦	೯೫
ಹರಳೆಕಟ್ಟೆಹಾಡಿ	೧೧	೫೭	೨೯	೨೮	೨೩
ಚಾಮನಹಳ್ಳಿ ಹಾಡಿ ಬಿ	೨೩	೧೨೩	೬೦	೬೩	೫೩
ಚಿಕ್ಕಾರೆಹಾಡಿ	೨೨	೧೨೬	೬೬	೬೦	೫೮
ದೇವಲಾಪುರದ ಹಾಡಿ	೨೫	೧೩೪	೭೨	೬೭	೭೧
ಆಗಟ್ಟಿ ಹಾಡಿ	೧೫	೭೪	೩೮	೩೬	೩೯
ವಡೆರಹಳ್ಳಿಮಾಲ	೨೬	೧೪೪	೭೨	೭೨	೬೭
ಮಾಲದಹಾಡಿ	೧೨	೧೧೫	೬೫	೫೫	೫೪
ಬಿದಲಾಪುರ ಹಾಡಿ	೭	೩೩	೧೭	೧೬	೧೩
ಮಾರನ ಹಾಡಿ	೩೬	೧೮೮	೯೭	೯೧	೮೩
ಪಿರಿಯಾಪಟ್ಟಣ ತಾಲ್ಲೂಕು					
ಲಿಂಗಾಪುರ	೩೧	೧೬೩	೮೦	೮೩	೭೫
ಚನ್ನಕಲ್ ಕಾವಲು	೧೪	೬೭	೩೬	೩೧	೩೪
ಕಾಳಪ್ಪನಕಟ್ಟೆ	೧೩	೬೭	೩೬	೩೧	೨೯
ಅಭಲಟ್ಟಿ ಎ	೨೧	೧೦೯	೪೯	೬೦	೪೭
ಬೊರನಕಟ್ಟೆ	೩೨	೧೬೫	೮೫	೮೦	೭೩
ಮಳಲನ ಕೆರೆ	೧೦	೯೭	೫೦	೪೭	೪೪
ದೊಡ್ಡಹೊಸೂರು	೩೧	೧೪೩	೭೪	೬೯	೫೬
ಐಯ್ಯರಬೀಡು	೨೫	೧೨೩	೬೩	೬೦	೫೪
ಕೊಡಗು ಜಿಲ್ಲೆ					
ಸೋಮುವಾರಪೇಟೆ ತಾಲ್ಲೂಕು					
ಚೌಡಲು	೨೦	೧೦೫	೫೩	೫೨	೬೧
ಬಲಗುಂದ	೨೩	೧೧೪	೫೩	೬೧	೫೧
ಐಗೊರು	೨೯	೧೪೩	೭೬	೬೭	೫೯
ಯಡವನಾಳ	೧೮	೧೩೭	೬೭	೭೦	೬೫
ನಾಕೂರು ಸಿರಾಳಹಾಡಿ	೧೨	೬೧	೩೨	೨೯	೨೪
ಅಟ್ಟುರು ನಲ್ಲೂರು	೧೩	೬೫	೩೫	೩೦	೨೮
ಹೊಸಾಳ	೧೪	೭೬	೪೦	೩೬	೩೪
ಜೇನುಕಲ್ಲ್ ಬೆಟ್ಟ	೧೧	೫೪	೩೧	೨೩	೨೩
ಬಸವನಹಾಡಿ	೨೬	೧೪೬	೭೬	೭೦	೬೭
ನಲ್ಲಿಯಾಡಿ	೧೪	೭೩	೩೭	೩೬	೩೧
ವಿರಾಜಪೇಟೆ ತಾಲ್ಲೂಕು					
ಹೆಗ್ಗಾಳ	೧೨	೬೧	೩೧	೩೦	೨೮
ಕೋಟ್ಟೊಳಿ	೧೧	೫೭	೨೭	೩೦	೨೬
ಐಮಂಗಲ	೨	೧೧	೫	೬	೪

ಬಳಗೋಡು	೧೨	೬೩	೩೨	೩೧	೨೫
ಕರಡಿಗೊಡು	೧೬	೮೪	೪೪	೪೦	೩೮
ಸಿದ್ದಾಪುರ	೧೮	೮೯	೪೫	೪೪	೪೧
ಹೊಸೂರು	೩೪	೧೭೬	೮೬	೯೦	೭೪
ಕೈಕೆರಿ	೨೫	೧೩೧	೬೬	೬೫	೫೪
ಅರವತ್ತೋಕ್ಕಲು	೨೩	೧೨೩	೬೩	೬೦	೫೮
ಮತ್ತೂರು	೩೪	೧೭೬	೯೦	೮೬	೭೫
ಬೆಗೂರು	೨೫	೧೩೦	೬೫	೬೫	೪೯
ಒಟ್ಟು	**೧೫೬೨**	**೭೭೪೬**	**೩೯೪೨**	**೩೮೦೪**	**೩೪೯೨**

೧೫೬೨ ಜೇನು ಕುರುಬ ಕುಟುಂಬಗಳನ್ನ ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಸಮೀಕ್ಷಗೆ ಒಳಪಡಿಸಲಾಗಿದ್ದು ಎರಡು ಜಿಲ್ಲೆಗಳಿಂದ ಸುಮಾರು ಶೇಕಡ ೪೫ ರಷ್ಟು ಸಾಕ್ಷರರಿದ್ದಾರೆ. ಮಹಿಳೆಯರ ಸಂಖ್ಯೆಯು ಶೇ.೪೯.೨ ರಷ್ಟಿದ್ದು ಪುರುಷರು ಶೇ.೫೦.೮ ರಷ್ಟಿದ್ದಾರೆ.

ಲಂಬಚಿತ್ರ: ೩.೧ ಜೇನುಕುರುಬರ ಕುಟುಂಬಗಳಲ್ಲಿ ಮೂಲಭೂತ ಸೌಲಭ್ಯಗಳ ಲಭ್ಯತೆ




ಅಧ್ಯಯನಕ್ಕೆ ಆಯ್ದುಕೊಂಡ ಒಟ್ಟಾರೆ ಕುಟುಂಬಗಳಲ್ಲಿ ಮೂಲಭೂತ ಸೌಲಭ್ಯಗಳು ಮತ್ತು ಸರ್ಕಾರ ಮತ್ತು ಇತರೆ ಸಂಸ್ಥೆಗಳಿಂದ ಪಡೆದಿರುವ ಸಹಾಯವನ್ನ ತೋರ್ಪಡಿಸುತ್ತದೆ. ಒಟ್ಟಾರೆ ಕುಟುಂಬಗಳಲ್ಲಿ ಇನ್ನೂ ೨೪೦ ಕುಟುಂಬಳಿಗೆ ಸ್ವಂತ ಮನೆಯಿರುವುದಿಲ್ಲ, ೨೮೪ ಮನೆಗಳಿಗೆ ವಿದ್ಯುತ್ ಸಂರ್ಕವಿರುವುದಿಲ್ಲ, ಒಟ್ಟಾರೆ ಕುಟುಂಬಗಳಲ್ಲಿ ಕೇವಲ ೨೧೭ ಮನೆಗಳಿಗೆ ಮಾತ್ರ ಶೌಚಾಲಯದ ಸೌಲಭ್ಯವನ್ನ ಒದಗಿಸಲಾಗಿದೆ, ಇನ್ನೂ ೫೫೯ ಕುಟುಂಬಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯಿರುವುದಿಲ್ಲ, ೨೭೧ ಕುಟುಂಬಗಳಿಗೆ ಶಿಕ್ಷಣದ ಸೌಲಭ್ಯ



ಮುಟ್ಟಿರುವುದಿಲ್ಲ, ಕೇವಲ ಶೇಕಡ ೩೭ ರಷ್ಟು ಕುಟುಂಬಗಳು ಮಾತ್ರ ಹಣಕಾಸಿನ ನೆರವನ್ನ ಪಡೆಯುವಲ್ಲಿ ಸಫಲವಾಗಿವೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಕ್ರಮಾನುಗತವಾಗಿ ೧೧೫೬ ಮತ್ತು ೧೩೨೧ ಕುಟುಂಬಗಳಿಗೆ ವಸತಿ ಮತ್ತು ಭೂಮಿ ದೊರೆತಿದೆ.

ಸಂಶೋದನಗೆ ಆಯ್ದುಕೊಂಡ ಬಹುಪಾಲು ಕುಟುಂಬಗಳು ನಾಗರಹೊಳೆ ಮತ್ತು ಬಂಡೀಪುರ ಅರಣ್ಯಗಳಿಂದ ಹೊರಹಾಕಿರುವ ಕುಟುಂಬಗಳಾಗಿದ್ದು ಸರ್ಕಾರದಿಂದ ವಸತಿ ಮತ್ತು ಭೂಮಿಯನ್ನು ಈ ಕುಟುಂಬಗಳಿಗೆ ಹಂಚಲಾಗಿದೆ. ವಾಸ್ತವವಾಗಿ ಭೂಮಿಯನ್ನ ಕೃಷಿ ಚಟುವಟಿಕಗೆ ಮಾತ್ರ ಬಳಸಲು ಅವರು ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಕಾರಣ ಸರಿಯಾದ ರೀತಿಯಲ್ಲಿ ಭೂಮಿಯನ್ನ ಗುರತು ಮಾಡದಿರುವುದು, ಹಂಚಿಕೆ ದಾಖಲೆಗಳನ್ನ ನೀಡದಿರುವುದು, ಭೂ ನಿಗದೀಕರಣದಲ್ಲಿ ಅರಣ್ಯ ಮತ್ತು ಕಂದಾಯ ಇಲಾಖೆಗಳ ನಡುವಿನ ವಿಭಿನ್ನ ನಡಾವಳಿಗಳು ಮತ್ತು ವಿವಾದಗಳು, ಕಾಡುಪ್ರಾಣಿಗಳ ಹಾವಳಿ, ಮಳೆಯ ಕೊರತೆ, ಮೂಲಭೂತ ಸೌಲಭ್ಯಗಳಾದ, ಕೃಷಿ ಉಪಕರಣಗಳು, ನೇಗಿಲು, ಉಳುವ ಎತ್ತುಗಳು, ಬಿತ್ತನೆ ಬೀಜಗಳು, ರಸಗೊಬ್ಬರ, ಹಣದ ಕೂರತೆ ಇತ್ಯಾದಿ ಇವೆ. ಕೇವಲ ೨೯೧ ಕುಟುಂಬಗಳಿಗೆ ಮಾತ್ರ ನೀರವರಿ ಸೌಲಭ್ಯವಿದ್ದು ಅವರು ಸಹ ಹಲವಾರು ಕಾರಣಗಳಿಂದ ಕೃಷಿಯಿಂದ ಲಾಭ ಪಡೆಯಲು ವಿಫಲರಾಗಿದ್ದಾರೆ ಕಾರಣ ಕೊಳವೆ ಬಾವಿಯಲ್ಲಿ ನೀರಿನ ಕೊರತೆ, ಯಂತ್ರದ ರಿಪೇರಿ, ವಿಧ್ಯುತ್ ಕೊರತೆ ಮತ್ತು ಕಡಿತ, ಸಂಪರ್ಕ ಕಲ್ಪಿಸದಿರುವುದು (Disconnection and Non connection) ಕೃಷಿ ತಂತ್ರಜ್ಞಾನದ ಅರಿವಿನ ಕೊರತೆ ಇತ್ಯಾದಿ ಕಾರಣಗಳನ್ನು ಗಮನಿಸಬಹುದು. ಕೇವಲ ೫೪ ಕುಟುಂಬಳು ಮಾತ್ರ ಪಶುಗಳನ್ನ ಪಡೆದಿದ್ದು ಅವುಗಳನ್ನ ಸಾಕಲಾದೇ ಮಾರಿದ ಉದಾಹರಣೆಯನ್ನು ನೋಡಬಹುದು.

ಲಂಬಚಿತ್ರ: ೩.೨ ಮೀಸಲಾತಿ ಪಡೆದಿರುವ ಜೇನುಕುರುಬರ ಕುಟುಂಬಗಳು



ಅಧ್ಯಯನಕ್ಕೆ ಆಯ್ದು ಕೊಂಡಿರುವ ಒಟ್ಟು ಕುಟುಂಬಗಳಲ್ಲಿ ಕೇವಲ ೯೪ ಕುಟುಂಬಗಳ ಸದಸ್ಯರು ಮಾತ್ರ ವಿವಿಧ ಉದ್ಯೋಗಗಳಲ್ಲಿ ಮೀಸಲಾತಿ ಸೌಲಭ್ಯವನ್ನ ಪಡೆದಿದ್ದಾರೆ. ಅದರಲ್ಲೂ ಮುಖ್ಯವಾಗಿ ಅರಣ್ಯ ರಕ್ಷಕರಾಗಿ, ಕಾವಲುಗಾರರಾಗಿ, ಆನೆ ಪಳಗಿಸುವ ನೌಕರರಾಗಿ ಕಾರ್ಯ ನಿವರ್ಹಹಿಸುತ್ತಿದ್ದಾರೆ, ರಾಜಕೀಯ ಮೀಸಲಾತಿಯು ಇವರಿಗೆ ಇತ್ತೀಚಿನ ಪರಿಚಯವಾಗಿದ್ದು ಇವರೆ ಹೆಚ್ಚಿರುವ ಹಾಡಿಗಳಲ್ಲಿ ಗ್ರಾಮ ಪಂಚಾಯಿತಿ ಸದಸ್ಯರಾಗಿ ೩೨ ಕುಟುಂಬಗಳ ಸದಸ್ಯರು

ಕಾರ್ಯ ನಿರ್ವಹಿಸುತ್ತಿದ್ದಾರೆ, ತುಂಬಾ ಶೋಚನೀಯವೆಂದರೆ ಕೇವಲ ೧೦ ವಿದ್ಯಾರ್ಥಿಗಳು ಮಾತ್ರ ೨೦೦೭-೦೮ ರ ಸಾಲಿನಲ್ಲಿ ಐ ಟಿ ಐ ಮತ್ತು ಡಿಪ್ಲಮೊಗಳಲ್ಲಿ ಪ್ರವೇಶ ಪಡೆದಿದ್ದಾರೆ. ಇದು ಇತರೆ ವರ್ಗಗಳಿಗೆ ಮತ್ತು ಪರಿಶಿಷ್ಟ ಜಾತಿಗಳಗಿಂತ ಅತ್ಯಂತ ಗೌಣವಾಗಿದೆ.

ಆಧಾರಗಳು

ಲಲಿತ, ಎ ಸಿ., *ಕಾಡುಕುರುಬ ಮತ್ತು ಜೇನುಕುರುಬರ ಸಂಸ್ಕೃತಿ* (ಬೆಂಗಳೂರು : ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೩)

ಕಿಕ್ಕೇರಿ, ನಾರಾಯಣ., 'ಜೇನು ಕುರುಬರು' ಲಕ್ಕಪ್ಪಗೌಡ, ಎಚ್ ಜೆ (ಪ್ರ ಸಂ)., *ಕರ್ನಾಟಕದ ಬುಡಕಟ್ಟುಗಳು* (ಬೆಂಗಳೂರು: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ,೨೦೦೦), ಸಂಪುಟ ೧

Aiyappan, A,. (1948) *Report on the Socio-Ecnomic conditions of Aborginal Tribes of the Province of Madras*, Government Press Madras.

Appayya M,. (2001) *Management Plan for Rajeev Gandhi (Nagarhole) National Park*(2000-2010) Forest Department Karnataka Mysore.

Iyer L.K. Ananthkrishna and H.V Nanjundaiah ,.(1925/2005) *The Mysore Tribes and Castes,* Mittal, NewDelhi (5Volume)

Luize A.A.D (1963) *Tribes of Mysore,* Bangalore.

Singh K.S., (1994), *The Scheduled Tribes, People of India* , National Series Volume III , ASI OUP, New-Delhi.

Suryanath V. Kamath., (Ed) 1982, *Karnataka State Gazteer Part 1* , Govrnment of Karnataka, Bangalore.

Suryanath V. Kamath., (Ed) 1983, *Karnataka State Gazteer Part 2* , Govrnment of Karnataka, Bangalore.

Thurston, Edgar., (1975), *Castes and Tribes of Southern India,* VI :pp.379-386 Madras Government Press.

Thurston, Edgar .,(1975), *Ethnographic notes in southern India*, Cosmo Publications, New Delhi.

ಮಾಹಿತಿದಾರರು

೧. ನಾಗಪ್ಪ ಹೊಸಹಳ್ಳಿ, ಎಚ್ ಡಿ ಕೋಟೆ ತಾಲ್ಲೂಕು

೨. ಭೊಮ್ಮಿ ನಾಗಾಪುರ ಬ್ಲಾಕ್, ಎಚ್ ಡಿ ಕೋಟೆ ತಾಲ್ಲೂಕು

೩. ಸಣ್ಣಯ್ಯ ಹೊಸಹಳ್ಳಿ ಹಾಡಿ ಎಚ್ ಡಿ ಕೋಟೆ ತಾಲ್ಲೂಕು

ಅಧ್ಯಾಯ ೪

ಕೊರಗರು

೪.೧ ಹಿನ್ನೆಲೆ

ಕರ್ನಾಟಕದ ಎರಡು ಆದಿಮ ಬುಡಕಟ್ಟುಗಳಲ್ಲಿ ಕೊರಗ ಆದಿಮ ಬುಡಕಟ್ಟು ಒಂದಾಗಿದೆ. ಇಡೀ ಬುಡಕಟ್ಟುಗಳಲ್ಲೆ ವಿಭಿನ್ನವಾದ ಅಸ್ಪೃಷ್ಯತೆಯ ಹಣೆಪಟ್ಟಿಯನ್ನ ಹೊರೆಸಿಕೊಂಡಿರುವ ಕೊರಗ ಸಮುದಾಯ, ಕರ್ನಾಟಕ ರಾಜ್ಯದ ಅತ್ಯಂತ ಹಿಂದುಳಿದಿರುವ ಬುಡಕಟ್ಟುಗಳಲ್ಲಿಯೇ ಒಂದಾಗಿದೆ. ಈ ಬುಡಕಟ್ಟನ್ನ ಕೇಂದ್ರ ಸರ್ಕಾರವು ೭೫ ಆದಿಮ ಬುಡಕಟ್ಟುಗಳಲ್ಲಿ ಒಂದೆಂದು ಗುರ್ತಿಸಿದೆ. ಇವರ ಕೃಷಿ ಪದ್ದತಿ, ವೃತ್ತಿ ಸ್ವಭಾವ, ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕನ್ನ ಅಧ್ಯಯನಿಸಿದಾಗ ಇವರು ಆದಿಮ ಬುಡಕಟ್ಟೆಂದು ಸ್ಪಷ್ಟವಾಗುತ್ತದೆ.

೪.೨. ಕೊರಗರ ಮೂಲ ಮತ್ತು ಇತಿಹಾಸ

ಕೊರಗರ ಮೂಲದ ಬಗೆಗೆ ಹಲವು ಲೇಖನಗಳು ಪ್ರಕಟವಾಗಿವೆಯಾದರು ಕೊರಗರ ಹಿರಿಯ ಮಾಹಿತಿದಾರರು ಹೇಳುವ ಪ್ರಕಾರ ಪ್ರಪಂಚದಲ್ಲಿ ಭೂಮಿ ಎನ್ನುವುದೆ ಇರಲಿಲ್ಲ. ಎಲ್ಲವೂ ನೀರಿನಿಂದ ತುಂಬಿ ಹೋಗಿತ್ತು, ಆ ನೀರಿನಲ್ಲಿ ಗಂಡು ಹೆಣ್ಣು ಎನ್ನುವ ಎರಡು ಜೀವಿಗಳನ್ನ ನಾರಾಯಣ ದೇವರು ಸೃಷ್ಟಿಸಿದನು. ಆ ಎರಡು ಜೀವಗಳೆ ಅಣ್ಣ–ತಂಗಿ (ತಗೆ–ತಂಗಡಿ) ಇವರು ನೀರಿನಲ್ಲಿರುವಾಗ ನಾರಾಯಣದೇವರು ಒಂದು ಡೋಲಿನ 'ಒಳಸೆ' (ಡೋಲುದ ಕರ) ಯನ್ನು ನೀರಿನಲ್ಲಿ ತೇಲಿಬಿಟ್ಟ, ಅವರು ಅದರೊಳಗೆ ಕುಳಿತು ರಕ್ಷಣೆ ಪಡೆದರು. ಮೊದಲಬಾರಿ ನಾರಾಯಣ ದೇವರು ಬಂದು ನಿಮಗೆ ಏನಾದರೂ ಬೇಕೆ? ಎಂದು ಕೇಳಿದನಂತೆ, ಆಗ ಅವರು ನಮಗೇನೂ ಬೇಡವೆಂದು ಹೇಳಿದ್ದರಿಂದೆ ಮರಳಿ ಹೋದ. ಜೀವ ತಡಯಲಾಗದೆ ನಾರಾಯಣ ದೇವರು ಪುನಃ ಬಂದು ಕೇಳಿದಾಗಲೂ ಅವರಿಂದ ಅದೇ ರೀತಿ ಉತ್ತರ ದೊರೆಯಿತು. ಮೂರನೆಯ ಬಾರಿ ಬಂದಾಗ ನಿಮಗೆ ಪ್ರಪಂಚ ಅನ್ನುವುದು ಬೇಡವೆ? ಪ್ರಪಂಚದಲ್ಲಿ ಇತರೆ ಜೀವಿಗಳಂತೆ ಇರಬೇಕು ಎಂಬ ಬಯಕೆ ನಿಮಗಿಲ್ಲವೆ? ನಿಮಗೆ ಈ ನೀರಿನಲ್ಲಿ ಡೋಲಿನ ಇಷ್ಟೇ ಸ್ಥಳದಲ್ಲಿ ಇರಲು ಬೇಸರವಾಗುವುದಿಲ್ಲವೆ? ಹೀಗೆ ಪ್ರಶ್ನೆಗಳನ್ನು ಕೇಳಿ ಪರಸ್ಪರರಲ್ಲಿ ಆಸೆ ಹುಟ್ಟಿಸಿದನಂತೆ. ಆಗ ಆ ಅಣ್ಣ–ತಂಗಿಯರಿಬ್ಬರೂ ಕೂಡಿದರೆಂದು, ಆಗ ಭೂಮಿ ಹುಟ್ಟಿತೆಂದು, ಅವರ ಆಸೆಗೆ ತಕ್ಕಂತೆ ಎಲ್ಲವೂ ನಿರ್ಮಾಣವಾಗುತ್ತಾ ಹೋಯಿತೆಂದು ಹೇಳುತ್ತಾರೆ.

ಅಣ್ಣ–ತಂಗಿಯರ ಸಂತಾನ ಬೆಳೆದಂತೆ ಮನೆ ತುಂಬಿ ಹೋಯಿತು ಹೊಟ್ಟೆಯ ಪಾಡಿಗಾಗಿ ಅವರ ಮಕ್ಕಳೆಲ್ಲ ಬೇರೆ ಬೇರೆ ವೃತ್ತಿಯನ್ನು ಅವಲಂಬಿಸಿದರು. ಇದೇ ವೃತ್ತಿಗಳೇ ಮುಂದೆ ಜಾತಿಗಳಾದವು. ಅದರಲ್ಲಿ ಬ್ರಾಹ್ಮಣ, ಶೆಟ್ಟಿ, ಮೊಯ್ಲಿ, ಬಿಲ್ಲವ ಇವರೆಲ್ಲರೂ 'ಅಕ್ಕನ' ಸಂತಾನದ

ಮಕ್ಕಳಾದರು. ಅವರು ಬೆಳೆದು ಶ್ರೀಮಂತರಾದರು ಮತ್ತು ಬುದ್ಧಿವಂತರಾದರು. ಆದರೆ ತಂಗಿಯ ಸಂತಾನದವರು ಹಾಗೆ ಆಗಲಿಲ್ಲ, ಏಕೆಂದರೆ ತಂಗಿ ಅಣ್ಣನನ್ನು ವರಿಸಿದ್ದರಿಂದ ಅವರಿಗೆ ಶಾಪವಿತ್ತು. ಆ ಕಾರಣಕ್ಕಾಗಿ ಅವರಿಗೆ ಬೆಳೆಯಲಾಗಲಿಲ್ಲ. ತಂಗಿ ಈ ಶಾಪದಿಂದ ಮುಕ್ತಿಯನ್ನು ಪಡೆಯಬೇಕಾದರೆ ಆಕೆ ತನ್ನ ಎಲ್ಲಾ ಮಕ್ಕಳ ಮನೆಯಲ್ಲಿ ಎಂಜಲನ್ನವನ್ನ ತಿನ್ನಬೇಕು, ಆಗ ಮುಂದಿನ ಜನ್ಮದಲ್ಲಿ ಶಾಪದಿಂದ ಮುಕ್ತರಾಗುತ್ತಾರೆ ಎಂದು ನಾರಾಯಣ ದೇವರು ಹೇಳಿದನಂತೆ.

ಕೊರಗರು ತಮ್ಮ ಹಿಂದಿನ ಇತಿಹಾಸದ ಬಗೆಗೆ ಮತ್ತು ಸಾಮರ್ಥ್ಯದ ಬಗೆಗೆ ಒಂದು ಕಥೆಯನ್ನಿಟ್ಟುಕೊಂಡಿದ್ದಾರೆ. ಆ ಕಥೆಯ ಪ್ರಕಾರ ಇವರಿಗೆ ಹುಬಾಶಿಕನೆಂಬ ನಾಯಕನಿದ್ದನು. ಅವನು ಪರಾಕ್ರಮಶಾಲಿಯಾಗಿದ್ದು ಪಶ್ಚಿಮ ಘಟ್ಟಗಳ ಕದಂಬ ವಂಶದವರ ಹುಟ್ಟಡಗಿಸಿದನಂತೆ, ಆ ಕಾರಣಕ್ಕಾಗಿ ಅವನನ್ನು ಸದೆಬಡಿಯಲು ಕದಂಬ ವಂಶದ ಅಂಗಾರವರ್ಮನು ಒಂದು ತಂತ್ರವನ್ನ ರೂಪಿಸಿದನಂತೆ, ಆ ತಂತ್ರಕ್ಕೆ ಬಲಿಯಾಗಿ ಹುಬಾಶಿಕನು ಮರಣ ಹೊಂದಿದನಂತೆ. ಆ ತಂತ್ರವೆಂದರೆ ಹತ್ತಿರದ ಇನ್ನೊಬ್ಬ ರಾಜನನ್ನು ತನ್ನ ತಂಗಿಯೊಂದಿಗೆ ಹುಬಾಶಿಕನ ವಿವಾಹಕ್ಕೆ ಪ್ರೇರೆಪಿಸಿದನು, ಅಂಗಾರವರ್ಮ ಮತ್ತು ಆ ರಾಜ ಸೇರಿ ಕುಟಿಲ ತಂತ್ರವೊಂದನ್ನು ರೂಪಿಸಿದರು, ಮಧುಮಗನಾಗಿ ತನ್ನ ಜಾತಿ ಬಂಧುಗಳೊಂದಿಗೆ ಬಂದ ಹುಬಾಶಿಕಾನನ್ನು ಮತ್ತು ಅವನ ಅನುಯಾಯಿಗಳನ್ನು ಅಂಗಾರವರ್ಮ ಭೀಕರ ಹತ್ಯೆಗೈದನಂತೆ. ಆನಂತರ ಅಂಗಾರವರ್ಮನು ಮಂಜೇಶ್ವರಕ್ಕೆ ದಾಳಿಯಿಟ್ಟು ಹುಬಾಶಿಕಾನ ಸೈನಿಕರನ್ನು ಹೊಡೆದೋಡಿಸಿ ಅವರನ್ನು ಕಾಡಿಗಟ್ಟಿದನು. ಅವರು ಗುಲಾಮರಾಗಲು ಒಪ್ಪುವ ತನಕ ಅವರಿಗೆ ಹಿಂಸಿಸಲಾಯಿತು. ಆದರೆ ಹುಬಾಶಿಕನು ರಾಜ್ಯವಾಳುತ್ತಿದ್ದಾಗ ಸರ್ಕಾರದ ಅತ್ಯುನ್ನತ ಪದವಿಗಳಿಗೇರಿದ್ದ ಕೊರಗರನ್ನು ವಿವಸ್ತ್ರಗೊಳಿಸಿ ಕರಾವಳಿ ಕಡೆಗೆ ನೇಣು ಹಾಕಲು ಹೋಡಿಸಲಾಯಿತು. ಆಗ ನಗ್ನ ಕೊರಗರು ಗಿಡದ ಸೊಪ್ಪು ಎಲೆಗಳಿಂದ ತಮ್ಮ ಗುಪ್ತಾಂಗಗಳನ್ನು ಮುಚ್ಚಿಕೊಂಡರು, ತಮ್ಮ ನಗ್ನತೆಗಾಗಿ ಅವರು ನಾಚಿಕೊಂಡರು. ಅಪಮಾನಕ್ಕೊಳಗಾದ ಅಂಗಾರವರ್ಮನ ಸೈನಿಕರು ಕೊರಗರ ಬಗೆಗೆ ಕರುಣೆ ತೋರಿಸಿ ಅವರು ಇನ್ನೆಂದಿಗೂ ವಸ್ತ್ರ ತೊಡದೆ ಕೇವಲ ಎಲೆಗಳಿಂದಲೇ ತಮ್ಮ ದೇಹಗಳನ್ನು ಮುಚ್ಚಿಕೊಳ್ಳಬೇಕೆಂದು ಕಟ್ಟಪ್ಪಣೆ ಮಾಡಿ ಆ ಕೊರಗರನ್ನು ಬಿಟ್ಟು ಬಿಟ್ಟರು. ಹೀಗೆ ಕೊರಗರ ಉಗಮದ ಕುರಿತು ಕಥೆ ಹೇಳುತ್ತಾರೆ.

ಇನ್ನೊಂದು ದಂತ ಕತೆಯ ಪ್ರಕಾರ ಹುಬಾಶಿಕಾ ಎಂಬ ಕೊರಗರ ನಾಯಕ ಕದಂಬ ವಂಶದ ಮಯೂರವರ್ಮನನ್ನು ಯುದ್ದದಲ್ಲಿ ಸೊಲಿಸಿ ಓಡಿಸಿದನು. ಆದರೆ ಕಾಲಾನುಕ್ರಮದಲ್ಲಿ ಗೋಕರ್ಣದಿಂದ ಆಳುತ್ತಿದ್ದ ಲೋಕಾದಿತ್ಯನಿಂದ (ಮಯೂರವರ್ಮನ ಮಗ ಅಥವಾ ಅಳಿಯ) ಹುಬಾಶಿಕಾ ಮತ್ತು ಅವನ ಅನುಯಾಯಿಗಳನ್ನು ಬಡಿದೋಡಿಸಲಾಯಿತು. ಈ ಲೋಕಾದಿತ್ಯನೇ ಮೂವತ್ತೆರಡು ಹಳ್ಳಿಗಳಲ್ಲಿ ಅಹಿಕ್ಷೇತ್ರದಿಂದ ಕರೆತಂದ ಬ್ರಾಹ್ಮಣರನ್ನು ನೆಲೆ ನಿಲ್ಲಿಸಿದನು. ಅಂದರೆ ಮಯೂರವರ್ಮನ ಕಾಲದಲ್ಲಿ ಕೊರಗರು ಕರಾವಳಿ ಪ್ರದೇಶದಲ್ಲಿ ಅಪಾರ ಸಂಖ್ಯೆಯಲ್ಲಿದ್ದು ತಮ್ಮ ನಾಯಕನೊಬ್ಬನನ್ನು ರಾಜನಾಗಿ ಹೊಂದಿದ್ದರು ಎನ್ನುವುದು ಮೇಲ್ಕಂಡ ಕಥೆಯಿಂದ ತಿಳಿದು ಬರುವುದು. ಇಂಥ ಒಂದು ಪ್ರಭಲ ಸಮುದಾಯ ಅಧಿಕಾರ ಕಳೆದುಕೊಂಡು ತೀರ ನಿಸ್ಸಹಾಯಕ ಸ್ಥಿತಿಗೆ ಇಳಿದುದು ಹೇಗೆ ಎಂಬುದನ್ನು ವಾಲ್‌ಹೌಸ್ ಹೀಗೆ ವಿವರಿಸಿದ್ದಾರೆ; ಉತ್ತರ ಕನ್ನಡದ ಬನವಾಸಿಯಲ್ಲಿ ಲೋಕಾದಿತ್ಯನು ರಾಜ್ಯವಾಳುತ್ತಿದ್ದ ಸಂದರ್ಭದಲ್ಲಿ ಕ್ರಿ.ಶ. ೪೫೦ ರ ಸುಮಾರಿನಲ್ಲಿ ಹುಬಾಶಿಕಾನು ಘಟ್ಟದ ಮೇಲಿನಿಂದ ಸೈನಿಕರನ್ನು ಒಟ್ಟುಗೂಡಿಸಿ ಸೈನ್ಯ ಕಟ್ಟಿ ಬನವಾಸಿ ಪ್ರಾಂತ್ಯವನ್ನು ಧೂಳೀಪಟ ಮಾಡಿದನು. ಆನಂತರ ಅವನು ದಕ್ಷಿಣದತ್ತ

ಮಂಗಳೂರಿಗೆ ತೆರಳಿದನು. ಈ ಆಕ್ರಮಣಕಾರಿ ರಾಜನನ್ನು ಸಿಡುಬು ಕಾಡಿತು: ಇರುವೆಗಳು ಕಚ್ಚಿ ಘಾಸಿಪಡಿಸಿದವು. ಹುಬಾಶಿಕನಿಗೆ ಮಂಗಳೂರು ಹಿಡಿಸಲಿಲ್ಲ, ಆದ್ದರಿಂದ ಅಲ್ಲಿಯ ೧೨ ಮೈಲು ದಕ್ಷಿಣಕ್ಕಿರುವ ಮಂಜೇಶ್ವರಕ್ಕೆ ಅವನು ದಂಡೆತ್ತಿ ಹೋಗಿ ಅಲ್ಲಿಯ ರಾಜನಾದ ವೀರವರ್ಮನೆಂಬುವನ ಮಗ ಅಂಗಾರವರ್ಮನನ್ನು ಸೋಲಿಸಿ ಮುಂದೆ ಹುಬಾಶಿಕಾ ಅಲ್ಲಿ ತನ್ನ ಅಣ್ಣನ ಮಗನೊಡಗೂಡಿ ೧೨ ವರ್ಷಗಳ ಕಾಲ ರಾಜ್ಯವಾಳಿದನು. ಆನಂತರ ಅವರಿಬ್ಬರೂ ಮರಣವನ್ನಪ್ಪಿದರು(ಅರವಿಂದ ಮಾಲಗತ್ತಿ ಮತ್ತು ಒಡೆಯರ್ ಡಿ ಹೆಗ್ಗಡೆ: ೧೯೯೧:೧೧-೨).

೪.೩. ಭೌಗೋಳಿಕ ಹಂಚಿಕೆ

ಕೊರಗರು ಪಶ್ಚಿಮ ಘಟ್ಟಗಳ ತಪ್ಪಲುಗಳಲ್ಲಿ ಉತ್ತರ ಕನ್ನಡ ಜಿಲ್ಲೆಯ ದಕ್ಷಿಣ ಭಾಗದಿಂದ ಹಿಡಿದು ಕೇರಳದ ಬಹುತೇಕ ಜಿಲ್ಲೆಗಳಲ್ಲಿ ಕಂಡುಬರುತ್ತಾರೆ. ಇವರು ಜನಗಣತಿಯ ಪ್ರಕಾರ ಇಡೀ ರಾಜ್ಯಾದ್ಯಂತ ಹರಡಿದ್ದಾರೆ. ಮುಖ್ಯವಾಗಿ ಉಡುಪಿ ಜಿಲ್ಲೆಯಿಂದ ಹಿಡಿದು ಪಶ್ಚಿಮ ಘಟ್ಟಗಳ ಸಾಲಿನಲ್ಲಿ ಕೇರಳದ ಮಲಬಾರಿನುದ್ದಕ್ಕೂ ಪಸರಿಸಿದ್ದಾರೆ. ಕೊರಗರು ದೈಹಿಕವಾಗಿ ಕಪ್ಪು ಮೈ ಬಣ್ಣದವರು, ಅಗಲವಾದ ಚಪ್ಪಟೆ ಮೂಗು, ಪುಟ್ಟ ಪುಟ್ಟ ಕಂಗಳು, ದಪ್ಪವಾದ ತುಟಿಗಳುಳ್ಳವರು, ಅಗಲವಾದ ಹಣೆ, ಕಪ್ಪು ಕಪ್ಪಾದ ದಟ್ಟವಾದ ಗುಂಗುರು ಕೂದಲು ಉಳ್ಳವರು.ಸುಮಾರು ಐದು ಅಡಿ ನಾಲ್ಕು-ಆರು ಇಂಚು ಎತ್ತರದ ಕೊರಗರು ದೈಹಿಕ ರಚನೆ ಲಕ್ಷಣಗಳಲ್ಲಿ ಕೆಲವು ಮಟ್ಟಿಗೆ ದಕ್ಷಿಣ ಭಾರತದ ಇತರೇ ಗುಡ್ಡಗಾಡು ಜನರನ್ನ ಹೋಲುವರು.

ಕೋಷ್ಟಕ: ೪.೧ ಕರ್ನಾಟಕ ಕೊರಗ ಬುಡಕಟ್ಟಿನ ಜನಸಂಖ್ಯೆ (೧೯೬೧-೨೦೦೧)

➢ ವರ್ಷ	೧೯೬೧	೧೯೭೧	೧೯೮೧	೧೯೯೧	೨೦೦೧
ಜನಸಂಖ್ಯೆ	೬,೩೮೨	೭,೬೨೦	೧೫,೧೪೬	೧೬,೩೨೨	೧೬,೦೭೧

ಆಧಾರ: ಭಾರತ ಜನಗಣತಿ ೧೯೬೧ ರಿಂದ ೨೦೦೨ ರವರೆಗಿನ ವರದಿಗಳು

ಕೊರಗರು ಇತರೆ ಬುಡಕಟ್ಟುಗಳಿಗಿಂತ ಭಿನ್ನವಾದ ಲಕ್ಷಣಗಳನ್ನು ಹೊಂದಿದ್ದು ಅವರು ಒಂದು ರೀತಿಯಲ್ಲಿ ಅಲೆಮಾರಿ ಸಮುದಾಯವೆಂದೆ ಹೇಳಬಹುದಾಗಿದೆ. ಕಾರಣ ಬಹುಸಂಖ್ಯಾತ ಕೊರಗರು ಯಾವುದೆ ಸ್ಥಿರಾಸ್ತಿಗಳನ್ನು ಹೊಂದಿರದೆ ಮೂಲತಃ ಅವರು ಕೃಷಿ ಕೂಲಿಗಳಾಗಿ ಇತರೆ ವರ್ಗಗಳ ಸೇವೆಯಲ್ಲಿದ್ದದು ಕಂಡುಬರುತ್ತದೆ. ಬುಚನಾನ್ (೧೮೦೧) ರವರ ಹೇಳಿಕೆಯಂತೆ 'ಇವರು ಇತರೆ ವರ್ಗಗಳ ಸೇವಕರಾಗಿದ್ದರಿಂದ ಮತ್ತು ಬುಟ್ಟಿ ಹೆಣೆಯುವುದೆ ಅವರ ಮುಖ್ಯ ವೃತ್ತಿಯಾದ್ದರಿಂದ ಸಾಮಾನ್ಯವಾಗಿ ನಗರಗಳ ಸಮೀಪ ಮತ್ತು ಎಲ್ಲಿ ಕೆಲಸ ಸಿಗುವುದೊ ಅಲ್ಲಿ ನೆಲೆ ನಿಲ್ಲಲು ಯತ್ನಿಸುವರು. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಅರಣ್ಯ ಪ್ರದೇಶಗಳಲ್ಲೂ ಇವರು ವಾಸಿಸುತ್ತಿದ್ದಾರೆ.

೪.೩. ಉಡುಗೆ ತೊಡುಗೆಗಳು

ಕೊರಗರ ಉಡುಗೆ ತೊಡುಗೆಗಳು ಬಹಳ ಸರಳವಾದವು. ಅವರಿಗೆ ವಸ್ತ್ರ ತೊಡಬಾರದೆಂಬ ನಿಷೇಧವಿರುವುದರಿಂದ ಅವರು ಕೇವಲ ಮುಂಡು ಧರಿಸುವುದು, ಅಥವಾ ಸೊಪ್ಪು ಕಟ್ಟಿಕೊಳ್ಳುವುದು ಇದುವರೆಗೆ ನಡೆದುಬಂದ ಪದ್ಧತಿ. ಗಂಡಸರು ಸಹ ಹೆಂಗಸರಂತೆ ಉದ್ದ ಕೂದಲು ಬಿಡುವರು, ಗಡ್ಡಮಿಸೆಗಳನ್ನು ಉದ್ದವಾಗಿ ಬೆಳೆಸುವ ಕ್ರಮವಿತ್ತೆಂದು ಹಿರಿಯ ವಕ್ತೃಗಳು ಹೇಳುತ್ತಾರೆ.

ಕೊರಗರು ಆಳುವ ವರ್ಗವಾಗಿ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಕೊರಗನೊಬ್ಬನು ಮೇಲು ವರ್ಗದ ಹೆಣ್ಣೊಬ್ಬಳನ್ನು ಬಯಸಿದನಂತೆ. ಇದರಿಂದ ಕುಪಿತರಾದ ಮೇಲ್ವರ್ಗದವರು ಕೊರಗರ ರಾಜಕೀಯ ಪ್ರಾಭಲ್ಯ ಅಳಿಯುವವರೆಗೂ ತೆಪ್ಪಗಿದ್ದು ನಂತರ ಕೊರಗ ಹೆಂಗಸರು ಯಾವ ಬಗೆಯ ವಸ್ತ್ರವನ್ನೂ ತೊಡದಿರುವಂತೆ ನಿಷೇಧ ವಿಧಿಸಿದರಂತೆ. ಆಗ ನತದೃಷ್ಟ ಕೊರಗ ಮಹಿಳೆಯರು ಮಾನ ಸಂರಕ್ಷಣೆಗಾಗಿ ಸೊಪ್ಪು ಕಟ್ಟಿಕೊಳ್ಳುವುದಕ್ಕೆ ತೊಡಗಿದರು ಎಂಬ ಕಥೆ ಕೊರಗರಲ್ಲಿ ಪ್ರಚಲಿತವಿದೆ.

ಕೊರಗರು ಕೇವಲ ಸೊಪ್ಪಿನ ವಸ್ತ್ರವನ್ನು ಸೊಂಟದಿಂದ ಕೆಳಕ್ಕೆ ತೊಡುವುದನ್ನ ಅವರನ್ನು ಅತ್ಯಂತ ಹೀನಾಯ ಸ್ಥಿತಿಗಿಳಿಸಿದುದರ ದ್ಯೋತಕವಾಗಿದೆಯಂದೇ ವಾಲ್‌ಹೌಸ್ ಪರಿಗಣಿಸಿದ್ದಾನೆ. ಹಿಂದೆ ಕೊರಗ ಮಹಿಳೆಯರು ಇತರರಂತೆ ವಸ್ತ್ರ ತೊಡುವುದೂ ಮತ್ತು ಸೆರಗು ಹೊದೆಯುವುದೂ ಅಪಶಕುನದ್ದು, ಅಮಂಗಳಕರವಾದುದೆಂದು ನಂಬಿದ್ದರೆಂದು ಹೇಳಿದ್ದಾನೆ. ಕೊರಗರ ವೇಷಭೂಷಣಗಳ ಬಗೆಗೆ ಹೆಚ್.ವಿ. ಸ್ಟೂವರ್ಟ್‌ನ ಹೀಗೆ ತಿಳಿಸುತ್ತಾನೆ 'ಕೊರಗರು ಸೊಂಟದಿಂದ ಕೆಳಕ್ಕೆ ಕಪ್ಪುವಸ್ತ್ರವೊಂದನ್ನೂ ಸೊಂಟದಿಂದ ಮೇಲಕ್ಕೆ ಬಿಳಿ ವಸ್ತ್ರವೊಂದನ್ನು ಕಟ್ಟಿಕೂಳ್ಳುತ್ತಿದ್ದರು.ಅವರು ತಲೆಗೆ ಅಡಿಕೆ ಹಾಳೆಯಿಂದ ಮಾಡಿದ ಟೊಪ್ಪಿಗೆ ಧರಿಸುವರು, ಈ ಟೊಪ್ಪಿಗೆ ಹೊಲೆಯರು ಧರಿಸುವ ಟೊಪ್ಪಿಗೆಯನ್ನೇ ಹೋಲುವುದು, ಕಿವಿಗೆ ಹಿತ್ತಾಳೆಯ ಬೆಂಡೋಲೆಗಳನ್ನು, ಕೈಗಳಿಗೆ ಕಬ್ಬಿಣದ ಬಳೆಯನ್ನೂ, ಸೊಂಟಕ್ಕೆ ಉಡಿದಾರವನ್ನೂ ಅವರು ಧರಿಸುವರು. ಉಡುಪಿಯಲ್ಲಿ ಕೊರಗನೊಬ್ಬನು ಧರಿಸಿದ್ದ ಉಡಿದಾರವನ್ನು ಗೂಬೆಗಳ ಮೂಳೆಗಳಿಂದ ತಯಾರಿಸಲಾಗಿದ್ದುದನ್ನು ಕಂಡೆ, ಇಂಥ ದೀನ ಹೀನ ಸ್ಥಿತಿಯಲ್ಲಿ ಕೊರಗರಿದ್ದಾರೆ ಎಂದು ತನ್ನ ಮದ್ರಾಸ್ ಡಿಸ್ಟ್ರಿಕ್ ಮ್ಯಾನ್ಯುಯಲ್‌ನಲ್ಲಿ ವಿವರಿಸಿದ್ದಾನೆ (ಪು ಸಂ.೧೬) ಬದಲಾಗಿರುವ ಇಂದಿನ ಪರಿಸ್ಥಿತಿಯಲ್ಲಿ ಜನಸಾಮಾನ್ಯರಂತೆ ಕೊರಗರು ಸಹ ವಸ್ತ್ರ ಧರಿಸುತ್ತಾರೆ

ಇತ್ತೀಚೆಗೆ ಕೊರಗರ ಗಂಡಸರು ಇತರರಂತೆ ಲುಂಗಿ ಪಂಚೆಯನ್ನೂ ಬಣ್ಣಬಣ್ಣದ ಹತ್ತಿ ಬಟ್ಟೆಗಳನ್ನೂ ಟೆರಿಕಾಟ್ ಅಂಗಿಗಳನ್ನೂ ಬಳಸುವರು. ಹಿಂದೆ ಕೊರಗರ ಹೆಂಗಸರು ಮುಂಡನ್ನು ಸೊಂಟಕ್ಕೆ ಕಟ್ಟಿ ರವಿಕೆಯನ್ನು ತೊಡುತ್ತಿದ್ದರು, ಸೆರಗು ಹಾಕುತ್ತಿರಲಿಲ್ಲ ಇಂದಿಗೂ ಹಳ್ಳಿಗಾಡುಗಳಲ್ಲಿರುವ ಕೊರಗ ಹೆಂಗಸರು ಅದೇ ಹಳೆಯ ಪದ್ದತಿ ಅನುಸರಿಸುತ್ತಿದ್ದಾರೆ. ಆದರೆ ಮಂಗಳೂರು, ಕಾರ್ಕಳ, ಮೂಡುಬಿದಿರೆ, ಉಡುಪಿ, ಪುತ್ತೂರು, ಸುಳ್ಯ ಮುಂತಾದ ಪೇಟೆ ಪಟ್ಟಣಗಳ ಸಂಪರ್ಕಕ್ಕೆ ಬಂದ ಕೊರಗ ಹೆಂಗಸರು ಇತರೇ ಮಹಿಳೆಯರಂತೆ ಸೀರೆ ತೊಡುವುದನ್ನು ಕಾಣಬಹುದು. ಪುರುಷರು ಇತರರಂತೆ ಪ್ಯಾಂಟು, ಷರಟು, ಪಂಚೆ, ಲುಂಗಿ ಮುಂತಾದ ವಸ್ತ್ರಗಳನ್ನು ಧರಿಸುತ್ತಾರೆ.

ಕೊರಗ ಹೆಂಗಸರು ವಿವಿಧ ಬಣ್ಣಗಳ ಮಣಿಸರಗಳನ್ನ, ಕೈಗೆ ಹಿತ್ತಾಳೆ, ಕಬ್ಬಿಣ, ತಾಮ್ರದಿಂದ ಮಾಡಿದ ಬಳೆಗಳನ್ನು ಹಿಂದೆ ಧರಿಸುತ್ತಿದ್ದರಂತೆ, ಆದರೆ ಇಂದು ಕೊರಗ ಮಹಿಳೆಯರು ಎಲ್ಲರಂತೆ ಗಾಜಿನ ಬಳೆ, ಕರಿಮಣಿ ಸರ ಧರಿಸುತ್ತಾರೆ. ಆಧುನಿಕ ಉಡುಪುಗಳನ್ನು ಧರಿಸುವ ಕೊರಗ ಹದಿಹರೆಯದ ಯುವತಿಯರನ್ನೂ ನಾವು ಕಾಣಬಹುದಾಗಿದೆ. ಆಧುನಿಕತೆಗೆ ತಕ್ಕಂತೆ ಕೊರಗರ ವೇಷಭೂಷಣಗಳು ಬದಲಾಗುತ್ತಿರುವುದನ್ನು ಕಾಣಬಹುದಾಗಿದೆ.

೪.೪. ಆಹಾರ ಪದ್ದತಿ

ಕೊರಗರ ಆಹಾರ ಪದ್ಧತಿಯು ತುಂಬಾ ಸರಳವಾದುದು. ಕಾಡಿನಲ್ಲಿ ದೊರೆಯುವ ಗೆಡ್ಡೆ-ಗೆಣಸು, ನಾರು ಬೇರು ಸೊಪ್ಪುಗಳನ್ನು ಆಹಾರವಾಗಿಯೂ, ಔಷಧಿಯಾಗಿಯೂ ಬಳಸುವುದುಂಟು. ಅಲ್ಲದೆ ಸೊಪ್ಪು, ಮಾಂಸ, ತರಕಾರಿ, ಅಕ್ಕಿ, ಬೇಳೆ, ಇತರೆ ಬೇಳೆಗಳನ್ನ ಸಹ

ಆಹಾರವಾಗಿ ಬಳಸುತ್ತಾರೆ. ಇವರು ಈ ಹಿಂದೆ ಸತ್ತ ಪ್ರಾಣಿಗಳಾದ ದನ, ಎಮ್ಮೆಗಳನ್ನ ತಿನ್ನುತ್ತಿದ್ದರೆಂದು ಹೇಳಲಾಗಿದೆ(ಬುಚನನ್ ೧೯೦೧). ಇವರು ಕೂಲಿಗಳಾಗಿ ಕೆಲಸ ಮಾಡುವಾಗ ದಿನದ ಊಟವನ್ನ ಮಾಲಿಕರ ಮನೆಯಲ್ಲೆ ಪಡೆಯುತ್ತಿದ್ದರು ಮತ್ತು ಕೂಲಿಯಾಗಿ ಅಕ್ಕಿ, ಬೇಳೆ, ಇತ್ಯಾದಿಗಳನ್ನ ಪಡೆಯುತಿದ್ದರು, ಅಲ್ಲದೆ ಅವರು ಇತರೆ ಜಾತಿಯವರು ನಡೆಸುವ ಸಮಾರಂಭಗಳಲ್ಲಿ ಊಟ ಮಾಡಿದ ಎಂಜಲು ಎಲೆಗಳನ್ನ ತೆಗೆಯುತ್ತಿದ್ದು ಅದರಲ್ಲಿ ಬಿಟ್ಟ ಮುಸುರೆ ಅನ್ನವನ್ನ ತಿನ್ನುತ್ತಿದ್ದರಂತೆ. ಆದರೆ ಇಂದು ಇವರಲ್ಲಿ ಕಡು ಬಡತನವಿದ್ದರೂ ಸಹ ಬಹುತೇಕ ಕೊರಗರು ಅಪಮಾನಕರವೆನಿಸುವ ಇಂತಹ ಕೆಲಸಗಳನ್ನು ಮಾಡಲು ಹೆಚ್ಚು ಆಪೇಕ್ಷಿಸುವುದಿಲ್ಲ.

ಕೊರಗರಲ್ಲಿ "ಕಳ್ಳು" ಕುಡಿತ ಸಾಮಾನ್ಯವಾಗಿದ್ದು ಅದರ ದುಷ್ಪರಿಣಾಮಗಳನ್ನು ಕೊರಗರು ಲೆಕ್ಕಿಸುವುದಿಲ್ಲ. ಇತ್ತೀಚಿನ ದಿನಗಳಲ್ಲಿ ಕಳ್ಳು ಗೆ ಬದಲಾಗಿ ಸರ್ಕಾರಿ ಸಾರಾಯಿ ಅಂಗಡಿಗಳನ್ನು / ಬಾರ್/ವೈನ್ ಅಂಗಡಿಗಳ ಮೇಲೆ ಹೆಚ್ಚು ಆಶ್ರಯಿಸಿದ್ದಾರೆ. ಅಲ್ಲದೆ ಕುಡಿಯುವುದನ್ನ ಅಷ್ಟೇ ಪವಿತ್ರತೆಯ ಹಿನ್ನಲೆಯಲ್ಲಿಯೇ ನೋಡುತ್ತಾರೆ, ಶುಭ ಅಶುಭದ ಯಾವುದೇ ಬಗೆಯ ಕಾರ್ಯಕ್ರಮವಿದ್ದರೂ ಕಳ್ಳು (ಯಂಡ) ಬೇಕೇ ಬೇಕು. ಕೊರಗರ ನಂಬಿಕೆಯ ಪ್ರಕಾರ ಸಾಮೂಹಿಕವಾದ ಕಾರ್ಯಕ್ರಮದಲ್ಲಿ ಕಳ್ಳನ್ನು ಕುಡಿಯುವಾಗ, ನೆಲಕ್ಕೆ ಒಂದು ಹನಿಯನ್ನ ಯಾರಾದರು ಬೀಳಿಸಿದರೆ ಅದಕ್ಕೆ ದಂಡ ವಿಧಿಸುತ್ತಾರೆ, ಇಲ್ಲವೆ ಅಂಥಹದೇ ಒಂದು ಸಮಾರಂಭವನ್ನು ಮಾತಿಗೆ ತಪ್ಪದೆ ದೈವಕ್ಕೆ ಒಪ್ಪಿಸಬೇಕು ಎನ್ನುವ ನಿಯಮಗಳಿವೆ.

೪.೫. ಕೊರಗರ ಒಳ ಪಂಗಡಗಳು ಮತ್ತು ಬಳಿ ಪದ್ಧತಿ

ಕೊರಗ ಬುಡಕಟ್ಟಿನವರಲ್ಲಿ ಒಳ ಪಂಗಡಗಳಿವೆ. ಈ ಒಳ ಪಂಗಡಗಳನ್ನು ಅವರು ಧರಿಸುವ ವಸ್ತ್ರವಿನ್ಯಾಸವನ್ನಾಧರಿಸಿ ನಿರ್ಧರಿಸಲಾಗಿದೆ.

೪.೫.ಅ. ಸೊಪ್ಪು ಕೊರಗರು : ಇವರು ಮೈಗೆ ಬಟ್ಟೆಯನ್ನು ತೊಡದೆ, ಗಿಡ ಮರಗಳ ಎಲೆಗಳನ್ನ ಬಳಸಿ, ದೇಹವನ್ನು ಮುಚ್ಚಿಕೊಂಡು ಬದುಕುವವರು. ಇವರಿಗೆ ತಪ್ಪು ಕೂರಗರು, ತಪ್ಪಲು ಕೊರಗರು ಎಂಬ ಪರ್ಯಾಯ ನಾಮಗಳಿಂದಲೂ ಗುರುತಿಸಲಾಗುತ್ತದೆ. ಈ ಸೊಪ್ಪು ಕೊರಗರು ೧೯೪೦ರ ಈಚೆಗೆ ಬಟ್ಟೆಯನ್ನು ತೊಡಲು ಪ್ರಾರಂಭಿಸಿದರು ಎಂದು ವಕ್ತೃಗಳು ತಿಳಿಸುತ್ತಾರೆ. ಆದರೆ ಇಂದಿನ ದಿನಗಳಲ್ಲಿ ಮೇಲೆ ವಿವರಿಸಿದಂತೆ ಅವರು ಎಲ್ಲಾ ಬಗೆಯ ವಸ್ತ್ರಗಳನ್ನು ಧರಿಸುತ್ತಾರೆ. ಆದರೆ ವರ್ಷಕ್ಕೊಂದೂ ಬಾರಿ ಸೊಪ್ಪು ಕೊರಗರು ತಮ್ಮ ಮೂಲ ವೇಷ ಹಾಕಿ ನವರಾತ್ರಿಯ ಹಬ್ಬದಲ್ಲಿ ಕುಣಿಯುತ್ತಾರೆ.

೪.೫.ಆ. ಮುಂಡು ಕೊರಗರು : ಇವರು ಮೊಣಕಾಲಿನವರೆಗೆ ಮುಂಡ(ಪಂಚೆ)ತೊಡುತ್ತಾರೆ. ಹೆಂಗಸರೂ ಕೂಡ ಸೊಂಟದಿಂದ ಮೊಣಕಾಲಿನವರೆಗೆ ಮಾತ್ರ ಮುಂಡು ಸುತ್ತಿಕೊಳ್ಳುತ್ತಾರೆ. ಇವರಿಗೆ ಕುಂಬು ಕೊರಗರು (ಕುಂಬು–ಬಟ್ಟೆ) ಎಂದೂ ಕರೆಯುತ್ತಾರೆ. ಸೊಪ್ಪು ಕೊರಗರಿಗೂ ಮತ್ತು ಇವರಿಗೂ ಅಂತಹ ವ್ಯತ್ಯಾಸಗಳೇನೂ ಕಂಡು ಬರುವುದಿಲ್ಲ.

೪.೫.ಇ. ಅಂಡೆ ಕೊರಗರು : ಕೊರಳಿಗೆ ಅಂಡೆಯನ್ನು ಕಟ್ಟಿಕೊಂಡು ತಿರುಗುವಂಥವರು ಅಂಡೆ ಕೊರಗರು. ಅಂಡೆ ಎಂದರೆ ಬಿದಿರಿನಲ್ಲಿ ತಯಾರಿಸಿದ ಒಂದು ಕೊಳವೆ. ಅದಕ್ಕೆ ದಾರವನ್ನು ಕಟ್ಟಿ ಕುತ್ತಿಗೆಗೆ ಅಥವಾ ಬಗಲಿಗೆ ನೇತು ಹಾಕಿಕೊಂಡಿರುತ್ತಿದ್ದರು. ಈ ಅಂಡೆಯನ್ನು ಅವರು ನೀರು ಕುಡಿಯುವುದಾಕ್ಕಾಗಿ ಬಳಸುತ್ತಿದ್ದರು. ಹಾಗೆ ಇವರು ತೆಂಗಿನ ಚಿಪ್ಪೊಂದನ್ನು ಬೆನ್ನಿಗೆ

ನೇತ್ಹಾಕಿಕೊಂಡಿರುತ್ತಿದ್ದರು. ತಮ್ಮ ಎಂಜಲನ್ನ ಇತರರಂತೆ ನೆಲಕ್ಕೆ ಉಗಳುವಂತಿರಲಿಲ್ಲ, ಬೊಗಸೆಯಿಂದ ನೀರು ಕುಡಿಯುತ್ತಿರಲಿಲ್ಲ, ನೀರು ಕುಡಿಯುವಾಗ ಹನಿಗಳು ನೆಲಕ್ಕೆ ಬೀಳದಂತೆ ತಡೆಯುವುದಕ್ಕಾಗಿ ಈ ತೆಂಗಿನ ಚಿಪ್ಪನ್ನು ಬಳಸುತಿದ್ದರು. ಕೊರಗ ತನಿಯನ ಪಾಡ್ದನದಲ್ಲಿ ಕೊರಗ ತನಿಯನ ಸಾಕುತಾಯಿ ಆತನಿಗೆ ಚಿಪ್ಪಿನಲ್ಲಿ ಅನ್ನ, ಕೈಯಲ್ಲಿ ತಪ್ಪು ನೀಡಿ ಸಾಕಿದಳು ಎಂದು ಉಲ್ಲೇಖ ಬರುತ್ತದೆ. ಇವರಿಗೆ ತಿಪ್ಪಿ ಕೊರಗ ಅಥವಾ ಗೆರೆಟೆ ಕೊರಗ ಎಂದು ಕರೆಯುವ ವಾಡಿಕೆಯೂ ಇದೆ.

೪.೫.ಈ. ಬಾಕುಡೆ ಕೊರಗ: ಇವರು ಮೂಲತಃ ಭಂಗಿ ವೃತ್ತಿಯನ್ನು ಮಾಡುವವರು ಎಂದು ಹೇಳಲಾಗುತ್ತದೆ. ಮೊದಲು ಕೊರಗರ್ಯಾರೂ ಭಂಗಿಯಂತ ವೃತ್ತಿಯನ್ನು ಮಾಡುತ್ತಿರಲಿಲ್ಲ. ನಗರಪಾಲಿಕೆಯ ವತಿಯಿಂದ ಕೊರಗರಿಗೆ ಕೆಲಸ ಸಿಕ್ಕಿ ನಂತರದಲ್ಲಿ ಕೊರಗರೂ ಭಂಗಿ ಕೆಲಸ ಮಾಡಬೇಕಾಗಿ ಬಂತು. ಈ ಮೊದಲು ಭಂಗಿ ಕೆಲಸವನ್ನು ಮಾಡುವ 'ಬಾಕುಡ' ಜಾತಿಯವರೊಂದಿಗೆ ರಕ್ತ ಸಂಬಂಧವಾಗಲಿ, ದೈಹಿಕ ಸಂಬಂಧವಾಗಲಿ ಕೊರಗರು ಬೆಳೆಸುತ್ತಿರಲಿಲ್ಲ. ಆದರೆ ನಗರಪಾಲಿಕೆಯ ಕೆಲಸದಿಂದಾಗಿ ಪರಸ್ಪರರ ಮಧ್ಯ ರಕ್ತ ಸಂಬಂಧಗಳು ಪ್ರಾರಂಭವಾಗಿವೆ ಎಂದು ಹೇಳುತ್ತಾರೆ. ಹೀಗಾಗಿ ಇವರನ್ನು ಬಾಕುಡೆ ಕೊರಗರೆಂದು ಕರೆಯುತ್ತಿರಬೇಕು.

೪.೬. ಆಚರಣೆಗಳು

೪.೬.ಅ. ಹುಟ್ಟು: ಕೊರಗರು ಅನುಸರಿಸುವ ಹುಟ್ಟು ಸಂಬಂಧಿ ಆಚರಣೆಗಳು ಇತರೇ ದಲಿತ ವರ್ಗಗಳ ಆಚರಣೆಗಳನ್ನ ಹೋಲುವವು. ಕೊರಗರ ಸಂಪ್ರದಾಯಗಳು ಮತ್ತು ಆಚರಣೆಗಳು ಬಹಳ ಸರಳವಾದುವುಗಳಾಗಿವೆ. ಮಗು ಜನನವಾದಾಗ ೧೨ನೆಯ ದಿನದ ಸೂತಕ ಕಳೆದ ನಂತರ ನಾಮಕರಣದ ದಿನ ಗುರಿಕಾರರನ್ನ ಕರೆಸಿ ಪೂಜಾ ವಿಧಿಗಳನ್ನ ನೆರವೇರಿಸಲಾಗುವುದು. ಆನಂತರ ಸೋದರತ್ತೆಯು ಮಗುವಿಗೆ ಹೆಸರಿಟ್ಟು ತೊಟ್ಟಿಲು ತೂಗುವಳು. ತೊಟ್ಟಿಲನ್ನು ಹೂಗಳಿಂದ ಸಿಂಗರಿಸಲಾಗುವುದು. ನೆರೆದ ಎಲ್ಲ ಸಂಬಂಧಿಗಳಿಗೆ ಹಾಗೂ ಗುರಿಕಾರನ ಪರಿವಾರದವರಿಗೆ ಸಂತೃಪ್ತವಾಗುವಂತೆ ಊಟ ಬಡಿಸಲಾಗುವುದು. ಕೆಲವೊಮ್ಮೆ ಗುರಿಕಾರನೇ ಮಗುವಿಗೆ ಹೆಸರಿಟ್ಟು ತೊಟ್ಟಿಲಿಗೆ ಹಾಕುವುದುಂಟು. ಹೆರಿಗೆ ನಂತರದ ಸೂತಕದ ೧೨ ದಿನಗಳಲ್ಲಿ ಬಾಣಂತಿ ಮತ್ತು ಮಗುವಿನ ಸೋದರತ್ತೆ ಹೊರತುಪಡಿಸಿ ಉಳಿದವರು ಮನೆಯಲ್ಲಿ ನಿಲ್ಲುತ್ತಿರಲಿಲ್ಲ. ಈ ಅಚರಣೆಯನ್ನು ಈಗ ಕೊರಗರು ತೊರೆದಿದ್ದಾರೆ. ಸೂತಕ ೧೨ ದಿನಗಳ ತರುವಾಯ ಮಗುವಿಗೆ ಉಡಿದಾರವನ್ನ ತಾಯಿ ಕಟ್ಟುವಳು. ಕೊರಗರು ತಮ್ಮ ತಮ್ಮ ಮಕ್ಕಳಿಗೆ ವಾರದ 'ಏಳು ದಿನಗಳ ಹೆಸರುಗಳನ್ನು ಇಡುವುದು ಬಹುಮಟ್ಟಿಗೆ ಇಂದಿಗೂ ವಾಡಿಕೆಯಲ್ಲಿದೆ.

ಕೋಷ್ಟಕ ೪.೨ ಕೊರಗರಲ್ಲಿ ಕಂಡುಬರುವ ಹೆಸರುಗಳು

ದಿನದ ಹೆಸರುಗಳು	ಗಂಡು ಮಗು	ಹೆಣ್ಣು ಮಗು
ಭಾನುವಾರ ಉ	ಐತ	ಐತು
ಸೋಮವಾರ	ತೋಮ	ತೋಮು
ಮಂಗಳವಾರ	ಅಂಗಾರೆ	ಅಂಗಾರು
ಬುಧವಾರ	ಬೂದ	ಬೂಬು
ಗುರುವಾರ	ಗುರುವ	ಗುರುಬಿ
ಶುಕ್ರವಾರ	ತುಕ್ರ	ತುಕ್ರಿ
ಶನಿವಾರ	ತನಿಯ	ತನ್ಯಾರು

ಕೊರಗರು ಬೇರೆ ಬೇರೆ ಬಗೆಯ ಹೆಸರುಗಳನ್ನೂ ಸಹ ತಮ್ಮ ಸಂತಾನಕ್ಕೆ ಇಡುತ್ತಾರೆ. ಉದಾ: ಗಂಡು ಮಕ್ಕಳಿಗೆ ಪ್ರಾಣಿ, ನಿಸರ್ಗ ಸಂಕುಲವನ್ನು ಆಧರಿಸಿ ಹೆಸರಿಡುವ ಕ್ರಮವು ಕೊರಗರಲ್ಲಿದೆ. ಗಂಡು ಮಕ್ಕಳಿಗೆ-ನಕ್ಕುರ, (ಎರೆಹುಳ) ಬೆಜಕ್ಕುರ(ತರಗೆಲೆ) ತಬುರ(ಕೆಂಪಿರುವೆ), ಬೊಳಂಬ (ಒಂದು ಬಗೆಯ ಮೀನು), ಮೆಣ್ಪ (ಮಿಂಚುಳ್ಳಿ), ಬೊಗ್ಗುರ(ಗಂಡುನಾಯಿ), ಪಿಜಿನ(ಇರುವೆ), ಚಲ್ಲ, ಕಟ್ಟಣ, ಕುಂಡೆ, ಚಪ್ಪರೆ, ಕರಿಯ, ಕಾಳ, ಬೊಲ್ಲು, 'ಒಡಿ, ಮಂಗು, ನಂಗು, ನಂದು ಮಾಂಕು ಇತ್ಯಾದಿ ಹೆಸರುಗಳನ್ನೂ, ಹೆಣ್ಣು ಮಕ್ಕಳಿಗೆ ನೆಚ್ಯಾರು, ಖಾಗಿ, ಅಮಾಸೆ, ತಂಡ್ರ, ಬಿಡಗು, ಪೀಂಚಲು ಎಂಬ ಹೆಸರುಗಳನ್ನೂ ಇಡುವುದು ಕಂಡುಬರುತ್ತದೆ. ಇತ್ತೀಚೆಗೆ ಪಟ್ಟಣಗಳ ಸಂಪರ್ಕಕ್ಕೆ ಬಂದಿರುವ ಕೊರಗರು ಇತರೇ ಹಿಂದೂಗಳಂತೆ ರಮೇಶ, ಸುರೇಶ, ಬಾಬು, ಸುಂದರ, ರಾಮ, ಕೃಷ್ಣ, ಪಾರ್ವತಿ, ಸುಂದರಿ ಮುಂತಾದ ಹೆಸರುಗಳನ್ನಿಡುತ್ತಿದ್ದಾರೆ.

೪.೬೮. ವಿವಾಹ ಸಂಬಂಧಿ ಆಚರಣೆಗಳು

ಕೊರಗರಲ್ಲಿ ಸರಳ ವಿವಾಹ ಪದ್ಧತಿಯನ್ನ ಕಾಣಬಹುದಾಗಿದೆ. ಮದುವೆಗೆ ಮುನ್ನ ಕೊರಗ ಜಾತಿಯ ಹಿರಿಯ ಗುರಿಕಾರರಿಬ್ಬರು ಸೇರಿ ಗಂಡು ಹೆಣ್ಣಿನವರ ಅಭಿಪ್ರಾಯದ ಮೇರೆಗೆ ವಿವಾಹ ನಿರ್ಣಯ ಮಾಡುತ್ತಾರೆ. ಕೊರಗರಲ್ಲಿ ಹೆಣ್ಣು ಋತುಮತಿಯಾದ ನಂತರವೇ ವಿವಾಹ ಮಾಡುವುದು ರೂಡಿಯಲ್ಲಿದೆ. ಅಂದರೆ ಕೊರಗರಲ್ಲಿ ಬಾಲ್ಯ ವಿವಾಹ ಪದ್ಧತಿ ಇಲ್ಲ. ಪುಷ್ಪವತಿಯಾದ ಹೆಣ್ಣು ಮಾತ್ರವೇ ವಿವಾಹ ಯೋಗ್ಯಳು ಎನ್ನುವ ಪರಿಕಲ್ಪನೆ ಕೊರಗರಲ್ಲಿದೆ. ಹೆಣ್ಣು ಗಂಡಿನ ಪೈಕಿ ಯಾರಾದರೊಬ್ಬರಿಗೆ ವಿವಾಹ ಒಪ್ಪಿಗೆಯಿಲ್ಲದಿದ್ದಲ್ಲಿ ಅಂಥ ವಿವಾಹವನ್ನು ಮಾಡುವುದಿಲ್ಲ. ಇವರಲ್ಲಿ ತಮ್ಮ ಸಂಗಾತಿಯನ್ನ ಆಯ್ಕೆ ಮಾಡಿಕೊಳ್ಳುವ ಸಂಪೂರ್ಣ ಸ್ವಾತಂತ್ರ್ಯ ಇವರಿಗಿದೆ.

ಕೊರಗರು ಪ್ರತಿನಿಧಿಸುವ ವಿವಾಹ ಸಂಸ್ಕೃತಿ, ವೈಧಿಕ ವಿವಾಹ ಸಂಸ್ಕಾರಕ್ಕಿಂತಲೂ ಭಿನ್ನವೂ, ಪ್ರಗತಿಪರವೂ ಆಗಿರುವುದನ್ನು ಕಾಣಬಹುದು. ಕೊರಗರಲ್ಲಿ ಕನ್ಯೆಗೆ ಬಹಳ ಮಹತ್ವವಿದ್ದು ಕನ್ಯೆಯೇ ದೇವರ ಪೂಜೆಗೆ ಕೂಡುತ್ತಾಳೆ. ಈ ಅಂಶ ಕೊರಗ ಸಮಾಜದಲ್ಲಿ ಹೆಣ್ಣಿಗಿರುವ ಪ್ರಾಧಾನ್ಯತೆಯನ್ನು ಸೂಚಿಸುವುದು.ಈ ಹಿಂದೆ ಕೊರಗರು ತಮ್ಮ ಮಕ್ಕಳ ವಿವಾಹವೇರ್ಪಡಿಸುವುದಕ್ಕೂ ಮುಂಚೆ ತಮ್ಮ ಧಣಿಗಳ ಒಪ್ಪಿಗೆ ಪಡೆಯಬೇಕಾಗಿತ್ತೆಂದು ಹೇಳುತ್ತಾರೆ. ಕಾರಣ ತಮ್ಮ ಧಣಿಗಳಿಂದ ಮದುವೆಗೆ ಬೇಕಾದ ಸಹಾಯವನ್ನ ಪಡೆಯುವುದೇ ಅದರ ಉದ್ದೇಶವಾಗಿರಬೇಕು.

ವಿವಾಹಕ್ಕೆ ಕೊರಗರು ಭಾನುವಾರ ಬಹಳ ಪ್ರಶಸ್ತವಾದ ದಿನವೆಂದು ಭಾವಿಸುತ್ತಾರೆ. ವಿವಾಹವು ಸಾಮಾನ್ಯವಾಗಿ ಹೆಣ್ಣಿನ ಮನೆಯಲ್ಲಿ ನಡೆಯುವುದು ರೂಢಿ. ವಿವಾಹದ ದಿನದಂದು ಗಂಡು ಹೆಣ್ಣಿಗೆ ಮಂಗಳಸ್ನಾನ ಮಾಡಿಸಿ ಚಾಪೆಯ ಮೇಲೆ ಈರ್ವರನ್ನೂ ಜೋಡಿಯಾಗಿ ಕೂರಿಸಿ ಮದುವಣಿಗರ ಮುಂದೆ ತಟ್ಟೆಯಲ್ಲಿ ಅಕ್ಕಿ ಇರಿಸುವರು. ಕೊರಗರ ವಿವಾಹ ಸಮಾರಂಭದ ನೇತೃತ್ವವನ್ನು ಗುರಿಕಾರನು ಅಥವ ಹಿರಿಯ ಕೊರಗನೊಬ್ಬನು ವಹಿಸುವನು. ಆತನು ವಧುವರರ ತಲೆಯ ಮೇಲೆ ಅಕ್ಕಿ ಕಾಳನ್ನು ಹಾಕಿ ಆಶೀರ್ವದಿಸಿದ ನಂತರ ಇನ್ನುಳಿದವರು ವಧುವರರನ್ನು ಆಶೀರ್ವದಿಸುವರು. ಆಗ ವರನು ತನ್ನ ವಧುವಿಗೆ ಎರಡು ಬೆಳ್ಳಿಯ ನಾಣ್ಯಗಳನ್ನು ನೀಡಿ, ತನ್ನ ಸಮಾಜದ ಬಂದುಬಾಂಧವರಿಗೆ ಊಟವನ್ನು ನೀಡುವನು. ಇದು ಹಿಂದೆ ನಡೆದು ಬರುತ್ತಿದ್ದ ಕೊರಗರ ವಿವಾಹ ಕ್ರಮ. ಇತ್ತೀಚಿನ ದಿನಗಳಲ್ಲಿ ಬೆಳ್ಳಿ ನಾಣ್ಯಗಳನ್ನ ನೀಡುವ ಪದ್ದತಿಯಿಲ್ಲವೆಂದು ವಕ್ತೃಗಳು ಹೇಳುತ್ತಾರೆ.

ಕೊರಗರಲ್ಲಿ ವಿವಾಹ ಒಪ್ಪಂದವಾದ ಮೇಲೆ ಹೆಣ್ಣಿಗೆ ತಾಮ್ರದುಂಗುರ ತೊಡಿಸುವ ಕ್ರಮ ಉಂಟು. ಹೆಣ್ಣಿಗೆ ವಿವಾಹದಲ್ಲಿ ಗಂಡು ೧ ರೂ. ತೆರಿಗೆ ಕೊಡುತ್ತಾನೆ. ಕೊರಗರಿಗೆ ವಿವಾಹಕ್ಕೆ ಶುಕ್ರವಾರವೂ ಪ್ರಶಸ್ತ ದಿನವೆಂದು ಪರಿಗಣಿಸುವರು. ಕೊರಗರಲ್ಲಿ ಹೆಣ್ಣು-ಗಂಡುಗಳು ಜನಿಸಿದ ದಿನಗಳಂದು ವಿವಾಹ ಮಾಡುವುದಿಲ್ಲ. ಗಂಡು ವಿವಾಹದಂದು ಹೆಣ್ಣಿಗೆ ವಿವಿಧ ಬಣ್ಣದ ಮಣಿಸರ ತೊಡಿಸುತ್ತಾನೆ. ಒಂದೇ ಬಳಿಗೆ ಸೇರಿದವರು ವಿವಾಹವಾಗುವುದಿಲ್ಲ.

ಕೊರಗರಲ್ಲಿ ವಿವಾಹ ವಿಚ್ಛೇದನಕ್ಕೆ ಅವಕಾಶವಿರುವುದಿಲ್ಲ. ಒಂದು ಗಂಡು-ಒಂದು ಹೆಣ್ಣಿನ ಸಂಬಂಧವೆ ಪವಿತ್ರವೆಂದು ಕೊರಗರು ನಂಬುವರು. ಆದ್ದರಿಂದ ಕೊರಗರಲ್ಲಿ ಮೊದಲ ಹೆಂಡತಿ ಗಟ್ಟಿಮುಟ್ಟಾಗಿ ಆರೋಗ್ಯವಿರುವಾಗಲೇ ಗಂಡು ಮರು ಮದುವೆಯಾಗುವುದು ಸಾಧ್ಯವಿಲ್ಲ. ಆದರೆ ವಿಧುರ, ವಿಧವೆಯೊಬ್ಬಳು ಮರು ಮದುವೆಯಾಗಬಹುದು. ಮರುಮದುವೆಯಲ್ಲಿ ಧಾರೆ ಅರೆಯುವ ಪದ್ದತಿ ಕೊರಗರಲ್ಲಿಲ್ಲ. ಕೊರಗರ ವಿವಾಹ ಸಂಪ್ರದಾಯದಲ್ಲಿ ವ್ಯಕ್ತಿ ಸ್ವಾತಂತ್ರ್ಯ, ನೈತಿಕತೆ, ಕೌಟುಂಬಿಕ ಭದ್ರತೆ, ಸರಳತೆಗೆ ಪ್ರಮುಖ ಸ್ಥಾನವಿದೆ.

೪.೬.ಇ. ಮರಣ ಸಂಬಂಧಿ ಆಚರಣೆಗಳು

ಕೊರಗರಲ್ಲಿ ಸತ್ತವರನ್ನು ಹೂಳುವ ಪದ್ಧತಿಯಿದ್ದು ಸಾವಿನ ಸೂತಕವನ್ನ ೧೩ ದಿನಗಳವರೆಗೆ ಆಚರಿಸುತ್ತಾರೆ. ಚಿಕ್ಕ ಮಕ್ಕಳಿಗೆ ಮೂರು ದಿನಗಳ ಸೂತಕ ಮಾಡುತ್ತಾರೆ, ಸತ್ತವರಿಗೆ ಸಂಸ್ಕಾರ ಪ್ರಾರಂಭಿಸುವುದಕ್ಕೆ ಮುಂಚೆ ಸಾಮಾನ್ಯವಾಗಿ ಗುರಿಕಾರನನ್ನು ಕರೆತಂದು ಅವನ ನೇತೃತ್ವದಲ್ಲಿ ಎಲ್ಲಾ ಆಚರಣೆಗಳನ್ನು ಮಾಡುತ್ತಾರೆ. ಸೂತಕ ಕಳೆಯುವುದಕ್ಕಾಗಿ ೧೩ನೆಯ ದಿನ ತಿಥಿ ಮಾಡುತ್ತಾರೆ. ತಂದೆಗೆ ಜೇಷ್ಠ ಪುತ್ರನೂ, ತಾಯಿಗೆ ಕಿರಿಯ ಮಗನು ತಲೆ ಬೋಳಿಸಿಕೊಳ್ಳುವ ಕ್ರಮವಿದೆ. ಸಮಾಧಿಯ ಬಳಿ ಅಂದಿನ ಅಡಿಗೆಯ ಪದಾರ್ಥಗಳನ್ನು ಎಡೆಯಿಟ್ಟು, ಮಡಿಕೆಗೆ ನೀರು ತುಂಬಿ ಅದಕ್ಕೆ ಹೊಂಬಾಳೆಯನ್ನು (ತೆಂಗಿನ ಹೂವು) ಇರಿಸುತ್ತಾರೆ. ಆ ಮಡಕೆಗೆ ವಿಭೂತಿ ಕುಂಕುಮ ಹಚ್ಚುವರು. ತರುವಾಯ ಮಗನ ತಲೆ ಮೇಲೆ ಆ ಮಡಕೆಯನ್ನು ಹೊರಿಸಿ ಸಮಾಧಿಗೆ ಮೂರು ಸುತ್ತು ಪ್ರದಕ್ಷಿಣೆ ಮಾಡಿಸಿ ಹಿಮ್ಮುಖವಾಗಿ ಕೆಳಗೆ ಬೀಳಿಸುತ್ತಾನೆ. ಶವ ಸಂಸ್ಕಾರವನ್ನು ಮಾಡಿದ ೧೬ನೆಯ ದಿನ ಒಂದು ಹಿಡಿ ಮಣ್ಣನ್ನು ಹೂತ ಜಾಗದಿಂದ ತೆಗೆಯಲಾಗುವುದು. ಸಮಾಧಿಯ ಬಳಿ ಸತ್ತವನ ನೆನಪಿಗೆಂದು ಗಿಡ ಅಥವ ಕಲ್ಲೊಂದನ್ನು ನೆಡೆಲಾಗುವುದು. ಅದರ ಮೇಲೆ ಸ್ವಲ್ಪ ಅನ್ನ ಹೆಂಡವನ್ನು ಸುರಿಯುತ್ತಾರೆ. ಸತ್ತವನ ಸಮಾಧಿಯ ಬಳಿ ನಾಲ್ಕು ಅನ್ನದ ಉಂಡೆಗಳನ್ನು ಪ್ರೇತದ ತೃಪ್ತಿಗಾಗಿ ಇಡಲಾಗುತ್ತದೆ. ಅದನ್ನು ಉಂಡ ಸತ್ತವರ ಆತ್ಮವು ಅಂದಿನಿಂದ ತಮ್ಮ ಪೂರ್ವಜರನ್ನು ಸೇರುವುದೆಂಬುದು ಕೊರಗರ ನಂಬಿಕೆ.

ತುಂಬಾ ಹಿಂದೆ ಕೊರಗರಲ್ಲಿ ಶವಗಳನ್ನು ಸುಡುವ ಪದ್ಧತಿ ಇತ್ತೆಂದು ಕೊರಗರು ತಿಳಿಸುತ್ತಾರೆ. ಆದರೆ ಆ ಪದ್ಧತಿ ಈಗ ಚಾಲ್ತಿಯಲ್ಲಿಲ್ಲ. ಆದರೆ ಈಗ ವಿಶೇಷ ಸಂದರ್ಭಗಳಲ್ಲಿ ಶವವನ್ನು ಕೊರಗರು ಸುಡುವುದುಂಟು. ವಾಸಿಯಾಗದ ತೊನ್ನು ರೋಗ ಬಂದರೆ, ಸಿಡುಬು ರೋಗ ಬಂದರೆ, ಕ್ರೂರ ಪ್ರಾಣಿಗಳಿಗೆ ಬಲಿಯಾಗಿ ಸತ್ತರೆ, ಯಾರಾದರು ಆಕಸ್ಮಿಕ ಮರಣಕ್ಕೆ ತುತ್ತಾದಲ್ಲಿ ಅಂಥವರನ್ನು ಸುಡುವ ಪದ್ಧತಿ ಇದೆ. ಈ ಹಿಂದೆ ಜನನ ಮರಣ ಸಂಬಂಧಿ ಸಮಾರಂಭಗಳನ್ನ ಮಾಡಲು ತಮ್ಮ ಧಣಿಗಳ ಒಪ್ಪಿಗೆ ಪಡೆಯಬೇಕಾದ ಪರಸ್ಥಿತಿ ಇದ್ದುದಾಗಿ *ಎನ್ನುವ ವಕ್ತೃಗಳು ತಿಳಿಸಿದರು.*

೪.೬.ಈ. ಇತರೆ ನಂಬಿಕೆಗಳು : ಇತರ ಸಮುದಾಯಗಳಂತೆ ಕೊರಗರಲ್ಲಿಯ ವಿಧಿ ನಿಷೇಧಗಳು ವಿಶಿಷ್ಟವಾದ ಗುಣಗಳನ್ನು ಹೊಂದಿವೆ. 'ಅಂಡೆ' ಕೊರಗರು ಇನ್ನೊಬ್ಬ ಕೊರಗನ ಅಂಗಳದಲ್ಲಿ

ಅಥವಾ ಸಮ್ಮುಖದಲ್ಲಿ ಉಗಿಯಬಾರದು ಎಂಬ ಸಾಂಪ್ರದಾಯಿಕ ನಿಯಮಗಳನ್ನ ಪಾಲಿಸುತ್ತಿದ್ದರು. ಮೇಲು ಜಾತಿಯವರ ಮಕ್ಕಳಿಗೆ ವಾಸಿಯಾಗದ ಕಾಯಿಲೆ ಬಂದರೆ ಕೊರಗ ಮಹಿಳೆ ಮೊಲೆ ಕುಡಿಸುವುದರಿಂದ ಆ ರೋಗ ವಾಸಿಯಾಗುತ್ತದೆ ಎಂಬ ನಂಬಿಕೆ ಇದೆ. ಈ ಸಂಪ್ರದಾಯ ಇವತ್ತಿನ ದಿನಗಳಲ್ಲಿಯೂ ಬಳಕೆಯಲ್ಲಿರುವುದನ್ನ ಕಾಣಬಹುದಾಗಿದೆ. ಆದರೆ ಮೊಲೆಯುಣಿಸುವ ಸಂಪ್ರದಾಯ ಗೌರವ ಭಾವನೆಗಾಗಿ ಮತ್ತು ತಮ್ಮ ಅಸಹನೀಯ ಕೃತ್ಯಕ್ಕೆ ಪರ್ಯಾಯವಾಗಿ ನೀಡುವ ಅಥವಾ ಒಳಗೊಳ್ಳುವ ಕ್ರಿಯೆ ಎಂದೂ ಹೇಳಲಾಗುತ್ತದೆ. ಅಣ್ಣನ ಹೆಂಡತಿ ಮೈದುನನಾದವನಿಗೆ ಊಟಕ್ಕೆ ಬಡಿಸಬಾರದು ಎಂಬುದೊಂದು ನಿಯಮ ಕೊರಗರಲ್ಲಿದೆ.

ಬೇಡಿ ತಿನ್ನುವ ಪ್ರವೃತ್ತಿಯವರಾದ ಕೊರಗರಲ್ಲಿಯೂ ಸಹ ಸಾಕಷ್ಟು ವ್ಯವಸ್ಥಿತವದ ನಿಯಮಾಚಾರಗಳಿವೆ. ಒಂದೊಂದು ಕೊರಗ ಮನೆತನದವರು ಹಳ್ಳಿಯ ಒಂದೊಂದು ಭಾಗಗಳನ್ನು ಭಿಕ್ಷೆಗಾಗಿ ನಿಗದಿ ಮಾಡಿಕೊಂಡಿರುತ್ತಾರೆ. ಆ ನಿಯಮ ಮೀರಿದವರಿಗೆ ಒಳಿತಾಗುವುದಿಲ್ಲವೆಂಬ ನಂಬಿಕೆ ಅವರಲ್ಲಿದೆ.

- ಕೊರಗರು ನೆಲದ ಮೇಲೆ ಉಗಿಯಬಾರದು.
- ಕೊರಗರ ಹೆಸರು ರಾತ್ರಿ ಎತ್ತಬಾರದು.
- ಕೊರಗರು ಊರಲ್ಲಿ ಬರುವಾಗ ದಂಡವನ್ನು ಕುಟ್ಟುತ್ತ ಬರಬೇಕು.
- ಬ್ರಾಹ್ಮಣರ ಎಂಜಲು ತಿಂದರೆ ಮುಂದಿನ ಜನ್ಮದಲ್ಲಿ ಬ್ರಾಹ್ಮಣರಾಗಿ ಹುಟ್ಟುತ್ತಾರೆ.
- ನವರಾತ್ರಿಯಲ್ಲಿ ಕೊರಗ ವೇಷ ಹಾಕದಿದ್ದರೆ ಅವರಿಗೆ ಮುಂದೆ ಕಷ್ಟ ಇದೆ.
- ಬಟ್ಟೆ ತೊಡಬಾರದು.
- ಅನ್ನ ಸಂಗ್ರಹಿಸಬಾರದು.
- ಕೊರಗರ ಶವ ಯಾರ ಕಣ್ಣಿಗೂ ಬೀಳದ ಹಾಗೆ ತೆಗೆದುಕೊಂಡು ಹೋಗಬೇಕು.
- ಮನೆಯಲ್ಲಿ ಸೂತಕ, ಗ್ರಹಚಾರ ಇದ್ದರೆ ಕೊರಗರಿಗೆ ಅನ್ನದಾನ ಮಾಡಬೇಕು.

ಬುಟ್ಟಿಗಳನ್ನು ಹೆಣೆದು ಕೊಡುವ ಕೆಲಸ ನಾರಾಯಣನೇ ಹೇಳಿದ್ದು ಇವೆ ಇತ್ಯಾದಿ.

೪.೭. ಧಾರ್ಮಿಕ ಆಚರಣೆಗಳು ಹಾಗೂ ಆರಾಧನೆಗಳು

ಕೊರಗರು ಮುಖ್ಯವಾಗಿ ಪ್ರಕೃತಿ ಆರಾಧಕರು. ಸೂರ್ಯ, ಚಂದ್ರ, ವೃಕ್ಷ ಮತ್ತು ಜಲಾರಾಧನೆ ಇವರಲ್ಲಿ ಕಂಡುಬರುತ್ತದೆ. ಕೊರಗ ತನಿಯ ದೈವದ ಆರಾಧಕರಾದ ಇವರು ಇತ್ತೀಚಿನ ದಿನಗಳಲ್ಲಿ ಪಿಲಿ-ಚಾಮುಂಡಿ, ಮಹಾಕಾಳಿ, ಜುಮಾದಿ ಗುಳಿಗ ದೇವರುಗಳನ್ನು ಆರಾಧಿಸುತ್ತಾರೆ. ಇವರಲ್ಲಿ ವಾರದ ದಿನಗಳಿಗೆ ಹೆಚ್ಚಿನ ಪ್ರಾಧಾನ್ಯತೆ ಇದೆ. ತಮ್ಮ ಮಕ್ಕಳಿಗೆ ಹೆಸರಿಡುವಾಗ ವಾರದ ದಿನಗಳನ್ನೆ ಇಡುತ್ತಾರೆ. ಆರಾಧನೆಯಲ್ಲಿಯೂ ವಾರದ ದಿನಗಳಿಗೆ ಆದ್ಯತೆ ಸಿಗುವುದು ಕಂಡುಬರುತ್ತದೆ. ಭಾನುವಾರ ಮತ್ತು ಶುಕ್ರವಾರಗಳನ್ನು ಕೊರಗರು ಶುಭ ದಿನಗಳೆಂದು ಹೇಳುತ್ತಾರೆ.

ಬದಲಾಗುತ್ತಿರುವ ಇತ್ತೀಚಿನ ದಿನಗಳಲ್ಲಿ ಹೊರಗಿನ ಸಮುದಾಯಗಳ ಪ್ರಭಾವ ಇವರ ಆಚರಣೆಗಳಲ್ಲಿ ಬದಲಾವಣೆಯನ್ನ ತಂದಿದೆ. ಹೀಗಾಗಿ ಇತರ ಜಾತಿಗಳು ಆಚರಿಸುವ ಹಬ್ಬ ಆಚರಣೆಗಳನ್ನು ಇವರೂ ಆಚರಿಸುವುದನ್ನು ಕಾಣಬಹುದು. ಇವರಿಗೆ ತಮ್ಮದೇ ಆದ ಸ್ವತಂತ್ರ ಹಬ್ಬಗಳು ಇಲ್ಲ. ಇವರ ಅಣ್ಣ-ತಂಗಿಯರ ಕಥೆಯಲ್ಲಿ ಬರುವ ನಾರಾಯಣ ದೇವರ

ವಿಚಾರವನ್ನು ಗಮನಿಸಿದರೆ ಮತ್ತು ಇಲ್ಲಿ ಅನುಕರಣೆ ಮಾಡಿರುವ ಪದ್ಧತಿಗಳನ್ನು ಗಮನಿಸಿದರೆ ವೈಷ್ಣವ ಸಂಪ್ರದಾಯದ ಪ್ರಭಾವ ಇವರ ಮೇಲಾದಂತೆ ಕಂಡು ಬರುತ್ತದೆ.

ಕೊರಗರಲ್ಲಿ ಬಲಿಪದ್ಧತಿ ಆಚರಣೆಯಲ್ಲಿದ್ದು, ಆಡು, ಕೋಳಿ, ಹಂದಿಗಳನ್ನು ಬಲಿಕೊಡುತ್ತಾರೆ. ಹಿಂದೆ ದೈವಗಳಿಗೆ ಗೂಬೆ ಮತ್ತು ಎಮ್ಮೆಗಳನ್ನೂ ಬಲಿ ಕೊಡುತ್ತಿದ್ದರೆಂದು ಹೇಳುತ್ತಾರೆ. ಬಲಿ ಕೊಡುವ ಸಂದರ್ಭದಲ್ಲಿ ಒಂದೇ ಹೊಡೆತಕ್ಕೆ ರುಂಡ–ಮುಂಡ ಬೇರೆ ಬೇರೆಯಾಗಬೇಕು ಎನ್ನುವ ನಂಬಿಕೆ ಇವರಲ್ಲಿದೆ. ಬಲಿಕೊಡುವ ವ್ಯಕ್ತಿಯನ್ನು 'ಅಸಾದಿ' ಎಂದು ಕೊರಗರು ಕರೆಯುತ್ತಾರೆ.

ಕೊರಗ ತನಿಯ ಭೂತಾರಾಧನೆ

ಕೊರಗ ತನಿಯನಿಗೆ 'ಕೊರಗ ಚನಿಯ' ಎಂದು ಕರೆಯುತ್ತಾರೆ ಈತನ ತಂದೆ ಕುರವನ ಕೋಡಿ, ತಾಯಿ ಕೊರಪ, ತನಿಯನು ಬಾಲ್ಯದಲ್ಲಿಯೇ ಇವರನ್ನು ಕಳೆದುಕೊಂಡು ತಾಯಿ ಬೈರಕ್ಕೆ ಬೈದಲೆಯ ಆಶ್ರಯವನ್ನ ಪಡೆದು ಬೆಳೆಯುತ್ತಾನೆ. ಈತ ಬೆಳೆದ ಸ್ಥಳ ಎಣಸೂರು ಬಾಳಿಕೆ, ಇಲ್ಲಿ ನೇಮ ನಡೆಯುವಾಗ ತೆಂಗಿನ ಎಳೆಯ ಗರಿ, ಬಾಳೆಯ ದಿಂಡಿನ ಏಳೇಳು ಹೊರೆಗಳನ್ನು ತಂದು ಹಾಕಲು ತನಿಯನಿಗೆ ಹೇಳಿದರೆ ಆತ ಏಳರ ಅಂಕಿಯ ಬದಲಾಗಿ ಎಪ್ಪತ್ತರಷ್ಟು ತಂದು ಹಾಕಿದನಂತೆ. ಇಷ್ಟೆಲ್ಲಾ ಕೆಲಸವಾದ ನಂತರ ಸವರ್ಣಿಯರು ತನಿಯನಿಗೆ 'ಮಾಡ'ದ ಬಳಿಗೆ ಬರಬಾರದೆಂದು ಹೇಳಿದ್ದಕ್ಕೆ. 'ನಾನು ತಂದ ತಿರಿ ಬಾಳೆ ಆದೀತು, ನಾನು ಮಾತ್ರ ಮಾಡದ ಸಮೀಪ ಬರಬಾರದೆ' ಎಂದು ಪ್ರಶ್ನಿಸಿ ಮಾಡದ ಹತ್ತಿರಕ್ಕೆ ಹೋಗುತ್ತಾನೆ. ಮಾಡದ ಸಮೀಪವೆ ನಾರಂಗದ ಮರವೊಂದರಲ್ಲಿ ಇರುವ ಕಾಯಿಗಳನ್ನು ನೋಡಿ 'ನಾನು ಬರುವಾಗ ಮನೆಯಲ್ಲಿ ಉಪ್ಪಿನಕಾಯಿ ಮುಗಿದಿದೆ ಎಂದು ತಾಯಿ ಹೇಳಿದ್ದಳು, ಇಲ್ಲಿಂದ ನಾರಂಗದ ಹುಳಿಯನ್ನು ಒಯ್ಯುತ್ತೇನೆ' ಎಂದು ಮಾಡದ ಮಾಡಿಗೆ ಹತ್ತಿ ಕಾಯಿ ಕೊಯ್ಯುವಾಗ ಮೈಸಂದಾಯ ಮತ್ತು ಕಿನ್ನಿಕೊಡೆಂಗೆನಾರ ದೈವಗಳು ಕಡೆಗಣ್ಣಿನಿಂದ ನೋಡಿ ಕೊರಗ ತನಿಯನನ್ನು ಮಾಯಾ ಸ್ವರೂಪ ಮಾಡಿದರಂತೆ. ಹೀಗೆ ಕೊರಗರಿಗೆ ಹಲವಾರು ನಿಯಮಗಳನ್ನ ವಿಧಿಸಿ ಕಟ್ಟುಪಾಡುಗಳಿಗೆ ಬದ್ಧರಾಗುವಂತೆ ಮಾಡಿದರಂತೆ. ಇದು ಕೊರಗ ತನಿಯ ಭೂತಾರಾಧನೆ ಆಚರಣೆಯಲ್ಲಿ ವ್ಯಕ್ತವಾಗುತ್ತದೆ.

೪.೮. ನ್ಯಾಯ ಪದ್ಧತಿ

ಕೊರಗರು ತಮ್ಮದೇ ಆದ ವಿಶಿಷ್ಟ ನ್ಯಾಯ ಪಂಚಾಯಿತ್ತಿ ವ್ಯವಸ್ಥೆಯನ್ನ ಹೊಂದಿದ್ದಾರೆ. ದೇವರ ಉತ್ಸವ, ಭೂತ ಕೋಲ, ಮದುವೆ ಸಂದರ್ಭಗಳಲ್ಲಿ ಕೊರಗರು ಒಂದಡೆ ನೆರೆದಾಗ ಹಿಂದಿನ ಸಮಸ್ಯೆಗಳನ್ನು ಎತ್ತಿಕೊಂಡು ನ್ಯಾಯ ಪಂಚಾಯಿತ್ತಿ ಮಾಡುವರು. ನ್ಯಾಯ ಪಂಚಾಯಿತ್ತಿಯ ಮುಖಂಡತ್ವವನ್ನು ಕೊರಗರ ಗುರಿಕಾರರು ಅಥವ ಹಿರಿಯರು ವಹಿಸುವುದು ರೂಢಿಯಲ್ಲಿದೆ. ಕೊರಗರಲ್ಲಿ ಚಿಕ್ಕ ಪುಟ್ಟ ತಪ್ಪುಗಳನ್ನು ಸಹ ಗಂಭೀರವಾಗಿ ತೆಗೆದುಕೂಳ್ಳುವುದುಂಟು. ಸಾಮಾನ್ಯವಾಗಿ ಇವರ ನ್ಯಾಯಪಂಚಾಯಿತ್ತಿಯಲ್ಲಿ ವಿಚಾರಣೆ ಒಳಪಡುವ ತಪ್ಪುಗಳ ಮಾದರಿಗಳು ಈ ಕೆಳಗಿನಂತಿವೆ.

- ಹಬ್ಬ ಹರಿದಿನಗಳಲ್ಲಿ ಒಬ್ಬರ ಎಲೆಯ ಅನ್ನದ ಅಗುಳು ಇನ್ನೊಬ್ಬನ ಎಲೆಗೆ ಬೀಳುವುದು.
- ಸೇಂದಿ ಸುರಿಯುವವನು ಅದನ್ನು ನೆಲಕ್ಕೆ ಕೈ ತಪ್ಪಿ ಚೆಲ್ಲುವುದು.
- ಹೆಂಡತಿಯ ಒಪ್ಪಿಗೆಯಿಲ್ಲದೆ ಗಂಡನು ಮರು ವಿವಾಹವಾಗುವುದು.
- ಹೆಣ್ಣು ವ್ಯಭಿಚಾರದಲ್ಲಿ ತೊಡಗುವುದು.

○ ಕೊರಗತನಿಯ ದೈವದ ಆರಾಧನೆಯನ್ನು ನಡೆಸದಿರುವುದು.

○ ಸಮೂಹ ನೃತ್ಯದಲ್ಲಿ ಪಾಲ್ಗೊಳ್ಳದಿರುವುದು.

ಕೊರಗರು ಭಿಕ್ಷೆಗಾಗಿ ಮೇಲ್ವರ್ಗದವರ ಮನೆಗಳನ್ನು ತಮ್ಮ ತಮ್ಮಲ್ಲಿಯೇ ಹಂಚಿಕೊಂಡಿರುತ್ತಾರೆ. ಈ ಕ್ರಮದ ಉಲ್ಲಂಘನೆ ಮಾಡಿದಾಗಲೂ ನ್ಯಾಯ ಪಂಚಾಯ್ತಿ ಸೇರುವುದುಂಟು. ಕೊರಗರು ಸನಾಯಿ ಬಾರಿಸಲು ಬೇರೆ ಬೇರೆ ಸ್ಥಳಗಳಿಗೆ ಹೋಗುವ ಅವಕಾಶ ಮತ್ತು ಜವಾಬ್ದಾರಿಯನ್ನು ಅವರ ಗುರಿಕಾರರು ತೀರ್ಮಾನಿಸಿ ನಿರ್ಣಯಿಸುವರು. ಆ ಪ್ರಕಾರ ಕೊರಗನು ನಡೆದುಕೊಳ್ಳದಿದ್ದರೆ ಗುರಿಕಾನು ತಪ್ಪಿತಸ್ಥ ಕೊರಗನಿಗೆ ದಂಡ ವಿಧಿಸಬಹುದು. ದಂಡವನ್ನು ಹಣದ ರೂಪದಲ್ಲಿ ಅಥವಾ ಕೊರಗರ ದೈವಕ್ಕೆ ಊಟ ಹಾಕುವ ಮೂಲಕ ಸಂದಾಯಿಸಬೇಕಾಗುತ್ತದೆ.

ಕೊರಗರಲ್ಲಿ ವ್ಯಭಿಚಾರ ಮಾಡಿದ ಹೆಣ್ಣೊಬ್ಬಳನ್ನು ವಿಚಾರಣೆಗೊಳಪಡಿಸಿ ದಂಡಿಸುವ ಕ್ರಮ ಈ ರೀತಿ ಇದೆ. ಹೆಣ್ಣು ದೇಹ ಸಂಬಂಧ ಹೊಂದಿದ ಗಂಡು ಅವಳಂತೆ ಕೆಳವರ್ಗಕ್ಕೆ ಸೇರಿದವನಾಗಿದ್ದರೆ ಆತನು ಆಕೆಯನ್ನ ವಿವಾಹವಾಗಬೇಕು. ಅಂಥ ಸಂದರ್ಭದಲ್ಲಿ ಹೆಣ್ಣನ್ನು ಶುದ್ದೀಕರಣಗೊಳಿಸಲಾಗುವುದು. ಆ ಕಾರ್ಯಕ್ಕಾಗಿ ಗಂಡು ತನ್ನ ಸ್ವಂತ ಖರ್ಚಿನಲ್ಲಿ ಗುಡಿಸಲನ್ನು ಕಟ್ಟಿ ಅವಳನ್ನು ಅದರೊಳಗಿರಿಸಬೇಕು. ಆಗ ಆ ಗುಡಿಸಲಿಗೆ ಬೆಂಕಿ ಹಚ್ಚಲಾಗುವುದು. ಆ ಹೆಣ್ಣು ಬೆಂಕಿಯಿಂದ ತಪ್ಪಿಸಿಕೊಂಡು ಬೇರೆ ಸ್ಥಳಕ್ಕೆ ಓಡಿ ಹೋಗುವಳು. ಅಲ್ಲಿಯೂ ಅದೇ ರೀತಿ ಮಾಡಲಾಗುವುದು, ಹೀಗೆ ಏಳು ಸಲ ಹೆಣ್ಣನ್ನು ಪರೀಕ್ಷೆಗೆ ಒಡ್ಡಲಾಗುವುದು. ಆ ಪರೀಕ್ಷೆಯಲ್ಲಿ ಹೆಣ್ಣು ಗೆದ್ದರೆ ಅವಳು ಶುದ್ಧಿಕರಣಕ್ಕೆ ಒಳಗಾದವಳೆಂದು ಭಾವಿಸಲಾಗುವುದು. ಆಗ ಮಾತ್ರ ಆ ಹೆಣ್ಣು ಪ್ರಾಮಾಣಿಕಳೆಂದೂ ಮತ್ತು ವಿವಾಹ ಯೋಗ್ಯಳೆಂದೂ ಕೊರಗರು ಭಾವಿಸುತ್ತಾರೆ. ವಾಲ್‌ಹೌಸ್‌ನ ಪ್ರಕಾರ ತಪ್ಪಿತಸ್ಥ ಹೆಣ್ಣನ್ನು ನದಿಯ ದಡದಲ್ಲಿ ಉದ್ದಕ್ಕೆ ಸಾಲಾಗಿ ಕಟ್ಟಿದ ಏಳು ಗುಡಿಸಲುಗಳೊಳಗೆ ಮೊದಲು ಬಿಡಲಾಗುವುದು. ಆಮೇಲೆ ಅವುಗಳಿಗೆ ಬೆಂಕಿ ಹಚ್ಚಲಾಗುವುದು. ಆಗ ಆ ಹೆಣ್ಣು ಬೊಂಬುಗಳನ್ನು ಹಿಡಿದುಕೊಂಡು ಅಲ್ಲಿಂದ ಜೀವಂತ ತಪ್ಪಿಸಿಕೊಳ್ಳಬೇಕು. ಆಗ ಆಕೆಯ ಪರಿಶುದ್ಧಳಾದಂತೆ ಎಂದು ಭಾವಿಸಿ ಅವಳನ್ನ ತಮ್ಮ ಸಮಾಜದಲ್ಲಿ ಸೇರಿಸಿಕೊಳ್ಳುತ್ತಾರೆ. ಬದಲಾಗಿರುವ ಕಾನೂನುಗಳಿಂದಾಗಿ ಇತ್ತೀಚಿನ ದಿನಗಳಲ್ಲಿ ಈ ಆಚರಣೆಯನ್ನ ಅವರು ಮುಂದುವರೆಸುತ್ತಿಲ್ಲ.

ಕೊರಗರಲ್ಲಿ ತಪ್ಪಿತಸ್ಥನು ದಂಡ ತೆರುವ ಸ್ಥಿತಿಯಲ್ಲಿಲ್ಲದಿದ್ದರೆ ಅವನಿಗೆ ಹೆಚ್ಚಿನ ಕಾಲಾವಕಾಶ ಕೊಡಲಾಗುವುದು ಅಥವಾ ತಪ್ಪಿತಸ್ಥನ ಪರವಾಗಿ ಆತನ ಧಣಿಯಾಗಲಿ, ನೆಂಟರಷ್ಟರಾಗಲಿ ದಂಡ ತೆರುವುದಕ್ಕೂ ಕೊರಗರಲ್ಲಿ ಅವಕಾಶವಿದೆ. ಬದಲಾಗಿರುವ ಇಂದಿನ ವ್ಯವಸ್ಥೆಯಲ್ಲಿ ಎಲ್ಲಾ ಸಾಂಪ್ರದಾಯಿಕ ನ್ಯಾಯ ಪದ್ಧತಿಯೂ ಕಣ್ಮರೆಯಾಗುತ್ತಿದೆಯೆಂದು ಕೆಲ ಹಿರಿಯ ವಕ್ತೃಗಳು ವ್ಯಥೆಯನ್ನು ಪಡುವರು.

೪.೧೦. ಕುಟುಂಬ ವ್ಯವಸ್ಥೆ

ಕೊರಗರು ಮುಖ್ಯವಾಗಿ ಅವಿಭಕ್ತ ಕುಟುಂಬದಲ್ಲಿ ನಂಬಿಕೆಯನ್ನಿಟ್ಟಿರುವವರು. ತೀರಾ ಇತ್ತೀಚಿನವರೆಗೂ ಅವಿಭಕ್ತ ಕುಟುಂಬ ವ್ಯವಸ್ಥೆ ಇವರಲ್ಲಿ ಇತ್ತೆಂದು ಹೇಳುತ್ತಾರೆ. ಅವಿಭಕ್ತ ಕುಟುಂಬ ಪರಂಪರೆಯ ಹಿರಿಯನೆ ಎಲ್ಲಾ ಬಗೆಯ ವಿಚಾರಗಳಲ್ಲೂ ತೀರ್ಮಾನ ತೆಗೆದುಕೊಳ್ಳುವವನು. ಕುಟುಂಬದ ಇತರೆ ಸದಸ್ಯರಿಗೆ ಅವರು ಎಷ್ಟೇ ವಿದ್ಯಾವಂತರಾಗಿದ್ದರೂ ನ್ಯಾಯ ವಿಚಾರಣೆಯಲ್ಲಿ ಕುಟುಂಬದ ಕಲಹಗಳು ಹಾಗೂ ಆಗು-ಹೋಗುಗಳಲ್ಲಿ ತೀರ್ಮಾನ

ತೆಗೆದುಕೊಳ್ಳುವ ಸ್ವಾತಂತ್ರ್ಯವಿರುವುದಿಲ್ಲ. ಇಂದಿಗೂ ಗ್ರಾಮೀಣ ಭಾಗದಲ್ಲಿ ವಾಸಿಸುವ ಕೊರಗರಲ್ಲಿ ಅವಿಭಕ್ತ ಕುಟುಂಬಗಳನ್ನು ಕಾಣಬಹುದಾಗಿದೆ.

೪.೧೧. ಆರ್ಥಿಕ ಸ್ಥಿತಿ

೪.೧೧.ಅ. ಕೊರಗರ ಕುಲಕಸಬು: ಕೊರಗರು ಮೂಲತಃ ಆಡಳಿತ ವರ್ಗವಾಗಿದ್ದು ಆನಂತರದ ದಿನಗಳಲ್ಲಿ ಬಲತ್ಕಾರವಾಗಿ ಇತರೆ ವರ್ಗಗಳ ಸೇವಕರಾಗಿ ಪರಿವರ್ತತರಾದರೆಂದು ತಿಳಿದುಬರುತ್ತದೆ. ಕೊರಗರೆ ಒಪ್ಪಿಕೊಳ್ಳುವಂತೆ ಅವರ ಮೂಲ ವೃತ್ತಿ ಇತರೆ ಮೇಲ್ ವರ್ಗಗಳ ಸೇವೆಯಲ್ಲಿ ನಿರತರಾಗುವುದು. ಮುಖ್ಯವಾಗಿ ಕೃಷಿ ಕೂಲಿಗಳಾಗಿ ಕೊರಗರು ನಿರತವಾಗಿರುವುದನ್ನು ಕಾಣಬಹುದು. ಹಿಂದೆ ಕೊರಗರನ್ನು ಗುಲಾಮರಾಗಿಸಿ ಬಹಿರಂಗವಾಗಿ ಮಾರಾಟ ಮಾಡಲಾಗುತ್ತಿತ್ತು ಎಂಬ ಸಂಗತಿಯನ್ನು ಎಡ್ಗರ್ ಥರ್ಸ್ಟನರ ಕಾಸ್ಟ್ ಅಂಡ್ ಟ್ರೈಬ್ಸ್ ಆಫ್ ಸದರ್ನ ಇಂಡಿಯ ಕೃತಿಯಲ್ಲಿ ವಿವರಿಸಿದ್ದಾರೆ.

'ಕೊರಗ ಗುಲಾಮರು ತೀರಾ ಹೀನಾಯಸ್ಥಿತಿಯಲ್ಲಿದ್ದರೂ ಅವರೇನೂ ಬಹಳ ದುಖಿಃಗಳಾಗಿಯಾಗಲಿ ಅಸಂತೋಷಿಗಳಾಗಿಯಾಗಲಿ ಇದ್ದಂತೆ ತೋರುವುದಿಲ್ಲ. ಒಬ್ಬ ಗುಲಾಮ ಗಂಡಸಿಗೆ ಮೂರಾಣೆಯ ಅಕ್ಕಿಯನ್ನು ಮತ್ತು ಒಂದು ಆಣೆ ನಗುದು ಹಾಗೂ ಸ್ವಲ್ಪ ಉಪ್ಪನ್ನೂ ಧಣಿಯಾದವನು ಕೊಡುವನು. ಹೆಣ್ಣು ಗುಲಾಮಳಿಗೆ ದಿನಕ್ಕೆ ಎರಡಾಣಿ ಕೂಲಿ ಅಕ್ಕಿ ರೂಪದಲ್ಲಿ ಕೊಡುವರು. ಆ ಗುಲಾಮರು ಗಂಡ ಹೆಂತಿಯರಾಗಿದ್ದರೆ ತಮಗೆ ಬಂದ ಅಕ್ಕಿಯಲ್ಲಿ ಸ್ವಲ್ಪ ಭಾಗವನ್ನು ಮಾರಿ ಜೀವನಾವಶ್ಯಕವಾದ ಇತರೆ ವಸ್ತುಗಳನ್ನು ಸುಲಭವಾಗಿ ಖರೀದಿಸಬಹುದು. ಈ ಗುಲಾಮರಿಗೆ ವರ್ಷಕ್ಕೊಮ್ಮೆ ಒಂದೊಂದು ವಸ್ತ್ರ ನೀಡಲಾಗುವುದು. ಗುಲಾಮರನ್ನು ಒಬ್ಬ ಧಣಿ ತನಗೆ ಸಾಕಾದ ತರುವಾಯ ಇನ್ನೊಬ್ಬ ಧಣಿಗೆ ಮರಾಟ ಮಾಡಿಬಿಡುತ್ತಿದ್ದ. ಆಗ ಮಾರುವವನು ತನ್ನ ಕೊರಗರಿಗೆ ಒಂದೊಂದು ತೆಂಗಿನ ಕಾಯಿ, ಒಂದೊಂದು ಹಲಸಿನ ಮರ ಹಾಗು ಹತ್ತಿಪ್ಪತ್ತು ಸೇರು ಅಕ್ಕಿ ಬೆಳೆಯುವಷ್ಟು ನೆಲವನ್ನು ದಾನವಾಗಿ ನೀಡುತ್ತಿದ್ದನು. ಕೊರಗ ಗುಲಾಮರಲ್ಲಿ ಬಹು ಸಂಖ್ಯಾತರು ಅಳಿಯ ಕಟ್ಟು ಸಂತಾನಕ್ಕೆ ಸೇರಿದವರು. ಈ ವ್ಯವಸ್ಥೆಯನ್ವಯ ಗಂಡು ಗುಲಾಮನನ್ನು ಮೂರು ಪಗೋಡಾಗಳಿಗೆ (ಅಂದರೆ ಹದಿನಾಲ್ಕು ರೂಪಾಯಿಗಳಿಗೆ) ಹೆಣ್ಣು ಗುಲಾಮಳನ್ನು ಐದು ಪಗೋಡಾಗಳಿಗೆ ಮಾರಲಾಗುತ್ತಿತ್ತು. ಮಕ್ಕಳ ಸಂತಾನ ಪದ್ಧತಿಗೆ ಸೇರಿದ (ಪಿತೃ ಪ್ರಧಾನ ವ್ಯವಸ್ಥೆ) ಗುಲಾಮರನ್ನು-ಗಂಡಿಗೆ ಐದು ಪಗೋಡಗಳಿಗೆ ಮತ್ತು ಹೆಣ್ಣಿನ್ನ ಮೂರು ಪಗೋಡಗಳಿಗೆಂದು ದರ ನಿರ್ಣಯಿಸಿ ಮಾರಲಾಗುತ್ತಿತ್ತು, ಈ ಮಕ್ಕಳ ಸಂತಾನ ವ್ಯವಸ್ಥೆಯಲ್ಲಿ ಗುಲಾಮ ದಂಪತಿಗಳ ಮಕ್ಕಳು ಗಂಡನ ಧಣಿಗೆ ಸೇರುತ್ತಿದ್ದರು. ಅಳಿಯ ಸಂತಾನ ವ್ಯವಸ್ಥೆಯಲ್ಲಿ ತಾಯಿಯ ಧಣಿಗೆ ಆಕೆಯ ಮಕ್ಕಳು ಸೇರುತ್ತಿದ್ದರು. ಈ ಧಣಿಯು ಕೊರಗರ ವಿವಾಹಕ್ಕೆಂದು ೧ ವರೆ ಪಗೋಡಾ ಖರ್ಚು ಮಾಡುವನು. ಮಕ್ಕಳ ಸಂತಾನ ವ್ಯವಸ್ಥೆಯಲ್ಲಿ ಧಣಿ ಹೆಣ್ಣಿನ ಮದುವೆಗೆಂದು ಎರಡು ಪಗೋಡಾ ಖರ್ಚು ಮಾಡಿ ಅ ಕೊರತಿ ಮತ್ತು ಅವಳ ಮಕ್ಕಳ ಮೇಲೆ ಮಾಲಿಕತ್ವ ಪಡೆಯುತಿದ್ದನು. ಧಣಿಯೊಬ್ಬನು ಇತರರಿಗೆ ತನ್ನ ಕೊರಗ ಗುಲಾಮರನ್ನು ಬಾಡಿಗೆಗೆಂದು ಕೊಡುವ ಪದ್ಧತಿಯಿತ್ತು. ವರ್ಷಕ್ಕೆ ಒಂದು ಮುಡಿ ಅಥವಾ ೪೦ ಸೇರು ಅಕ್ಕಿ ಒಬ್ಬ ಕೊರಗ ಕಾರ್ಮಿಕನ ಬಾಡಿಗೆ, ಕೊರಗರ ಧಣಿಗಳು ಅವರನ್ನು ಇತರರಿಗೆ ಮೂರ್ನಾಲ್ಕು ಪಗೋಡಾಗಳಿಗೆ ಅಡವಿಡುವುದೂ ಇತ್ತೆಂದು ಥರ್ಸ್ಟನ್ ತಿಳಿಸುತ್ತಾರೆ(ಎಡ್ಗರ್ ಥರ್ಸ್ಟನ್:೩೯೪).

ಚಿತ್ರ 4.1.ಕುರ್ಚಿ ಮಾಡುವಲ್ಲಿ ನಿರತರಾಗಿರುವ ಕೊರಗರು



ಕೊರಗರು ಗುಲಾಮ ಕಾರ್ಮಿಕರಾಗಿ ದುಡಿಯುತ್ತಿದಾಗ ಕಲಿತ ಕಸುಬು ಬುಟ್ಟಿ ಹೆಣೆಯುವುದು, ತೋಟದ ಕೆಲಸ, ಕೃಷಿ, ಮನೆಚೌಕಟ ಇತ್ಯಾದಿ ಕಸುಬುಗಳನ್ನು ಕಲಿತರು. ಇಂದಿನ ಕೊರಗರೂ ಸಹ ಇವೇ ಉದ್ಯೋಗಗಳನ್ನು ಮುಂದುವರೆಸಿ ಕೊಂಡು ಬರುತ್ತಿದ್ದಾರೆ. ಪ್ರಧಾನ ವಾಗಿ ಇಂದು ಕೊರಗರು ಬುಟ್ಟಿ ಹೆಣೆಯುವರು. ಸಾಮಾನ್ಯವಾಗಿ ಬೆಟ್ಟ ಗುಡ್ಡಗಳ ತಪ್ಪಲುಗಳಲ್ಲಿ, ಕಾಡು ಮೇಡುಗಳಲ್ಲಿ ವಾಸಿಸುವ ಕೊರಗರು ಕಾಡಿನಿಂದ ಬೆತ್ತ ತಂದು ವಿಭಿನ್ನ ಬಗೆಯ ಬುಟ್ಟಿಗಳನ್ನು ತಯಾರಿಸಿ ಹಳ್ಳಿಯ ಕೃಷಿಕರಿಗೆ ಮಾರುತ್ತಾರೆ. ಕೊರಗರ ಬೆತ್ತದ ಬುಟ್ಟಿಗಳಿಗೆ ಹಣದ ರೂಪದಲ್ಲಿ ಅಕ್ಕಿ, ತೆಂಗಿನ ಕಾಯಿ, ಕೊಬ್ಬರಿಎಣ್ಣೆ ಇತ್ಯಾದಿಗಳನ್ನ ಸಂದಾಯ ಮಾಡುವರು.ಕೊರಗರ ಬುಟ್ಟಿಗಳಿಗೆ ನ್ಯಾಯೋಚಿತ ಬೆಲೆ ಎಲ್ಲಾ ಸಂದರ್ಭದಲ್ಲೂ ಸಿಗುವುದಿಲ್ಲ. ಕೃಷಿಕರು ಕೊಟ್ಟಷ್ಟು ಕೊರಗರು ಪಡೆದಷ್ಟೇ ಬೆಲೆ; ಹೀಗಾಗಿ ಕೊರಗರದ್ದು ಕಡು ಬಡತನದ ಜೀವನ, ಅರೆ ಹೊಟ್ಟೆ ಅರೆ ಬಟ್ಟೆ ಜೀವನ. ಮನೆ ತುಂಬಾ ಮಕ್ಕಳು, ಮನೆಮಂದಿಯೆಲ್ಲರ ದುಡಿತವಾದರೂ ಯಾರ ಹೊಟ್ಟೆಯೂ ತುಂಬದಿರುವ ಹೀನ ಸ್ಥಿತಿ. ಇತ್ತೀಚಿನ ದಿನಗಳಲ್ಲಿ ಹಗ್ಗ ಹೆಸೆಯುವುದು, ತೆಂಗಿನ ನಾರು ತೆಗೆಯುವುದು, ಬೀಡಿ ಸುತ್ತುವ ಕೆಲಸಗಳಲ್ಲಿ ಕೊರಗರು ತೊಡಗಿರುವುದನ್ನ ಕಾಣಬಹುದಾಗಿದೆ.

ಕೊರಗರ ಬುಟ್ಟಿಗಳಿಗೆ ಸೂಕ್ತ ಮಾರುಕಟ್ಟೆ ವ್ಯವಸ್ಥೆ ಇಲ್ಲ. ಇದೇ ಕೊರಗರ ಬಡತನದ ಸಮಸ್ಯೆಯ ಮೂಲ. ಹಿಂದಿನಂತೆ ಕೃಷಿಕರು ಮನೆಯಲ್ಲಿ ಬಿದಿರು ಉತ್ಪನ್ನಗಳಾದ ಬುಟ್ಟಿಗಳು, ತಡಿಕೆಗಳನ್ನು ಧಾನ್ಯ ಸಂಗ್ರಹಿಸಿಡಲು ಬಳಸುವುದಿಲ್ಲ. ಹೀಗಾಗಿ ಮಾರುಕಟ್ಟೆಯಲ್ಲಿ ಕೊರಗರ ಉತ್ಪನ್ನಗಳಿಗೆ ಅಂತಹ ಬೆಲೆ ಇಲ್ಲವಾಗಿದೆ. ಇದು ಕೊರಗರ ಬಡತನವನ್ನು ತೀವ್ರಗೊಳಿಸುತ್ತಿದೆ. ಕೊರಗರು ಕಾಡಿನಿಂದ ನಾರುಗಳು, ಬಿದಿರು ಮತ್ತು ಧಣಿಗಳ ಮನೆಗಳಿಂದ ತೆಂಗಿನ ಚಿಪ್ಪುಗಳನ್ನು ತಂದು ವಿವಿಧ ಬಗೆಯ ಬುಟ್ಟಿಗಳನ್ನು, ಅಕ್ಕಿ ಸೋಸುವ ಗೆರಸೆ, ಧಾನ್ಯ ಅಳೆಯುವ ಕಳಸಿಗೆ, ಕೋಳಿಗಳನ್ನು ರಕ್ಷಿಸುವ ಬುಟ್ಟಿ, ತರಗಲೆ ಸಂಗ್ರಹಿಸುವ ಮುಡಚಿಟ್ಟ, ಮೀನು ಹಿಡಿಯುವ ಕುತ್ತೇರಿ, ಬಿದಿರಿನ ಕುರ್ಚಿಗಳು ಹೀಗೆ ಹಲವು ಬಗೆಯ ಉಪಕರಣಗಳನ್ನು ತಯ್ಯಾರಿಸುತ್ತಾರೆ.

ಇತ್ತೀಚಿನ ವರ್ಷಗಳಲ್ಲಿ ಕೊರಗರ ಬುಟ್ಟಿ ಉತ್ಪನಗಳನ್ನ ವ್ಯಾಪಾರಿಗಳು ಖರೀದಿಸುವುದರಿಂದ ಮತ್ತು ಕೊರಗರಿಗೆ ಮುಂಗಡ ಹಣ ನೀಡಿ ನಂತರ ಕಡಿಮೆ ಬೆಲೆಗೆ ಬುಟ್ಟಿಗಳನ್ನು ಈ ವ್ಯಾಪಾರಿಗಳು ಕಬಳಿಸುವುದು ಸಾಮಾನ್ಯವಾಗಿದೆ ಎಂದು ಹೇಳುತ್ತಾರೆ. ಗ್ರಾಮೀಣ ಭಾಗದಲ್ಲಿ ಕೊರಗರು ಬಹಳ ನಿಕೃಷ್ಟ ಜೀವನ ನಡೆಸುತ್ತಿದ್ದಾರೆ.ಅವರಿಗೆ ಬೆತ್ತದ ಕೆಲಸ ಬಿಟ್ಟರೆ ಬೇರೇನೂ ಬರುವುದಿಲ್ಲ. ಇತರೆ ಕೊರಗರನ್ನು ಇಂದು ಕೃಷಿಕರು ಕೂಲಿ ಕೆಲಸಕ್ಕೂ ಕರೆಯುವುದಿಲ್ಲ. ತೀವ್ರ ಕಡುಬಡತನದಿಂದ ನರಳುತ್ತ ಬಳಲಿ ಬೆಂಡಾಗಿರುವ ಕೊರಗರು ಕೂಲಿ ಕೆಲಸ ಮಾಡಲು ಗಮನ ಹರಿಸುವುದಿಲ್ಲ ಕೆಲ ಅಸಹಾಯಕ ಕೊರಗರು ಮನೆಮನೆಗೆ ಹೋಗಿ

ಅನ್ನ ಬೇಡುತ್ತ ಜೀವಿಸುವುದನ್ನು ಇಂದು ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಹಳ್ಳಿಗಳಲ್ಲಿ ಕಾಣಬಹುದಾಗಿದೆ.

ಕೊರಗರು ಕೆಲ ವರ್ಷಗಳಿಂದ ಸ್ಥಳೀಯ ಸಂಸ್ಥೆಗಳಲ್ಲಿ ಮತ್ತು ನಗರಗಳಲ್ಲಿ, ಕಾರ್ಖಾನೆಗಳಲ್ಲಿ ಜಾಡಮಾಲಿಗಳಾಗಿ ಕೆಲಸ ಮಾಡುತ್ತಿದ್ದಾರೆ. ಇವರಲ್ಲಿ ನಗರ ಪ್ರದೇಶದಲ್ಲಿರುವವರ ಜೀವನಮಟ್ಟ ಸ್ವಲ್ಪ ಮಟ್ಟಿಗೆ ಸುಧಾರಿಸಿರುವುದನ್ನ ಕಾಣಬಹುದಾಗಿದೆ. ಇವರಿಗೆ ವಾಸಕ್ಕೆ ಮನೆ, ಎರಡು ಹೊತ್ತಿಗೆ ಊಟ, ಅಲ್ಪ ಹಣ ಕೂಲಿಯಾಗಿ ಸಿಗುತ್ತದೆ, ನಗರ ಪ್ರದೇಶದ ಕೊರಗರು ತಮ್ಮ ಮಕ್ಕಳನ್ನ ಶಾಲೆಗೆ ಕಳುಹಿಸುವಷ್ಟು ಸಬಲರಾಗಿರುವುದನ್ನ ಕಾಣಬಹುದಾಗಿದೆ.

ಕೊರಗರು ಮೇಲ್ಜಾತಿಯ ದೇವರ ಉತ್ಸವಗಳಿಗೆ ಹೋಗಿ ಡೋಲು ಬಾರಿಸುವುದು, ಕೊಳಲು ಊದುವುದು, ನರ್ತಿಸುವುದೂ ಉಂಟು. ಅದು ದೇವರ ಸೇವೆಯೆಂದೇ ಕೊರಗರು ನಂಬುವರು. ದೇವರ ಉತ್ಸವಗಳ ಸಂಘಟಕರು ಕೊರಗರನ್ನು ಅಹ್ವಾನಿಸದಿದ್ದರೂ ಸಹ ಅವರು ಸ್ವಯಂ ತಾವೇ ಅಂಥ ಸಮಾರಂಭಗಳಿಗೆ ಸಂತೋಷದಿಂದ ಹೋಗುತ್ತಾರೆ. ನೆರೆದವರಿಂದ ಬೇಡಿ ಸ್ವಲ್ಪ ಹಣವನ್ನ ಸಂಗ್ರಹಿಸುತ್ತಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಇವರನ್ನ ರಾಜಕೀಯ ನಾಯಕರು, ಹಿಂದೂ ಸಂಘಟನೆಗಳ ನಾಯಕರು ತಮ್ಮ ಕಾರ್ಯಕ್ರಮಗಳಿಗೆ ಆಹ್ವಾನಿಸಿ ಅವರಿಗೆ ಸೂಕ್ತ ಹಣವನ್ನ ನೀಡುತ್ತಾರೆಂದು ವಕ್ತೃಗಳು ತಿಳಿಸುತ್ತಾರೆ.

ಚಿತ್ರ೪.೨ ಢೋಲು ಭಾರಿಸುತ್ತಿರುವ ಕೊರಗರು



ಕೊರಗರಲ್ಲಿ ಬಹುಸಂಖ್ಯಾತರು ಕೃಷಿ ಕೂಲಿಗಳು, ಜಾಡಮಾಲಿಗಳು ಮತ್ತು ಅಲೆಮಾರಿ ಕೂಲಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಇವರಲ್ಲಿ ಅನೇಕರಿಗೆ ಸ್ವಂತ ಭೂಮಿ ಇಲ್ಲ, ವಸತಿ ಇಲ್ಲ, ಕುಡಿಯುವ ನೀರಿನ ಸೌಲಭ್ಯವಿಲ್ಲ, ಬಡತನ, ಕಸ ಗುಡಿಸುವ ಕೆಲಸ, ಭಿಕ್ಷೆ ಎತ್ತುವುದು, ಇತರರ ಎಂಜಲೂಟ ಮಾಡುವುದು ಮುಂತಾದ ಕಾರಣಗಳಿಂದಾಗಿ ಕೊರಗ ಸಮುದಾಯಕ್ಕೆ ಅನೇಕ ಬಗೆಯ ರೋಗಗಳು ಅಂಟಿವೆ. ಸರ್ಕಾರಿ ಆಸ್ಪತ್ರೆಗಳಿಗೆ ತೆರಳಿ ಔಷಧೋಪಚಾರ ಪಡೆಯಬೇಕೆನ್ನುವ ಅರಿವೂ ಇರದ ಮುಗ್ಧ, ಅಜ್ಞಾನದ ಮಂದಿ ಕೊರಗರು. ಅಲ್ಲಲ್ಲಿ ಕೆಲಕೆಲವು ಕೊರಗ ಕುಟುಂಬಗಳಿಗೆ ದರಖಾಸ್ತು ಭೂಮಿ–ಒಂದೆರಡು ಎಕರೆ– ದೊರೆತಿದೆ.ಆದರೆ ಅಲ್ಲಿ ನೀರಿಲ್ಲ. ಅಂಥ ಭೂಮಿಗಳಲ್ಲಿ ಕೇವಲ ನೀಲಗಿರಿಯನ್ನೋ, ಸರ್ವೇಮರ, ಗೇರುಮರ ಮಾತ್ರ ಬೆಳೆಸಬಹುದಾಗಿದೆ.ಇಂಥ ಕಳಪೆ ಗುಣಮಟ್ಟದ ಒಣ ಭೂಮಿಯನ್ನು ಅಭಿವೃದ್ಧಿಪಡಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕೆಂಬ ಬೇಡಿಕೆಯನ್ನ ಇರಿಸಿರುವುದಾಗಿ ಕ್ಷೇತ್ರ ಕಾರ್ಯ ಸಂದರ್ಭದಲ್ಲಿ ತಿಳಿಸಿದರು.

೪.೧೧.ಆ. ಮನೆಯ ಸ್ಥಿತಿ: ಗ್ರಾಮೀಣ ಭಾಗದ ಬಹುಸಂಖ್ಯಾತ ಕೊರಗರ ಮನೆಗಳು ಅರಣ್ಯದಂಚಿನಲ್ಲಿದ್ದು ಮುಳಿಹುಲ್ಲಿನಿಂದ ನಿರ್ಮಿಸಲ್ಪಟ್ಟಿವೆ. ಅವು ಸರ್ಕಾರಿ ದರಖಾಸ್ತು ಭೂಮಿಗಳಲ್ಲಿದ್ದು ಹಲವರಿಗೆ ಇನ್ನೂ ಪಟ್ಟಾ ಕೂಡಾ ಸಿಕ್ಕಿಲ್ಲ. ಅವು ಬಹುತೇಕ ಮಳೆಯಲ್ಲಿ ಸೋರುವ ಒಂದು ರೂಮಿನ ಮನೆಗಳಾಗಿವೆ. ಕೊರಗರ ಮನೆಗಳು ಬಹುಮಟ್ಟಿಗೆ ದನದ ಕೊಟ್ಟಿಗೆಗಳಂತೆ ಕಾಣುತ್ತವೆ. ಆ ಮನೆಗಳಿಗೆ ಗಾಳಿ, ಬೆಳಕು ಇರುವುದಿಲ್ಲ. ಕೊರಗರಿಗೆ ಪ್ರಿಯವಾದ ಪ್ರಾಣಿಗಳಾದ ನಾಯಿ ಮತ್ತು ಕೋಳಿಗಳು ಅವರೊಂದಿಗೆ ಅದೇ ಮನೆಗಳಲ್ಲಿ ವಾಸ ಮಾಡುತ್ತವೆ,

ಬೆತ್ತದ ಸರಕು, ಬೆತ್ತದ ಉತ್ಪನ್ನ, ನಾಲ್ಕಾರು ಮಕ್ಕಳು, ಗಂಡ ಹೆಂಡತಿ–ಎಲ್ಲಕ್ಕೂ ಒಂದು ರೂಮಿನ ಮನೆಯೇ ಆಧಾರ. ದಿನದ ಶ್ರಮದ ದುಡಿಮೆಯ ನಂತರ ಸಂಜೆ ಆರೇಳು ಗಂಟೆಗೇ ಸೇಂದಿ ಕುಡಿದು ಊಟ ಮಾಡಿ ಬೇಗನೆ ಮಲಗುವುದು ಕೊರಗರ ಹವ್ಯಾಸವಾಗಿದೆ.

೪.೧೨. ಶಿಕ್ಷಣ

ಕೊರಗರಲ್ಲಿ ಇತ್ತೀಚಿನ ವರ್ಷಗಳಲ್ಲಿ ಶಿಕ್ಷಣದ ಬಗೆಗೆ ಹೆಚ್ಚು ಆಸಕ್ತಿ ಮೂಡಿದ್ದು ೨೦೦೧ರ ಜನಗಣತಿಯಂತೆ ರಾಜ್ಯದಲ್ಲಿ ಅವರ ಸಾಕ್ಷರತೆಯು ಶೇ.೫೯.೮೧ರಷ್ಟಿದೆ ಶೈಕ್ಷಣಿಕ ಕ್ರಾಂತಿ ತರಲು ಸರ್ಕಾರ ಆಶ್ರಮ ಶಾಲೆಗಳನ್ನ ಮತ್ತು ನವೋದಯ ಮಾದರಿ ವಸತಿ ಶಾಲೆಗಳನ್ನ ತೆರೆದು ವಿಧ್ಯಾಭ್ಯಾಸಕ್ಕೆ ಹೆಚ್ಚಿನ ಪ್ರೋತ್ಸಾಹವನ್ನ ನೀಡುತ್ತಿದೆ. ಹೀಗಿದ್ದರೂ ಸಹ ಶಾಲೆಗಳು ಕೊರಗ ಮಕ್ಕಳನ್ನು ಆಕರ್ಷಿಸುತ್ತಿಲ್ಲ. ಪ್ರಾಥಮಿಕ ಹಂತದ ನಂತರ ಶಿಕ್ಷಣ ತೊರೆದು ಮನೆಯಲ್ಲಿ ಬುಟ್ಟಿ ಹೆಣೆಯಲು ಕೂರುವ ಕೊರಗ ಮಕ್ಕಳೇ ಹೆಚ್ಚಾಗಿದ್ದಾರೆ.

೪.೧೩. ಅಭಿವೃದ್ಧಿಯ ಪ್ರಸ್ತುತ ಸ್ಥಿತಿ

ಕೊರಗರು ಇತರೆ ಬುಡಕಟ್ಟುಗಳಿಗೆ ಹೋಲಿಸಿದಲ್ಲಿ ಹೊರಗಿನವರೊಂದಿಗೆ ಬೆರೆಯಲು ಹಿಂಜರಿಯುತ್ತಾರೆ. ಇವರ ಗ್ರಾಮಗಳು ಅರಣ್ಯದ ಅಂಚಿನಲ್ಲಿ ಮತ್ತು ಗುಡ್ಡಗಾಡುಗಳಲ್ಲಿ ಇರುವುದರಿಂದ ಸರ್ಕಾರದ ಯೋಜನೆಗಳು ಇವರಿಗೆ ನಿರೀಕ್ಷಿತ ಮಟ್ಟದಲ್ಲಿ ತಲುಪಲು ವಿಫಲವಾಗಿವೆ. ಅಲ್ಲದೆ ಕೆಲವು ಸ್ವಯಂ ಸೇವಾ ಸಂಸ್ಥೆಗಳಾದ ಡೀಡ್ಸ್, ಫೆಡೀನ, ಕ್ರಿಶ್ಚಿಯನ್ ಮಿಷನರಿಗಳು ಮುಂತಾದವುಗಳು ಈ ಸಮುದಾಯದ ಸೇವೆಗಾಗಿ ಶ್ರಮಿಸುತ್ತಿವೆ.

೪.೧೪. ಸಂಶೋಧನೆಯ ಅವಧಿಯಲ್ಲಿ ಕಂಡುಬಂದ ಸತ್ಯಾಂಶಗಳು

ಅಧ್ಯಯನದ ಅನುಕೂಲಕ್ಕಾಗಿ ಈ ಕೆಳಕಂಡಹಾಡಿಗಳನ್ನ ಯಾಧೃಚಿಕ (Random Sampling) ಮಾದರಿ ಸಮೀಕ್ಷೆಯ ವಿಧಾನದ ಮೂಲಕ ಆಯ್ದುಕೊಂಡು ಸಮೀಕ್ಷೆ ಮಾಡಲಾಗಿದೆ.

ಕೋಷ್ಟಕ: ೪.೩ ಕೊರಗರ ಹಾಡಿಗಳವಾರು ಜನಸಂಖ್ಯೆ ಮತ್ತು ಸಾಕ್ಷರತೆ

ಜಿಲ್ಲೆ /ತಾಲ್ಲೂಕ/ ಹಾಡಿ	ಕುಟುಂಬ	ಜನಸಂಖ್ಯೆ	ಪುರುಷರು	ಮಹಿಳೆಯರು	ಸಾಕ್ಷರರು
ಉಡುಪಿಜಿಲ್ಲೆ					
ಕುಂದಾಪುರ ತಾ//					
ಯಡತಾರೆ	೧೨	೪೬	೨೨	೨೪	೩೫
ಬೈಜೂರು	೮	೩೪	೧೬	೧೮	೨೫
ಮರವಂತೆ	೪	೧೮	೭	೧೧	೧೦
ನಾಡ	೮	೩೩	೧೪		೨೨
ಕಳತೊಡು	೧೦	೪೨	೧೯	೨೩	೨೯
ತಗರಾಸಿ	೧೨	೪೮	೨೩	೨೫	೩೪
ಬೈಂದೂರು	೧೬	೬೬	೩೩	೩೩	೫೦
ಯಲಜಿತ	೨೦	೮೩	೩೯	೪೪	೫೦
ಜಡಕಲ್	೧೧	೪೭	೨೩	೨೪	೩೫
ಹಳ್ಳಿಹೊಳೆ	೧೨	೪೬	೨೫	೨೧	೩೬
ಹೊಸಾಡು	೧೨	೪೯	೨೬	೨೩	೩೦
ಗುಜ್ಜಾಡಿ	೧೧	೪೬	೨೩	೨೩	೧೯

ಹೆಮ್ಮಾಡಿ	೮	೩೫	೧೬	೧೯	೨೫
ನೊಜಾಡಿ	೫	೨೩	೧೨	೧೧	೧೪
ಕೆರಾಡಿ	೧೨	೪೬	೨೨	೨೪	೨೬
ಕೊಡಲಾಡಿ	೧೬	೬೫	೩೬	೨೯	೪೫
ಕವರಾಡಿ	೧೩	೫೪	೨೪	೩೦	೨೮
ಹಳನಾಡ	೪	೧೭	೮	೯	೧೨
ಆಂಪರ	೧೨	೪೮	೨೫	೨೩	೨೭
ಸಿದ್ದಾಪುರ	೧೦	೪೩	೨೧	೨೨	೩೦
ಕಮಲಶಿಲೆ	೧೨	೪೮	೨೫	೨೩	೩೫
ಹೊಸಂಗಡಿ	೧೧	೪೬	೨೨	೨೪	೩೨
ಕುಲಾಂಜೆ	೧೩	೫೩	೨೭	೨೬	೩೦
ಹೊಳತೊರು	೩	೧೩	೭	೬	೫
ಕೆದೊರು	೧೧	೪೬	೨೨	೨೪	೩೧
ಕಂದಾವರ	೯	೩೯	೧೯	೨೦	೨೨
ಹೊ. ಮಂದಾಡಿ	೧೨	೪೯	೨೩	೨೬	೨೮
ಹಲ್ಲಾಡಿ–ಹರಕಾಡಿ	೧೦	೪೫	೨೩	೨೨	೧೯
ಹರದಳ್ಳಿ–ಮಂದಳ್ಳಿ	೧೨	೫೩	೨೬	೨೭	೨೩
ಹೆಂಗವಳ್ಳಿ	೧೧	೪೩	೨೩	೨೦	೨೫
ಬೆಳವೆ	೧೦	೪೫	೨೫	೨೦	೩೦
ಶೆಡಿಮಾನೆ	೮	೩೪	೧೬	೧೮	೨೩
ಉಡುಪಿ ತಾಲ್ಲೂಕು					
ವಡ್ಡಾರ್ಸೆ	೧೧	೪೬	೨೪	೨೨	೨೮
ಪಂದೇಶ್ವರ	೯	೩೭	೧೮	೧೯	೨೩
ಕಾವಡಿ	೮	೩೨	೧೭	೧೫	೧೮
ಯಡತಾಡಿ	೧೦	೪೩	೨೨	೨೧	೨೬
ಹನೆಹಳ್ಳಿ	೧೧	೪೫	೨೩	೨೨	೨೮
ಹಳಿಯಾನೆ	೧೨	೫೨	೨೬	೨೬	೩೩
ತೊಣಸೆ ಪಶ್ಚಮ	೪	೧೮	೧೧	೭	೧೨
ಹಂದಾಡಿ	೨	೧೧	೫	೬	೪
ಮತಪಾಡಿ	೧೦	೪೩	೨೦	೨೩	೨೬
ಚಂತಾರ	೧೬	೬೮	೩೫	೩೩	೩೯
೫೨ ಹೆರೂರು	೬	೨೬	೧೨	೧೪	೧೫
ತೊಣಸೆ ಪೂರ್ವ	೧೬	೬೪	೩೧	೩೩	೩೫
ಉಪ್ಪೂರು	೧೩	೫೫	೨೬	೨೯	೩೦
ಆರೂರು	೧೨	೪೯	೨೩	೨೬	೩೧
ಕುಕ್ಕೆಹಳ್ಳಿ	೧೪	೫೭	೨೭	೩೦	೨೫
ಪಜಮಂಗೂರು	೧೦	೪೫	೨೩	೨೨	೨೬
ನಾಲ್ಕೂರು	೧೧	೪೭	೨೩	೨೪	೨೫
ಕಳತೊರು	೧೪	೫೮	೨೮	೩೦	೩೦

ಬೈರಂಪಳ್ಳಿ	೧೫	೬೭	೩೩	೩೪	೩೯
ಕೆಳಾರಕಳಬೆಟ್ಟು	೧೫	೬೩	೩೨	೩೧	೩೭
ಕೊರಂಗರಪಾಡಿ	೧೧	೪೬	೨೪	೨೨	೨೯
ಹಳೇವೂರು	೧೩	೫೩	೨೬	೨೭	೩೦
ಬಡಗಬೆಟ್ಟು	೧೨	೪೮	೨೩	೨೫	೨೭
ಅಂಜಾರು	೧೦	೪೧	೧೯	೨೨	೨೫
ಬೊಮ್ಮಾರುಬೆಟ್ಟು	೧೧	೪೪	೨೩	೨೧	೨೭
ಹಿರೆಬೆಟ್ಟು	೧೩	೫೬	೨೪	೩೨	೨೮
ಮೂಡುಬೆಟ್ಟು	೪	೧೫	೮	೭	೮
ಕೂರ್ಕಾಲು	೯	೩೫	೧೭	೧೮	೨೧
ಬೆಳ್ಳೆ	೧೧	೪೬	೨೪	೨೨	೨೭
ಶಿರವ	೧೬	೬೭	೩೭	೩೦	೩೮
೯೨ ಹೆರೂರು	೨	೯	೪	೫	೪
ಪಂಗಾಲ	೭	೩೫	೧೮	೧೭	೨೧
೧೦೮ ಕಳತೋರು	೯	೩೭	೨೦	೧೭	೧೬
ತೆಂಕ	೫	೨೩	೧೨	೧೧	೧೧
ಪಡೆ ಬೆಟ್ಟು	೬	೨೬	೧೧	೧೫	೧೪
ಹೆಜಮಾಡಿ	೫	೨೩	೧೨	೧೧	೧೪
ನಂದಿಕೂರು	೧೦	೪೩	೨೧	೨೨	೨೬

ಕಾರ್ಕಳ ತಾಲ್ಲೂಕು


ಬೆಳಂಜೆ	೧೨	೪೭	೨೩	೨೪	೨೮
ನಾಡಫಾಲು	೧೩	೫೪	೨೬	೨೮	೩೦
ಹೆಬ್ರಿ	೨೧	೮೩	೩೯	೪೪	೪೫
ಕೆರೆಬೆಟ್ಟು	೧೦	೪೩	೨೩	೨೦	೨೭
ಮುದ್ರಾಡಿ	೧೩	೫೬	೨೬	೩೦	೩೨
ವರಂಗ	೧೧	೪೫	೨೫	೨೦	೨೫
ಯಳ್ಳರೆ	೧೨	೪೮	೨೫	೨೩	
ಕುಕ್ಕುಜೆ	೨೧	೮೭	೪೭	೪೦	೪೯
ಕಡತಲ	೧೦	೪೩	೨೩	೨೦	೨೫
ಮಾರ್ನೆ	೧೫	೬೫	೩೫	೩೦	೩೫
ಯರಲಪಾಡಿ	೧೦	೪೨	೨೨	೨೦	೨೬
ಹೆರಮುಂಡೆ	೧೨	೪೮	೨೩	೨೫	೨೮
ಶಿರಳಾಲ	೧೩	೫೬	೨೯	೨೭	೨೭
ಮಾಲಾ	೧೦	೪೩	೨೩	೨೦	೨೫
ನೀರೆ	೭	೨೯	೧೪	೧೫	೧೭
ಪಳ್ಳಿ	೧೪	೫೩	೨೫	೨೮	೨೯
ಕುಕ್ಕುಂದೂರು	೧೨	೪೮	೨೪	೨೪	೨೮
ನಿಟ್ಟೆ	೧೩	೫೫	೨೬	೨೯	೩೨
ಬೆಳ್ಮನೆ	೧೨	೫೧	೨೬	೨೫	೨೮

ಮುಳ್ಳಡಕ	೧೩	೫೩	೨೮	೨೫	೨೯
ಮುಂಡಕೂರು	೧೨	೪೯	೨೪	೨೫	೩೧
ಈಡು	೧೬	೬೪	೩೪	೩೦	೩೬
ದಕ್ಷಿಣಕನ್ನಡ ಜಿಲ್ಲೆ					
ಮಂಗಳೂರು ತಾಲ್ಲೂಕ					
ಕರಣಿರೆ	೪	೧೭	೯	೮	೫
ಕಲ್ಲೂರು	೭	೨೭	೧೫	೧೨	೧೬
ಬೆಳ್ಳಾಯಿರು	೧೪	೫೬	೨೮	೨೮	೩೪
ತಲಿಪಾಡಿ	೧೨	೪೯	೨೫	೨೪	೩೩
ಐಕಾಳ	೧೦	೪೩	೨೧	೨೨	೨೬
ಮನ್ನೆಬೆಟ್ಟು	೧೫	೬೭	೩೩	೩೪	೪೦
ಕಡಂಡಳೆ	೧೧	೪೫	೨೫	೨೦	೨೪
ಪಲ್ಡಕ	೧೫	೬೦	೩೨	೨೮	೪೦
ಕಳ್ಳಮಂಡಕೂರು	೧೨	೪೭	೨೩	೨೪	೨೭
ಎರುವಾಯಿಲು	೧೬	೬೮	೩೪	೩೪	೩೯
ಪುತ್ತಿಗೆ	೧೩	೫೫	೨೭	೨೮	೩೮
ಬೆಳುವಾಯಿ	೧೫	೬೧	೨೯	೩೨	೪೦
ಕೆಳಪುತ್ತಿಗೆ	೮	೩೩	೧೭	೧೬	೨೨
ಪಡುಕೊಣಾಜೆ	೫	೨೧	೧೧	೧೦	೯
ಮೂಡುಕೊಣಾಜೆ	೧೪	೫೯	೨೮	೩೧	೩೨
ಶಿರತಾಡಿ	೫	೨೩	೧೨	೧೧	೧೪
ಮಂತ್ರಾಡಿ	೪	೧೫	೭	೮	೯
ಮಧ್ಯ	೧೨	೪೯	೨೩	೨೬	೩೦
ಸುರಿಂಜೆ	೫	೨೨	೧೨	೧೦	೧೩
ಮಳವೂರು	೧೦	೪೩	೨೧	೨೨	೩೫
ಪಡುಪೆರಾರ	೯	೩೭	೧೮	೧೯	೨೮
ಮುಚುರು	೧೦	೪೧	೨೧	೨೦	೨೩
ಮುಡುಪೆರಾರ	೩	೧೩	೭	೬	೫
ಕೊಳಂಬೆ	೧೦	೪೩	೨೩	೨೦	೩೯
ಹರೆಕಾಲ	೧೨	೪೭	೨೪	೨೩	೨೫
ಪಾವೂರು	೫	೨೨	೧೧	೧೧	೧೭
ಕೊಣಾಜೆ	೧೦	೪೩	೨೨	೨೧	೨೪
ಮಂಜನಾಡಿ	೧೩	೫೩	೨೮	೨೫	೩೬
ಬಂಟ್ವಾಳ ತಾಲ್ಲೂಕು					
ಸಂಗಬೆಟ್ಟು	೧೧	೪೩	೨೩	೨೦	೨೯
ಕುಕ್ಕಿಪಾಡೆ	೮	೩೩	೧೯	೧೪	೧೭
ಆಮತಾಡಿ	೧೪	೫೯	೨೯	೩೦	೩೧
ಕೊಯ್ಲ	೧೪	೫೬	೨೭	೨೯	೩೨
ಅಜ್ಜಿಬೆಟ್ಟು	೯	೩೭	೧೮	೧೯	೩೦

ಪಿಲಿಮೂಗೂರು	೨	೭	೩	೪	೩
ಇರವತ್ತೂರು	೫	೨೧	೧೨	೯	೧೪
ಕವಳಮೂದೂರು	೧೨	೫೯	೨೯	೩೦	೪೦
ಬೆಳ್ತಂಗಡಿ ತಾಲ್ಲೂಕು					
ಕದಿರುದ್ಯಾವರ	೧೦	೪೩	೨೧	೨೨	೩೧
ಕನ್ಯಾಡಿ	೧೪	೫೫	೩೦	೨೫	೩೬
ಉಜಿರೆ	೧೨	೪೯	೨೬	೨೩	೩೩
ಮುಂಡಾಜೆ	೧೪	೫೯	೩೦	೨೯	೪೦
ಪುತ್ತೂರು ತಾಲ್ಲೂಕ					
ಕುಡಿಪಾಡಿ	೧೩	೫೨	೨೮	೨೪	೩೪
ನೆಕ್ಕಿಲಾಡಿ	೧೨	೪೫	೨೩	೨೨	೨೯
ಭಜತ್ರ	೧೧	೪೩	೨೧	೨೨	೩೦
ನೆಲ್ಯಾಡಿ	೧೨	೪೯	೨೬	೨೩	೩೫
ಕೋಯ್ಲ	೧೪	೫೬	೨೭	೨೯	೩೮
ಬಲ್ಯಾ	೧೩	೫೩	೨೬	೨೭	೩೦
ಪುಂಚಪಾಡಿ	೧೨	೬೦	೨೯	೩೧	೩೪
ಕಣಿಯೋರು	೪	೧೯	೧೦	೯	೧೦
ದೊಲಪಾಡಿ	೨	೯	೫	೪	೪
ಆರ್ಯಪು	೧೦	೪೩	೨೧	೨೨	೩೪
ಸುಳ್ಯ ತಾಲ್ಲೂಕ					
ಪೆರುವಾಜೆ	೧೫	೬೫	೩೩	೩೨	೩೯
ಬೆಳ್ಳಾರೆ	೧೩	೫೫	೨೭	೨೮	೪೫
ಒಟ್ಟು	**೧೫೨೮**	**೬೩೬೭**	**೩೧೯೩**	**೩೧೫೫**	**೩೮೩೪**


ಆದಿಮ ಬುಡುಕಟ್ಟಾದ ಕೊರಗರು ವಾಸಿಸುತ್ತಿರುವ ಒಟ್ಟು ೧೪೨ ಹಾಡಿಗಳನ್ನು ಸಂಶೋದನೆಗೆ ಆಯ್ದುಕೊಳ್ಳಲಾಗಿದ್ದು ೧೫೨೮ ಕುಟುಂಬಗಳನ್ನ ಉಡುಪಿ ಮತ್ತು ದಕ್ಷಿಣಕನ್ನಡ ಜಿಲ್ಲೆಗಳಲ್ಲಿ ಸಮೀಕ್ಷೆಗೆ ಒಳಪಡಿಸಲಾಗಿದೆ.

ವೃತ್ತಚಿತ್ರ : 4.1. ಕೊರಗರ ಲಿಂಗವಾರು ಜನಸಂಖ್ಯೆ



ಎರಡು ಜಿಲ್ಲೆಗಳಿಂದ ಅಧ್ಯಯನಕ್ಕೊಳಪಡಿಸಿದ ೧೪೨ ಹಾಡಿಗಳಲ್ಲಿ ಒಟ್ಟು ೧೫೨೮ ಕುಟುಂಬಗಳಲ್ಲಿ ೬೩೬೭ ಜನಸಂಖ್ಯೆಯಿದ್ದು ಮಹಿಳೆಯರ ಸಂಖ್ಯೆಯು ೩೧೫೫ ರಷ್ಟಿದ್ದು, ಪುರುಷರು ೩೧೯೩ ರಷ್ಟಿದ್ದಾರೆ. ಇಲ್ಲಿ ಶೇಕಡ ೬೦.೨ ರಷ್ಟು ಸಾಕ್ಷರರಿದ್ದಾರೆ, ಕೊರಗರಲ್ಲಿಯ ಸಾಕ್ಷರತೆಯ ಪ್ರಮಾಣವು ಜೇನು ಕುರುಬರಿಗಿಂತ (ಶೇ.೫೦.೮) ಹೆಚ್ಚಾಗಿರುವುದನ್ನ ಗಮನಿಸ ಬಹುದಾಗಿದೆ.

ಸ್ಥಂಬಚಿತ್ರ : ೪.೧ ಸೌಲಭ್ಯಗಳನ್ನು ಹೊಂದಿರುವ ಕುಟುಂಬಗಳು




ಅಧ್ಯಯನಕ್ಕೆ ಆಯ್ದುಕೊಂಡ ಒಟ್ಟಾರೆ ಕುಟುಂಬಗಳಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ ಎಷ್ಟಿದೆಯಂಬುದನ್ನು ಈ ಸ್ಥಂಬಚಿತ್ರ ತೋರ್ಪಡಿಸುತ್ತದೆ. ಒಟ್ಟಾರೆ ಕುಟುಂಬಗಳಲ್ಲಿ ಇನ್ನೂ ೨೮೦ ಕುಟುಂಬಳಿಗೆ ಸ್ವಂತ ಮನೆಯಿರುವುದಿಲ್ಲ, ೩೭೭ ಮನೆಗಳಿಗೆ ವಿದ್ಯುತ್ ಸಂರ್ಕವಿರುವುದಿಲ್ಲ. ಒಟ್ಟಾರೆ ಕುಟುಂಬಗಳಲ್ಲಿ ಕೇವಲ ೧೬೭ ಮನೆಗಳಿಗೆ ಮಾತ್ರ ಶೌಚಾಲಯದ ಸೌಲಭ್ಯವನ್ನ ಒದಗಿಸಲಾಗಿದೆ. ಇನ್ನೂ ೬೫೦ ಕುಟುಂಬಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯಿರುವುದಿಲ್ಲ. ೧೭೧ ಕುಟುಂಬಗಳಿಗೆ ಶಿಕ್ಷಣದ ಸೌಲಭ್ಯ ಮುಟ್ಟಿರುವುದಿಲ್ಲ, ಕೇವಲ ಶೇಕಡ ೧೩ ರಷ್ಟು ಕುಟುಂಬಗಳು ಮಾತ್ರ ಸರ್ಕಾರದಿಂದ ಹಣಕಾಸಿನ ನೆರವನ್ನ ಪಡೆಯುವಲ್ಲಿ ಸಫಲವಾಗಿವೆ. ಕೇವಲ ೮೦೫ ಕುಟುಂಬಗಳಿಗೆ ಮಾತ್ರ ಕೃಷಿ ಭೂಮಿಯಿದೆ. ಅದರಲ್ಲಿ ಹೆಚ್ಚು ಜನರಿಗೆ ಎರಡು ಎಕರೆಗಿಂತ ಹೆಚ್ಚಿನ ಭೂಮಿ ಇರುವುದಿಲ್ಲ. ಶೇ.೪೦ ರಷ್ಡು ಕುಟುಂಬಗಳಿಗೆ ಸರಿಯಾದ ವಸತಿ ಸೌಲಭ್ಯವಿರುವುದಿಲ್ಲ. ಕೇವಲ ೩೨೪ ಕುಟುಂಬಗಳಿಗೆ ಮಾತ್ರ ಕೃಷಿ ನೀರಾವರಿ ಸೌಲಭ್ಯವದೆ. ಕೇವಲ ೧೯೯ ಕುಟುಂಬಗಳು ಮಾತ್ರ ಅಲ್ಪ ಪ್ರಮಾಣದ ಪಶುಗಳ ಸೌಲಭ್ಯವನ್ನ ಪಡೆದಿವೆ.

ಬಹುಪಾಲು ಕೊರಗರು ವಾಸ್ತವವಾಗಿ ಭೂಮಿಯನ್ನ ಕೃಷಿ ಚಟುವಟಿಕೆಗೆ ಬಳಸುವಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಕಾರಣ ಅವರು ಹೊಂದಿರುವ ಭೂಮಿಯು ಬರುಡಾಗಿದ್ದು ಅವು ಕೃಷಿಗೆ ಅನಕೂಲಕರವಾಗಿರುವುದಿಲ್ಲ. ಸರ್ಕಾರದಿಂದ ಸ್ಥಳಾಂತರಕ್ಕೊಳಪಟ್ಟ ಕುಟುಂಬಗಳಿಗೆ

ಹಂಚಿರುವ ಭೂಮಿಗೆ ಸರಿಯಾದ ರೀತಿಯಲ್ಲಿ ಭೂಮಿಯನ್ನ ಗುರತು ಮಾಡದಿರುವುದು, ಹಂಚಿಕೆ ದಾಖಲೆಗಳನ್ನ ನೀಡದಿರುವುದು, ಭೂ ನಿಗಧೀಕರಣದಲ್ಲಿ ಅರಣ್ಯ ಮತ್ತು ಕಂದಾಯ ಇಲಾಖೆಗಳ ನಡುವಿನ ವಿಭಿನ್ನ ನಡಾವಳಿಗಳು ಮತ್ತು ವಿವಾದಗಳು, ಕಾಡುಪ್ರಾಣಿಗಳ ಹಾವಳಿ, ಮಳೆಯ ಕೊರತೆ, ಮೂಲಭೂತ ಸೌಲಭ್ಯಗಳಾದ ಕೃಷಿ ಉಪಕರಣಗಳು, ನೇಗಿಲು, ಉಳುವ ಎತ್ತುಗಳು, ಬಿತ್ತನೆ ಬೀಜಗಳು, ರಸಗೊಬ್ಬರ, ಹಣದ ಕೊರತೆ ಮುಂತಾದ ಕಾರಣಗಳಿಗಾಗಿ ಹಲವು ಕೊರಗ ಕುಟುಂಬಗಳು ಕೃಷಿಯನ್ನ ತೊರೆದಿದ್ದಾರೆ. ಕೇವಲ ೩೨೪ ಕುಟುಂಬಗಳಿಗೆ ಮಾತ್ರ ನೀರವರಿ ಸೌಲಭ್ಯವಿದ್ದು ಅವರು ಸಹ ಹಲವಾರು ಕಾರಣಗಳಿಂದ ಕೃಷಿಯಿಂದ ಲಾಭಪಡೆಯಲು ವಿಫಲರಾಗಿದ್ದಾರೆ. ಕಾರಣ ಬಾವಿಯಲ್ಲಿ ನೀರಿನ ಕೊರತೆ, ಯಂತ್ರದ ರಿಪೇರಿ, ವಿದ್ಯುತ್ ಕೊರತೆ ಕೃಷಿ ತಂತ್ರಜ್ಞಾನದ ಅನನುಭವ ಮುಂತಾದವುಗಳೂ ಇದಕ್ಕೆ ಕಾರಣವಾಗಿದೆ. ಕೇವಲ ೧೯೯ ಕುಟುಂಬಗಳು ಮಾತ್ರ ಪಶುಗಳನ್ನ ಪಡೆದಿದ್ದು ಅವುಗಳನ್ನ ಸುಧಾರಿಸಲಾಗದೆ ಅವುಗಳನ್ನ ಮಾರಿ ಹಾಕಿರುವ ಸಂದರ್ಭಗಳು ಹೆಚ್ಚಾಗಿವೆ.

ಲಂಬಚಿತ್ರ: ೪.೧ ಮೀಸಲಾತಿಯನ್ನು ಬಳಸಿರುವ ಕುಟುಂಬಗಳು



ಅಧ್ಯಯನಕ್ಕೆ ಆಯ್ದುಕೊಂಡಿರುವ ಒಟ್ಟು ಕುಟುಂಬಗಳಲ್ಲಿ ಕೇವಲ ೧೦೮ ಕುಟುಂಬಗಳ ಸದಸ್ಯರು ಮಾತ್ರ ವಿವಿಧ ಉದ್ಯೋಗಗಳಲ್ಲಿ ಮೀಸಲಾತಿ ಸೌಲಭ್ಯವನ್ನ ಪಡೆದಿದ್ದಾರೆ. ಅದರಲ್ಲೂ ಮುಖ್ಯವಾಗಿ ಅರಣ್ಯ ಕಾವಲುಗಾರರಾಗಿ, ನಗರಪಾಲಿಕೆಯಲ್ಲಿ ಸ್ವಚ್ಚತಾ ಕೆಲಸಗಾರರಾಗಿ, ನೌಕರರಾಗಿ ಕಾರ್ಯನಿವರ್ಹಿಸುತ್ತಿದ್ದಾರೆ, ರಾಜಕೀಯ ಮೀಸಲಾತಿಯು ಇವರಿಗೆ ಇತ್ತೀಚಿನ ಪರಿಚಯವಾಗಿದ್ದು ಇವರೆ ಹೆಚ್ಚಿರುವ ಹಾಡಿಗಳಲ್ಲಿ ಗ್ರಾಮ ಪಂಚಾಯಿತಿ ಸದಸ್ಯರಾಗಿ ೧೬ ಕುಟುಂಬಗಳ ಸದಸ್ಯರು ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರಲ್ಲಿ ೫೦ ವಿಧ್ಯಾರ್ಥಿಗಳು ಮಾತ್ರ ಜೆಓಸಿ, ಐಟಿಐ, ಡಿಪ್ಲೋಮ ಇತ್ಯಾದಿ ವೃತ್ತಿ ಶಿಕ್ಷಣ ತರಗತಿಗಳಲ್ಲಿ ಪ್ರವೇಶ ಪಡೆದಿದ್ದಾರೆ.

ಆಧಾರಗಳು

ಅರವಿಂದ ಮಾಲಗತ್ತಿ ಮತ್ತು ಒಡೆಯರ್ ಡಿ ಹೆಗ್ಗಡೆ., *ಕೊರಗ ಜನಾಂಗ ವಿಶ್ಲೇಷಣಾತ್ಮಕ ಅಧ್ಯಯ* (ಮಂಗಳೂರು: ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತು, ೧೯೯೨).

ಅಮೃತ ಸೋಮೇಶ್ವರ., *ಕೊರಗರು* (ಬೆಂಗಳೂರು: ಐ ಬಿ ಎಚ್ ಪ್ರಕಾಶನ, ೧೯೮೨).

Buchnan, Francis, (1807) *Ajurney From Madras through Mysore, Canara and Malabar.Vol.III, London &* Higginbotham and Co,Madras.

Iyer L.K. Ananthkrishna and H.V Nanjundaiah ,.(1925/2005) *The Mysore Tribes and Castes,* Mittal, NewDelhi (5Volume)

Ramappa Vormika, 1865, *Memories of The Origin of Slaves* (Translation by Joseph Saldana) Madras ,*The Hill Ranges of Southern India*, Part IV

Rao Ullal Raghavendra., 1874, *The Koragars, The Indian Antiquity*, Bombay

Saletore, Bhaskar Anand., 1938, Suplement to South Canar District Manual (By Krishna Swami Iyer and J.F. Hall) Madras,

Thurston, Edgar.,(1975), *Ethnographic notes in southern India,* Cosmo Publications, New Delhi.

Vasudevan C, Dravidian 1993 *Encyclopedia Vol.II (People Culture) The International School of Dravidian Linguistics,* Trivandrum.

ಅಧ್ಯಾಯ ೫

ಬುಡಕಟ್ಟು ಅಭಿವೃದ್ಧಿಯ ವಿಮರ್ಶೆ

ಬುಡಕಟ್ಟು ಎಂಬ ಪದವನ್ನು ಸಂವಿಧಾನದಲ್ಲಿ ಸ್ಪಷ್ಟವಾಗಿ ವಿವರಿಸಿಲ್ಲದಿದ್ದರೂ ಸಂವಿಧಾನದ ೩೪೨ನೇ ವಿಧಿಯಡಿ ರಾಷ್ಟ್ರಪತಿಗಳು ರಾಜ್ಯಪಾಲರ ಸಮ್ಮತಿಯನ್ನ ಪಡೆದು ಬುಡಕಟ್ಟು ಲಕ್ಷಣವುಳ್ಳ ಯಾವುದೇ ಸಮುದಾಯವನ್ನು ಪರಿಶಿಷ್ಟ ಬುಡಕಟ್ಟುಗಳ ಪಟ್ಟಿಯಲ್ಲಿ ಸೇರಿಸುವ ಅಥವಾ ಕೈಬಿಡುವ ಅಧಿಕಾರವನ್ನ ಪಡೆದಿದ್ದಾರೆ. ೨೦೦೭ರ ಡಿಸೆಂಬರ್ ಅಂತ್ಯದವರೆಗೆ ೭೦೦ ಬುಡಕಟ್ಟು ಸಮುದಾಯಗಳನ್ನ ಪರಿಶಿಷ್ಟ ಬುಡಕಟ್ಟುಗಳ ಪಟ್ಟಿಯಲ್ಲಿ ಸೇರಿಸಿದ್ದು, ಅದರಲ್ಲಿ ಕರ್ನಾಟಕದ ೫೦ ಸಮುದಾಯಗಳು ಈ ಪಟ್ಟಿಯಲ್ಲಿ ಸೇರಿವೆ. ೧೯೯೧ ರ ಜನಗಣತಿಯಂತೆ ಕರ್ನಾಟಕದಲ್ಲಿ ಪರಿಶಿಷ್ಟ ಬುಡಕಟ್ಟುಗಳ ಜನಸಂಖ್ಯೆಯು ೧೯,೧೫೫೯೧ ರಷ್ಟಿದ್ದು ಒಟ್ಟು ಜನಸಂಖ್ಯೆಯ ಶೇ.೪.೬ ರಷ್ಟಿತ್ತು, ೨೦೦೧ ರ ಜನಗಣತಿಯ ಪ್ರಕಾರ ೩೪.೬೩,೯೮೬ ರಷ್ಟಿದ್ದು ಒಟ್ಟು ಜನಸಂಖ್ಯೆಯು ಶೇ.೬.೫೫ ರಷ್ಟಿದೆ. ಈ ಮಧ್ಯೆ ನಾಯಕ ಜಾತಿಯ ಬೇಡ, ಬೇಡರ್, ವಾಲ್ಮೀಕಿ ಪದಗಳನ್ನ ಸೇರಿಸಲಾಗಿದೆ. ಹೀಗಾಗಿ ಈ ಅವಧಿಯಲ್ಲಿ ಶೇ.೨.೩೪ ರಷ್ಟು ಬುಡಕಟ್ಟು ಜನಸಂಖ್ಯೆ ಹೆಚ್ಚಾಗಿದ್ದು ಆಯಾ ಜಿಲ್ಲೆಯ ಭೌಗೋಳಿಕ ಲಕ್ಷಣಗಳಿಗನುಗುಣವಾಗಿ ಜಿಲ್ಲೆಯಿಂದ ಜಿಲ್ಲೆಗೆ ಪರಿಶಿಷ್ಟ ಪಂಗಡಗಳ ಜನಸಂಖ್ಯೆ ಭಿನ್ನವಾಗಿದೆ.


ಆದಿಮ ಬುಡಕಟ್ಟುಗಳಾದ ಜೇನು ಕುರುಬರು ಮತ್ತು ಕೊರಗರು ತ್ವರಿತವಾಗಿ ಬದಲಾಗುತ್ತಿರುವ ಇಂದಿನ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಯುಗದಲ್ಲಿ ಅತ್ಯಂತ ಹಿಂದುಳಿದಿರುವ ಬುಡಕಟ್ಟುಗಳಾಗಿ ಪರಿಗಣಿಸ್ಪಟ್ಟಿವೆ. ಈ ಅಧ್ಯಾಯದಲ್ಲಿ ಜೇನು ಕುರುಬ ಮತ್ತು ಕೊರಗ ಆದಿಮ ಬುಡಕಟ್ಟುಗಳ ಶಿಕ್ಷಣ, ಆರೋಗ್ಯ, ಆರ್ಥಿಕ ಚಟುವಟಿಕೆಗಳು, ಅಭಿವೃದ್ಧಿ ಯೋಜನೆಗಳ ಜಾರಿ, ಬುಡಕಟ್ಟುಗಳ ಸಮಸ್ಯೆಗಳು, ಕಾರ್ಯನೀತಿಯಲ್ಲಿನ ಲೋಪಗಳನ್ನು ವಿವರವಾಗಿ ವಿಮರ್ಶಿಸಲಾಗಿದೆ ಹಾಗೂ ಜಿಲ್ಲಾವಾರು ಆದಿವಾಸಿ ಬುಡಕಟ್ಟುಗಳಾದ ಜೇನು ಕುರುಬರು ಮತ್ತು ಕೊರಗರ ಜನಸಂಖ್ಯೆ, ಯೋಜನೆಗಳಡಿಯಲ್ಲಿ ಪಡೆದಿರುವ ಸೌಲಭ್ಯಗಳು ಮತ್ತು ಸಮಸ್ಯೆಗಳನ್ನ ಈ ಅಧ್ಯಾಯದಲ್ಲಿ ವಿಮರ್ಶಿಸಲಾಗಿದೆ. ಜೇನು ಕುರುಬ ಮತ್ತು ಕೊರಗ ಆದಿವಾಸಿ ಸಮುದಾಯಗಳು ವಾಸಿಸುವ ಜಿಲ್ಲೆಗಳ ಸಂಕ್ಷಿಪ್ತ ವಿವರ ಮತ್ತು ಆದಿಮ ಜನರ ಸ್ಥಿತಿ ಗತಿಗಳನ್ನ ಕೆಳಗಿನಂತೆ ಕಾಣಬಹುದಾಗಿದೆ.

೫.೧ ಮೈಸೂರು ಜಿಲ್ಲೆ

ಮೈಸೂರು ಜಿಲ್ಲೆಯು ರಾಜ್ಯದ ದಕ್ಷಿಣ ಭಾಗದಲ್ಲಿದ್ದು ಕೇರಳ ರಾಜ್ಯದ ಗಡಿ ಭಾಗಕ್ಕೆ ಅಂಟಿಕೊಂಡಿರುವ ಜಿಲ್ಲೆಯಾಗಿದೆ. ಇದು ಪುರಾಣ ಕಾಲದ ಮಹಿಷಾಸುರನ ವಾಸಸ್ಥಾನವಾಗಿದ್ದು ಚಾಮುಂಡಿಯಿಂದ ಆತನು ಸಂಹಾರಕ್ಕೊಳಗಾದದು ಇಲ್ಲಿಯೇ ಎನ್ನುವ ಪ್ರತೀತಿಯಿದೆ.

ಹಾಗಾಗಿಯೇ ಈ ಊರಿಗೆ ಮೈಸೂರು ಎಂಬ ಹೆಸರು ಬಂದಿದೆ ಎಂದು ಹೇಳಲಾಗಿದೆ (ಸೂರ್ಯನಾಥ್ ಕಾಮತ್: ೧೯೮೨:೨).

ನಕ್ಷೆ: ೫.೧ ಮೈಸೂರು ಜಿಲ್ಲೆ



೫.೧. ಅ. ಭೌಗೋಳಿಕತೆ

ಮೈಸೂರು ಜಿಲ್ಲೆಯು ಪೂರ್ವದ ಮಧ್ಯದಲ್ಲಿದ್ದು ಈ ಜಿಲ್ಲೆಯು ಪೂರ್ವೋತ್ತರವಾಗಿ ಮಂಡ್ಯ ಜಿಲ್ಲೆ, ದಕ್ಷಿಣ ಪೂರ್ವಕ್ಕೆ ಚಾಮರಾಜನಗರ ಜಿಲ್ಲೆ, ದಕ್ಷಿಣಕ್ಕೆ ಕೇರಳ, ಪಶ್ಚಿಮಕ್ಕೆ ಕೊಡಗು, ಉತ್ತರಕ್ಕೆ ಹಾಸನ ಜಿಲ್ಲೆಗೆ ಹೊಂದಿಕೊಂಡಂತಿದೆ. ಒಟ್ಟು ೬೮೫೪ ಕಿ ಮೀ ಭೂಪ್ರದೇಶವನ್ನು ಹೊಂದಿದ್ದು ಗಾತ್ರದಲ್ಲಿ ರಾಜ್ಯದ ೧೨ನೇ ದೊಡ್ಡ ಜಿಲ್ಲೆಯಾಗಿದೆ. ೧೯೯೮ರ ಹಿಂದೆ ಚಾಮರಾಜನಗರ ಜಿಲ್ಲೆಯನ್ನೊಳಗೊಂಡಂತೆ ಬಹು ದೊಡ್ಡ ಜಿಲ್ಲೆ ಇದಾಗಿತ್ತು. ಇದು ದಖನ್ ಪ್ರಸ್ಥಭೂಮಿಯ ದಕ್ಷಿಣ ಭಾಗದಲ್ಲಿದ್ದು ಕಾವೇರಿ ನದಿಗೆ ಕಟ್ಟಲಾದ ಕೆಆರ್‌ಸಾಗರ ಜಲಾಶಯವು ಜಿಲ್ಲೆಯ ಉತ್ತರ ಭಾಗದಲ್ಲಿದೆ. ನಾಗರಹೊಳೆ, ಬಂಡೀಪುರ ರಾಷ್ಟ್ರೀಯ ಉದ್ಯಾನಗಳು ಈ ಜಿಲ್ಲೆಯ ವ್ಯಾಪ್ತಿಯಲ್ಲಿವೆ. ಬಹುಸಂಖ್ಯಾತ ಜೇನು ಕುರುಬರನ್ನು ನಾಗರಹೊಳೆ, ಬಂಡೀಪುರ ರಾಷ್ಟ್ರೀಯ ಉದ್ಯಾನಗಳ ಗಡಿಭಾಗದಲ್ಲಿ ಕಾಣಬಹುದಾಗಿದೆ. ಇಲ್ಲಿನ ತಾಪಮಾನವು ಚಳಿಗಾಲದಲ್ಲಿ ಕನಿಷ್ಟ ೧೫ ಡಿಗ್ರಿ ಸೆಲ್ಸಿಯಸ್ ಇರುತ್ತದೆ. ಹಾಗೆ ಬೇಸಿಗೆಯಲ್ಲಿ ಗರಿಷ್ಟ ೩೫ ಡಿಗ್ರಿ ಸೆಲ್ಸಿಯಷ್ಟಿರುತ್ತದೆ. ಇಲ್ಲಿನ ಸರಾಸರಿ ಮಳೆಯ ಪ್ರಮಾಣವು ೭೮೫ ಮಿ.ಮಿನಷ್ಟಿರುತ್ತದೆ. ಜಿಲ್ಲೆಯ ಬಹುಭಾಗವು ಕೆಂಪು ಮಣ್ಣಿನಿಂದ ಕೂಡಿದೆ. ರಾಷ್ಟ್ರೀಯ ಉದ್ಯಾನವನ ಮತ್ತು ಕೊಡಗು ಜಿಲ್ಲೆಗೆ ಹೊಂದಿಕೊಂಡಿರುವ ಭಾಗದಲ್ಲಿ ಕಪ್ಪು ಮಿಶ್ರಿತ ಮಣ್ಣನ್ನು ಕಾಣಬಹುದಾಗಿದೆ.

೫.೧. ಆ. ಆರ್ಥಿಕ ಜೀವನ

ಕೃಷಿಯು ಮೈಸೂರು ಜಿಲ್ಲೆಯ ಜೀವನಾಧಾರವಾಗಿದೆ. ಬಹುಪಾಲು ಕೃಷಿಯು ಮಳೆಯಾಧಾರಿತ ಕೃಷಿಯಾಗಿದೆ. ಆದರೆ ಕಾವೇರಿ ಹಾಗೂ ಕಬಿನಿ ನದಿಗಳಿಂದಾಗಿ ಕೃಷಿಗೆ ನೀರಾವರಿ ಸೌಲಭ್ಯ ಈ ಜಿಲ್ಲೆಗೆ ದೊರೆತಿದೆ. ೨೦೦೧ರ ಜನಗಣತಿಯ ಪ್ರಕಾರ ೩.೨೫,೮೨೩ರಷ್ಟು ಜನ ಇಲ್ಲಿ ಕೃಷಿ ಚಟುವಟಿಕೆಗಳಲ್ಲಿ ತೊಡಗಿರುವುದನ್ನು ಕಾಣಬಹುದು. ರಾಜ್ಯದ ಕೃಷಿ ಉತ್ಪಾದನೆಯ ಶೇ ೬.೯೪ರಷ್ಟು ಈ ಜಿಲ್ಲೆಯಲ್ಲಿ ಉತ್ಪಾದನೆಯಾಗುತ್ತದೆ. ರಾಗಿ,

ಭತ್ತ, ಕಡಲೆ, ಜೋಳ, ಮುಸುಕಿನ ಜೋಳ, ಹತ್ತಿ, ಕಬ್ಬು, ಸೂರ್ಯಕಾಂತಿ, ತೊಗರಿ, ಅವರೆ ಇತ್ಯಾದಿ ಬೆಳೆಗಳು ಈ ಜಿಲ್ಲೆಯ ಮುಖ್ಯ ಬೆಳೆಗಳಾಗಿವೆ. ಜಿಲ್ಲೆಯ ಹೆಗ್ಗಡೆದೇವನಕೋಟೆಯಲ್ಲಿ ತಾಳೆ ಎಣ್ಣೆಯ ಉತ್ಪಾದನೆಯನ್ನು ಕಾಣಬಹುದಾಗಿದೆ. ನಂಜನಗೂಡಿನ ಚಿಲಕಳ್ಳಿ ಮತ್ತು ದೋರನಕಟ್ಟೆಗಳಲ್ಲಿ ಶೇ.೬೫ ರಷ್ಟು ಜೇನು ಕುರುಬರು ಕೃಷಿಯಲ್ಲಿ ತೊಡಗಿರುವುದನ್ನ ಬಿಟ್ಟರೆ ಉಳಿದ ತಾಲ್ಲೂಕುಗಳಲ್ಲಿ ಬಹುತೇಕ ಜೇನು ಕುರಬರು ಕೃಷಿಗಿಂತಲೂ ಕೃಷಿ ಕೂಲಿಯಲ್ಲಿ ತೊಡಗಿರುವುದೆ ಹೆಚ್ಚು.

೫.೧. ಇ. ಕೈಗಾರಿಕೆ

ಮೈಸೂರು ಜಿಲ್ಲೆಯಲ್ಲಿ ಹೆಚ್ಚಾಗಿ ಕೈಗಾರಿಕೆಗಳು ನಗರ ಪ್ರದೇಶಗಳಲ್ಲಿ ಕೇಂದ್ರೀಕೃತವಾಗಿವೆ. ಮೈಸೂರು ಹಾಗೂ ನಂಜನಗೂಡುಗಳಲ್ಲಿ ಕೈಗಾರಿಕಾ ವಲಯಗಳನ್ನು ಗುರುತಿಸಿದ್ದು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಜಿಲ್ಲೆಯಲ್ಲಿ ಆರು ಕೈಗಾರಿಕಾ ವಲಯಗಳನ್ನು ಸಿದ್ಧಗೊಳಿಸಿದೆ. ಬೆಳಗೊಳ, ಬೆಳವಡಿ, ಹೆಬ್ಬಾಳ, ಹೂಟಗಳ್ಳಿ, ನಂಜನಗೂಡು, ಪಾಂಡವಪುರ ಇಲ್ಲಿ ಇಂದು ಚಾಲ್ತಿಯಲ್ಲಿರುವ ಮುಖ್ಯ ಕೈಗಾರಿಕೆಗಳೆಂದರೆ ವಿಕ್ರಾಂತ ಟಯರ್ಸ್, ಆಟೋ ಮೋಟೀವ್ ಆಕ್ಸಲ್ ಲಿಮಿಟೆಡ್, ಭಾರತ್ ಅರ್ತ ಮೂವರ್ಸ್ ಲಿಮಿಟೆಡ್, ಕರ್ನಾಟಕ ರೇಷ್ಮೆ ಕೈಗಾರಿಕೆ ಕಾರ್ಖಾನೆ, ಟಿವಿಎಸ್ ಕಂ, ಲಾರ್ಸನ್ ಅಂಡ್ ಟರ್ಬೋ ಲಿಮಿಟೆಡ್, ಇತ್ಯಾದಿಗಳು. ನಂಜನಗೂಡಿಲ್ಲಿ ನೆಸ್ ಲೇ ಇಂಡಿಯಾ ಲಿಮಿಟೆಡ್, ಎಟಿ ಅಂಡ್ ಎಸ್ ಲಿಮಿಟೆಡ್, ಬಣ್ಣಾರಿ ಅಮ್ಮೀನ್ ಸುಗರ್ಸ್ ಲಿಮಿಟೆಡ್, ಸೌತ್ ಇಂಡಿಯಾ ಪೇಪರ್ ಮಿಲ್ಸ್, ಎಸ್ ಕುಮಾರ್ ಡ್ರೈವ್ ಅಂಡ್ಟೈಲರ್ಸ್, ರಾಮನ್ ಬೋರ್ಡ, ಬಕಾಡಿ ಮೋಟಿನ ಇಂಡಿಯಾ ಲಿಮಿಟೆಡ್, ಮ್ಯಾಕ್ಸ್ ಫಾರ್ಮ, ಇತ್ಯಾದಿಗಳು ಇರುವುದರಿಂದ ಕೆಲವು ಜೇನು ಕುರುಬ ಯುವಕರು ತಾತ್ಕಾಲಿಕ ದಿನಗೂಲಿ ನೌಕರರಾಗಿ ದುಡಿಯುತ್ತಿದ್ದಾರೆ.

ಕರ್ನಾಟಕದಲ್ಲಿ ತಂತ್ರಜ್ಞಾನದ ಬೆಳವಣಿಗೆಯಲ್ಲಿ ಬೆಂಗಳೂರಿನ ತರುವಾಯದ ಸ್ಥಾನ ಮೈಸೂರಿಗೆ ಸಲ್ಲುತ್ತದೆ. ಭಾರತ ಸರ್ಕಾರ ಮಾಹಿತಿ ತಂತ್ರಜ್ಞಾನದ ಅಭಿವೃದ್ಧಿಗೆ ಆಯ್ಕೆ ಮಾಡಿದ ೨೦ ಅವಳೀ ನಗರಗಳಲ್ಲಿ ಮೈಸೂರು ಒಂದಾಗಿದೆ. ಪ್ರಸ್ತುತ ಮಾಹಿತಿ ತಂತ್ರಜ್ಞಾನ ಸಂಬಂಧಿ ಎಲ್ಲಾ ಕೈಗಾರಿಕೆಗಳು ಮೈಸೂರಿನಲ್ಲಿ ಕೇಂದ್ರೀಕೃತಗೊಂಡಿವೆ. ೧೯೯೮ರಲ್ಲಿ ಮೈಸೂರಿನಲ್ಲಿ ಮಾಹಿತಿ ತಂತ್ರಜ್ಞಾನ ಪಾರ್ಕನ್ನು ಸ್ಥಾಪಿಸಲಾಗಿದೆ. ೨೦೦೭ರ ಡಿಸೆಂಬರ ಅಂತ್ಯಕ್ಕೆ ಸುಮಾರು ೬೦ಕ್ಕಿಂತ ಹೆಚ್ಚು ಕಂಪನಿಗಳು ಇಲ್ಲಿಯ ಮಾಹಿತಿ ತಂತ್ರಜ್ಞಾನ ಪಾರ್ಕನಲ್ಲಿ ಹೆಸರನ್ನು ನೊಂದಾಯಿಸಿಕೊಂಡಿವೆ. ೨೦೦೬-೦೭ರಲ್ಲಿ ಮೈಸೂರಿನಿಂದ ರಫ್ತಾದ ಮಾಹಿತಿ ತಂತ್ರಜ್ಞಾನವು ೮೫೦ ಕೋಟಿಗಿಂತಲೂ ಹೆಚ್ಚಾಗಿದೆ. ಇಲ್ಲಿ ನೆಲೆಯೂರಿರುವ ಮಾಹಿತಿ ತಂತ್ರಜ್ಞಾನ ಸಂಸ್ಥೆಗಳೆಂದರೆ ವಿಪ್ರೋ ಇನ್ಫೋಟೆಕ್, ವಿ.ಪಿ.ಪೆರಿಫೆರಲ್ಸ್ ಲಿಮಿಟೆಡ್, ಇನ್ಫೋಸಿಸ್ ಟೆಕ್ನಾಲಾಜಿಸ್, ಸಾಫ್ಟವೇಪ್ಯಾರಡಿಗಾಸ್, ಲಾರೆನ್ಸ್ ಅಂಡ್ ಟರ್ಬೋ ಇನ್ಫೋಟೆಕ್, ಕಾಮೆಟ್ ಟೆಕ್ನಾಲಾಜಿಸ್, ಕಾವೇರಿ ಟೆಕ್ನಾಲಾಜಿ ಸೆಲ್ಯೂಷನ್ಸ್. ಸಂಶೋಧನೆಗೆ ಆಯ್ಕೆ ಮಾಡಿಕೊಂಡಿದ್ದ ಯಾವುದೆ ಕುಟುಂಬದ ಸದಸ್ಯರು ಈ ಉದ್ಯಮದಲ್ಲಿಲ್ಲ. ಕಾರಣ ಅವರ ಶೈಕ್ಷಣಿಕ ಹಿಂಬೀಳಿಕೆ.

೫.೧. ಈ. ವಿಭಾಗಗಳು

ಮೈಸೂರು ಜಿಲ್ಲೆಯನ್ನು ಆಡಳಿತದ ಅನುಕೂಲಕ್ಕಾಗಿ ಮೂರು ಉಪವಿಭಾಗಳನ್ನಾಗಿ ವಿಂಗಡಿಸಲಾಗಿದೆ.ಅವು ಹುಣಸೂರು, ಮೈಸೂರು ಮತ್ತು ನಂಜನಗೂಡು.ಮೈಸೂರು ಜಿಲ್ಲಾಡಳಿತದ ಕೇಂದ್ರವಾಗಿದ್ದು ಜಿಲ್ಲಾಧಿಕಾರಿಯನಾಯಕತ್ವದಲ್ಲಿ ಕಾರ್ಯಕ್ರಮಗಳನ್ನ ಜಾರಿಗೊಳ್ಳಿಸಲಾಗುತ್ತಿದ್ದು ಬುಡಕಟ್ಟು ಜನರ ಕಲ್ಯಾಣ ಕಾರ್ಯಕ್ರಮಗಳನ್ನು ಜಿಲ್ಲಾ

ಪಂಚಾಯಿತಿವತಿಯಿಂದ ಮತ್ತು ಸಮಗ್ರ ಗಿರಿಜನ ಉಪಯೋಜನೆಯ ಯೋಜನಾ ಸಮನ್ವಾಯಿಧಿಕಾರಿಗಳ ಮಾರ್ಗದರ್ಶನದಲ್ಲಿ ಜಾರಿಗೊಳಸಲಾಗುತ್ತದೆ. ಮೈಸೂರು ಜಿಲ್ಲೆಯ ೭ ತಾಲುಕುಗಳನ್ನೊಂದಿದ್ದು, ಮೈಸೂರು, ಹುಣಸೂರು, ಪಿರಿಯಾಪಟ್ಟಣ, ಕ್ರಿಷ್ಣರಾಜನಗರ, ಹೆಗ್ಗಡದೇವನ ಕೋಟೆ, ನಂಜನಗೂಡು ಮತ್ತು ಟಿ ನರಸೀಪುರ ಅವುಗಳಲ್ಲಿ ಆದಿವಾಸಿ ಸಮುದಾಯವಾದ ಜೇನು ಕುರುಬರು, ಹುಣಸೂರು, ಪಿರಿಯಾಪಟ್ಟಣ, ಹೆಗ್ಗಡದೇವನಕೋಟೆ ಮತ್ತು ನಂಜನಗೂಡು ತಾಲೂಕುಗಳಲ್ಲಿ ಕಂಡುಬರುತ್ತಾರೆ.

೫.೧. ಉ. ಜನಸಂಖ್ಯೆ

ಕೋಷ್ಟಕ: ೫.೧. ಜೇನು ಕುರುಬರ ಜನಸಂಖ್ಯೆ (೨೦೦೧)

ರಾಜ್ಯ, ಜಿಲ್ಲೆ	ಒಟ್ಟು ಜನಸಂಖ್ಯೆ	ಪುರುಷರು	ಮಹಿಳೆಯರು
ಕರ್ನಾಟಕ	೨೯೮೨೮	೧೫೧೩೩	೧೪೬೯೫
ಮೈಸೂರು ಜಿಲ್ಲೆ	೧೫೭೪೯	೭೯೪೭	೭೮೧೨

ಆಧಾರ: ಭಾರತ ಜನಗಣತಿ ೨೦೦೧

ಮೈಸೂರು ಜಿಲ್ಲೆಯಲ್ಲಿ ಜಿಲ್ಲೆಯಲ್ಲಿ ಕಂಡುಬರುವ ಮುಖ್ಯ ಬುಡಕಟ್ಟುಗಳೆಂದರೆ, ಜೇನು ಕುರುಬ, ಕಾಡು ಕುರುಬ, ಪಣಿಯನ್, ಡುಂಗ್ರಿ ಗರಾಸಿಯ ಮತ್ತು ಸೋಲಿಗ. ಜೇನು ಕುರುಬರ ಜನಸಂಖ್ಯೆಯು ಹೆಚ್ಚಾಗಿ ಎಚ್ ಡಿ ಕೋಟೆ ಮತ್ತು ಹುಣಸೂರು ತಾಲ್ಲೂಕಗಳಲ್ಲಿ ಕಂಡುಬರುತ್ತಾರೆ. ಜಿಲ್ಲೆಯಲ್ಲಿ ೨೦೦೧ರ ಜನಗಣತಿಯಂತೆ ಜೇನುಕುರುಬರ ಜನಸಂಖ್ಯೆಯು ೧೫,೭೪೯ ರಷ್ಟಿದ್ದು ರಾಜ್ಯದ ಒಟ್ಟಾರೆ ಜೇನು ಕುರುಬರಲ್ಲಿ ಶೇ.೫೨.೯ ರಷ್ಟು ಮೈಸೂರು ಜಿಲ್ಲೆಯಲ್ಲಿರುವರು.


೫.೨. ಕೊಡಗು ಜಿಲ್ಲೆ

ಕೊಡಗು ಜಿಲ್ಲೆಯು ಕರ್ನಾಟಕ ರಾಜ್ಯದ ದಕ್ಷಿಣಾಭಿಮುಖವಾಗಿ ಪಶ್ಚಿಮ ಭಾಗದಲಿದ್ದು ಇದನ್ನು ಕೂರ್ಗ್ ಜಿಲ್ಲೆ ಎಂದೂ ಕರೆಯಲಾಗುತ್ತದೆ. ಸುಮಾರು ೪,೧೦೦ ಚದುರ.ಕಿಮೀ ಭೂಪ್ರದೇಶವನ್ನೊಂದಿದ್ದು, ಪಶ್ಚಿಮಘಟ್ಟಗಳ ಭಾಗದಲ್ಲಿದ್ದು ಕೊಡಗು ಜಿಲ್ಲೆಯ ಪಶ್ಚಿಮೊತ್ತರಕ್ಕೆ ದಕ್ಷಿಣ ಕನ್ನಡ ಜಿಲ್ಲೆ, ಉತ್ತರಕ್ಕೆ ಹಾಸನ ಜಿಲ್ಲೆ, ಪೂರ್ವಕ್ಕೆ ಮೈಸೂರು ಜಿಲ್ಲೆ, ದಕ್ಷಿಣಕ್ಕೆ ಕೇರಳ ರಾಜ್ಯದ ಕಾಸರಗೋಡು, ವೈನಾಡು ಮತ್ತು ಕಣ್ಣೂರು ಜಿಲ್ಲೆಗಳಿಂದ ಸುತ್ತುವರಿದಿದೆ.

೫.೨.ಅ. ಭೌಗೋಳಿಕತೆ

ಕೊಡಗು ಜಿಲ್ಲೆಯು ಪಶ್ಚಿಮ ಘಟ್ಟಗಳ ಪೂರ್ವ ಇಳಿಜಾರು ಬೆಟ್ಟಗಳಲ್ಲಿ ಬರುತ್ತದೆ. ಇದೊಂದು ಬೆಟ್ಟಗುಡ್ಡಗಳ ಜಿಲ್ಲೆಯಾಗಿದ್ದು ಕಡಿಮೆಯಂದರೆ ಸಮುದ್ರ ಮಟ್ಟಕ್ಕಿಂತ ೯೦೦ಮೀ.(೨೯೦೦ಅಡಿ) ಎತ್ತರದಲ್ಲಿದೆ. ಈ ಜಿಲ್ಲೆಯ ಮುಖ್ಯ ನದಿ ಕಾವೇರಿ ಈ ನದಿಯು ಜೂನ್ ತಿಂಗಳಿಂದ ಸೆಪ್ಟೆಂಬರ್ ತಿಂಗಳವರೆಗೆ ಮೈದುಂಬಿ ಹರಿಯುತ್ತಾಳೆ. ಕಾವೇರಿಯು ಕೊಡಗಿನ ತಲಕಾವೇರಿಯಲ್ಲಿ ಹುಟ್ಟಿ ಚಾಮರಾಜನಗರ, ಬೆಂಗಳೂರು ಗ್ರಾಮಾಂತರಗಳ ಜಿಲ್ಲೆಗಳ ಮೂಲಕ ತಮಿಳುನಾಡು, ಪಾಂಡೀಚೇರಿ, ಕೇರಳಗಳ ಮೂಲಕ ಹಾದು ಕೊನೆಗೆ ಬಂಗಾಳಕೊಲ್ಲಿಯಲ್ಲಿ ಲೀನವಾಗುತ್ತಾಳೆ. ಈ ಜಿಲ್ಲೆಯ ವಾರ್ಷಿಕ ಮಳೆಯ ಪ್ರಮಾಣವು ೪೦೦೦ಮಿ.ಮೀ ಗಳಿಗಿಂತಲೂ ಹೆಚ್ಚಾಗಿರುತ್ತದೆ.

ನಕ್ಷೆ : ೫.೨ ಕೊಡಗು ಜಿಲ್ಲೆ



ಕೃಪೆ : ಭಾರತ ಸರ್ವೇಕ್ಷಣ ಇಲಾಖೆ ೨೦೦೧

ಕೊಡಗು ಜಿಲ್ಲೆಯ ಕನಿಷ್ಠ ಉಷ್ಣಾಂಶವು ೧೫ ಸೆಲ್ಸಿಯಷ್ಟಿದ್ದು ಅದು ಬೇಸಿಗೆಯಲ್ಲಿ ಗರಿಷ್ಠ ೨೮ ಸೆಲ್ಸಿಯಷ್ಟಾಗುತ್ತದೆ. ಮಡಿಕೇರಿಯು ಜಿಲ್ಲಾ ಕೇಂದ್ರವಾಗಿದ್ದು ವಿರಾಜಪೇಟೆ, ಸೋಮವಾರಪೇಟೆ, ಕುಶಾಲನಗರ ಮುಂತಾದ ತಾಲೂಕುಗಳನ್ನು ಒಳಗೊಂಡಿದೆ. ಜಿಲ್ಲೆಯ ಶೇ.೮೦ ಭಾಗವು ಕೃಷಿಯಾಧಾರಿತವಾಗಿದ್ದು ಕಾಫಿ, ಶುಂಠಿ, ಮೆಣಸು, ಏಲಕ್ಕಿ, ರಬ್ಬರ್, ಕೋಕೊ, ಕಿತ್ತಳೆ, ಸೇಬು ಇತ್ಯಾದಿ ಬೆಳೆಯಲಾಗುತ್ತದೆ, ಭತ್ತದ ಗದ್ದೆಗಳನ್ನು ಮುಖ್ಯವಾಗಿ ಬೆಟ್ಟಗಳ ಕಣಿವೆ ಪ್ರದೇಶಗಳಲ್ಲಿ ಕಾಣಬಹುದು. ಕೊಡಗು ಜಿಲ್ಲೆಯು ಹಲವಾರು ವನ್ಯಪ್ರಾಣಿ, ಪಕ್ಷಿಗಳ ಆಶ್ರಯ ತಾಣವಾಗಿದ್ದು ಬ್ರಹ್ಮಗಿರಿ ವನ್ಯಧಾಮ, ತಲಕಾವೇರಿ ವನ್ಯಧಾಮ, ಪುಷ್ಪಗಿರಿ ವನ್ಯಧಾಮ, ನಾಗರಹೊಳೆ, ರಾಜೀವಗಾಂಧಿ ರಾಷ್ಟ್ರೀಯ ಉದ್ಯಾನವನಗಳನ್ನು ಒಳಗೊಂಡಿದೆ ಕರ್ನಾಟಕದಲ್ಲಿ ಮೈಸೂರ ಜಿಲ್ಲೆಯ ನಂತರ ಹೆಚ್ಚು ಜೇನು ಕುರುಬರು ವಾಸಮಾಡುವ ಜಿಲ್ಲೆಯಾಗಿದೆ ೨೦೦೧ ರ ಜನಗಣತಿಯ ಪ್ರಕಾರ ೧೦,೦೫೭ ರಷ್ಟು ಜೇನು ಕುರುಬರಿದ್ದಾರೆ.

೫.೨.ಆ. ಜನಸಂಖ್ಯೆ

ಕೊಡಗು ಹಲವು ಸಮುದಾಯಗಳ ಆಶ್ರಯ ತಾಣವಾಗಿದ್ದು ವಿವಿಧ ಗುಂಪುಗಳು ಇಲ್ಲಿ ಏಕತೆಯನ್ನು ಸಾಧಿಸಿವೆ. ಅವುಗಳಲ್ಲಿ ಮುಖ್ಯವಾಗಿ ಕೊಡವ, ಲಿಂಗಾಯತ, ಅರೆಭಾಷೆ ಗೌಡ, ದೇವಾಂಗ, ಬ್ರಾಹ್ಮಣ, ಮುಸಲ್ಮಾನ, ಕ್ರೈಸ್ತ, ಜೈನ, ಹಾಗೆ ಬುಡಕಟ್ಟುಗಳಾದ ಕಾಡು ಕುರುಬ, ಜೇನು ಕುರುಬ, ಯರವ, ಕುಡಿಯ, ಕೊರಗ, ಮರಾಠಿ, ಇತ್ಯಾದಿ ಗುಂಪುಗಳನ್ನು ಕಾಣಬಹುದಾಗದೆ.

ಕೋಷ್ಟಕ: ೫.೨ ಜೇನು ಕುರುಬರ ಜನಸಂಖ್ಯೆ (೨೦೦೧)

ರಾಜ್ಯ/ಜಿಲ್ಲೆ	ಒಟ್ಟು ಜನಸಂಖ್ಯೆ	ಪುರುಷರು	ಮಹಿಳೆಯರು
ಕರ್ನಾಟಕ	೨೯೮೨೮	೧೫೧೩೩	೧೪೬೯೫
ಕೊಡಗು	೧೦೦೩೭	೫೦೮೮	೪೯೪೯

ಆಧಾರ: ಭಾರತ ಜನಗಣತಿ ೨೦೦೧

೨೦೦೧ರ ಜನಗಣತಿಯನ್ನ ಗಮನಿಸಿದಾಗ ಕೊಡಗಿನ ಜೇನು ಕುರುಬರ ಜನಸಂಖ್ಯೆಯು ೧೦,೦೩೭ ರಷ್ಟಿದ್ದು ಪುರುಷರ ಸಂಖ್ಯೆ ೫೦೮೮ ಮತ್ತು ಮಹಿಳೆಯರ ಸಂಖ್ಯೆ ೪೯೪೯ ರಷ್ಟಿದೆ. ರಾಜ್ಯದ ಒಟ್ಟಾರೆ ಜೇನು ಕುರುಬರಲ್ಲಿ ಶೇ.೩೩.೭ ರಷ್ಟು ಜೇನು ಕುರುಬರು ನೆಲೆಸಿರುವ ಕೊಡಗು ಎರಡನೆಯ ದೊಡ್ಡ ಜಿಲ್ಲೆಯಾಗಿದೆ.

೫.೨.ಇ. ಆರ್ಥಿಕ ಜೀವನ

ಕೊಡಗು ಜಿಲ್ಲೆ ಮುಖ್ಯವಾಗಿ ಗ್ರಾಮೀಣ ಪ್ರದೇಶವನ್ನೇ ಹೆಚ್ಚಾಗಿ ಹೊಂದಿದ್ದು ಇಲ್ಲಿಯ ಬಹುಸಂಖ್ಯಾತ ಜನರು ಕೃಷಿಯನ್ನು ಆಧರಿಸಿದ್ದಾರೆ. ಮೆಣಸು, ಕಾಫಿ, ಭತ್ತ, ಶುಂಠಿ, ಏಲಕ್ಕಿ ಇತ್ಯಾದಿ ಬೆಳೆಗಳನ್ನು ಹೆಚ್ಚಾಗಿ ಬೆಳೆಯುತ್ತಾರೆ. ಇತ್ತೀಚಿನ ದಿನಗಳಲ್ಲಿ ಪ್ರವಾಸೋದ್ಯಮವೂ ಸಹ ಜಿಲ್ಲೆಯಲ್ಲಿ ಪ್ರಮುಖ ಸ್ಥಾನವನ್ನು ಪಡೆದಿದೆ. ಶೇ.೪೫ ರಷ್ಟು ಜೇನು ಕುರುಬರು ಇಲ್ಲಿನ ಕಾಫಿ ತೋಟಗಳಲ್ಲಿ ದಿನಗೂಲಿಗಳಾಗಿ ಕೆಲಸ ಮಾಡುತ್ತಿದ್ದಾರೆ. ಕೊಡಗು ಜಿಲ್ಲೆಯಲ್ಲಿನ ಜೇನುಕುರುಬರ ಮುಖ್ಯ ಉದ್ಯೋಗ ಕೃಷಿ ಮತ್ತು ಕೃಷಿ ಕೂಲಿಯಾಗಿದೆ.

೫.೩. ದಕ್ಷಿಣ ಕನ್ನಡ ಜಿಲ್ಲೆ

ದಕ್ಷಿಣ ಕನ್ನಡ ಜಿಲ್ಲೆಯು ಕರ್ನಾಟಕದ ಕರಾವಳಿ ಪ್ರದೇಶದಲ್ಲಿದ್ದು ಉತ್ತರದಲ್ಲಿ ಉಡುಪಿ, ಪೂರ್ವೋತ್ತರಕ್ಕೆ ಚಿಕ್ಕಮಗಳೂರು, ಪೂರ್ವಕ್ಕೆ ಹಾಸನ, ದಕ್ಷಿಣಪೂರ್ವಕ್ಕೆ ಕೊಡಗು ಮತ್ತು ಕೇರಳದ ಕಾಸರಗೋಡು ತಾಲೂಕುಗಳಿವೆ, ಪಶ್ಚಿಮದಲ್ಲಿ ಅರಬ್ಬೀ ಸಮುದ್ರ ಹೊಂದಿಕೊಂಡಿದೆ. ಇದು ಮೀನುಗಾರಿಕೆ ಹಾಗೂ ಹಲವು ಬಂದರುಗಳಿಗೆ ಪ್ರಖ್ಯಾತವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯು ಸುಮಾರು ೪೫೬೦ ಚ.ಕಿ.ಮೀ ಭೂಪ್ರದೇಶವನ್ನು ಹೊಂದಿದ್ದು ೫ ತಾಲೂಕುಗಳನ್ನು ಒಳಗೊಂಡಿದೆ. ೧೯೯೭ ಪೂರ್ವದಲ್ಲಿ ಉಡುಪಿಯು ಇದರ ತಾಲ್ಲೂಕು ಭಾಗವಾಗಿತ್ತು, ಅವಿಭಜಿತ ದಕ್ಷಿಣ ಕನ್ನಡವನ್ನು ತುಳು ನಾಡೆಂದು ಸಹ ಕರೆಯುತ್ತಾರೆ.

೫.೩.ಅ. ಜನಸಂಖ್ಯೆ

ದಕ್ಷಿಣ ಕನ್ನಡ ಜಿಲ್ಲೆಯು ಪಶ್ಚಿಮ ಘಟ್ಟಗಳ ಪರ್ವತ ಶ್ರೇಣಿಯಲ್ಲಿರುವುದರಿಂದ ಮತ್ತು ಇಲ್ಲಿನ ಹಲವು ಬುಡಕಟ್ಟು ಗುಂಪುಗಳು ಸ್ವಾಭಾವಿಕವಾಗಿ ಹೊರ ಸಮಾಜದ ಸಂಪರ್ಕದಿಂದ ದೂರ ಉಳಿದಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅತ್ಯಂತ ಶೋಷಣೆಗೊಳಪಟ್ಟಿರುವ ಬುಡಕಟ್ಟೆಂದರೆ ಕೊರಗ ಆದಿವಾಸಿ ಬುಡಕಟ್ಟು, ೨೦೦೧ರ ಜನಗಣತಿಯ ಪ್ರಕಾರ ಇಲ್ಲಿಯ ಇವರ ಜನಸಂಖ್ಯೆ ೪,೫೪೨.

ನಕ್ಷೆ: ೫.೩ ದಕ್ಷಿಣ ಕನ್ನಡ ಜಿಲ್ಲೆ



ಕೃಪೆ : ಭಾರತ ಸರ್ವೇಕ್ಷಣ ಇಲಾಖೆ ೨೦೦೧

ಕೋಷ್ಟಕ: ೫.೩ ಕೊರಗರ ಜನಸಂಖ್ಯೆ (೨೦೦೧)

ರಾಜ್ಯ / ಜಿಲ್ಲೆ	ಒಟ್ಟು ಜನಸಂಖ್ಯೆ	ಪುರುಷರು	ಮಹಿಳೆಯರು
ಕರ್ನಾಟಕ	೧೬೦೭೧	೭೯೫೧	೮೧೨೦
ದಕ್ಷಿಣ ಕನ್ನಡ ಜಿಲ್ಲೆ	೪೫೪೨	೨೨೫೨	೨೨೯೦

ಆಧಾರ: ಭಾರತ ಜನಗಣತಿ ೨೦೦೧

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೨೦೦೧ರ ಜನಗಣತಿಯಂತೆ ಒಟ್ಟು ೪,೫೪೨ ಜನಸಂಖ್ಯೆಯಿದ್ದು ಪುರುಷರು ೨,೨೫೨ ಮಹಿಳೆಯರು ೨,೨೯೦ ರಷ್ಟಿದ್ದಾರೆ. ಇದು ರಾಜ್ಯದ ಒಟ್ಟಾರೆ ಕೊರಗ ಜನಸಂಖ್ಯೆಯ ಶೇ.೨೮.೩ ರಷ್ಟಿದೆ.

೫.೩.ಆ. ಸಂಸ್ಕೃತಿ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿವಿಧ ಬಗೆಯ ಸಂಪ್ರದಾಯಗಳು, ಆಚರಣೆಗಳನ್ನ ಕಾಣಬಹುದು. ಇಲ್ಲಿ ಹಲವಾರು ಹಿಂದೂ ದೇವಾಲಯಗಳು, ಚರ್ಚುಗಳೂ ಪ್ರಖ್ಯಾತಿಯನ್ನು ಪಡೆದಿವೆ. ಇಲ್ಲಿಯ ಭೂತಾರಾಧನೆ, ನಾಗರಾಧನೆಗಳು ತುಂಬಾ ಪ್ರಖ್ಯಾತಿಯನ್ನು ಪಡೆದಿವೆ. ಯಕ್ಷಗಾನವಂತೂ ಪ್ರಪಂಚದ ಗಮನವನ್ನು ತನ್ನ ಕಡೆಗೆ ಸೆಳೆದುಕೊಂಡಿದೆ. ಕೊರಗರು ಸಹ ತಮ್ಮದೆ ಆದ ಕೊರಗ ತನಿಯನ ನೆನಪಿನಾರ್ಥ ವಿಶೇಷ ಆರಾಧನೆಯನ್ನ ಮಾಡುತ್ತಾರೆ.

೫.೩.ಇ. ಕೃಷಿ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶೇ.೭೦ರಷ್ಟು ಜನರು ಕೃಷಿಯನ್ನೇ ಆಧರಿಸಿಕೊಂಡಿದ್ದಾರೆ. ಇಲ್ಲಿನ ಮುಖ್ಯ ಬೆಳೆಗಳೆಂದರೆ ಭತ್ತ, ಗೋಡಂಬಿ, ಅಡಿಕೆ, ವೆನಿಲ, ತೆಂಗು ಇತ್ಯಾದಿಯಾಗಿದೆ. ಸಂಶೋಧನೆಗೆ ಆಯ್ದುಕೊಂಡಿದ್ದ ಕೊರಗರ ಹಾಡಿಗಳಲ್ಲಿ ಶೇ.೫೦ ರಷ್ಟು ಕುಟುಂಬಗಳು ಕೃಷಿಕೂಲಿಗಳಾಗಿದ್ದಾರೆ.

೫.೩.ಈ. ವಾಣಿಜ್ಯ ಮತ್ತು ಕೈಗಾರಿಕೆಗಳು

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಲವು ಬ್ಯಾಂಕುಗಳು ಜನ್ಮತಾಳಿವೆ ರಾಷ್ಟ್ರೀಕೃತ ಬ್ಯಾಂಕುಗಳಾದ ಕೆನರಾ ಬ್ಯಾಂಕು, ಕಾರ್ಪೋರೇಶನ್ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್, ಕರ್ನಾಟಕ ಬ್ಯಾಂಕ್, ವಿಜಯ ಬ್ಯಾಂಕುಗಳ ಮೂಲ ಈ ಜಿಲ್ಲೆಯೇ ಆಗಿದೆ. ಇಲ್ಲಿಯ ಗೋಡಂಬಿ ತಯಾರಿಕಾ ಕಾರ್ಖಾನೆ, ಹೆಂಚಿನ ಕೈಗಾರಿಕೆ, ಬೀಡಿ ತಯಾರಿಕಾ ಘಟಕಗಳು ಪ್ರಮುಖವಾಗಿವೆ. ಇಲ್ಲಿನ ಬಹುಸಂಖ್ಯಾತ ವಿದ್ಯಾವಂತರು ರಾಜ್ಯ ರಾಷ್ಟ್ರದ ಹೊರಭಾಗಗಳಲ್ಲಿ ಉದ್ಯೋಗ ಮಾಡುತ್ತಿದ್ದಾರೆ. ಪಣಂಬೂರ್, ಕೊಟಕರ್, ಸಸಿಹಿತ್ಲು ಮುಂತಾದ ಪ್ರದೇಶಗಳು ಮೀನುಗಾರಿಕೆಗೆ ತುಂಬಾ ಹೆಸರುವಾಸಿಯಾಗಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೈಗಾರಿಕೆಗಳು ಮಂಗಳೂರು ನಗರದ ಸುತ್ತಮುತ್ತ ಹರಡಿದ್ದು, ಅವುಗಳಲ್ಲಿ ಮುಖ್ಯವಾಗಿ ಹೆಸರಿಸಬಹುದಾದಂಥವುಗಳು ಈ ಕೆಳಗಿನಂತಿವೆ.

೧. ಮಂಗಳೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್
೨. ಕುದುರೆ ಮುಖ ಅದಿರು ಕಾರ್ಖಾನೆ
೩. ಮಂಗಳೂರು ರಿಫೈನರಿ ಮತ್ತು ಪೆಟ್ರೋಕೆಮಿಕಲ್ಸ್
೪. ಪುತ್ತೂರಿನ ಕ್ಯಾಂಪ್ಕೋ ಚಾಕುಲೇಟ್ ಕಾರ್ಖಾನೆ

ಅದೇ ರೀತಿಯಾಗಿ ಹಲವು ಅಂತರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆಗಳು ತಮ್ಮ ಸೌಲಭ್ಯ ಕೇಂದ್ರಗಳನ್ನು ಇಲ್ಲಿ (ಮಂಗಳೂರಿನಲ್ಲಿ) ತೆರೆಯುತ್ತಿವೆ.


೧ ಇನ್ಫೋಸಿಸ್
೨ ಲೆಸರ್ ಸಾಫ್ಟ್ ಇನ್ಫೋ ಸಿಸ್ಟಮ್
೩ ಎಂಪಿಸಿಸ್ ಬಿ.ಪಿ.ಒ
೪ ವಿಪ್ರೋ ಇತ್ಯಾದಿಗಳು

೨೦೦೫-೦೬ರಿಂದೀಚೆಗೆ ಇಲ್ಲಿ ವಿಶೇಷ ಆರ್ಥಿಕ ವಲಯವನ್ನು ಘೋಷಿಸಲಾಗಿದ್ದು, ಇದರಿಂದ ಪ್ರಸ್ತುತ ಸ್ಥಿತಿಯಲ್ಲಿ ಹಲವು ಕೊರಗ ಕುಟುಂಬಗಳು ಸ್ಥಳಾಂತರಕ್ಕೆ ಒಳಗಾಗಿರುವುದರಿಂದ ಸೌಲಭ್ಯಕ್ಕಿಂತ ಹೆಚ್ಚಿನ ತೊಂದರೆಯನ್ನೇ ಎದುರಿಸುತ್ತಿವೆ.

೫.೪. ಉಡುಪಿ ಜಿಲ್ಲೆ

ಆಡಳಿತದ ದೃಷ್ಟಿಯಿಂದ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉತ್ತರ ಕನ್ನಡಜಿಲ್ಲೆಯ ಕೆಲವು ಭಾಗಗಳನ್ನು ೧೯೯೭ರ ಆಗಷ್ಟನಲ್ಲಿ ಪ್ರತ್ಯೇಕ ಜಿಲ್ಲೆಯಾಗಿ ಘೋಷಿಸಲಾಯಿತು. ಕಾರ್ಕಳ, ಕುಂದಾಪುರ, ಉಡುಪಿ ತಾಲೂಕುಗಳನ್ನು ಈ ಜಿಲ್ಲೆ ಒಳಗೊಂಡಿದೆ. ಇದು ಉತ್ತರದಲ್ಲಿ ಉತ್ತರ ಕನ್ನಡ ಜಿಲ್ಲೆ ಹಾಗೂ ದಕ್ಷಿಣಕ್ಕೆ ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಪೂರ್ವಕ್ಕೆ ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಿಗೆ ಹೊಂದಿಕೊಂಡಿದೆ. ಕನ್ನಡ ಭಾಷೆಯೊಂದಿಗೆ ಪ್ರಾದೇಶಿಕ ಭಾಷೆಯಾದ ತುಳುವನ್ನೂ ಇಲ್ಲಿಯ ಜನ ಮಾತನಾಡುವರು. ಕೊಂಕಣಿ ಭಾಷೆಯು ಇಲ್ಲಿ ಪ್ರಚಲಿತವಿದೆ. ಶೇ.೮೨ ರಷ್ಟು ಸಾಕ್ಷರರನ್ನು ಈ ಜಿಲ್ಲೆಯಲ್ಲಿ ಕಾಣಬಹುದು. ಇಲ್ಲಿನ ಮಣಿಪಾಲ ಅಕಾಡೆಮಿ, ನಿಟ್ಟೆ ವಿದ್ಯಾ ಸಂಸ್ಥೆಗಳು ರಾಷ್ಟ್ರದ ಪ್ರಖ್ಯಾತ ವಿದ್ಯಾ ಸಂಸ್ಥೆಗಳಾಗಿವೆ.

ನಕ್ಷೆ : ೫.೪ ಉಡುಪಿ ಜಿಲ್ಲೆ



ಕೃಪೆ : ಭಾರತ ಸರ್ವೇಕ್ಷಣ ಇಲಾಖೆ ೨೦೦೧

ಮೇಲಿನ ಜನಸಂಖ್ಯಾ ಕೋಷ್ಟಕವನ್ನ ಗಮನಿಸಿದಾಗ ರಾಜ್ಯದ ಒಟ್ಟು ಕೊರಗ ಜನಸಂಖ್ಯೆಯು ಶೇ.೫೬ ರಷ್ಟಿದ್ದು ಅವರಲ್ಲಿ ಪುರುಷರು ೪,೪೦೦ ಮತ್ತು ಮಹಿಳೆಯರು ೪,೫೬೬ ರಷ್ಟಿದ್ದಾರೆ. ಮಹಿಳೆಯರು ಪುರುಷರ ಲಿಂಗಾನುಪಾತಕ್ಕಿಂತ ಹೆಚ್ಚಾಗಿರುವುದನ್ನ ಕಾಣಬಹುದಾಗಿದೆ.

೫.೪.ಆ. ಕೈಗಾರಿಕೆ ಮತ್ತು ವಾಣಿಜ್ಯ

ಉಡುಪಿ ಜಿಲ್ಲೆಯು ಹೆಚ್ಚಾಗಿ ಸಣ್ಣಕೈಗಾರಿಕೆಗಳನ್ನೊಳಗೊಂಡಿದೆ ಮುಖ್ಯವಾಗಿ ತೆಂಗು, ಗೋಡಂಬಿ ಘಟಕಗಳು ಹಲವರಿಗೆ ಉದ್ಯೋಗ ಅವಕಾಶಗಳನ್ನು ನೀಡಿವೆ. ಸಿಂಡಿಕೇಟ್ ಬ್ಯಾಂಕ್‌ನ ಮುಖ್ಯ ಕಾರ್ಯಾಲಯವು ಮಣಿಪಾಲದಲ್ಲಿದೆ. ಕೆಲವು ಮಾಹಿತಿ ತಂತ್ರಜ್ಞಾನ ಶಾಖೆಗಳು ಇಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಉಡುಪಿಯು ಪ್ರವಾಸೋದ್ಯಮದ ಪ್ರಮುಖ ಸ್ಥಳವಾಗಿದೆ.

೧. ಮಲ್ಪೆ ಬಂದರು, ಮೀನುಗಾರಿಕೆ ಮತ್ತು ಮೀನು ಮಾರಾಟಕ್ಕೆ ಪ್ರಸಿದ್ಧವಾಗಿದೆ.

೨. ಸೆಂಟ್ ಮೇರಿ ದ್ವೀಪವು ಅರಬ್ಬಿ ಸಮುದ್ರದ ನಡುಗಡ್ಡೆಯಾಗಿದ್ದು ಅದು ಮಲ್ಪೆಗೆ ಸಮೀಪವಿರುವುದರಿಂದ ಹಲವು ಪ್ರಯಾಣಿಕರನ್ನು ಆಕರ್ಷಿಸುತ್ತಿದೆ.

೩. ಕೂಪ ಒಂದು ಲೈಟ್‌ಹೌಸ್ ಮತ್ತು ಕಡಲ ತೀರವಾಗಿದ್ದು ಹಲವು ಪ್ರವಾಸಿಗರನ್ನು ಆಕರ್ಷಿಸುತ್ತಿದೆ.

೪. ಮರವಂತೆ, ಬೈಂದೂರು, ಆಕರ್ಷಣೀಯ ಸ್ಥಳಗಳಾಗಿವೆ.

೫. ಉಡಪಿಯಲ್ಲಿ ಶ್ರಿಕೃಷ್ಣ ದೇವಾಲಯ, ಮದ್ವಾಚಾರ್ಯರ ಜನ್ಮ ಸ್ಥಳವಾದ ಪಾಜಕವಿದೆ.

೬. ಕೊಲ್ಲೂರು ಮೂಕಾಂಬಿಕೆ ದೇವಾಲಯ ಕೇರಳ ಮತ್ತು ತಮಿಳುನಾಡಿನಿಂದ ಭಕ್ತರನ್ನು ಆಕರ್ಷೀಸುತ್ತಿದೆ. ಕಾರ್ಕಳ, ಆನೆಗುಡ್ಡೆ, ಬಾರ್ಕೂರು, ಸಾಲಿಗ್ರಾಮಗಳು ಪ್ರಸಿದ್ಧ ಯಾತ್ರಾಸ್ಥಳಗಳಾಗಿವೆ.

ಉಡುಪಿ ಜಿಲ್ಲೆಯು ದಟ್ಟವಾದ ಅರಣ್ಯ ಸಂಪತ್ತನ್ನು ಹೊಂದಿದ್ದು, ಸಹ್ಯಾದ್ರಿ ಮತ್ತು ಪಶ್ಚಿಮ ಘಟ್ಟಗಳ ತಪ್ಪಲಿನಲ್ಲಿದೆ. ಈ ಜಿಲ್ಲೆಯು ಸೋಮೇಶ್ವರ ವನ್ಯಧಾಮ, ಮೂಕಾಂಬಿಕೆ ವನ್ಯಧಾಮ ಮತ್ತು ಶಿರ್ವ ಪಕ್ಷಿಧಾಮಗಳನ್ನು ಹೊಂದಿದ್ದು, ಹಲವಾರು ಜಲಧಾಮಗಳನ್ನು ಹೊಂದಿದೆ. ಕೂಡ್ಲುತೀರ್ಥ, ಬಾರ್ಕನ ಜಲಪಾತ, ಬೆಳಕಲ್‌ತೀರ್ಥ ಅರಸಿನಗುಂಡಿ, ಜೋಮ್ಲುತೀರ್ಥ, ಕೊಸಳ್ಳಿ ಜಲಪಾತಗಳನ್ನೊಳಗೊಂಡಿದೆ.ಸಾಕಷ್ಟು ಕೊರಗರು ಉಡಪಿ ಜಿಲ್ಲೆಯಲ್ಲಿ ಸಣ್ಣ ಕೃಷಿಕರಾಗಿ, ಕೃಷಿ ಕಾರ್ಮಿಕರಾಗಿ, ನಗರ ಪ್ರದೇಶಗಳಲ್ಲಿ ಸ್ವಚ್ಚತಾ ಕೆಲಸಗಾರರಾಗಿ ದುಡಿಯುತ್ತಿದ್ದಾರೆ.

೫.೫. ಕರ್ನಾಟಕದಲ್ಲಿ ಆದಿಮ ಬುಡಕಟ್ಟುಗಳ ಸ್ಥಾನಮಾನ

ಪರಿಶಿಷ್ಟ ಪಂಗಡಗಳ ಜನಸಂಖ್ಯೆಯು ೧೯೯೧ರಲ್ಲಿ ೧೯.೧೬ ಲಕ್ಷದಿಂದ ೨೦೦೧ರಲ್ಲಿ ೩೪.೬೪ ಲಕ್ಷಕ್ಕೆ ಅಧಿಕಗೊಂಡಿದೆ. ದಶಕವಾರು ಬೆಳವಣಿಗೆಯು ಈ ಅವಧಿಯಲ್ಲಿ ಅಧಿಕವೆನಿಸುವ ಶೇ.೮೦.೮ರಷ್ಟಾಗಿದೆ. ಈ ಹೆಚ್ಚಳ ಕೇವಲ ಬುಡಕಟ್ಟು ಜನರ ಜನನ ಪ್ರಮಾಣದಲ್ಲಿನ ಹೆಚ್ಚಳದಿಂದ ಆಗಿರದೇ, ಹೊಸ ಜಾತಿಗಳನ್ನ ಪರಿಶಿಷ್ಟ ಪಂಗಡಗಳ ಅನುಸೂಚಿತ ಪಟ್ಟಿಯಲ್ಲಿ ಸೇರಿಸುವುದರಿಂದಾಗಿದೆ ಎಂದು ಹೇಳಬಹುದು. ೧೯೯೧ ರ ಜನಗಣತಿಯ ನಂತರ ಕರ್ನಾಟಕದಲ್ಲಿ ನಾಯಕ ಮತ್ತು ಅದರ ಸಮಾನ ಜಾತಿಗಳ ಸೇರ್ಪಡೆಯಿಂದಾಗಿ ಬುಡಕಟ್ಟು ಜನಸಂಖ್ಯೆಯಲ್ಲಿ ತೀವ್ರ ಹೆಚ್ಚಳವಾಗಿರುವುದನ್ನ ಈ ಕೆಳಗಿನಂತೆ ಕಾಣಬಹುದಾಗಿದೆ.

ಕೋಷ್ಟಕ: ೫.೪ ನಾಯಕ್ಡ/ನಾಯಕ... ಜನಸಂಖ್ಯೆ

	೧೯೯೧ ರ ಜನಗಣತಿಯಂತೆ			೨೦೦೧ ರ ಜನಗಣತಿಯಂತೆ		
	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ
ಒಟ್ಟು	೧೩,೭೦,೪೫೫	೬,೯೭,೯೧೩	೬,೭೨,೫೪೨	೨೯,೧೮,೬೪೯	೧೪,೭೯,೫೬೯	೧೪,೩೯,೦೮೦
ಗ್ರಾಮೀಣ	೧೧,೭೨,೮೯೫	೫,೯೬,೨೮೮	೫,೭೬,೬೦೭	೨೪,೮೪,೨೭೫	೧೨,೫೮,೦೧೩	೧೨,೨೬,೨೬೨
ನಗರ	೧,೯೭,೫೬೦	೧,೦೧,೬೨೫	೯೫,೯೩೫	೪,೩೪,೩೭೪	೨,೨೧,೫೫೬	೨,೧೨,೮೧೮

ಆಧಾರ: ಭಾರತ ಜನಗಣತಿ ೧೯೯೧ ಮತ್ತು ೨೦೦೧

ಮೇಲಿನ ಕೋಷ್ಟಕವನ್ನ ಗಮನಿಸಿದಾಗ ತಿಳಿದುಬರುವ ಸತ್ಯಾಂಶವೆಂದರೆ ೧೯೯೧ ಜನಗಣತಿಯಲ್ಲಿ ಒಟ್ಟು ೧೩.೭೦.೪೫೫ ರಷ್ಟಿದ್ದ ನಾಯಕ್ಡ ಜನಸಂಖ್ಯೆ ೨೦೦೧ ರಲ್ಲಿ ೨೯.೧೮.೬೪೯ರಷ್ಟಾಗಿದೆ ಅಂದರೆ ೧೫.೪೮.೧೯೪ ಲಕ್ಷದಷ್ಟು ಜನಸಂಖ್ಯೆ ಹೆಚ್ಚಾಗಿದೆ. ಇದರಿಂದಾಗಿ ಆದಿಮ ಬುಡಕಟ್ಟುಗಳಿಗೆ ನೀಡುತ್ತಿದ್ದ ಹೆಚ್ಚಿನ ಪ್ರಾಶಸ್ತ್ಯ ಇಂದು ಇತರೆ

ಸಮುದಾಯಗಳಿಗೂ ನೀಡಬೇಕಾಗಿರುವುದು ಸರ್ಕಾರದ ಹೊಣೆಗಾರಿಕೆಯಾಗಿದೆ. ಇದು ಒಂದು ರೀತಿಯಲ್ಲಿ ಸೌಲಭ್ಯಗಳ ತಿರುಚುವಿಕೆಗೆ (Diversion of Benefits) ಕಾರಣವಾಗಿದೆ.

೫.೫.೬. ಸಾಕ್ಷರತೆ

ಆದಿಮ ಬುಡಕಟ್ಟು ಜನರ ಅಭಿವೃದ್ಧಿಯ ಸ್ಥಿತಿಗತಿಗಳನ್ನ ಸುಧಾರಿಸುವಲ್ಲಿ ಜ್ಞಾನ/ಸಾಕ್ಷರತೆಯ ಪಾತ್ರ ನಿರ್ಣಾಯಕವಾದುದಾಗಿದೆ. ಉತ್ತಮ ಆರೋಗ್ಯದ ಸೂಚಿಗಳು ಮತ್ತು ಉತ್ಪಾದಕತೆಯ ಹೆಚ್ಚಳದ ಮೇಲೆ ಸಾಕ್ಷರತಾ ಸುಧಾರಣೆಗಳು ಧನಾತ್ಮಕ ಪರಿಣಾಮವನ್ನು ಬೀರುತ್ತವೆ. ಇವು ಬಡ ಜನರ ವರಮಾನದ ಮಟ್ಟವನ್ನು ಗಣನೀಯ ಪ್ರಮಾಣದಲ್ಲಿ ಅಧಿಕಗೊಳಿಸುತ್ತವೆ. ಕರ್ನಾಟಕದಲ್ಲಿ ಪರಿಶಿಷ್ಟ ಪಂಗಡಗಳ ಸಾಕ್ಷರತೆಯು ನಿರಂತರವಾಗಿ ಒಟ್ಟು ಜನಸಂಖ್ಯೆಯ ಸಾಕ್ಷರತೆಗಿಂತ ಕೆಳಮಟ್ಟದಲ್ಲಿ ಇರುವುದು ಮತ್ತು ಆದಿಮ ಬುಡಕಟ್ಟುಗಳ ಸಾಕ್ಷರತೆಯು ಮತ್ತಷ್ಟು ಕೆಳಮಟ್ಟದಲ್ಲಿರುವುದರ ಬಗೆಗೆ ಯೋಚಿಸಬೇಕಾದ ಸಂಗತಿಯಾಗಿದೆ. ಆದಿಮ ಬುಡಕಟ್ಟಾದ ಜೇನು ಕುರುಬರ ಸಾಕ್ಷರತೆಯು ಮತ್ತಷ್ಟು ಸುಧಾರಿಸಬೇಕಾಗಿದೆ. ೧೯೯೧ರಲ್ಲಿ ಶೇ.೩೬.೦ ರಷ್ಟಿದ್ದ ಪರಿಶಿಷ್ಟ ಪಂಗಡಗಳ ಸಾಕ್ಷರತೆಯು ೨೦೦೧ರಲ್ಲಿ ಶೇ.೪೮.೩ಕ್ಕೆ ಏರಿದರೆ, ರಾಜ್ಯದ ಸರಾಸರಿ ಸಾಕ್ಷರತಾ ಪ್ರಮಾಣವು ಶೇ.೫೬.೦೪ರಿಂದ ಶೇ.೬೬.೬೪ಕ್ಕೆ ಅಧಿಕಗೊಂಡಿದೆ. ಸಾಕ್ಷರತೆಗೆ ಸಂಬಂಧಿಸದಂತೆ ಒಟ್ಟು ಜನಸಂಖ್ಯೆ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆಯ ನಡುವೆ ಅಧಿಕ ಅಂತರವಿದ್ದರೂ ಕಳೆದ ದಶಕದಲ್ಲಿ ಇದು ಸುಮಾರು ಶೇ.೧.೬ ಅಂಶಗಳಷ್ಟು ಕಡಿಮೆಯಾಗಿದೆ. ದಶಕವಾರು ಸಾಕ್ಷರತಾ ಬೆಳವಣಿಗೆಯ ಪ್ರಮಾಣವು (ಶೇ.೧೨.೩) ಒಟ್ಟು ಜನಸಂಖ್ಯೆಯ ಸಾಕ್ಷರತಾ ಬೆಳವಣಿಗೆಯ ಪ್ರಮಾಣಕ್ಕಿಂತಲೂ (ಶೇ.೧೦.೬) ಅಧಿಕವಿದೆ. ನಗರ ಪ್ರದೇಶಗಳಲ್ಲಿನ ಪರಿಶಿಷ್ಟ ಪಂಗಡಗಳ ಸಾಕ್ಷರತಾ ಪ್ರಮಾಣವು (೬೪.೬) ಬುಡಕಟ್ಟು ಜನವರ್ಗದ ಒಟ್ಟು ಸಾಕ್ಷರತಾ ಪ್ರಮಾಣಕ್ಕಿಂತ ಅಧಿಕವಾಗಿದೆಯಲ್ಲದೆ ಅದು ರಾಜ್ಯದ ಒಟ್ಟು ಜನಸಂಖ್ಯೆಯ ಸಾಕ್ಷರತಾ ಪ್ರಮಾಣಕ್ಕೆ ಬಹಳಷ್ಟು ಹೋಲಿಕೆಯಾಗುತ್ತದೆ.

ಪರಿಶಿಷ ಬುಡಕಟ್ಟು ಮಹಿಳೆಯರ ಸಾಕ್ಷರತಾ ಪ್ರಮಾಣ ೧೯೯೧ರಲ್ಲಿ ಶೇ.೨೩.೬ ಮತ್ತು ಇದ್ದು ೨೦೦೧ರಲ್ಲಿ ಶೇ.೩೬.೬ಕ್ಕೆ ಅಧಿಕಗೊಂಡಿದೆ. ಇದು ಪುರುಷರ ಸಾಕ್ಷರತೆಗಿಂತ ಅತೀ ಶೀಘ್ರಗತಿಯಲ್ಲಿ ಹೆಚ್ಚಳವಾಗಿದೆ (ದಶಕದಲ್ಲಿ ಈ ಹೆಚ್ಚಳವು ಮಹಿಳೆಯರಲ್ಲಿ ಶೇ.೧೩.೦ ಅಂಶಗಳಾಗಿದ್ದರೆ, ಪುರುಷರಲ್ಲಿ ಶೇ.೧೧.೮ ಅಂಶಗಳಷ್ಟಾಗಿದೆ). ಆದರೂ ಸಹ ಪುರುಷರು ಮತ್ತು ಮಹಿಳಾ ಸಾಕ್ಷರತಾ ಪ್ರಮಾಣದಲ್ಲಿನ ಅಂತರವು ೧೯೯೧ ರಲ್ಲಿ ಶೇ.೨೪.೩ರಿಂದ ೨೦೦೧ರ ಹೊತ್ತಿಗೆ ಶೇ.೨೩.೧ಕ್ಕೆ ಇಳಿಕೆಯಾಗಿದೆ. ಈ ಅಂತರವು ಒಟ್ಟು ಜನಸಂಖ್ಯೆಯಲ್ಲಿಯ ಪುರುಷರು ಮತ್ತು ಮಹಿಳೆಯರ ಸಾಕ್ಷರತಾ ಪ್ರಮಾಣದಲ್ಲಿನ ಅಂತರಕ್ಕಿಂತಲೂ (೧೯೯೧ರಲ್ಲಿ ೨೨.೯೨ ಮತ್ತು ೨೦೦೧ರಲ್ಲಿ ೧೯.೨೨) ಅಧಿಕವಾಗಿದೆ. ಎಲ್ಲಾ ಮಹಿಳೆಯರು ಮತ್ತು ಪರಿಶಿಷ್ಟ ಜಾತಿ ಮಹಿಳೆಯರ ಸಾಕ್ಷರತಾ ಪ್ರಮಾಣಕ್ಕಿಂತಲೂ ಪರಿಶಿಷ್ಟ ಪಂಗಡದ ಮಹಿಳೆಯರ ಸಾಕ್ಷರತಾ ಪ್ರಮಾಣವು ಕೆಳ ಮಟ್ಟದಲ್ಲಿದೆ. ಗ್ರಾಮೀಣ ಪರಿಶಿಷ್ಟ ಬುಡಕಟ್ಟುಗಳ ಪುರುಷರಲ್ಲಿನ ಸಾಕ್ಷರತೆ ಶೇ.೫೬.೯ಕ್ಕಿಂತಲೂ ಮಹಿಳೆಯರ ಸಾಕ್ಷರತೆ (೩೩.೩) ಕಡಿಮೆಯಾಗಿದೆ (ಕನಿಷ್ಟ ೧೦.೧). ಒಟ್ಟಾರೆ ರಾಜ್ಯದಲ್ಲಿನ ಇತರ ಗುಂಪುಗಳಿಗೆ ಹೋಲಿಸಿದರೆ ಪರಿಶಿಷ್ಟ ಬುಡಕಟ್ಟುಗಳ ಸಾಕ್ಷರತಾ ಪ್ರಮಾಣವು ಗಣನೀಯ ಪ್ರಮಾಣದಲ್ಲಿ ಕಡಿಮೆ ಇದೆ.

ರಾಜ್ಯದಲ್ಲಿಯ ಪರಿಶಿಷ್ಟ ಬುಡಕಟ್ಟುಗಳ ಪುರುಷರ ಮತ್ತು ಮಹಿಳೆಯರ ಸಾಕ್ಷರತಾ ಪ್ರಮಾಣ ಭಾರತದ ಸರಾಸರಿ ಸಾಕ್ಷರತಾ ಪ್ರಮಾಣಕ್ಕಿಂತಲೂ ಉತ್ತಮ ಮಟ್ಟದಲ್ಲಿದೆ. ಆದರೂ ಕರ್ನಾಟಕದಲ್ಲಿ ಪರಿಶಿಷ್ಟ ಬುಡಕಟ್ಟುಗಳ ಸಾಕ್ಷರತಾ ಪ್ರಮಾಣವು ಇತರೆ ಗುಂಪುಗಳಲ್ಲಿನ

ಸಾಕ್ಷರತಾ ಪ್ರಮಾಣಕ್ಕಿಂತ ಕಡಿಮೆ ಪ್ರಮಾಣದಲ್ಲಿದೆ. ಮತ್ತು ಆದಿಮ ಸಮುದಾಯವಾದ ಜೇನು ಕುರುಬರ ಸಾಕ್ಷರತಾ ಪ್ರಮಾಣವು ಕೇವಲ ಶೇ.೪೦.೯ ರಷ್ಟಿದ್ದು ಸಾಮಾನ್ಯ ಪರಿಶಿಷ್ಟ ಪಂಗಡಗಳ ಸಾಕ್ಷರತೆಗಿಂತ ಶೇ. ೮ರಷ್ಟು ಮತ್ತು ಇತರೆ ಸಾಮಾನ್ಯರ ಸಾಕ್ಷರತೆಗಿಂತ ಶೇ.೨೮ರಷ್ಟು ಕಡಿಮೆಯಿದೆ. ಕೊರಗರಲ್ಲಿ ಸಾಕ್ಷರತಾ ಪ್ರಮಾಣವು ಶೇ.೫೯.೮ ರಷ್ಟಿದ್ದು ಇದು ರಾಜ್ಯದ ಸರಾಸರಿ ಸಾಕ್ಷರತಾ ಪ್ರಮಾಣಕ್ಕಿಂತ ಶೇ.೮ ರಷ್ಟು ಕಡಿಮೆಯಿದ್ದು ಉಡುಪಿ ಮತ್ತು ದಕ್ಷಣ ಕನ್ನಡ ಜಿಲ್ಲೆಗಳ ಇತರರ ಸಾಕ್ಷರತೆಗೆ ಹೋಲಿಸಿದಾಗ ಅದು ಶೇ.೨೦ ರಿಂದ ೨೫ ರಷ್ಟು ಕಡಿಮೆಯಿದೆ. ಅವರ ಸಾಕ್ಷರತಾ ಪ್ರಮಾಣವನ್ನು ಹೆಚ್ಚಿಸುವ ಸಲುವಾಗಿ ಅಧಿಕ ಒತ್ತು ನೀಡಬೇಕಾಗಿದೆ ಮತ್ತು ಇದಕ್ಕಾಗಿ ಅಗತ್ಯ ಕಾರ್ಯಕ್ರಮಗಳನ್ನ ಕೈಗೊಳ್ಳಬೇಕಾದ ಅವಶ್ಯಕತೆ ಇದೆ.

ರಾಜ್ಯದಲ್ಲಿ ಪರಿಶಿಷ್ಟ ಬುಡಕಟ್ಟುಗಳ ಸಾಕ್ಷರತಾ ಪ್ರಮಾಣವು ೧೯೯೧-೨೦೦೧ರ ದಶಕದಲ್ಲಿ ಸಾಕಷ್ಟು ಸುಧಾರಿಸಿದ್ದರೂ ಇತರೆ ಉಳಿದ ಜನಸಂಖ್ಯೆಯ ಮಟ್ಟಕ್ಕೆ ಅವರು ಬರಬೇಕಾದರೆ ಅವರು ಕ್ರಮಿಸಬೇಕಾದ ದಾರಿ ಸಾಕಷ್ಟಿದೆ. ೨೦೦೧ರಲ್ಲಿಯ ಪರಿಶಿಷ್ಟ ಬುಡಕಟ್ಟುಗಳ ಸಾಕ್ಷರತಾ ಪ್ರಮಾಣವು (ಶೇ.೪೮.೩) ೧೯೯೧ ರಲ್ಲಿಯ ಒಟ್ಟು ಜನಸಂಖ್ಯೆಯ ಸಾಕ್ಷರತಾ ಪ್ರಮಾಣ (ಶೇ.೫೬.೦೪) ಕ್ಕಿಂತಲೂ ಕಡಿಮೆಯಿದ್ದು, ಸಾಕ್ಷರತೆ ಕುರಿತಂತೆ ಅವರು ಒಂದು ದಶಕಕ್ಕಿಂತಲೂ ಹಿಂದೆ ಇದ್ದಾರೆ. ಪುರುಷರ ಸಾಕ್ಷರತಾ ಪ್ರಮಾಣಕ್ಕಿಂತ ಮಹಿಳೆಯರ ಸಾಕ್ಷರತಾ ಪ್ರಮಾಣವು ಅಧಿಕ ಪ್ರಮಾಣದಲ್ಲಿ ಏರಿಕೆಯಾದರೂ ಸಹ, ಅದು ೨೦೦೧ರಲ್ಲಿಯ ಒಟ್ಟು ಮಹಿಳೆಯರ ಸಾಕ್ಷರತಾ ಪ್ರಮಾಣಕ್ಕಿಂತಲೂ ಕಡಿಮೆ ಇರುವುದರಿಂದ ಸಮಸ್ಯೆಯಾಗಿಯೇ ಉಳಿದಿದೆ. ಕೊಡಗು ಜಿಲ್ಲೆಯನ್ನು ಹೊರತುಪಡಿಸಿದರೆ, ಒಟ್ಟು ಅಧಿಕ ಸಾಕ್ಷರತಾ ಪ್ರಮಾಣ ಹೊಂದಿರುವ ಜಿಲ್ಲೆಗಳು ಪರಿಶಿಷ್ಟ ಬುಡಕಟ್ಟುಗಳ ಸಾಕ್ಷರತಾ ಪ್ರಮಾಣಗಳಲ್ಲಿಯೂ ಕೂಡ ಉತ್ತಮ ಸಾಧನೆ ತೋರಿವೆ.ಸಾಕ್ಷರತಾ ಪ್ರಮಾಣ ಕಡಿಮೆ ಇರುವಂಥ ರಾಯಚೂರು (ಶೇ.೪೮.೮೧) ಮತ್ತು ಗುಲ್ಬರ್ಗಾ (ಶೇ.೫೦.೦೧) ಜಿಲ್ಲೆಗಳಲ್ಲಿ ಪರಿಶಿಷ್ಟ ಪಂಗಡಗಳ ಸಾಕ್ಷರತಾ ಪ್ರಮಾಣ ಕಡಿಮೆ ಇರುವುದನ್ನ (ಕ್ರಮವಾಗಿ ಶೇ.೨೯.೦೧ ಶೇ.೩೨.೪೦) ಗಮನಿಸಿದಾಗ ಮೇಲಿನ ಸಂಗತಿಯು ವೇದ್ಯವಾಗುತ್ತದೆ. ಪರಿಶಿಷ್ಟ ಬುಡಕಟ್ಟುಗಳ ಮೇಲೆ ಶಿಕ್ಷಣ ಇಲಾಖೆಯ ಕಾರ್ಯಕ್ರಮಗಳು ನಿರೀಕ್ಷಿತ ಪರಿಣಾಮವನ್ನು ಬೀರಿಲ್ಲ ಎಂಬುದನ್ನು ಕೆಳಮಟ್ಟದ ಸಾಕ್ಷರತಾ ಪ್ರಮಾಣಗಳು ತಿಳಿಸುತ್ತವೆ.

ಕೋಷ್ಟಕ: ೫.೫ ಬುಡಕಟ್ಟು ಜನರ ಲಿಂಗವಾರು ಸಾಕ್ಷರತಾ ಪ್ರಮಾಣ (೧೯೯೧ ಮತ್ತು ೨೦೦೧)

ದೇಶ, ರಾಜ್ಯ	ಪ್ರದೇಶ	೧೯೯೧			೨೦೦೧		
		ಜನರು	ಪುರುಷ	ಮಹಿಳೆ	ಜನರು	ಪುರುಷ	ಮಹಿಳೆ
ಭಾರತ	ಒಟ್ಟು	೨೯.೬	೪೦.೬	೧೮.೨	೪೭.೧	೫೯.೨	೩೪.೮
	ನಗರ	–	–	–	೪೫.೦	೫೭.೪	೩೨.೪
	ಗ್ರಾಮೀಣ	–	–	–	೬೯.೧	೭೭.೮	೫೯.೯
ಕರ್ನಾಟಕ	ಒಟ್ಟು	೩೬.೦	೪೭.೯	೨೩.೬	೪೮.೩	೫೯.೭	೩೬.೬
	ನಗರ	–	–	–	೪೫.೩	೫೬.೯	೩೩.೩
	ಗ್ರಾಮೀಣ	–	–	–	೬೪.೬	೭೪.೪	೫೪.೩

ಆಧಾರ: ಭಾರತ ಜನಗಣತಿ ೧೯೯೧ ಮತ್ತು ೨೦೦೧

ಪರಿಶಿಷ್ಟ ಪಂಗಡಗಳ ಸಾಕ್ಷರತಾ ಪ್ರಮಾಣವನ್ನು ಕನಿಷ್ಟ ಪಕ್ಷ ರಾಜ್ಯದ ಸರಾಸರಿ ಮಟ್ಟಕ್ಕಾದರೂ ತರಲು ಉದ್ದೇಶಪೂರ್ವಕ ಪ್ರಯತ್ನಗಳು ಅವಶ್ಯಕವಾಗಿದೆ. ಬುಡಕಟ್ಟು ಸಂಸ್ಕೃತಿ ಭಾಷಾಧಾರಿತ ಪಠ್ಯಕ್ರಮವು ಈ ದಿಸೆಯಲ್ಲಿ ಉತ್ತಮ ಹೆಜ್ಜೆಯಾಗುವುದು. ಅನಕ್ಷರತೆ ಮತ್ತು ಬಡತನಗಳೆರಡೂ ಪರಸ್ಪರ ಒಂದಕ್ಕೊಂದು ಸೇರಿ ದುಃಸ್ಥಿತಿಯ ವಿಷ ಚಕ್ರವನ್ನು ನಿರ್ಮಾಣ ಮಾಡುವುದರಿಂದ ಸಮಾಜಕಾರ್ಯ ಸಮೂಹ ಕಾರ್ಯದ ಮೂಲಕ ಸ್ವಸಹಾಯ ಗುಂಪು ಗಳನ್ನ ರಚನೆಮಾಡಿ ಗ್ರಾಮ/ಶಾಲಾ ಮಟ್ಟದಲ್ಲಿ ಬಡತನ ನಿರ್ಮೂಲನ ಕಾರ್ಯಕ್ರಮಗಳು, ಶಾಲಾ ದಾಖಲಾತಿ, ಶಾಲೆಯಲ್ಲಿ ಮಕ್ಕಳು ಉಳಿಯುವಂತೆ ಮಾಡುವ ಕಾರ್ಯಕ್ರಮಗಳ ಬಗೆಗೆ ಜಾಗೃತಿಯನ್ನ ಮೂಡಿಸಿ ಆ ಮೂಲಕ ಪರಿಶಿಷ್ಟ ಬುಡಕಟ್ಟುಗಳ, ವಿಶೇಷವಾಗಿ ಆದಿಮ ಬುಡಕಟ್ಟುಗಳ ಬಡ ಜನತೆಗೆ ಶಿಕ್ಷಣದ ಸೌಲಭ್ಯಗಳು ದೊರೆಯುವಂತೆ ಮಾಡಬೇಕಾಗಿದೆ.

೫.೫.೩. ಶೈಕ್ಷಣಿಕ ಸ್ಥಾನಮಾನ

ಅತ್ಯಂತ ಕೆಳಮಟ್ಟದ ಸಾಕ್ಷರತೆ ಮತ್ತು ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢ ಶಿಕ್ಷಣಕ್ಕೆ ಸಂಬಂಧಿಸಿದಂತೆ ಆದಿಮ ಬುಡಕಟ್ಟುಗಳ ಸಾಧನೆ ನಿಕೃಷ್ಟವಾಗಿದೆ. ಬುಡಕಟ್ಟು ಪ್ರದೇಶಗಳ ಬಹಳಷ್ಟು ಶಾಲೆಗಳಲ್ಲಿ ಶಾಲೆ ಬಿಡುವವರ ಪ್ರಮಾಣ ಅಧಿಕವಿದೆ. ಅದರಲ್ಲೂ ಜೇನು ಕುರುಬ ಮತ್ತು ಕೊರಗ ವಿದ್ಯಾರ್ಥಿಗಳ ಪ್ರಮಾಣ ಈ ನಿಟ್ಟಿನಲ್ಲಿ ಹೆಚ್ಚಿದೆ. ಪ್ರಾಥಮಿಕ ಶಿಕ್ಷಣದ ಮೊದಲ ಮೂರರಿಂದ ನಾಲ್ಕು ವರ್ಷಗಳವರೆಗೆ ಮಕ್ಕಳು ಶಾಲೆಗೆ ದಾಖಲಾಗುವುದಿಲ್ಲ. ಆದಿಮ ಬುಡಕಟ್ಟುಗಳಲ್ಲಿ ಬಹಳಷ್ಟು ಬಾಲಕರು ಶಾಲೆಗೆ ದಾಖಲಾಗುವುದು ೭ ಅಥವಾ ೮ ನೆಯ ವಯಸ್ಸಿನಲ್ಲಿ ದಾಖಲಾದರೂ ಆ ಮಕ್ಕಳು ಶಾಲೆಗೆ ಹಾಜರಾಗುವುದಿಲ್ಲ. ಈ ಅಂಶವು ಆದಿಮ ಬುಡಕಟ್ಟು ಜನರಲ್ಲಿ ಅನಕ್ಷರತೆ ಹೆಚ್ಚಾಗಲು ಕಾರಣವಾಗಿದೆ. ಅಲ್ಲದೇ ವಿವಿಧ ಹಂತಗಳಲ್ಲಿ ಇವರಲ್ಲಿ ಶಾಲೆ ಬಿಡುವವರ ಸಂಖ್ಯೆಯೂ ಹೆಚ್ಚಾಗಿದೆ.

ಶಿಕ್ಷಣದ ಮೂಲವೆ ಶಾಲಾ ದಾಖಲಾತಿ, ಇಲ್ಲಿ ಪರಿಶಿಷ್ಟ ಬುಡಕಟ್ಟುಗಳನ್ನು ಹೊರತುಪಡಿಸಿ ಇತರೆ ಸಾಮಾಜಿಕ ಗುಂಪುಗಳ ಸಾಧನೆಯು ಉತ್ತಮವಾಗಿರುವುದನ್ನ ಕೆಳಗಿನ ಅಂಕಿ ಅಂಶಗಳ ಮೂಲಕ ಗಮನಿಸಬಹುದಾಗಿದೆ. ಉದಾಹರಣೆಗೆ ಪರಿಶಿಷ್ಟ ಪಂಗಡಗಳಲ್ಲಿ ೧ರಿಂದ ೮ನೇ ತರಗತಿವರೆಗಿನ ಒಟ್ಟು ದಾಖಲಾತಿ ಪ್ರಮಾಣವು ೨೦೦೧ರಲ್ಲಿ ಶೇ.೯೦.೧೨ ಆಗಿದ್ದು, ಇದು ಎಲ್ಲ ವಿದ್ಯಾರ್ಥಿಗಳ (ಶೇ.೯೮.೮೧) ಮತ್ತು ಪರಿಶಿಷ್ಟ ಜಾತಿಗಳವರ (ಶೇ.೧೦೪.೫೭)(ಕರ್ನಾಟಕ ಮಾನವ ಅಭಿವೃದ್ಧಿ ವರದಿ ೨೦೦೫:೨೫೮) ದಾಖಲಾತಿ ಪ್ರಮಾಣಕ್ಕಿಂತಲೂ ಗಣನೀಯ ಪ್ರಮಾಣದಲ್ಲಿ ಕಡಿಮೆ ಇದೆ.

ಚಿತ್ರ: ೫.೧ ಆಶ್ರಮ ಶಾಲೆಯ ಜೇನು ಕುರುಬ ಮಕ್ಕಳು ಚಿಕ್ಕಳಿ




ಪರಿಶಿಷ್ಟ ಬುಡಕಟ್ಟುಗಳ ಆದಿಮ ಬುಡಕಟ್ಟು ಮಕ್ಕಳು ಅತ್ಯಂತ ಕಡಿಮೆ ಅವಧಿಯನ್ನು ಶಾಲೆಯಲ್ಲಿ ಕಳೆಯುತ್ತಿದ್ದಾರೆ. ಈ ಅಂಶವು ಶಾಲಾ ಸೌಲಭ್ಯಗಳನ್ನು ಪಡೆಯುವಲ್ಲಿ ಇರುವ ಅಸಮಾನತೆಯ ಅಂಶವನ್ನು ತೋರಿಸುತ್ತದೆ. ಇದಲ್ಲದೆ ಶಾಲೆಯಿಂದ ಹೊರಗಿರುವ ಮಕ್ಕಳಲ್ಲಿ ಪರಿಶಿಷ್ಟ ಬುಡಕಟ್ಟುಗಳ ಮಕ್ಕಳೇ ಅಧಿಕ ಸಂಖ್ಯೆಯಲ್ಲಿದ್ದಾರೆ. ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆ ರಾಜ್ಯ ಮಟ್ಟದಲ್ಲಿ ಸರಾಸರಿ ಶೇ.೧.೫೪ ಆಗಿದ್ದರೆ, ಪರಿಶಿಷ್ಟ ಪಂಗಡದ ಮಕ್ಕಳಲ್ಲಿ ಅದು ಶೇ.೨.೪೨ ಆಗಿದೆ. ಶಾಲೆಯಿಂದ

ಹೊರಗುಳಿದ ಬಾಲಕಿಯರಲ್ಲಿ ಪರಿಶಿಷ್ಟ ಬುಡಕಟ್ಟುಗಳ ಬಾಲಕಿಯರ ಪ್ರಮಾಣವೇ (೨.೬೭) ಅಧಿಕವಾಗಿದೆ.

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ೨೦೦೪ರಲ್ಲಿ ಪರಿಶಿಷ್ಟ ಬುಡಕಟ್ಟುಗಳ ಕುಟುಂಬಗಳ ಕುರಿತು ಮಾದರಿ ಸಮೀಕ್ಷೆಯನ್ನು ಕೈಗೊಂಡಿದ್ದು ಅದು ೯ ರಿಂದ ೩೫ ವಯೋಮಾನದವರಿಂದ ಮಾಹಿತಿಯನ್ನು ಸಂಗ್ರಹಿಸಿದೆ. ಆ ಸಮೀಕ್ಷೆಯು ಹೆಣ್ಣು ಮಕ್ಕಳು ಶಾಲೆಯನ್ನು ಬಿಡಲು ಕೆಲವು ಕಾರಣಗಳನ್ನು ಗುರುತಿಸಿದೆ. ಅವುಗಳೆಂದರೆ (ಅ) ಮನೆಯಲ್ಲಿ ಗೃಹಕೃತ್ಯ ಕೆಲಸಗಳನ್ನು ಹೆಣ್ಣು ಮಕ್ಕಳಿಗೆ ಹಚ್ಚುವುದು. (ಬ) ಬಡ ತಂದೆ ತಾಯಿಯರಿಗೆ ಅವರ ಮಕ್ಕಳ ಶಿಕ್ಷಣದ ಹಣಕಾಸಿನ ಹೊರೆಯನ್ನು ಭರಿಸಲು ಸಾಧ್ಯವಾಗದಿರುವುದು. ಇದು ಬಡವರು ಶಿಕ್ಷಣದ ಹೆಚ್ಚಿನ ವೆಚ್ಚವನ್ನು ಭರಿಸಲು ಶಕ್ಯರಿಲ್ಲವೆಂಬುದನ್ನು ನಿರೂಪಿಸುತ್ತದೆ.

ಶಾಲೆಗೆ ಹೋಗಬೇಕಾದ ಮಕ್ಕಳು ಮನೆ ಕೆಲಸಗಳನ್ನು ಮಾಡಲು ಹಾಗೂ ಮನೆಯಲ್ಲಿರುವ ಮಕ್ಕಳನ್ನು ನೋಡಿಕೊಳ್ಳುವುದರ ಮೂಲಕ ತಾಯಂದಿರಿಗೆ ನೆರವಾಗುವ ಸಲುವಾಗಿ ಅಥವಾ ಕುಟುಂಬದ ಅಗತ್ಯತೆಗಳನ್ನ ಪೂರೈಸಲು ಕೂಲಿ ಕೆಲಸದಲ್ಲಿ ತೊಡಗುವುದೇ ಹೆಚ್ಚು. ಶಾಲೆಯನ್ನು ಬಿಡುವ ಮಕ್ಕಳಲ್ಲಿ ಹೆಣ್ಣು ಮಕ್ಕಳೇ ಹೆಚ್ಚಾಗಿದ್ದಾರೆ. ಇತ್ತೀಚೆಗೆ ಪ್ರಾರಂಭವಾದ ಆಶ್ರಮ ಶಾಲೆಗಳು ಮತ್ತು ಶಾಲಾ ಮಕ್ಕಳಿಗೆ ಮಧ್ಯಾಹ್ನ ಊಟದ ಕಾರ್ಯಕ್ರಮ 'ಅಕ್ಷರ ದಾಸೋಹ'ವು ಮಕ್ಕಳ ದಾಖಲಾತಿ ಮತ್ತು ಮಕ್ಕಳು ಶಾಲೆಯಲ್ಲಿ ಉಳಿಯುವಂತೆ ಮಾಡುವಲ್ಲಿ ಉತ್ತಮ ಪರಿಣಾಮವನ್ನು ಬೀರುತ್ತಿವೆ. ಲಭ್ಯವಿರುವ ಅಂಕಿ ಅಂಶಗಳ ಪ್ರಕಾರ ಪ್ರೌಢ ಶಿಕ್ಷಣದಲ್ಲಿಯ ದಾಖಲಾತಿ ಪ್ರಮಾಣವು ಪ್ರಾಥಮಿಕ ಶಿಕ್ಷಣದಲ್ಲಿನ ದಾಖಲಾತಿಗಿಂತಲೂ ಕಡಿಮೆ ಇದೆ.

ವೃತ್ತಚಿತ್ರ: ೫.೧ ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆ



ಆಧಾರ: ಮಕ್ಕಳ ಜನಗಣತಿ, ಸಾರ್ವಜನಿಕ ಶಿಕ್ಷಣ ಇಲಾಖೆ, ೨೦೦೫

ಇದು ಒಟ್ಟಾರೆ ಪರಿಶಿಷ್ಟ ಬುಡಕಟ್ಟುಗಳ ಸ್ಥಿತಿಯಾದರೆ ಆದಿಮ ಬುಡಕಟ್ಟುಗಳ ಪರಿಸ್ಥಿತಿ ಇದಕ್ಕಿಂತಲೂ ಶೋಚನೀಯವಾಗಿದೆ. ಅಧ್ಯಯನಕ್ಕೆ ಆಯ್ದುಕೊಂಡ ೨೧೪ ಹಾಡಿಗಳ ೩೦೯೦ ಕುಟುಂಬಗಳಲ್ಲಿ ಆದಿಮ ಬುಡಕಟ್ಟಾದ ಜೇನು ಕುರುಬರಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆಯು ಶೇ.೧೫ರಷ್ಟಿದ್ದರೆ, ಕೊರಗರಲ್ಲಿ ಶೇ.೧೦ರಷ್ಟಿದೆ. ಒಂದರಿಂದ ಹತ್ತನೇ ತರಗತಿಗಳಲ್ಲಿ ಪರಿಶಿಷ್ಟ ಬುಡಕಟ್ಟುಗಳ ಒಟ್ಟು ದಾಖಲಾತಿ ಪ್ರಮಾಣವು ೨೦೦೧ರಲ್ಲಿ ಶೇ.೮೧.೧೭ ಆಗಿದ್ದು

ಅದು ಪರಿಶಿಷ್ಟ ಜಾತಿ (ಶೇ.೯೪.೩೧) ಮತ್ತು ಇತರೆ ಎಲ್ಲಾ ವಿದ್ಯಾರ್ಥಿಗಳಿಗಿಂತಲೂ (ಶೇ.೮೯.೯೫) ಗಣನೀಯ ಪ್ರಮಾಣದಲ್ಲಿ ಕಡಿಮೆ ಇದೆ. ಗಂಡು (ಶೇ.೮೫.೫೯) ಮತ್ತು ಹೆಣ್ಣು ಮಕ್ಕಳ (ಶೇ.೭೬.೫೧) ನಡುವಿನ ಅಂತರವೂ ಸಹ ಪರಿಶಿಷ್ಟ ಜಾತಿ ಮತ್ತು ಇತರೆ ಎಲ್ಲಾ ವಿದ್ಯಾರ್ಥಿಗಳಲ್ಲಿ ಕಂಡು ಬರುವ ಅಂತರಕ್ಕಿಂತಲೂ ಅಧಿಕವಾಗಿದೆ.

ಪರಿಶಿಷ್ಟ ಬುಡಕಟ್ಟುಗಳ ವಿದ್ಯಾರ್ಥಿಗಳು ೭ನೇ ತರಗತಿಯಲ್ಲಿ ೨೦೦೨ರ ಪರೀಕ್ಷೆಯಲ್ಲಿ ಶೇ.೮೮.೨೫ರ ಫಲಿತಾಂಶದೊಂದಿಗೆ ಉತ್ತಮವಾದ ಸಾಧನೆಯನ್ನು ಮಾಡಿದ್ದಾರೆ. ಇದು ಎಲ್ಲಾ ವಿದ್ಯಾರ್ಥಿಗಳ ಶೇಕಡವಾರು ಸಾಧನೆ (ಶೇ.೮೭.೩೧) ಮತ್ತು ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ಶೇಕಡಾವಾರು (ಶೇ.೮೭.೮೭) ಸಾಧನೆಗಿಂತಲೂ ಉತ್ತಮವಾಗಿದೆ. ಇತರೆ ಸಾಮಾಜಿಕ ಗುಂಪುಗಳಲ್ಲಿರುವಂತೆ ಹೆಣ್ಣು ಮಕ್ಕಳು(ಶೇ.೮೯.೪೧) ಗಂಡು ಮಕ್ಕಳಿಗಿಂತ (ಶೇ.೮೭.೩೯) ಮುನ್ನಡೆಯಲ್ಲಿದ್ದಾರೆ. ಹೆಣ್ಣು ಮಕ್ಕಳನ್ನು ಸಾಮಾಜಿಕ–ಆರ್ಥಿಕ ತೊಡಕುಗಳಿಂದ ಮುಕ್ತಗೊಳಿಸಿ ಅವರು ಶಾಲೆಯಿಂದ ಹೊರಗುಳಿಯುವುದನ್ನು ತಪ್ಪಿಸಿದರೆ ಅವರು ಶೈಕ್ಷಣಿಕವಾಗಿ ಉತ್ತಮ ಸಾಧನೆಯನ್ನು ಮಾಡಬಲ್ಲವರಾಗಿದ್ದಾರೆ ಎಂಬುದನ್ನ ತಿಳಿಸುತ್ತದೆ. ೨೦೦೧ ರಿಂದ ೨೦೦೫ರ ವರೆಗಿನ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶಗಳನ್ನು ಗಮನಿಸಿದಾಗ ಸ್ಪಷ್ಟವಾಗುವ ಅಂಶವೆಂದರೆ ಪರಿಶಿಷ್ಟ ಪಂಗಡದ ಹೆಣ್ಣು ಮಕ್ಕಳು, ಪರಿಶಿಷ್ಟ ಪಂಗಡದ ಗಂಡುಮಕ್ಕಳು, ಪರಿಶಿಷ್ಟ ಜಾತಿಯ ಹೆಣ್ಣುಮಕ್ಕಳು ಮತ್ತು ಗಂಡುಮಕ್ಕಳಿಗೆ ಹೋಲಿಸಿದಾಗ ಉತ್ತಮ ಫಲಿತಾಂಶ ತರುವಲ್ಲಿ ಸಫಲರಾಗಿದ್ದಾರೆ.

ಕೋಷ್ಟಕ : ೫.೬ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳ ಪ್ರಮಾಣ

ವರ್ಷ	ಒಟ್ಟಾರೆ		ಪರಿಶಿಷ್ಟ ಜಾತಿ		ಪರಿಶಿಷ್ಟ ಪಂಗಡ	
	ಬಾಲಕಿಯರು	ಬಾಲಕರು	ಬಾಲಕಿಯರು	ಬಾಲಕರು	ಬಾಲಕಿಯರು	ಬಾಲಕರು
೨೦೦೧	೫೨.೪೪	೪೦.೨೨	೩೮.೦೯	೩೯.೦೫	೪೦.೪೭	೩೮.೨೪
೨೦೦೨	೫೩.೭೬	೪೮.೫೪	೩೭.೭೪	೩೫.೯೬	೩೯.೪೭	೩೪.೯೧
೨೦೦೩	೫೮.೫೪	೫೨.೧೯	೪೧.೧೫	೩೯.೦೬	೪೩.೪೭	೩೯.೮೪
೨೦೦೪	೬೮.೦೬	೬೧.೭೪	೫೩.೩೦	೫೦.೪೧	೫೫.೮೦	೫೪.೦೧
೨೦೦೫	೬೬.೧೦	೫೯.೩೦	೫೦.೩೧	೪೭.೨೯	೫೫.೧೮	೪೯.೫೫

ಆಧಾರ: ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಬೆಂಗಳೂರು

ಮೇಲಿನ ಕೋಷ್ಟಕವನ್ನು ಗಮನಿಸಿದಾಗ ೨೦೦೫ರಲ್ಲಿ ಪರಿಶಿಷ್ಟ ಬುಡಕಟ್ಟುಗಳ ಬಾಲಕಿಯರು ಶೇ.೫೫.೧೮ರಷ್ಟು ಉತ್ತೀರ್ಣರಾಗಿದ್ದಾರೆ. ಇದು ಪರಿಶಿಷ್ಟ ಬುಡಕಟ್ಟುಗಳ ಮತ್ತು ಪರಿಶಿಷ್ಟ ಜಾತಿಯ ಹುಡುಗರು ಮತ್ತು ಪರಿಶಿಷ್ಟ ಜಾತಿಯ ಬಾಲಕಿಯರ ಫಲಿತಾಂಶಕ್ಕಿಂತಲೂ ಅಧಿಕವಾಗಿದೆ. ೨೦೦೧ ರಿಂದ ೨೦೦೪ ರವರೆಗಿನ ಪಲಿತಾಂಶವು ಸಹ ಇದನ್ನ ದೃಢಪಡಿಸುತ್ತದೆ. ಆರ್ಥಿಕ ನಿರ್ದೇಶನಾಲಯದ ಸಮೀಕ್ಷೆಯು (ಡಿಇಎಸ್:೨೦೦೪ಎ) ಗುರುತಿಸಿದಂತೆ ಪರಿಶಿಷ್ಟ ಬುಡಕಟ್ಟುಗಳಲ್ಲಿ ವಿಶೇಷವಾಗಿ ಶೈಕ್ಷಣಿಕ ಮಟ್ಟವು ಹೆಚ್ಚಿದಂತೆ ಶಾಲೆಯನ್ನು ಬಿಡುವವರ ಸಂಖ್ಯೆ ಅಧಿಕವಾಗುತ್ತದೆ(ಡಿಇಎಸ್:೨೦೦೪ಎ). ಮಾದರಿ ಸಮೀಕ್ಷೆಯಲ್ಲಿ ಕೇವಲ ಶೇ.೦.೧೮ ಮಹಿಳಾ ಪದವೀಧರರು ಮತ್ತು ಶೇ.೧.೪೦ ಪುರುಷ ಪದವೀಧರರು ಹಾಗೂ ಶೇ.೦.೦೨ ರಷ್ಟು ಪರಿಶಿಷ್ಟ ಬುಡಕಟ್ಟುಗಳ ಮಹಿಳೆಯರು ಸ್ನಾತಕೋತ್ತರ

ಪದವಿಯನ್ನು ಪಡೆದಿದ್ದಾರೆ ಎಂಬುದು ತಿಳಿಯುತ್ತದೆ. ಬಡತನದ ಕಾರಣದಿಂದಾಗಿ ಪರಿಶಿಷ್ಟ ಬುಡಕಟ್ಟುಗಳ ವಿದ್ಯಾರ್ಥಿಗಳು ತಮ್ಮ ಸಾಮಾನ್ಯ ತೃತೀಯ ಹಂತದ ಶಿಕ್ಷಣಕ್ಕಾಗಿ ಸರಕಾರಿ ಕಾಲೇಜುಗಳನ್ನು ಹೆಚ್ಚಾಗಿ ಅವಲಂಬಿಸಿದ್ದಾರೆ ಎಂಬುದನ್ನೂ ಸಹ ತಿಳಿಯಪಡಿಸುತ್ತದೆ.

೨೦೦೩-೦೪ರ ಸಾಲಿನಲ್ಲಿ ಸರಕಾರಿ ಕಾಲೇಜಿನ ಒಟ್ಟು ವಿದ್ಯಾರ್ಥಿಗಳಲ್ಲಿ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಶೇ.೪.೪೬ ರಷ್ಟಿದ್ದರೆ ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಅದು ಶೇ.೨.೮೦ ರಷ್ಟಾಗಿತ್ತು. ಹುಡುಗರ ಶಾಲಾ ದಾಖಲಾತಿ (೩,೨೧೯) ಮತ್ತು ಹುಡುಗಿಯರ ದಾಖಲಾತಿ (೧,೬೫೨)ಗಳ ನಡುವೆ ಗುರುತರವಾದ ಅಸಮಾನತೆ ಇದೆ. ಈ ಅಂತರವು ಸರಕಾರಿ ಮತ್ತು ಖಾಸಗಿ ಅನುದಾನಿತ ಕಾಲೇಜುಗಳ ಪದವಿ ತರಗತಿಗಳೆರಡರಲ್ಲೂ ಏಕ ಪ್ರಕಾರವಾಗಿದೆ. ಎಂಜಿನಿಯರಿಂಗ್ ಕಾಲೇಜುಗಳಲ್ಲಿ ೧೯೯೬-೨೦೦೦ರ ಅವಧಿಯಲ್ಲಿ ಶೇ.೦.೧ರಷ್ಟಿದ್ದ ಪರಿಶಿಷ್ಟ ಬುಡಕಟ್ಟುಗಳ ವಿದ್ಯಾರ್ಥಿಗಳ ದಾಖಲಾತಿ ಸರಾಸರಿಯು ೨೦೦೨-೦೩ರ ಹೊತ್ತಿಗೆ ಶೇ.೧.೭ಕ್ಕೇರಿತು. ಎಂಜಿನಿಯರಿಂಗ್ ಡಿಪ್ಲೋಮಾ ಕೋರ್ಸುಗಳಲ್ಲಿ ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳ ದಾಖಲಾತಿಯು ಕನಿಷ್ಟ ಶೇ.೦.೨ರಷ್ಟಿದ್ದು (ವಾರ್ಷಿಕ ವರದಿಗಳು: ತಾಂತ್ರಿಕ ನಿರ್ದೇಶನಾಲಯ, ವಿಶ್ವೇಶ್ವರಯ್ಯ ವಿಶ್ವವಿದ್ಯಾಲಯ,೨೦೦೨-೦೩). ಆದಿಮ ಬುಡಕಟ್ಟುಗಳ ಪರಿಸ್ಥಿತಿ ಇದಕ್ಕಿಂತಲೂ ಶೋಚನೀಯವಾಗಿದೆ. ಅಧ್ಯಯನಕ್ಕೆ ಆಯ್ದುಕೊಂಡ ಒಟ್ಟು ಹಾಡಿಗಳಲ್ಲಿ ಎಸ್ಎಸ್ಎಲ್‌ಸಿ ತೇರ್ಗಡೆಯಾಗಿರುವವರ ಸಂಖ್ಯೆ ಜೇನುಕುರುಬರಲ್ಲಿ, ೧೫ (೯ ಬಾಲಕಿಯರು ಮತ್ತು ೬ ಬಾಲಕರು) ಮತ್ತು ಕೊರಗರಲ್ಲಿ ೭೨ (೪೦ ಬಾಲಕಿಯರು ಮತ್ತು ೩೨ ಬಾಲಕರು) ಇವರಲ್ಲಿ ಹಲವರು ಬಡತನ ಮತ್ತು ತಮ್ಮಲ್ಲಿನ ಹಿಂಜರಿಕೆ ಸ್ವಭಾವದಿಂದಾಗಿ ಕಾಲೇಜು ಶಿಕ್ಷಣ/ಮುಂದಿನ ವ್ಯಾಸಾಂಗವನ್ನ ಮೊಟಕುಗೊಳಿಸಿದ್ದಾರೆ. ಜೇನು ಕುರುಬರಲ್ಲಿ ಸ್ವಾತಂತ್ರ್ಯ ಪಡೆದಂದಿನಿಂದ ಇಲ್ಲಿಯವರೆಗೂ ಕೇವಲ ಒಬ್ಬ ಮಹಿಳಾ (ವೀಣಾ ನಾಗಾಪುರ ಹಾಡಿ) ಪದವೀಧರೆ ಮಾತ್ರ ಇದ್ದಾಳೆ. ಉಳಿದಂತೆ ಅವರಲ್ಲಿ ಯಾವುದೇ ಡಾಕ್ಟರ್/ಇಂಜಿನಿಯರಿಂಗ್ ಮಾಡಿರುವ ಅಭ್ಯರ್ಥಿಗಳಿರುವುದಿಲ್ಲ. ಶಿಕ್ಷಣಕ್ಕೆ ಸಂಬಂಧಿಸಿದಂತೆ ಕೊರಗರ ಸ್ಥಿತಿ ಜೇನು ಕುರುಬರಿಗಿಂತ ಉತ್ತಮ ಹಂತದಲ್ಲಿದೆ. ಕೊರಗರಲ್ಲಿ ನಾಲ್ಕು ಅಭ್ಯರ್ಥಿಗಳು ಸ್ನಾತಕ ಪದವಿ ಮುಗಿಸಿದ್ದಾರೆ. ಉಳಿದಂತೆ ಇವರಲ್ಲಿಯೂ ಯಾರೂ ವೈದ್ಯಕೀಯ/ಇಂಜಿನಿಯರಿಂಗ್ ಶಿಕ್ಷಣವನ್ನ ಪಡೆದಿರುವುದಿಲ್ಲ.


ಕೋಷ್ಟಕ: ೫.೭ ಕರ್ನಾಟಕ ರಾಜ್ಯದ ಪರಿಶಿಷ್ಟರ ಶಿಕ್ಷಣ ಮಟ್ಟ

ಶಿಕ್ಷಣ ಮಟ್ಟ	ಪುರುಷ	ಮಹಿಳೆ	ಪಪಂ	ಪಜಾ
ಸಾಕ್ಷರರಲ್ಲದವರು	೪೮.೧೯	೫೫.೩೦	೫೧.೬೧	೪೯.೦೭
ಅನೌಪಚಾರಿಕ	೧.೬೮	೦.೭೨	೧.೨೨	೧.೭೮
ಪೂರ್ವ ಪ್ರಾಥಮಿಕ	೧೭.೦೧	೧೮.೪೩	೧೭.೬೯	೧೬.೮೯
ಪ್ರಾಥಮಿಕ	೧೦.೭೦	೧೧.೬೮	೧೧.೧೭	೧೧.೮೧
ಹಿರಿಯ ಪ್ರಾಥಮಿಕ	೧೦.೫೩	೭.೩೨	೮.೯೯	೯.೭೮
ಪ್ರೌಢ ಶಾಲೆ	೭.೨೯	೫.೨೭	೬.೩೨	೬.೯೬
ಪಿಯುಸಿ	೨.೩೬	೦.೬೬	೧.೫೪	೨.೩೦
ಡಿಪ್ಲೋಮಾ	೦.೩೪	೦.೧೨	೦.೨೩	೦.೨೫
ಸ್ನಾತಕೋತ್ತರ ಪದವಿ	೦.೧೫	೦.೦೨	೦.೦೯	೦.೧೩
ತಾಂತ್ರಿಕ ಪದವಿ	೦.೦೬	೦.೦೦	೦.೦೩	೦.೦೭
ತಾಂತ್ರಿಕ ಸ್ನಾತಕೋತ್ತರ	೦.೦೫	೦.೦೦	೦.೦೩	೦.೦೩
ಕರಕುಶಲತೆಗಳು (ಜೆಓಸಿ)	೦.೨೩	೦.೩೦	೦.೨೭	೦.೦೭

ಆಧಾರ: ಮಾದರಿ ಸಮೀಕ್ಷೆ, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ೨೦೦೪ ಎ

ಜೇನುಕುರುಬ ಮತ್ತು ಕೊರಗ ಆದಿವಾಸಿ ಬುಡಕಟ್ಟುಗಳಲ್ಲಿ ಇತರೆ ವರ್ಗಗಳಿಗೆ ಹೋಲಿಸಿದಲ್ಲಿ ಸಾಮಾನ್ಯವಾಗಿ ಕಂಡುಬರುವ ಲಕ್ಷಣವೆಂದರೆ ಅತ್ಯಂತ ಕಡಿಮೆ ಸಾಕ್ಷರತೆಯ ಪ್ರಮಾಣ ಮತ್ತು ಶಿಕ್ಷಣದ ಬಗೆಗೆ ಅವರಿಗಿರುವ ನಿರಾಸಕ್ತಿ. ೨೦೦೧ ರ ಜನಗಣತಿಯ ಪ್ರಕಾರ ಜೇನು ಕುರುಬರ ಸಾಕ್ಷರತೆ ಶೇಕಡ ೪೮ರಷ್ಟಿದ್ದರೆ ಕೊರಗರಲ್ಲಿ ಶೇಕಡ ೫೯.೮ ರಷ್ಟಿದೆ. ಆಯಾ ಜಿಲ್ಲೆಗಳಿಗೆ ಮತ್ತು ರಾಜ್ಯದ ಸರಾಸರಿ ಸಾಕ್ಷರತೆಗೆ ಹೋಲಿಸಿದಲ್ಲಿ ಈ ಎರಡು ಆದಿವಾಸಿ ಬುಡಕಟ್ಟುಗಳ ಸಾಕ್ಷರತೆಯ ಅಂತರ ಶೇ.೨೫ ರಿಂದ ೩೦ ರಷ್ಟು ಹಿಂದುಳಿದಿರುವುದನ್ನ ಕಾಣಬಹುದಾಗಿದೆ.

ಸ್ಥಂಬಚಿತ್ರ : ೫.೧ ಜೇನುಕುರಬ ಮತ್ತು ಕೊರಗರಲ್ಲಿ ಶಾಲೆ ಬಿಡುವವರ ಸರಾಸರಿ ಪ್ರಮಾಣ



ಆಧಾರ: ಶಿಕ್ಷಣ ಇಲಾಖೆಯ ಸಮೀಕ್ಷಾ ವರದಿ ೨೦೦೭

ಜೇನು ಕುರುಬ ಮತ್ತು ಕೊರಗ ಆದಿವಾಸಿ ಬುಡಕಟ್ಟುಗಳ ಶೇ.೮೦ರಷ್ಟು ಜನಸಂಖ್ಯೆ ಬಡತನ ರೇಖೆಗಿಂತ ಕೆಳಗಿರುವುದರಿಂದ ಮತ್ತು ಬಹಳಷ್ಟು ಮಂದಿ ವಲಸೆ ಕೂಲಿಗಳಾಗಿರುವುದರಿಂದ ತಮ್ಮ ದಿನನಿತ್ಯದ ಅಗತ್ಯತೆಗಳಿಗೆ ಬೇಕಿರುವ ಹಣಕಾಸಿನ ಗಳಿಕೆಯತ್ತ ಹೆಚ್ಚು ಒತ್ತನ್ನು ಕೊಡುತ್ತಾರೆ. ಶಾಲೆಗೆ ಹೋಗುವ ತಮ್ಮ ಮಕ್ಕಳನ್ನು ಅವರು ತಮ್ಮೊಂದಿಗೆ ಕೂಲಿ ಕೆಲಸಕ್ಕೆ ಕರೆದೊಯ್ಯುತ್ತಾರೆ. ಅಲ್ಲದೆ ಅವರ ಮಕ್ಕಳು ಸಹ ತಮ್ಮ ತಂದೆ ತಾಯಿಯರೊಂದಿಗೆ ಹೆಚ್ಚು ಹೊಂದಿಕೊಂಡಿರುವುದರಿಂದ ಶಾಲೆಗೆ ಹೋಗುವದನ್ನ ನಿಲ್ಲಿಸಿ ತಂದೆ ತಾಯಿರೊಂದಿಗೆ ವಲಸೆ ಹೊಗುವುದು ಸಾಮಾನ್ಯವಾಗಿದೆ. ಆದ್ದರಿಂದ ಕಿರಿಯ ಪ್ರಾಥಮಿಕ ಶಾಲೆಯ ಮಟ್ಟದಲ್ಲಿ ಶೇ.೨೫ ರಷ್ಟು, ಹಿರಿಯ ಪ್ರಾಥಮಿಕ ಮಟ್ಟದಲ್ಲಿ ಶೇ.೩೫ ರಷ್ಟು ಮತ್ತು ಪ್ರೌಢ ಶಾಲೆಯ ಮಟ್ಟದಲ್ಲಿ ಶೇ.೫೦ ರಷ್ಟು ಜೇನು ಕುರುಬರ ಮಕ್ಕಳು ಶಾಲೆ ಬಿಡುವವರಾಗಿದ್ದಾರೆ. ಹಾಗೆ ಕೊರಗರಲ್ಲಿ ಶಾಲೆಯನ್ನು ಬಿಡುವ ಮಕ್ಕಳ ಪ್ರಮಾಣವು ಜೇನುಕುರುಬರಿಗಿಂತ ಸ್ವಲ್ಪ ಕಡಿಮೆ ಇದೆ. ಕೊರಗರಲ್ಲಿ ಕಿರಿಯ ಪ್ರಾಥಮಿಕ ಶಾಲೆಯ ಮಟ್ಟದಲ್ಲಿ ಶೇ ೧೫ ರಷ್ಟು, ಹಿರಿಯ ಪ್ರಾಥಮಿಕ ಮಟ್ಟದಲ್ಲಿ ಶೇ.೨೦ ರಷ್ಟು ಮತ್ತು ಪ್ರೌಢ ಶಾಲೆಯ ಮಟ್ಟದಲ್ಲಿ ೩೦ ರಷ್ಟು ಮಕ್ಕಳು ಗೈರು ಹಾಜರಿಯಾಗುವುದನ್ನು ಕಾಣಬಹುದಾಗಿದೆ.

೫.೬. ಆರ್ಥಿಕ ಸ್ಥಾನಮಾನ

ಪರಿಶಿಷ್ಟ ಬುಡಕಟ್ಟುಗಳ ಆರ್ಥಿಕತೆಯಲ್ಲಿ ಜನರು ತಮ್ಮ ಜೀವನಾಧಾರಕ್ಕಾಗಿ ಕೃಷಿ ಮತ್ತು ಬೇಟೆ ಮತ್ತು ಆಹಾರ ಸಂಗ್ರಹಣೆಯನ್ನು ಆಧರಿಸಿದ್ದಾರೆ. ಬುಡಕಟ್ಟು ಜನತೆ ಭೂಮಿಯನ್ನು ಸಾಮಾನ್ಯ ಸಂಪನ್ಮೂಲವೆಂದು ಪರಿಗಣಿಸಿದ್ದರೂ ಅವರು ಭೂಮಿಯನ್ನು ಹೊಂದಿರುವುದು

ಅತ್ಯಂತ ವಿರಳವೆನ್ನಬಹುದು. ಅರಣ್ಯ ಇಲಾಖೆಯಿಂದ ಅವರನ್ನ ಒಕ್ಕಲೆಬ್ಬಿಸಲಾರಂಭಿಸಿದ್ದರಿಂದ ಅವರು ತಮ್ಮ ಭೂಮಿಯನ್ನು ಕಳೆದುಕೊಳ್ಳಬೇಕಾಯಿತು. ಇದರಿಂದ ಬಹುತೇಕ ಅವರು ಸಣ್ಣ ಮತ್ತು ಅತಿಸಣ್ಣ ಭೂಹಿಡುವಳಿದಾರರಾಗಿಯೇ ಉಳಿಯಬೇಕಾಗಿದೆ. ೨೦೦೧ರ ಜನಗಣತಿಯ ಅಂಕಿ–ಅಂಶಗಳು ತಿಳಿಸುವಂತೆ ಪರಿಶಿಷ್ಟ ಪಂಗಡದ ಮುಕ್ಕಾಲು ಪಾಲು ಜನರು ದುಡಿಮೆಗಾರರ ವರ್ಗದಲ್ಲಿದ್ದಾರೆ. ಆ ದುಡಿಮೆಗಾರರಲ್ಲಿ ಶೇ.೪೧.೭ ರಷ್ಟು ಮಹಿಳೆಯರಾಗಿದ್ದಾರೆ. ಶೇ.೮೫ ಕ್ಕಿಂತಲೂ ಅಧಿಕ ದುಡಿಮೆಗಾರರು ಗ್ರಾಮೀಣ ಪ್ರದೇಶದಲ್ಲಿದ್ದಾರೆ. ಮುಖ್ಯ ಕೆಲಸಗಾರರು ಶೇ.೭೬.೪ರಷ್ಟು ಇದ್ದು ಅವರು ಮುಖ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ಕೇಂದ್ರೀಕೃತವಾಗಿದ್ದಾರೆ. ಅದರಲ್ಲಿ ಶೇ.೫೧.೫ ಜನರು ಕೂಲಿ ಕೆಲಸದಲ್ಲಿ ನಿರತರಾಗಿದ್ದಾರೆ.

ಕೋಷ್ಟಕ: ೫.೮ ಕರ್ನಾಟಕ ಬುಡಕಟ್ಟು ಕೆಲಸಗಾರರ ವಿವರ (೨೦೦೧)

ಪ್ರವರ್ಗ	ಒಟ್ಟು			ಗ್ರಾಮೀಣ			ನಗರ		
	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ
ಕೆಲಸಗಾರರು	೪೯.೪	೫೮.೩	೪೧.೭	೫೧.೫	೫೭.೬	೪೫.೩	೩೭.೬	೫೨.೬	೨೧.೯
ಕೆಲಸಗಾರರಲ್ಲದವರು	೫೦.೬	೪೧.೭	೫೮.೩	೪೮.೫	೪೨.೪	೫೪.೭	೬೨.೪	೪೭.೪	೭೮.೧
ಮುಖ್ಯ ಕೆಲಸಗಾರರು	೭೭.೯	೮೭.೯	೬೩.೮	೭೬.೪	೮೭.೨	೬೨.೩	೮೯.೧	೯೨.೪	೮೧.೦
ಅರೆಕಾಲಿಕ ಕೆಲಸಗಾರರು	೨೨.೧	೧೨.೧	೩೬.೨	೨೩.೬	೧೨.೮	೩೭.೭	೧೦.೯	೭.೬	೧೮.೯

ಆಧಾರ: ಭಾರತ ಜನಗಣತಿ ೨೦೦೧

೫.೬.ಅ. ಆದಿವಾಸಿ ಬುಡಕಟ್ಟುಗಳ ಕೃಷಿ ಜೀವನ

ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಒಟ್ಟಾರೆ ಕುಟುಂಬಗಳಲ್ಲಿ ಶೇ.೬೩.೪ ರಷ್ಟು ಕುಟುಂಬಗಳು ಸಣ್ಣ ಮತ್ತು ಅತಿ ಸಣ್ಣ ಹಿಡುವಳಿಗಳನ್ನು ಹೊಂದಿದ್ದು ಅವರಲ್ಲಿ ಕೇವಲ ಶೇ.೩೫ ರಷ್ಟು ಕುಟುಂಬಗಳು ಮಾತ್ರ ನಿರಂತರ ಕೃಷಿ ಚಟುವಟಿಕೆಯಲ್ಲಿ ತೊಡಗಿವೆ. ಅವರು ಸಾಮಾನ್ಯವಾಗಿ ಮಳೆಗಾಲದಲ್ಲಿ ಮಿಶ್ರ ಬೇಸಾಯ ಪದ್ಧತಿಯನ್ನನುಸರಿಸಿ ತಮ್ಮ ಒಣ ಭೂಮಿಯಲ್ಲಿ ಮಳೆಯಾಶ್ರಿತ ವಿವಿಧ ಬೆಳೆಗಳಾದ ರಾಗಿ, ಹುರುಳಿ, ಅವರೆ, ಸಾಸುವೆ, ಅಲಸಂದಿ, ಹುಚ್ಚೆಳ್ಳು, ಸಾಮೆ, ಕಂಬು, ಬಿಳಿ ಜೋಳ, ಇತ್ಯಾದಿ ಬೆಳಗಳನ್ನು ಬೆಳೆಯುತ್ತಾರೆ. ಅವರ ಬಹಳಷ್ಟು ಕುಟುಂಬಗಳು ಅರಣ್ಯದಂಚಿನಲ್ಲಿರುವುದರಿಂದ ಅವರ ಹೊಲಗಳಿಗೆ ರಕ್ಷಣೆಯಿಲ್ಲದ ಕಾರಣ ಬಿತ್ತಿದ ಬೆಳೆಗಳನ್ನು ಕಾಡು ಪ್ರಾಣಿಗಳು ತಿಂದು ನಾಶ ಪಡಿಸುವ ಸಂಭವಗಳು ಹೆಚ್ಚಾಗಿವೆ.

ಚಿತ್ರ: ೫.೨ ಜೇನು ಕುರುಬರ ಕೃಷಿ ಭೂಮಿ, ನಾಗಾಪುರಹಾಡಿ



೫.೬.ಆ. ಭೂ ಒಡೆತನ ಮತ್ತು ನೀರಾವರಿ

ಜೇನು ಕುರುಬ ಮತ್ತು ಕೊರಗ ಆದಿಮ ಬುಡಕಟ್ಟು ಜನರು ಮೂಲತಃ ಕೃಷಿಕರಲ್ಲದಿದ್ದುದರಿಂದ ಅವರಿಗೆ ಕೃಷಿಗಿಂತಲೂ ಬೇಟೆ ಮತ್ತು ಕೃಷಿ ಕೂಲಿಯಲ್ಲಿ ಹೆಚ್ಚು ಆಸಕ್ತಿ ಇರುವಂತೆ ಕಂಡುಬರುತ್ತದೆ. ಅಂಕಿ-ಅಂಶಗಳ ಪ್ರಕಾರ ಆ ಎರಡೂ ಸಮುದಾಯಗಳು ಕೆಳಮಟ್ಟದ ಉತ್ಪಾದಕತೆಯನ್ನು ನೀಡುವ ಆಸ್ತಿಗಳನ್ನು ಹೊಂದಿವೆ. ಹಾಗೇ ಕೆಳಮಟ್ಟದ ಸಾಕ್ಷರತೆ, ವೃತ್ತಿ ಕೌಶಲ್ಯಗಳ ಕೊರತೆ ಅವರನ್ನು ಕಡಿಮೆ ಸಂಭಾವನೆ ತರುವಂಥ ಕೆಲಸಗಳಿಗೆ ತಳ್ಳಿವೆ. ಅವರ ತಿಂಗಳ ತಲಾವಾರು ವೆಚ್ಚವು ಅಧಿಕವಾಗಿದ್ದು ಅವರ ತಲಾವಾರು ಆದಾಯದ ಪ್ರಮಾಣವು ಕಡಿಮೆ ಇದೆ. ಇದು ಜೇನು ಕುರುಬ ಮತ್ತು ಕೊರಗ ಪುರುಷರು ಮಹಿಳೆಯರು ಮತ್ತು ಮಕ್ಕಳು ತಮ್ಮ ಅಗತ್ಯಕ್ಕಿಂತಲೂ ಕಡಿಮೆ ಕೂಲಿ ಪಡೆಯುತ್ತಿರುವುದನ್ನೂ ಪ್ರತಿನಿಧಿಸುತ್ತದೆ. ಉಳಿದ ಗ್ರಾಮೀಣ ಪ್ರದೇಶದಲ್ಲಿರುವ ಪರಿಶಿಷ್ಟ ಬುಡಕಟ್ಟುಗಳಿಗೆ ಹೋಲಿಸಿದರೆ ನಗರ ಪ್ರದೇಶದಲ್ಲಿರುವ ಪರಿಶಿಷ್ಟ ಬುಡಕಟ್ಟುಗಳು ಸ್ವಲ್ಪ ಉತ್ತಮ ಸ್ಥಿತಿಯಲ್ಲಿದ್ದಾರೆ.

೨೦೦೧ರ ಜನಗಣತಿ ವರದಿಯ ಪ್ರಕಾರ, ಪರಿಶಿಷ್ಟ ಬುಡಕಟ್ಟುಗಳಲ್ಲಿ ಶೇ.೭.೬೫ ರಷ್ಟು ಸಾಗುವಳಿದಾರರು, ಶೇ.೧೧.೮೬ ರಷ್ಟು ಕೃಷಿ ಕಾರ್ಮಿಕರು ಮತ್ತು ಶೇ.೪.೭೦ ರಷ್ಟು ಗೃಹಸಂಬಂಧಿ ಕೈಗಾರಿಕೆಗಳಲ್ಲಿ ತೊಡಗಿರುವವರನ್ನು ಕಾಣಬಹುದು. ಪರಿಶಿಷ್ಟ ಪಂಗಡದ ಮಹಿಳೆಯರಲ್ಲಿ ಅಧಿಕ ಮಹಿಳೆಯರು (ಶೇ.೫೮.೮೦) ಗೃಹ ಸಂಬಂಧಿ ಕೈಗಾರಿಕೆಗಳಲ್ಲಿ ಮತ್ತು ಕೃಷಿ ಕಾರ್ಮಿಕ (ಶೇ.೫೭.೯೦) ಕೆಲಸಗಳಲ್ಲಿ ತೊಡಗಿದ್ದಾರೆ. ಕೇವಲ ಶೇ.೨೯.೮೯ ರಷ್ಟು ಮಹಿಳೆಯರು ಮಾತ್ರ ಸಾಗುವಳಿದಾರರಾಗಿದ್ದಾರೆ.

೨೦೦೧ರ ಕರ್ನಾಟಕ ಕೃಷಿ ಗಣತಿಯ ಪ್ರಕಾರ ಪರಿಶಿಷ್ಟ ಬುಡಕಟ್ಟುಗಳಲ್ಲಿ ಶೇ.೩೦.೯ರಷ್ಟು ಅತಿ ಸಣ್ಣ ಹಿಡುವಳಿದಾರರು ಮತ್ತು ಶೇ.೧೯.೪ರಷ್ಟು ಅರೆಮಧ್ಯಮ ಹಿಡುವಳಿದಾರರಿದ್ದಾರೆ. ಪರಿಶಿಷ್ಟ ಬುಡಕಟ್ಟುಗಳ ಒಡೆತನದಲ್ಲಿರುವ ಮಧ್ಯಮ(ಶೇ.೭.೯) ಮತ್ತು ದೊಡ್ಡ ಹಿಡುವಳಿಗಳ (ಶೇ.೧.೦) ಪ್ರಮಾಣ ಕಡಿಮೆ ಇದೆ (ಕನಿಷ್ಟ ೧೦.೭). ಬಹಳಷ್ಟು ಪರಿಶಿಷ್ಟ ಬುಡಕಟ್ಟುಗಳು ಕಡಿಮೆ ಉತ್ಪಾದಕತೆಯ ಸಣ್ಣ ಘಟಕಗಳನ್ನು ಹೊಂದಿದ್ದು ಅವು ಆರ್ಥಿಕವಾಗಿ ಲಾಭಕರವಾಗಿಲ್ಲ. ಆದ್ದರಿಂದ ಹಿಡುವಳಿದಾರರು ತಮ್ಮ ಜೀವನ ನಿರ್ವಹಣೆಗಾಗಿ ಕೂಲಿ ಕಾರ್ಮಿಕರಾಗಿ ಕೆಲಸ ಮಾಡುವ ಪರಿಸ್ಥಿತಿಗೆ ತಳ್ಳಲ್ಪಟ್ಟಿದ್ದಾರೆ. ಅಧ್ಯಯನಕ್ಕೆ ಆಯ್ದುಕೊಂಡಿರುವ ಒಟ್ಟಾರೆ ಕುಟುಂಬಗಳಲ್ಲಿ ಭೂ ಒಡೆತನವಿರುವವರ ಸಂಖ್ಯೆ ಜೇನುಕುರುಬರಲ್ಲಿ ೧೧೫೬ ಕುಟುಂಬಗಳಿವೆ. ಆದರೆ ಕೊರಗರಲ್ಲಿ ೮೦೫ ಕುಟುಂಬಗಳು ಮಾತ್ರ ಭೂ ಒಡೆತನ ಹೊಂದಿರುವುದು ಕಂಡುಬರುತ್ತದೆ. ಅದರಲ್ಲಿ ಕೇವಲ ಶೇ.೩೫ ರಷ್ಟು ಕುಟುಂಬಗಳು ಮಾತ್ರ ಕೃಷಿ ಚಟುವಟಿಕೆಯಲ್ಲಿ ತೊಡಗಿದ್ದರೆ ಉಳಿದ ಶೇ.೫೦ ರಷ್ಟು ಜನ ತಮ್ಮ ಭೂಮಿಯನ್ನು ಇತರರಿಗೆ ಕೃಷಿ ಮಾಡಲು ಬಿಟ್ಟು ಕೊಟ್ಟಿದ್ದಾರೆ. ಉಳಿದ ಶೇ.೧೫ ರಷ್ಟು ಕುಟುಂಬಗಳು ತಮ್ಮ ಭೂಮಿಯನ್ನು ಪಾಳು ಬಿಟ್ಟು ಕೃಷಿ ಕೂಲಿಗಳಾಗಿ ಅಥವಾ ವಲಸೆ ಕೂಲಿಗಳಾಗಿ ದುಡಿಯುತ್ತಿರುವುದುನ್ನು ಕಾಣಬಹುದಾಗಿದೆ.

೫.೬.ಇ. ನೀರಾವರಿ

ಕರ್ನಾಟಕ ಯೋಜನಾ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ೨೦೦೫ರ ಮಾದರಿ ಸಮೀಕ್ಷೆಯು ತಿಳಿಸುವಂತೆ ಗ್ರಾಮೀಣ ಪ್ರದೇಶದ ಪರಿಶಿಷ್ಟ ಬುಡಕಟ್ಟುಗಳ ಶೇ.೫೭.೩೯ ರಷ್ಟು ಕುಟುಂಬಗಳು ಕೃಷಿ ಭೂಮಿಯ ಒಡೆತನ ಹೊಂದಿವೆ. ಅದರಲ್ಲಿ ಶೇ.೭೪.೩೫ ರಷ್ಟು ಭೂಮಿ ಒಣ ಭೂಮಿಯಾಗಿದೆ. ರಾಜ್ಯದಲ್ಲಿ ಒಟ್ಟು ಬಿತ್ತನೆ ಪ್ರದೇಶದಲ್ಲಿ ನೀರಾವರಿ ಪ್ರದೇಶವು ಶೇ.೨೧

ಆಗಿದೆ(೨೦೦೨-೦೩). ಅಧ್ಯಯನಕ್ಕೆ ಆಯ್ದುಕೊಂಡಿರುವ ಕುಟುಂಬಗಳಲ್ಲಿ ಕ್ರಮವಾಗಿ ಜೇನು ಕುರುಬರಲ್ಲಿ ಕೇವಲ ೨೯೧ ಕುಟುಂಬಗಳು ಮತ್ತು ಕೊರಗರಲ್ಲಿ ೩೨೪ ಕುಟುಂಬಗಳು ನೀರಾವರಿ ಸೌಲಭ್ಯವನ್ನು ಹೊಂದಿದ್ದು ಅವರಲ್ಲಿ ನಿರಂತರ ಕೃಷಿಯಲ್ಲಿ ತೊಡಗಿರುವುದು ಕೇವಲ ಶೇ.೩೫ರಷ್ಟು ಕುಟುಂಬಗಳು ಮಾತ್ರ.

ಕೋಷ್ಟಕ: ೫.೯ ಕರ್ನಾಟಕ ಬುಡಕಟ್ಟು ಕೃಷಿ ಭೂಮಿಯ ವಿವರ

ಕೃಷಿ ಭೂಮಿಯ ವಿಧ	**ಪ್ರತಿಶತ**
ಭೂಮಿ ಹೊಂದಿರುವ ಗ್ರಾಮೀಣ ಪ.ಪಂ.ಕುಟುಂಬಗಳು	57.39
ನೀರಾವರಿಯಾದ ಕೃಷಿ ಭೂಮಿ	17.05
ನೀರಾವರಿಯಾಗದ ಕೃಷಿ ಭೂಮಿ	74.35
ಭಾಗಶಃ ನೀರಾವರಿಯಾದ ಕೃಷಿ ಭೂಮಿ	8.60

ಆಧಾರ: ಮಾದರಿ ಸಮೀಕ್ಷೆ, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಕರ್ನಾಟಕ, ೨೦೦೪ಎ.

ಮೇಲಿನ ಕೋಷ್ಟಕವನ್ನು ಗಮನಿಸಿದಾಗ ತಿಳಿದುಬರುವ ಅಂಶವೆಂದರೆ ಪರಿಶಿಷ್ಟ ಪಂಗಡಗಳ ಶೇ.೫೭.೩೯ ಗ್ರಾಮೀಣ ಕುಟುಂಬಗಳು ಭೂಮಿಯನ್ನು ಹೊಂದಿದ್ದು ಅದರಲ್ಲಿ ೧೭.೦೫ ಕುಟುಂಬಗಳು ನೀರಾವರಿ ಭೂಮಿಯನ್ನು ಹೊಂದಿವೆ, ಶೇ.೮.೬೦ ಕುಟುಂಬಗಳು ಭಾಗಶಃ ನೀರಾವರಿ ಭೂಮಿಯನ್ನು ಹೊಂದಿವೆ, ಇನ್ನೂ ಶೇ.೭೪.೩೫ ರಷ್ಟು ಭೂಮಿಯು ಒಣ ಭೂಮಿಯಾಗಿಯೆ ಉಳಿದಿದೆ.

೫.೬.ಈ. ಬುಡಕಟ್ಟು ಜನರ ಆದಾಯದ ಮೂಲಗಳು

ಚಿತ್ರ:೩.೩ ಕೂಲಿ ಕೆಲಸದಲ್ಲಿ ನಿರತರಾಗಿರುವ ಕೊರಗರು



ಭಾರತೀಯ ಮಾದರಿ ಸಮೀಕ್ಷಾ ಸಂಸ್ಥೆಯು ೧೯೯೯-೨೦೦೦ ಸಾಲಿನಲ್ಲಿ ಕೈಗೊಂಡಿದ್ದ ಸಮೀಕ್ಷೆಯ ಪ್ರಕಾರ ಬಹಳಷ್ಟು ಗ್ರಾಮೀಣ ಪರಿಶಿಷ್ಟ ಬುಡಕಟ್ಟು ಕುಟುಂಬಗಳ (ಶೇ.೧೨.೮) ವರಮಾನದ ಮೂಲ ಕೂಲಿ (ಶೇ.೯.೭), ಸಾಗುವಳಿ (ಶೇ.೭.೭), ಮೀನುಗಾರಿಕೆ ಮತ್ತು ಇತರೆ ಕೃಷಿ ಉದ್ದಿಮೆಗಳು (ಶೇ.೬.೭).ಅವರ ಇತರ ವರಮಾನದ ಮೂಲಗಳಾಗಿವೆ. ಅಧಿಕ ಬುಡಕಟ್ಟು ಜನಸಂಖ್ಯೆ ಹೊಂದಿರುವ ಆಂಧ್ರ ಪ್ರದೇಶದಲ್ಲಿ ಶೇ.೧೧.೪ ರಷ್ಟು ಪರಿಶಿಷ್ಟ ಬುಡಕಟ್ಟು ಜನರು ಮೀನುಗಾರಿಕೆ ಮತ್ತು ಇತರೆ ಕೃಷಿ ಚಟುವಟಿಕೆಗಳಿಂದ ಮತ್ತು ಶೇ.೮.೯ ರಷ್ಟು ಕೃಷಿಯಿಂದ ತಮ್ಮ ವರಮಾನವನ್ನು ಪಡೆಯುತ್ತಾರೆಂದಿದೆ. ಮಾದರಿ ಸಮೀಕ್ಷೆಯು (ಆಸಾಂನಿ: ೨೦೦೪ಎ) ನಗರದಲ್ಲಿಯ ಪರಿಶಿಷ್ಟ ಬುಡಕಟ್ಟುಗಳ ಮತ್ತು ಗ್ರಾಮೀಣ ಪ್ರದೇಶಗಳಲ್ಲಿರುವವರ ನಡುವೆ ಶೇ.೧೦೦ಕ್ಕಿಂತ ಅಧಿಕ ಅಂತರವಿರುವ ಅಂಶವನ್ನು ಬಹಿರಂಗಪಡಿಸಿದೆ. ನಗರ ಪ್ರದೇಶದಲ್ಲಿಯ ಪರಿಶಿಷ್ಟ ಬುಡಕಟ್ಟುಗಳ ವಾರ್ಷಿಕ ತಲಾವಾರು ವರಮಾನ ರೂ.೧೦,೯೮೭ ಆಗಿದ್ದರೆ, ಗ್ರಾಮೀಣ ಪ್ರದೇಶದಲ್ಲಿಯ ಪರಿಶಿಷ್ಟ ಬುಡಕಟ್ಟುಗಳ ವಾರ್ಷಿಕ ತಲಾವಾರು ವರಮಾನ ರೂ.೪,೭೬೮ ಆಗಿದೆ.

ಗ್ರಾಮೀಣ ಪ್ರದೇಶದಲ್ಲಿರುವ ಪರಿಶಿಷ್ಟ ಬುಡಕಟ್ಟು ಕುಟುಂಬಗಳ ಪೈಕಿ ಶೇ.೪೦ ರಷ್ಟು ಬಡತನ ರೇಖೆಯ ಕೆಳಗಿನ ಕುಟುಂಬಗಳಾಗಿದ್ದು, ನಗರ ಪ್ರದೇಶದಲ್ಲಿ ಬಡತನ ರೇಖೆಯ ಕೆಳಗೆ ಜೀವನ ನಿರ್ವಹಿಸುತ್ತಿರುವ ಪರಿಶಿಷ್ಟ ಪಂಗಡದ ಕುಟುಂಬಗಳ ಪ್ರಮಾಣ ಶೇ.೨೫ ಆಗಿದೆ. ಗ್ರಾಮೀಣ ಪ್ರದೇಶದಲ್ಲಿರುವ ಪರಿಶಿಷ್ಟ ಪಂಗಡಗಳ ಜನರ ಮಾಸಿಕ ತಲಾವಾರು ವೆಚ್ಚವು ಅತ್ಯಂತ ಕಡಿಮೆಯಾಗಿದ್ದು, ಅದು ಎಲ್ಲಾ ಸಾಮಾಜಿಕ ಗುಂಪುಗಳ ತಲಾವಾರು ಮಾಸಿಕ ವೆಚ್ಚ ರೂ.೪೮೯ ಹಾಗೂ ಎಲ್ಲಾ ಗ್ರಾಮೀಣ ಗುಂಪುಗಳ ತಲಾವಾರು ಮಾಸಿಕ ವೆಚ್ಚ ರೂ.೫೦೦ ಕ್ಕೆ ಹೋಲಿಸಿದಾಗ ಬಹಳಷ್ಟು ಕಡಿಮೆಯಾಗಿದೆ. ಕರ್ನಾಟಕದ ನಗರ ಪ್ರದೇಶದಲ್ಲಿರುವ ಪರಿಶಿಷ್ಟ ಬುಡಕಟ್ಟುಗಳ ಮಾಸಿಕ ತಲಾವಾರು ವೆಚ್ಚ ರೂ.೬೩೪ ಆಗಿದ್ದು, ಅದು ರಾಜ್ಯದ ಸರಾಸರಿ ಮಾಸಿಕ ತಲಾವಾರು ವೆಚ್ಚ ರೂ.೯೧೧ಕ್ಕಿಂತಲೂ ಕಡಿಮೆಯಿದೆ.

ಅಧ್ಯಯನಕ್ಕೆ ಆಯ್ದುಕೊಂಡ ಆದಿಮ ಬುಡಕಟ್ಟುಗಳ ಶೇ.೩೫ ರಷ್ಟು ಕುಟುಂಬಗಳು ಕೃಷಿ ಯನ್ನವಲಂಬಿಸಿದ್ದರೆ ಉಳಿದ ಶೇ.೬೦ ರಷ್ಟು ಕುಟುಂಬಗಳು ಕೃಷಿ ಕೂಲಿಯನ್ನು ಅವಲಂಬಿಸಿವೆ. ಉಳಿದ ಶೇ.೫ ರಷ್ಟು ಕುಟುಂಬಗಳು ಮಾತ್ರ ಇತರೆ ಚಟುವಟಿಕೆಗಳಾದ ಅರಣ್ಯ ಕೂಲಿ, ಸ್ವಚ್ಚತಾ ಕೆಲಸಗಾರರು, ಬುಟ್ಟಿ ಹೆಣೆಯುವವರು ಆಗಿದ್ದಾರೆ. ಅವರ ಆದಾಯದ ಶೇ.೫೦ ರಷ್ಟನ್ನು ಆಹಾರ ಮತ್ತು ದಿನನಿತ್ಯದ ಅವಶ್ಯಕತೆಗಳಿಗಾಗಿ ವ್ಯಯಿಸುತ್ತಿದ್ದಾರೆ.

೫.೭. ಕೈಗಾರಿಕೆ ಮತ್ತು ಸೇವಾಕ್ಷೇತ್ರದಲ್ಲಿ ಆದಿವಾಸಿ ಬುಡಕಟ್ಟುಗಳ ಪ್ರಾತಿನಿಧ್ಯತೆ

ಅದಿಮ ಬುಡಕಟ್ಟುಗಳಾದ ಜೇನು ಕುರುಬರು ಮತ್ತು ಕೊರಗರು ತುಂಬಾ ಪೂರ್ವದಿಂದಲೂ ಆದಿಮ ಜೀವನ ಪದ್ಧತಿಯನ್ನ ಅನುಸರಿಸಿಕೊಂಡು ಬಂದಿವೆ. ಕೈಗಾರಿಕೆ ಮತ್ತು ಸೇವಾ ಕ್ಷೇತ್ರದಲ್ಲಿ ಅವಶ್ಯಕವಾಗಿ ಬೇಕಿರುವ ಶಿಕ್ಷಣವನ್ನು ಪಡೆಯದಿರುವ ಕಾರಣ ಆ ಎರಡೂ ಸಮುದಾಯಗಳ ಪ್ರಾತಿನಿಧ್ಯತೆ ಈ ಕ್ಷೇತ್ರದಲ್ಲಿ ಶೂನ್ಯವೆಂದೇ ಹೇಳಬಹುದು. ಅಧ್ಯಯನಕ್ಕೆ ಆಯ್ದುಕೊಂಡಿದ್ದ ಒಟ್ಟು ಕುಟುಂಬಗಳಲ್ಲಿ ಕೆಲವೇ ಕೆಲವು ಮಂದಿ ಖಾಸಗಿ ಕಾರ್ಖಾನೆಗಳಲ್ಲಿ ದಿನಗೂಲಿಗಳಾಗಿ ದುಡಿಯುತ್ತಿದ್ದರೆ ಇನ್ನು ಕೆಲವರು ನಗರ ಪಾಲಿಕೆಗಳಲ್ಲಿ ಸ್ವಚ್ಚತಾ ಕೆಲಸಗಾರರಾಗಿ, ಕೆಲವರು ಅರಣ್ಯ ಇಲಾಖೆಯಡಿಯಲ್ಲಿ ಅರಣ್ಯ ಕಾವಲುಗಾರರಾಗಿ ಕೆಲಸ ಮಾಡುತ್ತಿದ್ದಾರೆ. ಈ ರೀತಿಯ ವೃತ್ತಿಗಳಲ್ಲಿ ತೊಡಗಿರುವ ಜೇನು ಕುರುಬರ ಒಟ್ಟು ಕುಟುಂಬಗಳಲ್ಲಿ ಶೇ.೦೬ ರಷ್ಟು ಮತ್ತು ಕೊರಗರ ಶೇ.೦೭ರಷ್ಟು ಕುಟುಂಬಗಳ ಸದಸ್ಯರು ಮೇಲೆ ತಿಳಿಸಿದ ವಿವಿಧ ವೃತ್ತಿಗಳಲ್ಲಿ ಕನಿಷ್ಟ ವೇತನಕ್ಕಾಗಿ ದುಡಿಯುತ್ತಿದ್ದಾರೆ. ಅವರ ಜನಸಂಖ್ಯಾ ಪ್ರಮಾಣಕ್ಕನುಗುಣವಾದ ಪ್ರಾತಿನಿಧ್ಯತೆ ಇನ್ನೂ ಆ ವಲಯಗಳಲ್ಲಿ ಆ ಸಮುದಾಯಗಳಿಗೆ ದೊರೆತಿರುವುದಿಲ್ಲ.

೫.೮. ಆದಿವಾಸಿ ಬುಡಕಟ್ಟುಗಳ ರಾಜಕೀಯ ಪ್ರಾತಿನಿಧ್ಯತೆ

ಭಾರತ ಸರ್ಕಾರವು ಸಂವಿಧಾನದ ೭೩ ಮತ್ತು ೭೪ ನೇ ತಿದ್ದುಪಡಿಯ ಮುಖಾಂತರ ಸಂವಿಧಾನಕ್ಕೆ ೧೧ ನೆಯ ಮತ್ತು ೧೨ ನೆಯ ಅನುಸೂಚಿಗಳನ್ನು ಸೇರ್ಪಡಿಸುವುದರ ಮೂಲಕ ಶೋಷಿತ ವರ್ಗಗಳಿಗೆ ಸ್ಥಳೀಯ ಸಂಸ್ಥೆಗಳ ಆಡಳಿತದಲ್ಲಿ ಪಾಲ್ಗೊಳ್ಳಲು ಅವಕಾಶವನ್ನು ಕಲ್ಪಿಸಿಕೊವುದರ ಮೂಲಕ ಪರಿಶಿಷ್ಟ ಬುಡಕಟ್ಟುಗಳಿಗೆ ನ್ಯಾಯ ಒದಗಿಸಿದಂತಾಗಿದೆ. ಅಧ್ಯಯನಕ್ಕೆ ಆಯ್ದುಕೊಂಡ ಒಟ್ಟು ಕುಟುಂಬಗಳಲ್ಲಿ ಜೇನು ಕುರುಬರ ಶೇ.೦.೨ ರಷ್ಟು ಮತ್ತು ಕೊರಗರ ೦.೦೯ ರಷ್ಟು ಕುಟುಂಬಗಳು ಸ್ಥಳೀಯ ಮಟ್ಟದಲ್ಲಿ ರಾಜಕೀಯವಾಗಿ ಪ್ರತಿನಿಧಿಸುತ್ತಿವೆ. ರಾಜಕೀಯ ಜ್ಞಾನದ ಕೊರತೆ ಮತ್ತು ಮುಖ್ಯವಾಹಿನಿಯೊಂದಿಗೆ ಗುರ್ತಿಸಿಕೊಂಡಿರುವ ಪ್ರಬಲ ಜಾತಿಗಳು ಪರಿಶಿಷ್ಟ ಬುಡಕಟ್ಟುಗಳ ಪಟ್ಟಿಯಲ್ಲಿ ಸ್ಥಾನ ಪಡೆದು ಚುನಾವಣೆಯಲ್ಲಿ

ಸ್ಪರ್ಧಿಸುತ್ತಿರುವುದರಿಂದಾಗಿ ಜೇನುಕುರುಬ ಮತ್ತು ಕೊರಗ ಬುಡಕಟ್ಟುಗಳು ರಾಜಕೀಯವಾಗಿ ತುಂಬಾ ಹಿಂದುಳಿದಿದ್ದು ಪ್ರಬಲ ವರ್ಗಗಳೊಂದಿಗೆ ಸ್ಪರ್ಧಿಸುವುದು ಕಷ್ಟವಾಗಿದೆ. ಹೀಗಾಗಿ ಜನಸಂಖ್ಯಾ ಪ್ರಮಾಣಕ್ಕನುಗುಣವಾದ ಪ್ರಾತಿನಿಧ್ಯತೆ ಈ ಸಮುದಾಯಗಳಿಗೆ ಇನ್ನೂ ದೊರೆತಿರುವುದಿಲ್ಲ.

೫.೯. ಆದಿವಾಸಿ ಬುಡಕಟ್ಟುಗಳ ಸಾಮಾಜಿಕ ಸ್ಥಾನಮಾನ,

ಆದಿವಾಸಿ ಬುಡಕಟ್ಟುಗಳಾದ ಜೇನು ಕುರುಬರು ಮತ್ತು ಕೊರಗರು ಆರ್ಥಿಕವಾಗಿ ದುರ್ಬಲ ಬುಡಕಟ್ಟುಗಳಾಗಿದ್ದು ಶತಮಾನಗಳಿಂದ ಏಕಾಂಗಿತನದ ಜೀವನ ನಡೆಸಿಕೊಂಡು ಬಂದ ಸಮುದಾಯಗಳಾಗಿವೆ. ಇವರು ಹೊರ ಸಮುದಾಯಗಳೊಂದಿಗೆ ತಮ್ಮ ಸಂಪರ್ಕವನ್ನ ಕಡಿದುಕೊಂಡಿದ್ದರಿಂದ ಇವರ ಏಕಾಂಗಿತನದ ಬದುಕು ಸಾಮಾಜಿಕವಾಗಿ ಕೆಳ ವರ್ಗಗಳ ಪಟ್ಟಿಯಲ್ಲಿ ಗುರುತಿಸುವಂತೆ ಮಾಡಿದೆ. ಜೇನು ಕುರುಬರು ಸ್ವಾಭಾವಿಕವಾಗಿ ಸ್ವಾವಲಂಬಿ ಜೀವನ ನಡೆಸಿಕೊಂಡು ಬಂದ ಬುಡಕಟ್ಟಾಗಿರುವುದರಿಂದ ಸಾಮಾಜಿಕವಾಗಿ ಅದು ಶೋಷಣೆಗೆ ಒಳಗಾಗುವುದು ಅಪರೂಪ. ಆದರೆ ಕೊರಗ ಬುಡಕಟ್ಟು ಮೂಲತಃ ಇತರೆ ವರ್ಗಗಳ ಸೇವಕರಾಗಿ ಮತ್ತು ತಮ್ಮ ದಿನನಿತ್ಯದ ಅಗತ್ಯತೆಗಳಿಗಾಗಿ ಮೇಲ್ವರ್ಗಗಳನ್ನು ಅವಲಂಬಿಸಿರುವುದರಿಂದಾಗಿ ಸಾಮಾಜಿಕವಾಗಿ ನಿಷೇಧಿಸಲ್ಪಟ್ಟಿರುವ 'ಅಜಲು' ಪದ್ಧತಿಯಂತಹ ಹಲವು ಅನಿಷ್ಟ ಆಚರಣೆಗೆ ಗುರಿಯಾಗಿ ಸಮಾಜದಲ್ಲಿ ಶೋಷಿತರಲ್ಲಿಯೇ ಶೋಷಿತ ವರ್ಗವಾಗಿ ರೂಪುಗೊಂಡಿದೆ.

೫.೧೦. ಆದಿಮ ಬುಡಕಟ್ಟುಗಳ ಆರೋಗ್ಯದ ಸ್ಥಿತಿ ಗತಿ

ಭಾರತದಲ್ಲಿ ಅಥವಾ ಕರ್ನಾಟಕದಲ್ಲಿ ರಾಷ್ಟ್ರೀಯ ಕುಟುಂಬ ಆರೋಗ್ಯ ಸಾಮಾನ್ಯ ಸಮೀಕ್ಷೆಯನ್ನು ಹೊರತುಪಡಿಸಿ ಆದಿಮ ಬುಡಕಟ್ಟುಗಳ ಆರೋಗ್ಯ ಕುರಿತು ಮಾಹಿತಿಯು ದೊರೆಯುವುದಿಲ್ಲ. ಪರಿಶಿಷ್ಟ ಪಂಗಡಗಳ ಜನಸಂಖ್ಯೆಯ ಆರೋಗ್ಯ ಕುರಿತಾದ ಅಂಕಿ-ಅಂಶಗಳ ಅಲಭ್ಯತೆಯು ಒಂದು ಪ್ರಮುಖ ಕೊರತೆಯಾಗಿದೆ. ರಾಜ್ಯದ ಪರಿಶಿಷ್ಟ ಪಂಗಡದವರ ಆರೋಗ್ಯ ಮತ್ತು ಪೌಷ್ಠಿಕತೆಯ ಚಿತ್ರಣಕ್ಕಾಗಿ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ ಮಾದರಿ (ಸ್ಯಾಂಪಲ್) ಸಮೀಕ್ಷೆಗಳ ಅಂಕಿ-ಅಂಶಗಳನ್ನು ಬಳಸಿಕೊಳ್ಳಲಾಗಿದೆ. ಬುಡಕಟ್ಟು ಜನರಲ್ಲಿ ಸರಾಸರಿ ಜನನ ಪ್ರಮಾಣವು ೨೨.೭೯ ಆಗಿದ್ದು, ಇದು ಕರ್ನಾಟಕದ ಸರಾಸರಿ ೨೧.೮ ಕ್ಕಿಂತಲೂ ಸ್ವಲ್ಪ ಅಧಿಕವಾಗಿದೆ. ಮರಣ ಪ್ರಮಾಣವು ೮.೫೦ ಆಗಿದ್ದು, ಅದು ರಾಜ್ಯದ ಜನಸಂಖ್ಯೆಯ ಮರಣ ಪ್ರಮಾಣ ೭.೫೦ ಕ್ಕಿಂತಲೂ ಅಧಿಕವಾಗಿದೆ. ಕರ್ನಾಟಕದಲ್ಲಿ ಪರಿಶಿಷ್ಟ ಪಂಗಡಗಳ ಮರಣ ಪ್ರಮಾಣವು ಪರಿಶಿಷ್ಟ ಜಾತಿಯವರ ಮರಣ ಪ್ರಮಾಣ (೯.೧೨)ಕ್ಕಿಂತಲೂ ಕಡಿಮೆ ಇದೆ. ಆರೋಗ್ಯಕ್ಕೆ ಸಂಬಂಧಿಸಿದ ಬಹುತೇಕ ಸೂಚಿಗಳು ಮಹಿಳೆ ಮತ್ತು ಮಕ್ಕಳು ದುಃಸ್ಥಿತಿಯಲ್ಲಿರುವುದನ್ನು ಸೂಚಿಸುತ್ತವೆ. ಆರೋಗ್ಯ ಸ್ಥಿತಿ ಗತಿ ಕುರಿತಂತೆ ಪರಿಶಿಷ್ಟ ಪಂಗಡದವರ ಆರೋಗ್ಯ ಸ್ಥಿತಿಯು ರಾಜ್ಯದ ಇತರೆ ಜನತೆಯ ಆರೋಗ್ಯ ಸ್ಥಿತಿ ಗತಿಗಳಿಗೆ ಸಮಾನವಾಗಿಲ್ಲ. ಪರಿಶಿಷ್ಟ ಪಂಗಡದವರಲ್ಲಿಯ ಶಿಶು ಮರಣ ಪ್ರಮಾಣವು (ಶೇ.೬೪.೩೭) ರಾಜ್ಯದ ಸರಾಸರಿ (ಶೇ.೫೨.೦) ಪ್ರಮಾಣಕ್ಕಿಂತಲೂ ಬಹಳ ಅಧಿಕವಾಗಿದೆ, ಮತ್ತು ಪರಿಶಿಷ್ಟ ಜಾತಿಗಳಿಗಿಂತ (೬೪.೭೪) ಸ್ವಲ್ಪ ಕಡಿಮೆಯಿದೆ. ಗಂಡು ಶಿಶು ಮರಣ ದರವು (ಶೇ.೭೫.೮೪) ಮತ್ತು ಹೆಣ್ಣು ಶಿಶು ಮರಣ ದರ (೫೪.೪೮) ಗಳ ನಡುವೆ ಅಧಿಕ ಪ್ರಮಾಣದ ಅಂತರವಿದೆ. ಮಾದರಿ ಸಮೀಕ್ಷೆಯ ಪ್ರಕಾರ ಶಿಶುಗಳಲ್ಲಿನ ರಕ್ತ ಪರಿಚಲನೆ (ಶೇ.೪೯.೦೬) ಮತ್ತು ಶ್ವಾಸಕೋಶಕ್ಕೆ ಸಂಬಂಧಿಸಿದ ರೋಗಗಳು (ಶೇ.೨೩.೪೫) ಶಿಶುಗಳ ಮರಣಕ್ಕೆ ಪ್ರಮುಖ ಕಾರಣಗಳಾಗಿವೆ.

ಜೇನು ಕುರುಬ ಮತ್ತು ಕೊರಗ ಆದಿವಾಸಿ ಬುಡಕಟ್ಟುಗಳಲ್ಲಿ ಇತರೆ ವರ್ಗಗಳಿಗೆ ಹೊಲಿಸಿದಲ್ಲಿ ಇತ್ತೀಚಿನ ದಿನಗಳಲ್ಲಿ ಆರೊಗ್ಯದ ಮಟ್ಟ ಕ್ಷೀಣಿಸುತ್ತಿದೆ ಕಾರಣ ಬುಡಕಟ್ಟು ಜನರು ಮೂಲತಃ ಅರಣ್ಯ ವಾಸಿಗಳಾಗಿದ್ದು ತಮ್ಮ ಆರೋಗ್ಯದ ಸುಧಾರಣೆಗೆ ಹೆಚ್ಚಾಗಿ ಕಾಡಿನಲ್ಲಿ ದೊರೆಯುವ ಗಿಡಮೂಲಿಕೆಗಳನ್ನು ಬಳಸುತ್ತಿದ್ದು ಅವರಿಗೆ ಆಧುನಿಕ ವೈದ್ಯಕೀಯ ಚಿಕಿತ್ಸಾ ವಿಧಾನದ ಅರಿವು ಇನ್ನೂ ಮೂಡಿರುವುದಿಲ್ಲ. ಭಾರತದಲ್ಲಿ ಬುಡಕಟ್ಟು ಜನರಲ್ಲಿ ಶಿಶು ಮರಣ ಮತ್ತು ೫ ವರ್ಷದ ಒಳಗಿನ ಬುಡಕಟ್ಟು ಬಾಲಕರ ಕಡಿಮೆ ತೂಕದ ಪ್ರಮಾಣವು ಇತರ ಬಾಲಕರ ತೂಕದ ಪ್ರಮಾಣಕ್ಕಿಂತ ಹೆಚ್ಚಾಗಿರುವುದನ್ನು ಈ ಕೆಳಗೆ ಕಾಣಬಹುದಾಗಿದೆ.


ಕೋಷ್ಟಕ: ೫.೧೦ ಕರ್ನಾಟಕ ಬುಡಕಟ್ಟು ಮತ್ತು ಇತರ ವರ್ಗಗಳ ಆರೋಗ್ಯದ ಸ್ಥಿತಿ

ಸೂಚ್ಯಂಕ	ಶಿಶುಮರಣ	೧೦೦೦ಕ್ಕೆ೫ವರ್ಷಕ್ಕಿಂತಕೆಳಗಿನ ಮಕ್ಕಳ ಮೃತರಾಗುವುದು	೧೦೦೦ಕ್ಕೆ ಶೇ. ಮಕ್ಕಳು ತೂಕ ಕಡಿಮೆ
ಪ ಜಾತಿ	೮೩	೧೧೯.೩	೫೩.೫
ಪ ಪಂಗಡ	೮೪.೨	೧೨೬.೬	೫೫.೯
ದುರ್ಬಲವರ್ಗ	೬೬	೧೦೩.೧	೪೭.೩
ಇತರೆ	೬೧.೮	೮೨.೬	೪೧..೧
ಒಟ್ಟು	೭೦	**೯೪.೯**	**೪೬**

ಆದಾರ: ಬುಡಕಟ್ಟು ವ್ಯವಹಾರಗಳಮಂತ್ರಾಲಯ, ಭಾರತ ಸರ್ಕಾರ ವಾರ್ಷಿಕ ವರದಿ ೨೦೦೭-೦೮

ಈ ಎರಡೂ ಆದಿವಾಸಿ ಸಮುದಾಯಗಳಲ್ಲಿಯ ಆರೋಗ್ಯದ ಸ್ಥಿತಿ ಭಾರತದ ಒಟ್ಟಾರೆ ಸ್ಥಿತಿಗಿಂತಲೂ ಶೋಚನೀಯವಾಗಿದೆ ಎಂಬುದನ್ನ ಮೇಲಿನ ಅಂಕಿ ಸಂಖ್ಯೆಗಳನ್ನಾಧರಿಸಿ ಹೇಳಬಹುದಾಗಿದೆ. ಕರ್ನಾಟಕಲ್ಲಿ ೧೦೦೦ ಶಿಶುಗಳಲ್ಲಿ ಬುಡಕಟ್ಟು ಜನರ ಶಿಶು ಮರಣ ಪ್ರಮಾಣವು ಸುಮಾರು ೧೫ ರಷ್ಟಿದೆ.

ಲಂಬಚಿತ್ರ:೫.೧ ಬುಡಕಟ್ಟು ಶಿಶು ಮರಣ ಪ್ರಮಾಣ ಮತ್ತು ಮಕ್ಕಳ ಆರೋಗ್ಯದ ಸ್ಥಿತಿ



ಆಧಾರ: ಭಾರತ ಸರ್ಕಾರದ ಬುಡಕಟ್ಟು ವ್ಯವಹಾರಗಳ ಮಂತ್ರಾಲಯ ವಾರ್ಷಿಕ ವರದಿ ೨೦೦೭-೦೮

ಆದಿವಾಸಿ ಜನರನ್ನ ಅವರ ಮೂಲ ನೆಲೆಗಳಿಂದ ಒಕ್ಕಲೆಬ್ಬಿಸಿರುವುದರಿಂದ ಮತ್ತು ಅವರ ಮೇಲೆ ಬಲತ್ಕಾರವಾಗಿ ಹೊರ ಸಮಾಜದ ಆಹಾರ ಪದ್ಧತಿಯನ್ನು ಹೇರಿರುವುದರಿಂದ ಅವರಿಗಿಂದು ಈ ಹಿಂದೆ ಕಾಡಿನಲ್ಲಿ ದೊರೆಯುತ್ತಿದ್ದಷ್ಟು ಪೌಷ್ಠಿಕ ಆಹಾರ ಸಿಗುತ್ತಿಲ್ಲ. ಅಪೌಷ್ಠಿಕತೆ ಮತ್ತು ಬದಲಾಗಿರುವ ನೆಲೆಗಳಿಂದಾಗಿ ಅವರು ಹಲವಾರು ರೋಗಗಳಿಗೆ ಬಲಿಯಾಗುತ್ತಿದ್ದಾರೆ. ಜೇನು ಕುರುಬ ಮತ್ತು ಕೊರಗ ಆದಿವಾಸಿ ಬುಡಕಟ್ಟುಗಳು ವಾಸಿಸುವ ಶೇಕಡ ೪೦ ರಷ್ಟು ಹಾಡಿಗಳಿಗೆ ಆರೋಗ್ಯ ಸೇವೆಯ ಸಂಚಾರಿ ಆರೋಗ್ಯ ಘಟಕಗಳಾಗಲಿ ಅಥವಾ ಪ್ರಾಥಮಿಕ

ಕೇಂದ್ರಗಳ ಆರೋಗ್ಯ ಸೇವೆಯಾಗಲಿ ಇರುವುದಿಲ್ಲ. ಅವರು ಕನಿಷ್ಠ ೪ ರಿಂದ ೫ ಕಿ.ಮೀ. ದೂರ ನಡೆದು ಚಿಕಿತ್ಸೆಯನ್ನು ಪಡೆಯಬೇಕಾದ ಪರಿಸ್ಥಿತಿಯಿದೆ. ಇದರಿಂದಾಗಿ ಹೆಚ್ಚು ಜನರು ಸ್ಥಳೀಯವಾಗಿ ದೊರೆಯುವ ನಾಟಿ ಔಷಧಿಗಳಿಗೆ ಮೊರೆ ಹೊಗುತ್ತಿದ್ದಾರೆ.

ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ ೧೯೯೨-೯೩ ಮತ್ತು ೧೯೯೮-೯೯ರ ಅಂಕಿ-ಅಂಶಗಳ ಪ್ರಕಾರ ಬುಡಕಟ್ಟುಗಳಲ್ಲಿ ಸಂತಾನೋತ್ಪತ್ತಿ ಪ್ರಮಾಣವು ೨.೧೫ರಿಂದ ೨.೩೮ಕ್ಕೆ ಏರಿಕೆಯಾಗಿದೆ. ಜನನಾ ನಂತರ ಶಿಶು ಮರಣ (ಪೋಸ್ಟ್ ನಿಯೋನ್ಯಾಟಲ್) ದರವು ೧೮.೦ ರಿಂದ ೨೧.೯ಕ್ಕೆ ಮಕ್ಕಳ ಮರಣ ಪ್ರಮಾಣವು ೩೮.೦ರಿಂದ ೩೮.೯ಕ್ಕೆ ಮತ್ತು ಐದು ವರ್ಷಕ್ಕಿಂತ ಕಡಿಮೆ ವಯೋಮಾನದ ಮಕ್ಕಳ ಮರಣ ಪ್ರಮಾಣವು ೧೨೦.೩ ರಿಂದ ೧೨೦.೬ಕ್ಕೆ ಏರಿಕೆಯಾಗಿರುವುದು ಆತಂಕಕಾರಿಯಾಗಿದೆ. ನವಜಾತ (ನಿಯೋನೇಟಲ್) ಶಿಶುಮರಣ ಪ್ರಮಾಣವು ಮಾತ್ರ ೬೭.೬ರಿಂದ ೬೩.೨ಕ್ಕೆ ಇಳಿಕೆಯಾಗಿದೆ. ಈ ಅಂಕಿ ಅಂಶಗಳನ್ನು ಗಮನಿಸಿದಾಗ ಬುಡಕಟ್ಟು ಮಹಿಳೆಯರು ಮತ್ತು ಮಕ್ಕಳು ಎದುರಿಸುತ್ತಿರುವ ಆರೋಗ್ಯ ಕುರಿತಾದ ಸಮಸ್ಯೆಯ ಅಗಾಧತೆಯ ಅರಿವಾಗುತ್ತದೆ.

ಮಾದರಿ ಸಮೀಕ್ಷೆಯು ಶಿಶು ಮತ್ತು ತಾಯಂದಿರ ಮರಣಗಳಿಗೆ ಅನೇಕ ಕಾರಣಗಳನ್ನು ಗುರುತಿಸಿದ್ದು ಅವು ಹೆರಿಗೆಯ ಸಮಯದಲ್ಲಿ ತಾಯಂದಿರ ವಯಸ್ಸು, ಅವರ ಪೌಷ್ಠಿಕತೆಯ ಸ್ಥಿತಿಗತಿ, ಪ್ರಸವ ಪೂರ್ವ ಆರೈಕೆ, ಆರೋಗ್ಯ ಸೇವೆಗಳು ಮುಂತಾದವು ಗರ್ಭಧಾರಣೆ ಮತ್ತು ಮಕ್ಕಳ ಜನನ ಸಂದರ್ಭಗಳಲ್ಲಿ ಮಹಿಳೆ ಮತ್ತು ಶಿಶುಗಳು ಬದುಕುಳಿಯಬಲ್ಲವೆ ಎಂಬುದನ್ನು ನಿರ್ಧರಿಸುವ ಪ್ರಮುಖ ಅಂಶಗಳಾಗಿವೆ. ಮಾದರಿ ಸಮೀಕ್ಷೆ ತಿಳಿಸುವಂತೆ ಪರಿಶಿಷ್ಟ ಬುಡಕಟ್ಟುಗಳಲ್ಲಿ ಹೆಚ್ಚಾಗಿ ಸಂತಾನೋತ್ಪತ್ತಿ ಅವಧಿಯು ೨೦-೨೯ ವಯೋಮಾನವಾಗಿದೆ ಮತ್ತು ಈ ವಯೋಮಾನದ ಗುಂಪಿನಲ್ಲಿ ಹುಟ್ಟುವ ಮಕ್ಕಳು ಒಟ್ಟು ಜನನಗಳಲ್ಲಿ ಶೇ.೭೧.೦ ರಷ್ಟಾಗಿದೆ. ಅಂಕಿ-ಅಂಶಗಳನ್ನು ಗಮನಿಸಿದಾಗ ತಾಯಂದಿರ ವಯಸ್ಸಿಗಿಂತ ಅಪೌಷ್ಠಿಕತೆ ಮತ್ತು ಆರೋಗ್ಯ ಸೇವೆಗಳ ಕೊರತೆಯಂಥ ಸಂಗತಿಗಳು ಮರಣ ಪ್ರಮಾಣಕ್ಕೆ ಪ್ರಮುಖ ಕಾರಣಗಳಾಗಿವೆಯಂದು ತಿಳಿಸುತ್ತದೆ(ಐಐಪಿಎಸ್:೧೯೯೨-೯೩).

೫.೧೦.ಅ. ಬುಡಕಟ್ಟು ಗರ್ಭಿಣಿ ಮಹಿಳೆಯರ ಆರೈಕೆ

ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ-೧, ಕರ್ನಾಟಕ ೧೯೯೨-೯೩ ರ ಅಂಕಿ ಅಂಶಗಳ ಪ್ರಕಾರ ಬುಡಕಟ್ಟು ಮಹಿಳೆಯರ ಪ್ರಸವಪೂರ್ವ ಆರೈಕೆಯು ಕ್ಷೀಣಿಸುತ್ತಿದೆ ಇಲ್ಲವೇ ತಟಸ್ಥವಾಗಿಯೇ ಉಳಿದಿದೆ. ಯಾವುದೇ ತರಹದ ಪ್ರಸವಪೂರ್ವ ಸೌಲಭ್ಯಗಳನ್ನು ಪಡೆಯದ ಬುಡಕಟ್ಟುಗಳ ಮಹಿಳೆಯರ ಪ್ರಮಾಣವು ೧೯೯೨-೯೩ ರಿಂದ ೧೯೯೮-೯೯ ರ ಅವಧಿಯಲ್ಲಿ ಶೇ.೨೧.೪ರಿಂದ ಶೇ.೨೮.೨ಕ್ಕೆ ಅಧಿಕಗೊಂಡಿದೆ. ಈ ಅವಧಿಯಲ್ಲಿ ನೊಂದಾಯಿತ ವೈದ್ಯರಿಂದ ಪ್ರಸವಪೂರ್ವ ಸೇವೆಗಳನ್ನು ಪಡೆಯುವ ಗರ್ಭಿಣಿ ಮಹಿಳೆಯರ ಪ್ರಮಾಣವು ಶೇ.೫೩.೬ರಿಂದಶೇ.೪೮.೫ಕ್ಕೆ ಇಳಿಕೆಯಾಗಿದೆ. ಗರ್ಭಾವಸ್ಥೆಯ ಯಾವುದೇ ಸಮಯದಲ್ಲಿ ಟಿಟಾನಸ್ ಟಾಕ್ಸಾಯ್ಡ್ ಚುಚ್ಚುಮದ್ದನ್ನು ಪಡೆಯದೇ ಇರುವ ಮಹಿಳೆಯರ ಸಂಖ್ಯೆಯು ಶೇ.೩೩.೦ರಿಂದ ೩೩.೪ಕ್ಕೆ ಅಧಿಕಗೊಂಡಿದೆ. ಕಬ್ಬಿಣಾಂಶ ಮಾತ್ರೆ ಮತ್ತು ಫೋಲಿಕ್ ಆ್ಯಸಿಡ್ ಪಡೆಯುತ್ತಿರುವ ಮಹಿಳೆಯರ ಸಂಖ್ಯೆ ಶೇ.೬೧.೬ರಿಂದ೬೩.೩ಕ್ಕೆ ಏರಿಕೆಯಾಗಿದೆ. ಆದರೆ ಈ ಏರಿಕೆಯ ಪ್ರಮಾಣವು ಅತ್ಯಂತ ಕನಿಷ್ಠ ಮಟ್ಟದಲ್ಲಿದೆ. ಇದರಿಂದಾಗಿ ಪ್ರಸವಪೂರ್ವ ಸೇವೆಯ ವ್ಯಾಪ್ತಿಯಿಂದ ಅಧಿಕ ಸಂಖ್ಯೆಯ ಕುಟುಂಬಗಳು ಹೊರಗುಳಿದುಕೊಂಡಿವೆ ಮತ್ತು ತಾಯಿ ಮತ್ತು ಶಿಶುಗಳಿಗೆ ಬಡತನದ ಹೆಚ್ಚಳದಿಂದಾಗಿ ಅವರಲ್ಲಿ ಪೌಷ್ಠಿಕ ಆಹಾರದ ಕೊರತೆ ಎದ್ದು ಕಾಣುತ್ತದೆ.

೫.೧೦.ಆ. ಬುಡಕಟ್ಟು ಗರ್ಭಿಣಿಯರ ಹೆರಿಗೆಯ ವಿಧಾನಗಳು

ಬುಡಕಟ್ಟು ಗರ್ಭಿಣಿಯರು ಮಗುವಿನ ಜನನದ ಮತ್ತು ಜನನಾ ನಂತರದ ಅವಧಿಯಲ್ಲಿ ನುರಿತ ವೈದ್ಯರಿಂದ ಆರೈಕೆ ಪಡೆಯುವುದರಿಂದ, ಹೆರಿಗೆ ನೋವು, ಅಧಿಕ ರಕ್ತಸ್ರಾವ ಮತ್ತು ಇತರೆ ಸೋಂಕುಗಳ ಕಾರಣಗಳಿಂದ ಸಂಬವಿಸಬಹುದಾದ ಶಿಶು ಮತ್ತು ತಾಯಂದಿರ ಮರಣ ಪ್ರಮಾಣ ಕಡಿಮೆಯಾಗಿದೆ. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯು, ಸಾಂಸ್ಥಿಕವಾಗಿ ಆಗುವ ಹೆರಿಗೆಗಳು ೧೯೯೨-೯೩ರಲ್ಲಿ ಶೇ.೨೬.೮ ರಿಂದ ೧೯೯೮-೯೯ರಲ್ಲಿ ಶೇ.೩೧.೦ಕ್ಕೆ ಹೆಚ್ಚಿರುವುದನ್ನು ತಿಳಿಸುತ್ತವೆ. ಕೆಲವು ನುರಿತ ವೈದ್ಯರಿಂದ ಆರೈಕೆ ಪಡೆದವರ ಪ್ರಮಾಣ ಶೇ.೬೩.೩೬ ರಷ್ಟು ಅಧಿಕವಿರುವುದನ್ನು, ಶೇ.೨೪.೦೮ ರಷ್ಟು ಹೆರಿಗೆಗಳು ತರಬೇತಿ ಹೊಂದಿದ ದಾದಿಯರಿಂದ ಪಡೆದಿರುವುದನ್ನು ಮಾದರಿ ಸಮೀಕ್ಷೆ (ಆಸಾಂನಿ: ೨೦೦೪ಎ) ತಿಳಿಸುತ್ತದೆ. ಬುಡಕಟ್ಟು ಗರ್ಭಿಣಿಯರಲ್ಲಿ ಇದೊಂದು ಒಳ್ಳೆಯ ಬೆಳವಣಿಗೆಯಾಗಿದೆ. ಆದಾಗ್ಯೂ ಶಿಶು ಮರಣ ಪ್ರಮಾಣ ಮತ್ತು ತಾಯಂದಿರ ಮರಣ ಪ್ರಮಾಣಗಳು ಇನ್ನು ಕಡಿಮೆಯಾಗಬೇಕಾಗಿದೆ. ಪರಿಶಿಷ್ಟ ಬುಡಕಟ್ಟು ಕುಟುಂಬಗಳಿಗೆ ದೊರೆಯದಿರುವ ಆರೋಗ್ಯ ಸೇವೆಗಳು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿನ ವೈದ್ಯಕೀಯ ಸಿಬ್ಬಂದಿಯ ಗೈರು ಹಾಜರಿಯು ಬುಡಕಟ್ಟು ಜನರು ಆರೋಗ್ಯ ಸೌಕರ್ಯಗಳನ್ನು ಪಡೆಯುವಲ್ಲಿ ಎದುರಿಸುತ್ತಿರುವ ತೊಂದರೆಗಳಿಗೆ ಕಾರಣವಾದ ಅಂಶಗಳಾಗಿವೆ.

ಕೋಷ್ಟಕ: ೫.೧೧. ಗರ್ಭಾವಸ್ಥೆಯಲ್ಲಿ ನೀಡಲಾದ ಟಟಾನಸ್ ಟಾಕ್ಸಾಯ್ಡ್ ಚುಚ್ಚುಮದ್ದು ಮತ್ತು ಕಬ್ಬಿಣ/ ಫೋಲಿಕ್ ಮಾತ್ರೆಗಳು

ವರ್ಷ	ಒಂದೂ ಯಿಲ್ಲದ	ಒಂದು	ಎರಡು ಅಥವ ಹೆಚ್ಚು	ಕಬ್ಬಿಣ ಮತ್ತು ಪೋಲಿಕ್ ಆಸಿಡ್ ಮಾತ್ರೆ/ಔಷಧಿ ನೀಡಿಕೆ
೧೯೯೨-೯೩	೩೩.೦	೮.೦	೫೯.೦	೬೧.೬
೧೯೯೮-೯೯	೩೩.೪	೧೧.೦	೫೫.೬	೬೩.೩

ಆಧಾರಗಳು: ೧. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ-೧, ಕರ್ನಾಟಕ ೧೯೯೨-೯೩, ಐಐಪಿಐಸ್, ಮುಂಬಯಿ, ಫೆಬ್ರವರಿ ೧೯೯೫. ೨. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ-೨, ಕರ್ನಾಟಕ ೧೯೯೮-೯೯, ಐಐಪಿಎಸ್, ಮುಂಬಯಿ, ನವೆಂಬರ್ ೨೦೦೧.

೫.೧೦.ಇ. ಬುಡಕಟ್ಟು ಜನರಲ್ಲಿ ಕಂಡುಬರುವ ರೋಗಗಳು

ಅಪೌಷ್ಠಿಕತೆ ಮತ್ತು ಅವರು ವಾಸಮಾಡುವ ನೆಲೆಗಳ ವಾತಾವರಣದಿಂದ ಅವರಲ್ಲಿ ಸಾಮಾನ್ಯವಾಗಿ ಕಂಡುಬರುವ ಜಿಇಪಿಡಿ ಮತ್ತು ಸಿಕ್ಕಲ್ ಸೆಲ್ ಅನೀಮಿಯಾದಂತಹ ಅನುವಂಶೀಯ ರೋಗಗಳು ಮತ್ತು ಮಲೇರಿಯಾ, ಕ್ಷಯರೋಗ, ಲೈಂಗಿಕತೆಯಿಂದ ಹರಡುವ ರೋಗಗಳಾಗಿವೆ. ಬಹಳಷ್ಟು ಪರಿಶಿಷ್ಟ ಬುಡಕಟ್ಟು ಜನವಸತಿಗಳು ದೂರದ ಕಾಡಿನ ಪ್ರದೇಶಗಳಲ್ಲಿವೆ. ಈ ಜನವಸತಿಗಳಿಗೆ ತಕ್ಷಣದ ವೈದ್ಯಕೀಯ ಸಿಬ್ಬಂದಿಯು ದೊರೆಯುವುದು ವಿರಳವಾಗಿದ್ದು ಆ ನಿಟ್ಟನಲ್ಲಿ ಹೆಚ್ಚಿನ ಗಮನ ವಹಿಸಬೇಕಾಗಿದೆ.

೫.೧೦.ಈ. ಪೌಷ್ಟಿಕ ಆಹಾರ

ಬುಡಕಟ್ಟು ಜನರನ್ನ ಅರಣ್ಯಗಳಿಂದ ಹೊರ ಹಾಕುವ ಮುನ್ನ ಅವರಿಗೆ ಕಾಡಿನಲ್ಲಿ ಸಾಕಷ್ಟು ಪೌಷ್ಟಿಕಾಂಶವುಳ್ಳ ಆಹಾರ ಪಧಾರ್ಥಗಳು ದೊರೆಯುತ್ತಿದ್ದು ಅವರು ದೈಹಿಕವಾಗಿ ದಷ್ಟಪುಷ್ಟವಾಗಿರಲು ಸಾಹಾಯಕವಾಗಿದ್ದವು. ಆನಂತರದ ದಿನಗಳಲ್ಲಿ ನಾನಾ ಕಾರಣಗಳಿಂದಾಗಿ ಅರಣ್ಯದಿಂದ ಅವರನ್ನ ಹೊರಹಾಕಿ ಕಾಡಿನ ಪ್ರವೇಶವನ್ನ ನಿಷೇಧಿಸಿದ್ದರಿಂದಾಗಿ ಅವರಿಗೆ ಪೌಷ್ಟಿಕ ಆಹಾರದ ಕೊರತೆಯುಂಟಾಯಿತು. ಹೀಗಾಗಿ ಅವರು ಹಲವು ರೋಗಗಳಿಗೆ

ಗುರಿಯಾಗಬೇಕಾಗಿದೆ. ಇತ್ತೀಚಿನ ಬದಲಾಗುತ್ತಿರುವ ವ್ಯವಸ್ಥೆಯಲ್ಲಿ ಪೌಷ್ಟಿಕ ಆಹಾರದ ಲಭ್ಯತೆಯು ಅವರ ವರಮಾನವನ್ನು ಅವಲಂಬಿಸಿದೆ. ಅಲ್ಲದೇ ಆಹಾರದಲ್ಲಿರುವ ಪೌಷ್ಠಿಕಾಂಶಗಳ ಕುರಿತಾದ ಅವರ ತಿಳುವಳಿಕೆಯು ಸಹ ಇಲ್ಲಿ ಮುಖ್ಯವಾಗಿರುತ್ತದೆ. ಹಣ್ಣು (ಶೇ.೩೯.೮), ಮೊಟ್ಟೆ(ಶೇ.೪೯.೪) ಕೋಳಿ ಮಾಂಸ, ಕುರಿಮಾಂಸ ಮತ್ತು ಮೀನು(ಶೇ.೨೬.೬) ಇವುಗಳ ಅನುಭೋಗವು ಪರಿಶಿಷ್ಟ ಬುಡಕಟ್ಟು ಮಹಿಳೆಯರಲ್ಲಿ ಕಡಿಮೆ ಇರುತ್ತದೆ. ಹಾಲು/ಮೊಸರುಗಳ ಅನುಭೋಗ ಪರಿಶಿಷ್ಟ ಬುಡಕಟ್ಟು ಜನರಲ್ಲಿ, ಪರಿಶಿಷ್ಟ ಜಾತಿಯವರಿಗಿಂತ ಅಧಿಕವಿದ್ದು, ಹಿಂದುಳಿದ ಮತ್ತು ಇತರ ಜನಾಂಗದವರ ಅನುಭೋಗಕ್ಕಿಂತ ಕಡಿಮೆ ಇದೆ. ಇವರ ಆಹಾರವು ಕೆಲವು ಬೇಳೆಕಾಳುಗಳು, ಅವರೆಕಾಯಿ, ಉರುಳಿ, ನಾನಾ ಬಗೆಯ ಸೊಪ್ಪುಗಳು ಹಸಿರು ತರಕಾರಿ ಮತ್ತು ಇತರ ತರಕಾರಿಗಳನ್ನು ಒಳಗೊಂಡಿವೆ.

ಅನುಭೋಗಕ್ಕೆ ಸಂಬಂಧಿಸಿದ ಅಂಕಿ-ಅಂಶಗಳನ್ನು ಗಮನಿಸಿದಾಗ ಈ ಅಂಶಗಳು ಗೋಚರಿಸುತ್ತವೆ. (೧) ಬಡ ಮಹಿಳೆಯರು ಸೇವಿಸುವ ಹಾಲು, ಮೊಸರು, ಹಣ್ಣು ಮತ್ತು ತರಕಾರಿಗಳ ಪ್ರಮಾಣವು ಅಧಿಕ ವರಮಾನದ ಮಹಿಳೆಯರು ಸೇವಿಸುವ ಪ್ರಮಾಣಕ್ಕಿಂತ ಕಡಿಮೆ ಇರುತ್ತದೆ ಮತ್ತು (೨) ಗ್ರಾಮೀಣ ಮಹಿಳೆಯರು ಸೇವಿಸುವ ಹಾಲು, ಮೊಸರು, ಹಣ್ಣು ಮತ್ತು ಮಾಂಸಗಳ ಪ್ರಮಾಣವು ನಗರ ಪ್ರದೇಶದ ಮಹಿಳೆಯರು ಸೇವಿಸುವ ಪ್ರಮಾಣಕ್ಕಿಂತ ಕಡಿಮೆಯಾಗಿರುತ್ತದೆ. ಪರಿಶಿಷ್ಟ ಬುಡಕಟ್ಟು ಮಹಿಳೆಯರ ಪೌಷ್ಠಿಕಾಂಶ ಮಟ್ಟವು ಮತ್ತಷ್ಟು ಕಡಿಮೆ ಇರುವುದು ಆಶ್ಚರ್ಯ ಪಡಬೇಕಾದ ವಿಚಾರವಲ್ಲ. (ಎನ್‌ಎಫ್‌ಹೆಚ್‌ಎಸ್-೨, ೧೯೯೮-೯೯).ಅಪೌಷ್ಠಿಕತೆಯು ಹಲವು ವಿಧಗಳಲ್ಲಿ ಉಂಟು. ಪ್ರೋಟೀನ್-ಶಕ್ತಿಯ ಅಪೌಷ್ಠಿಕತೆ ಹಾಗೂ ಅಲ್ಪ ಪ್ರಮಾಣದ ಆಹಾರ ಸೇವನೆ ಇವರೆಡರಿಂದ ಉಂಟಾಗುವ ಶಕ್ತಿಯ ಅಪೌಷ್ಟಿಕತೆ, ಅನ್ನಾಂಗಗಳ ಕೊರತೆಯಿರುವ ಆಹಾರದ ಸೇವನೆಯಿಂದ ಅನ್ನಾಂಗಗಳ ಅಪೌಷ್ಟಿಕತೆ., ಗ್ರಾಮೀಣ ಬುಡಕಟ್ಟು ಮಹಿಳೆಯರಲ್ಲಿ ಶೇ.೯.೪ರಷ್ಟು ಮಹಿಳೆಯರು ಸರಾಸರಿಗಿಂತ ಕಡಿಮೆ ಎತ್ತರವಿದ್ದಾರೆ (ಇದು ಇತರೆ ಹಿಂದುಳಿದ ವರ್ಗ ಮತ್ತು ಇತರೆ ಸಮುದಾಯಗಳಿಗೆ ಸಮವಾಗಿದ್ದು, ಪರಿಶಿಷ್ಟ ಜಾತಿಯವರಿಗಿಂತ ಕಡಿಮೆಯಾಗಿದೆ).

ಬುಡಕಟ್ಟು ಜನರಲ್ಲಿ ಶೇ.೪೯.೦ರಷ್ಟು ಮಹಿಳೆಯರು ಬಿಎಂಐ ಸೂಚ್ಯಂಕಕ್ಕಿಂತ ಕಡಿಮೆಯಿದ್ದಾರೆ. ಅದು ಎಲ್ಲಾ ಸಾಮಾಜಿಕ ಗುಂಪುಗಳಿಗಿಂತ ಬಹಳ ಅಧಿಕವಾಗಿದೆ. ಭಾರತದ ಮಟ್ಟದಲ್ಲಿ ಬುಡಕಟ್ಟು ಮಹಿಳೆಯರಲ್ಲಿ ಶೇ.೧೩.೫.ರಷ್ಟು ಮಹಿಳೆಯರು ಸರಾಸರಿ ಎತ್ತರಕ್ಕಿಂತ ಕಡಿಮೆ ಎತ್ತರದವರಾಗಿದ್ದಾರೆ. ಶೇ.೪೬.೩ರಷ್ಟು ಮಹಿಳೆಯರು ಬಿಎಂಐ ಸೂಚ್ಯಂಕಕ್ಕಿಂತ ಕೆಳಗಿನ ಮಟ್ಟದಲ್ಲಿದ್ದಾರೆ. ಅದು ಪರಿಶಿಷ್ಟ ಜಾತಿಗಳು (ಶೇ.೪೨.೧), ಇತರೆ ಹಿಂದುಳಿದ ವರ್ಗಗಳು (ಶೇ.೩೫.೮) ಮತ್ತು ಇತರರಲ್ಲಿ (ಶೇ.೩೦.೫) ಇರುವುದಕ್ಕಿಂತ ಅಧಿಕವಾಗಿದೆ. ಬಡತನದಿಂದಾಗಿ ಪರಿಶಿಷ್ಟ ಬುಡಕಟ್ಟು ಮಹಿಳೆಯರು ಅಧಿಕಮಟ್ಟದ ಅರೆಪೌಷ್ಠಿಕತೆಯನ್ನು ಹೊಂದಿದ್ದಾರೆ. ಪರಿಶಿಷ್ಟ ಬುಡಕಟ್ಟು ಮಕ್ಕಳು ಸಹ ಅತಿ ಹೆಚ್ಚಿನ ಮಟ್ಟದ ಅಪೌಷ್ಠಿಕತೆಯಿಂದ ಬಳಲುತ್ತಿದ್ದಾರೆ. ಮಕ್ಕಳು ಮತ್ತು ಮಹಿಳೆಯರ ಅರೆ ಪೌಷ್ಠಿಕತೆಯನ್ನು ನಿಯಂತ್ರಿಸಲು ರೂಪಿಸಿರುವ ನೀತಿಗಳು ಗರ್ಭಿಣಿಯರು ಮತ್ತು ಹಾಲುಣಿಸುವ ತಾಯಂದಿರನ್ನು ಕೇಂದ್ರೀಕರಿಸುವುದರ ಜೊತೆಗೆ ಯುವತಿಯರ ಆಹಾರ ಸೇವನೆಯ ಪ್ರಮಾಣಗಳನ್ನು ಸಹ ಉತ್ತಮಗೊಳಿಸುವ ದಿಸೆಯಲ್ಲಿ ಗಮನಹರಿಸಬೇಕಾದ ಅವಶ್ಯಕತೆ ಇದೆ. ೦-೬ ವಯೋಮಾನದ ಮಕ್ಕಳು, ಗರ್ಭಿಣಿ ಮಹಿಳೆಯರು ಮತ್ತು ಬಾಣಂತಿಯರಿಗೆ ಸಮಗ್ರ ಬಾಲ ವಿಕಾಸ ಯೋಜನೆ (ಐಸಿಡಿಎಸ್), ಬಡವರಿಗೆ ೧೦ ಕೆ.ಜಿ. ಅಕ್ಕಿ ಮತ್ತು ೩ರೂಪಾಯಿಗಳಿಗೆ ಒಂದು ಕೆ.ಜಿ.ಗೋದಿ ಒದಗಿಸುವ

ಸಾರ್ವಜನಿಕ ವಿತರಣೆ ವ್ಯವಸ್ಥೆ, ಶಾಲಾ ಮಕ್ಕಳಿಗೆ ಮಧ್ಯಾಹ್ನದ ಊಟದಂಥಹ ಸರಕಾರಿ ಕಾರ್ಯಕ್ರಮಗಳಿವೆ. ಮಧ್ಯಾಹ್ನದ ಊಟದ ಯೋಜನೆಯು ಸರಿಯಾದ ದಿಸೆಯಲ್ಲಿ ಇರಿಸಿದ ಬಹುದೊಡ್ಡ ಹೆಜ್ಜೆಯಾಗಿದೆ.ಆದರೆ ದುರಾದೃಷ್ಟವಶಾತ್ ಅದು ಶಾಲೆಯಿಂದ ಹೊರಗುಳಿದ ಮಕ್ಕಳ ಅದರಲ್ಲಿಯೂ ಬಹು ಸಂಖ್ಯೆಯಲ್ಲಿರುವ ಬಾಲಕಿಯರ ಪೌಷ್ಠಿಕತೆಯ ಅಗತ್ಯತೆಗಳ ಕಡೆಗೆ ಗಮನಹರಿಸುತ್ತಿಲ್ಲ. ಈ ಅಂಶಗಳನ್ನ ಆದಿಮ ಬುಡಕಟ್ಟು ಜನರಲ್ಲಿ ಅದರಲ್ಲೂ ವಿಶೇಷವಾಗಿ ಮಹಿಳೆಯರು ಮತ್ತು ಮಕ್ಕಳಿಗೆ ಅನ್ವಯಿಸಿದಾಗ ಅದು ಮತ್ತಷ್ಟು ಶೋಚನೀಯ ಸ್ಥಿತಿಯಲ್ಲಿದೆ ಎಂಬುದು ತಿಳಿದು ಬರುತ್ತದೆ.

೫.೧೦.ಉ. ಕುಟುಂಬ ಯೋಜನೆ

ಇತ್ತೀಚಿನ ದಿನಗಳಲ್ಲಿ ಆದಿಮ ಅದರಲ್ಲೂ ಪರಿಶಿಷ್ಟ ಪಂಗಡದ ವಿವಾಹಿತ ಪುರುಷರು (ಶೇ.೪೮.೦) ಮತ್ತು ಮಹಿಳೆಯರಲ್ಲಿ (ಶೇ.೪೫.೦) ಜನನ ನಿಯಂತ್ರಣ ಪದ್ಧತಿಗಳ ಕುರಿತು ಹೆಚ್ಚಿನ ತಿಳುವಳಿಕೆ ಇದೆ. ಶೇ.೨೬.೩೦ ಮಹಿಳೆಯರು ಶಾಶ್ವತ ಜನನ ನಿಯಂತ್ರಣ ಪದ್ಧತಿಯನ್ನು ಆಯ್ಕೆ ಮಾಡಿಕೊಂಡಿರುವುದರಿಂದ ಅದು ಮಹಿಳೆಯರಲ್ಲಿ ಹೆಚ್ಚು ಪ್ರಚಲಿತದಲ್ಲಿರುವ ಪದ್ಧತಿಯಾಗಿದೆ.ಆದರೆ ಅದು ಪುರುಷರಲ್ಲಿ ಶೇ.೧.೫೮ ರಷ್ಟಿದ್ದು ಕಡಿಮೆ ಪ್ರಮಾಣದಲ್ಲಿದೆಯೆಂದು ಕಾಣಿಸುತ್ತದೆ (ಡಿಇಎಸ್:೨೦೦೪). ಮಹಿಳೆಯರು ಪದೇ ಪದೇ ಗರ್ಭಧರಿಸುವುದನ್ನು ಬಯಸದೇ ಇರುವುದರಿಂದ, ಜನನ ನಿಯಂತ್ರಣಕ್ಕೆ ಪುರುಷರು ಸಮಾನ ಜವಾಬ್ದಾರಿಗಳನ್ನು ಹೊರಲು ಸಿದ್ಧರಿಲ್ಲದಿರುವುದರಿಂದ ಅಥವಾ ಆರೋಗ್ಯ ಆರೈಕೆ ಒದಗಿಸುವವರು ಮಹಿಳೆಯರನ್ನೇ ಸುಲಭವಾಗಿ ಕುಟುಂಬ ಯೋಜನೆಗೆ ಗುರಿಪಡಿಸುತ್ತಿರುವುದರ ಕಾರಣಗಳಿಂದಾಗಿ ಕುಟುಂಬ ಯೋಜನೆಯ ಜವಾಬ್ದಾರಿ ಮಹಿಳೆಯರೇ ತೆಗೆದು ಕೊಳ್ಳಬೇಕಾಗಿದೆ. ಇತ್ತೀಚಿನ ದಿನಗಳಲ್ಲಿ ಸ್ವ ಸಹಾಯ ಗುಂಪುಗಳ ರಚನೆಯಿಂದಾಗಿ ಮಹಿಳೆಯರಲ್ಲಿ ಹೆಚ್ಚಿನ ಜಾಗರೂಕತೆಯಾಗುತ್ತಿದ್ದು ಅವು ಅವರ ಬವಿಷ್ಯದ ಬಗೆಗೆ ಹೆಚ್ಚಿನ ತಿಳುವಳಿಕೆಯನ್ನ ಮೂಡಿಸುತ್ತಿವೆ.

೫.೧೦.ಊ. ನೈರ್ಮಲ್ಯ ಮತ್ತು ಶುಚಿತ್ವ

ಬುಡಕಟ್ಟು ಜನರು ಮೂಲತಃ ಬಹಳ ನಾಜೂಕಿನ ಜನರಾಗಿದ್ದಾರೆ ಎಂಬುದು ಅವರ ಹಾಡಿಗಳು ಮತ್ತು ಮನೆಗಳನ್ನು ಅವಲೋಕಿಸಿದಾಗ ಅರಿವಾಗುವುದು. ೨೦೦೧ರ ಜನಗಣತಿ ವರದಿಗಳು ಪರಿಶಿಷ್ಟ ಬುಡಕಟ್ಟು ಕುಟುಂಬಗಳಿಗೆ ಸಂಬಂಧಿಸಿದ ನೈರ್ಮಲ್ಯೀಕರಣ ದುಃಸ್ಥಿತಿಯ ಮೇಲೆ ಬೆಳಕು ಚೆಲ್ಲುತ್ತದೆ. ಅದರ ಅಂಕಿ–ಅಂಶಗಳ ಪ್ರಕಾರ ಶೇ.೭೯.೭೧ರಷ್ಟು ಕುಟುಂಬಗಳು ಶೌಚಾಲಯಗಳನ್ನು ಹೊಂದಿಲ್ಲ ಮತ್ತು ಶೇ.೬೧ ರಷ್ಟು ಕುಟುಂಬಗಳು ಯಾವುದೇ ತರಹದ ಚರಂಡಿ ವ್ಯವಸ್ಥೆಯನ್ನು ಹೊಂದಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಶೇ.೯೦.೩ ರಷ್ಟು ಮತ್ತು ನಗರದಲ್ಲಿ ಶೇ.೪೧.೭ ರಷ್ಟು ಪರಿಶಿಷ್ಟ ಬುಡಕಟ್ಟು ಕುಟುಂಬಗಳು ಶೌಚಾಲಯಗಳನ್ನು ಹೊಂದಿಲ್ಲ. ರಾಜ್ಯದ ಸರಾಸರಿ ಶೇ.೮೨.೫(ಗ್ರಾಮೀಣ) ಮತ್ತು ಶೇ.೨೪.೮ (ನಗರ)ರಷ್ಟು ಇದ್ದು, ರಾಜ್ಯದ ಉಳಿದ

ಚಿತ್ರ:೫.೪ ಕುಡಿಯುವ ನೀರ್ಹಿಡಿಯುತ್ತಿರುವ ಕೊರಗ ಮಕ್ಕಳು



ಜನಸಂಖ್ಯೆಯು ಪರಿಶಿಷ್ಟ ಬುಡಕಟ್ಟುಗಳಿಗಿಂತ ಉತ್ತಮ ಮಟ್ಟದಲ್ಲಿದೆ ಎಂದು ಹೇಳಲಾಗುವುದಿಲ್ಲ. ಪರಿಶಿಷ್ಟ ಬುಡಕಟ್ಟುಗಳ ಶೇ.೪೨ ರಷ್ಟು ಕುಟುಂಬಗಳು ತಮ್ಮ ಮನೆಗಳಲ್ಲಿ ಸ್ನಾನ ಗೃಹಗಳನ್ನು ಹೊಂದಿವೆ. ಇದು ರಾಜ್ಯಮಟ್ಟದಲ್ಲಿ ಶೇ.೫೮.೯ ಮತ್ತು ರಾಷ್ಟ್ರ ಮಟ್ಟದಲ್ಲಿ ಶೇ.೩೬.೧ ಆಗಿದೆ.

ಭಾರತದ ಮಟ್ಟಕ್ಕೆ ಹೋಲಿಸಿದಾಗ ಕರ್ನಾಟಕದಲ್ಲಿನ ಪರಿಶಿಷ್ಟ ಬುಡಕಟ್ಟು ಕುಟುಂಬಗಳು ಉತ್ತಮವಾದ ನೈರ್ಮಲ್ಯ ಸೌಕರ್ಯಗಳನ್ನು ಹೊಂದಿವೆ. ಇಲ್ಲಿ ಅಂತರವು ಕೇವಲ ಪ್ರಮಾಣಕ್ಕೆ ಸಂಬಂಧಿಸಿದೆ. ಪರಿಶಿಷ್ಟ ಬುಡಕಟ್ಟುಗಳ ಶೇ.೧೧.೧೮ ರಷ್ಟು ಜನವಸತಿ ಪ್ರದೇಶ/ಗ್ರಾಮಗಳ ಸಮುದಾಯ ಶೌಚಾಲಯ ಹೊಂದಿವೆ. ಶೇ.೩೦.೫ರಷ್ಟು ಕುಟುಂಬಗಳು ತೆರೆದ ಚರಂಡಿಗಳನ್ನು ಮತ್ತು ಕೇವಲ ಶೇ.೮.೬ ರಷ್ಟು ಕುಟುಂಬಗಳು ಮುಚ್ಚಿದ ಚರಂಡಿ ವ್ಯವಸ್ಥೆಯನ್ನು ಹೊಂದಿವೆ. ಶೇ.೫೮.೦ರಷ್ಟು ಜನವಸತಿ ಪ್ರದೇಶಗಳಲ್ಲಿ ಮಳೆನೀರು ಸಾಗಲು ಬೇಕಾದ ಚರಂಡಿಗಳ ಕೊರತೆ ಇದೆ. ಅಧ್ಯಯನಕ್ಕೆ ಆಯ್ದುಕೊಂಡ ಒಟ್ಟಾರೆ ಕುಟುಂಬಗಳಲ್ಲಿ (೩೦೯೦) ಶೇ.೧೨ ರಷ್ಟು ಕುಟುಂಬಗಳು ಮಾತ್ರ ಶೌಚಾಲಯವನ್ನು ಹೊಂದಿವೆ. ಅದರಲ್ಲಿ ಜೇನುಕುರುಬರ ೧೫೬೨ ಕುಟುಂಬಗಳಲ್ಲಿ ೨೧೭ ಕುಟುಂಬಗಳು ಮತ್ತು ಕೊರಗರ ೧೫೨೮ ಕುಟುಂಬಗಳಲ್ಲಿ ಕೇವಲ ೧೬೭ ಕುಟುಂಬಗಳು ಮಾತ್ರ ಶೌಚಾಲಯಗಳನ್ನು ಹೊಂದಿವೆ.

೫.೧೦.೩. ಕುಡಿಯುವ ನೀರು

ಪರಿಶಿಷ್ಟ ಬುಡಕಟ್ಟುಗಳ ಶೇ.೫೩.೭ರಷ್ಟು ಕುಟುಂಬಗಳಿಗೆ ಕೊಳವೆ ಬಾವಿ/ನಲ್ಲಿ ನೀರೇ ಕುಡಿಯುವ ನೀರಿನ ಪ್ರಮುಖ ಮೂಲವಾಗಿದೆ (ಎಲ್ಲಾ ಕುಟುಂಬಗಳಲ್ಲಿ ಅದು ಶೇ.೫೮.೩ರಷ್ಟಾಗಿದೆ). ಪರಿಶಿಷ್ಟ ಬುಡಕಟ್ಟು (೧೨.೭) ಮತ್ತು ಪರಿಶಿಷ್ಟ ಜಾತಿ (೧೨.೬) ಗಳಿಗಿಂತ ಇತರೆ ಎಲ್ಲ ಕುಟುಂಬಗಳಲ್ಲಿ (೨೪.೧), ಅವರ ಮನೆಯ ಆವರಣದೊಳಗೆ/ ಸನಿಹದಲ್ಲಿ ನಲ್ಲಿ ಮೂಲಕ ದೊರೆಯುವ ಕುಡಿಯುವ ನೀರಿನ ಸೌಲಭ್ಯವು ಅಧಿಕವಾಗಿದೆ. ಸ್ವಲ್ಪ ಅಧಿಕ ಸಂಖ್ಯೆಯ ಪರಿಶಿಷ್ಟ ಬುಡಕಟ್ಟು ಕುಟುಂಬಗಳು ನಲ್ಲಿ ನೀರಿನ ಸೌಕರ್ಯವನ್ನು ತಮ್ಮ ಮನೆಯ ಹತ್ತಿರದಲ್ಲಿ ಪಡೆದಿರುತ್ತಾರೆ (ಜನಗಣತಿ ೨೦೦೧). ಸಮೀಕ್ಷೆ ಮಾಡಿದ ಆದಿಮ ಬುಡಕಟ್ಟು ಕುಟುಂಬಗಳ ಶೇ.೬೦.೮ ಕುಟುಂಬಗಳಿಗೆ ಕುಡಿಯುವ ನೀರಿನ ಸೌಲಭ್ಯವಿದೆ. ಜೇನುಕುರುಬರ ೬೪.೨ ಮತ್ತು ಕೊರಗರ ೫೭.೪೬ ಕುಟುಂಬಗಳು ಕುಡಿಯುವ ನೀರನ್ನ ಕೊಳವೆ ಬಾವಿ ಅಥವಾ ಸರ್ಕಾರದ ಕುಡಿಯುವ ನೀರಿನ ಸೌಲಭ್ಯದ ಮೂಲಗಳಿಂದ ನೀರನ್ನು ಪಡೆಯುತ್ತಿದ್ದಾರೆ. ಉಳಿದ ಶೇ. ೩೯.೮ ಕುಟುಂಬಗಳಿಗೆ ನದಿ, ಕೊಳ್ಳ, ಝರಿಗಳು, ತೆರದ ಬಾವಿಗಳು ಕುಡಿಯುವ ನೀರಿನ ಮೂಲಗಳಾಗಿವೆ.

೫.೧೧. ವಸತಿ ಸೌಲಭ್ಯ

ಕರ್ನಾಟಕದಲ್ಲಿ ೨೦೦೧ ರ ಜನಗಣತಿ ಪ್ರಕಾರ ಶಾಶ್ವತ ಮನೆಗಳಲ್ಲಿ ವಾಸಿಸುವ ಪರಿಶಿಷ್ಟ ಬುಡಕಟ್ಟು ಕುಟುಂಬಗಳ ಪ್ರಮಾಣವು (ಶೇ.೪೩.೭). ಪರಿಶಿಷ್ಟ ಜಾತಿ (೫೧.೧) ಮತ್ತು ಎಲ್ಲ ಕುಟುಂಬಗಳ ಪ್ರಮಾಣ (೫೪.೯)ಕ್ಕಿಂತ ಕಡಿಮೆಯಾಗಿದೆ. ಎಲ್ಲ ಕುಟುಂಬಗಳ ಶೇ.೩೫.೬ ಮತ್ತು ಪರಿಶಿಷ್ಟ ಜಾತಿಗಳ ಶೇ.೩೬.೬ಕ್ಕೆ ಹೋಲಿಸಿದರೆ ಶೇ.೩೯ ಪರಿಶಿಷ್ಟ ಬುಡಕಟ್ಟು ಕುಟುಂಬಗಳು ಅರೆ-ಶಾಶ್ವತ ಮನೆಗಳಲ್ಲಿ ವಾಸಿಸುತ್ತಾರೆ. ಗ್ರಾಮೀಣ ಪ್ರದೇಶದಲ್ಲಿ ಶೇ.೪೩.೪ ಕುಟುಂಬಗಳು ಅರೆ-ಶಾಶ್ವತ ಮನೆಗಳಲ್ಲಿ ವಾಸಿಸುತ್ತಿದ್ದರೆ, ನಗರ ಪ್ರದೇಶದಲ್ಲಿ ಅದು ಶೇ.೨೩.೧ ಆಗಿದೆ. ನಗರದಲ್ಲಿ ಬಹುತೇಕವಾಗಿ ಅಂದರೆ ಶೇ.೬೬.೯ರಷ್ಟು ಕುಟುಂಬಗಳು ಶಾಶ್ವತ ಮನೆಗಳಲ್ಲಿಯೇ ವಾಸಿಸುತ್ತಾರೆ. ಮನೆ ನಿರ್ಮಾಣದ ಸಂದರ್ಭದಲ್ಲಿ ಉಪಯೋಗಿಸುವ ಸಾಮಾನುಗಳ ಪೈಕಿ ಪರಿಶಿಷ್ಟ ಬುಡಕಟ್ಟು ಮತ್ತು ಎಲ್ಲ ಕುಟುಂಬಗಳ ನಡುವೆ ಸ್ವಲ್ಪ ಮಟ್ಟಿನ

ವ್ಯತ್ಯಾಸವಿದೆ. ಎಲ್ಲ ಜನವರ್ಗದ ಕುಟುಂಬಗಳಲ್ಲಿ ಶೇ.೭೮.೫ ಸ್ವಂತ ಮನೆಗಳನ್ನು ಹೊಂದಿದ್ದರೆ, ಶೇ.೮೪.೪ ರಷ್ಟು ಪರಿಶಿಷ್ಟ ಬುಡಕಟ್ಟು ಕುಟುಂಬಗಳು ಸ್ವಂತ ಮನೆಗಳನ್ನು ಹೊಂದಿವೆ. ಮನೆಗಳ ಒಡೆತನವು ಗ್ರಾಮೀಣ ಪ್ರದೇಶದಲ್ಲಿ ಅಧಿಕವಾಗಿದೆ (ಶೇ.೯೧.೯). ಅಧ್ಯಯನಕ್ಕೆ ಆಯ್ದುಕೊಂಡ ಒಟ್ಟು ಕುಟುಂಬಗಳಲ್ಲಿ ಶೇ.೮೪.೫ ರಷ್ಟು ಜೇನುಕುರುಬರು ಮತ್ತು ಶೇ.೮೧.೬ ಕೊರಗರಿಗೆ ಸ್ವಂತ ಮನೆಗಳಿವೆ ಅದರಲ್ಲಿ ಜೇನುಕುರುಬರ ಬಹಳಷ್ಟು (ಶೇ.೮೪) ಕುಟುಂಬಗಳು ಸರ್ಕಾರದ ವಸತಿ ಯೋಜನೆಗಳಡಿ ('ಆಶ್ರಯ', 'ಅಂಬೇಡ್ಕರ್', ವಾಲ್ಮೀಕಿ ವಸತಿ 'ಇಂದಿರಾಆವಾಸ್') ಸೌಲಭ್ಯ ಪಡೆದಿವೆ. ಹಾಗೇ ಕೊರಗರ ಶೇ.೫೯ ರಷ್ಟು ಕುಟುಂಬಗಳು ಮಾತ್ರ ಸರ್ಕಾರದ ವಸತಿ ಯೋಜನೆಗಳಡಿ ಸೌಲಭ್ಯ ಪಡೆದಿವೆ.

೫.೧೨. ವಿದ್ಯುತ್ ಸೌಲಭ್ಯ

ಪರಿಶಿಷ್ಟ ಬುಡಕಟ್ಟು ಕುಟುಂಬಗಳಿಗೆ ವಿದ್ಯುತ್ ಸೌಲಭ್ಯವು ಉತ್ತಮವಾಗಿದೆ. ೨೦೦೧ರ ಜನಗಣತಿಯ ಪ್ರಕಾರ ಎಲ್ಲ ಕುಟುಂಬಗಳು (ಶೇ.೭೮.೫) ಮತ್ತು (ಶೇ.೬೮.೫) ಪರಿಶಿಷ್ಟ ಜಾತಿಯ ಕುಟುಂಬಗಳಿಗೆ ಹೋಲಿಸಿದರೆ, ಕರ್ನಾಟಕದಲ್ಲಿ ಶೇ.೬೪.೭ರಷ್ಟು ಪರಿಶಿಷ್ಟ ಬುಡಕಟ್ಟು ಕುಟುಂಬಗಳಲ್ಲಿ ವಿದ್ಯುಚ್ಛಕ್ತಿಯು ದೊರೆತಿದೆ. ಗ್ರಾಮೀಣ ಪ್ರದೇಶದಲ್ಲಿ ಪರಿಶಿಷ್ಟ ಬುಡಕಟ್ಟು ಕುಟುಂಬಗಳು ವಿದ್ಯುಚ್ಛಕ್ತಿ (ಶೇ.೬೦.೩) ಮತ್ತು ಸೀಮೆ ಎಣ್ಣೆ(ಶೇ.೩೮.೮) ಎರಡರ ಮೇಲೂ ಅವಲಂಬನೆಯಾಗಿದ್ದರೆ ನಗರ ಪ್ರದೇಶದ ಪರಿಶಿಷ್ಟ ಪಂಗಡದ ಕುಟುಂಬಗಳು ವಿದ್ಯುಚ್ಛಕ್ತಿಯನ್ನೇ ಪ್ರಧಾನವಾಗಿ (ಶೇ.೮೦.೬) ಅವಲಂಬಿಸಿವೆ. ಅಧ್ಯಯನಕ್ಕೆ ಆಯ್ದುಕೊಂಡ ಒಟ್ಟು ಕುಟುಂಬಗಳಲ್ಲಿ ಶೇ ೭೮.೬ ಕುಟುಂಬಗಳು ವಿದ್ಯುತ್ ಸೌಲಭ್ಯವನ್ನು ಪಡೆದಿವೆ. ಇದು ಕ್ರಮವಾಗಿ ಜೇನುಕುರುಬರಲ್ಲಿ ಶೇ.೮೧.೮ ಮತ್ತು ಕೊರಗರಲ್ಲಿ ಶೇ.೭೫. ೩೨ ರಷ್ಟಿದೆ. ಅದರಲ್ಲಿ ಬಹಳಷ್ಟು ಜನರ ಅಹವಾಲುಗಳೆಂದರೆ ವಿದ್ಯುತ್ ಬಿಲ್ಲಿನ ದರದಲ್ಲಿನ ಹೆಚ್ಚಳ ಮತ್ತು ಏರು ಪೇರುಗಳು ಮತ್ತು ಸಂಪರ್ಕ ಕಲ್ಪಿಸುವಲ್ಲಿ ಅಧಿಕಾರಿಗಳ ನಿರ್ಲಕ್ಷತನವೇ ಕಾರಣವಾಗಿದೆ.

೫.೧೩. ಬುಡಕಟ್ಟು ಉಪ ಯೋಜನೆ

ಬುಡಕಟ್ಟು ಉಪ ಯೋಜನೆ ಪರಿಕಲ್ಪನೆ (ಟಿಎಸ್‌ಪಿ) ಐದನೇ ಪಂಚವಾರ್ಷಿಕ ಯೋಜನೆಯಿಂದ ಪ್ರಾರಂಭಗೊಂಡಿತು. ಅದರ ಅಡಿಯಲ್ಲಿ ೧೯೭೬-೭೭ರಲ್ಲಿ ಮೈಸೂರು, ಚಿಕ್ಕಮಗಳೂರು, ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಐದು ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ (ಐಟಿಡಿಪಿ) ಘಟಕಗಳಲ್ಲಿ ಬುಡಕಟ್ಟು ಉಪ ಯೋಜನೆ ಜಾರಿ ಗೊಳಿಸಲಾಯಿತು. ೧೯೯೨ರಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ಅದನ್ನು ವಿಸ್ತರಿಸಲಾಯಿತು. ಬಡತನ ನಿವಾರಣೆ, ಬುಡಕಟ್ಟು ಸಂಸ್ಕೃತಿಯ ರಕ್ಷಣೆ, ಶಿಕ್ಷಣ, ಆರೋಗ್ಯ ರಕ್ಷಣೆ ಮತ್ತು ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಬುಡಕಟ್ಟು ಉಪ ಯೋಜನೆಯ ಉದ್ದೇಶಗಳಾಗಿವೆ. ಬಡತನ ನಿರ್ಮೂಲನ ಕಾರ್ಯಕ್ರಮಗಳು, ಕೃಷಿ ಕಾರ್ಯಕ್ರಮಗಳು, ಪಶು ಸಂಗೋಪನೆ, ರೇಷ್ಮೆ, ತೋಟಗಾರಿಕೆ, ಗ್ರಾಮ ಮತ್ತು ಸಣ್ಣ ಕೈಗಾರಿಕೆಗಳು, ಉದ್ಯೋಗ ಸೃಷ್ಟಿಸುವಂಥ 'ಸ್ವರ್ಣ ಜಯಂತಿ ರೋಜಗಾರ್ ಯೋಜನೆ'ಗಳನ್ನು(ಎಸ್‌ಜೆಎಸ್‌ವೈ) ಬುಡಕಟ್ಟು ಉಪ ಯೋಜನೆ ಒಳಗೊಂಡಿರುತ್ತದೆ. ಪರಿಶಿಷ್ಟ ಬುಡಕಟ್ಟುಗಳಿಗೆ ನೇರವಾಗಿ ಮತ್ತು ಪ್ರಮಾಣಾತ್ಮಕವಾಗಿ ಪ್ರಯೋಜನಗಳನ್ನು ನೀಡುವ ವಲಯಗಳನ್ನು ವಿಭಜಿತ ವಲಯಗಳೆಂದು ವರ್ಗೀಕರಿಸಲಾಗಿದೆ. ಗಿರಿಜನ ಉಪಯೋಜನೆಯ ನಿಧಿಯು ಈ ವಲಯಗಳಿಗೆ ಮಾತ್ರ ಸೀಮಿತವಾಗಿರುತ್ತದೆ. 'ಅವಿಭಜಿತ' ವಲಯಗಳು ದೊಡ್ಡ ಮತ್ತು ಮಧ್ಯಮ ಗಾತ್ರದ ನೀರಾವರಿ ಯೋಜನೆಗಳು, ಇಂಧನ, ಸಾಲ ಮುಂತಾದವುಗಳನ್ನು ಒಳಗೊಂಡಿರುತ್ತದೆ.

೫.೧೪. ಬುಡಕಟ್ಟು ಉಪಯೋಜನೆ ಕಾರ್ಯಕ್ರಮಗಳ ಸಮೀಕ್ಷೆ

ಅಧ್ಯಯನದ ಅನುಕೂಲಕ್ಕಾಗಿ ಬುಡಕಟ್ಟುಗಳ ಅಭಿವೃದ್ಧಿಯನ್ನು ಉನ್ನತೀಕರಿಸುವಲ್ಲಿ ಯಶಸ್ವಿಯಾಗಿರುವ ಮತ್ತು ಸಂಪೂರ್ಣವಾಗಿ ವಿಫಲವಾಗಿರುವ ಕಾರ್ಯಕ್ರಮಗಳನ್ನು ಅವಲೋಕಿಸಲಾಗಿದೆ. ಬಹಳಷ್ಟು ಆದಿವಾಸಿ ಬುಡಕಟ್ಟು ಜನರು ಸಣ್ಣ ಮತ್ತು ಅತಿ ಸಣ್ಣ ಕೃಷಿಕರಾಗಿದ್ದು ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ಲಂಚಗುಳಿತನ ಇತ್ಯಾದಿಗಳಿಂದಾಗಿ ಬುಡಕಟ್ಟು ಜನರು ಯೋಜನೆಯ ಫಲವನ್ನು ಪಡೆಯಲು ತಿಂಗಳಾನುಗಟ್ಟಲೆ ಕಾಯಬೇಕಾಗಿದೆ, ಕೆಲವೊಮ್ಮೆ ತಮ್ಮ ದಿನನಿತ್ಯದ ಅಗತ್ಯತೆಗಳನ್ನು ಪಡೆಯಲೂ ಸಹ ಸಾಧ್ಯವಾಗದ ಪರಿಸ್ಥಿತಿಯಲ್ಲಿ ಕಾಲ ಕಳೆಯಬೇಕಾದ ವಾತಾವರಣ ನಿರ್ಮಾಣವಾಗಿದೆ. ಬಡ್ಡಿ ವ್ಯವಹಾರದಾರರ ಕುತಂತ್ರದಿಂದ ತಮ್ಮ ಭೂಮಿಯನ್ನ ಗುತ್ತಿಗೆಗೆ ನೀಡಿಯೋ ಅಥವಾ ಮಾರಾಟ ಮಾಡಿಯೋ ಕೃಷಿ ಕೂಲಿಗಳಾಗಿ, ವಲಸೆ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ, ಕೆಲವೊಮ್ಮೆ ಸ್ಥಳೀಯ ಮುಖಂಡರುಗಳು ಮತ್ತು ಜಮೀನ್ದಾರರು ತಮ್ಮ ಪ್ರಭಾವ ಬೀರಿ ಬಲತ್ಕಾರವಾಗಿಯಾದರೂ ಸರಿಯೆ ಅವರ ಭೂಮಿಯನ್ನ ವಶಪಡಿಸಿಕೊಂಡಿರುವ ಸಂದರ್ಭಗಳುಂಟು.

೫.೧೪.ಅ. ಕಿರುಅರಣ್ಯ ಉತ್ಪನ್ನಗಳ ಸಂಗ್ರಹಣೆ ಹಾಗೂ ಬುಡಕಟ್ಟು ಸಹಕಾರಿ ಸಂಘಗಳು

ಬುಡಕಟ್ಟು ಜನರು ಗುಡ್ಡಗಾಡು, ಅರಣ್ಯ ಪ್ರದೇಶಗಳಲ್ಲಿ ವಾಸಿಸುತ್ತಿದ್ದು ತಮ್ಮ ಜೀವನೋಪಾಯಕ್ಕಾಗಿ ಅರಣ್ಯ ಉತ್ಪನ್ನಗಳನ್ನು ಅವಲಂಬಿಸಿದ್ದಾರೆ. ದೊಡ್ಡ ಪ್ರಮಾಣದ ಆದಿವಾಸಿ ವಿವಿಧೋದ್ದೇಶ ಸೋಸೈಟಿಗಳನ್ನು (ಲ್ಯಾಂಪ್ಸ್) ೧೯೭೦ರ ದಶಕದಲ್ಲಿ ರಚಿಸಲಾಗಿದ್ದು, ಇದಕ್ಕೆ ಬುಡಕಟ್ಟು ಜನರು ಸದಸ್ಯರಾಗಿರುತ್ತಾರೆ. ಅರಣ್ಯಗಳಿಂದ ಬುಡಕಟ್ಟು ಜನರು ಸಂಗ್ರಹಿಸಲಾದ ಮರಮುಟ್ಟು ರಹಿತ ಅರಣ್ಯ ಉತ್ಪನ್ನಗಳನ್ನು ಮಾರಲು ಇದನ್ನು ರಚಿಸಲಾಗಿದೆ. ಸಂಘಗಳು ತನ್ನ ಸದಸ್ಯರಿಗೆ ಮುಖ್ಯವಾದ ಆಹಾರ ಸಾಮಗ್ರಿಗಳು ಮತ್ತು ಅನುಭೋಗದ ಸರಕುಗಳನ್ನು ಪೂರೈಸುತ್ತದೆ. ಪ್ರಸ್ತುತ ಕರ್ನಾಟಕದಲ್ಲಿ ೨೧ ಲ್ಯಾಂಪ್ ಸೊಸೈಟಿಗಳಿವೆ. ಇದರ ವ್ಯಾಪ್ತಿಯಲ್ಲಿ ೪೨,೧೮೨ ಬುಡಕಟ್ಟು ಕುಟುಂಬಗಳಿವೆ. ೬೩,೫೫೮ ಸದಸ್ಯರಲ್ಲಿ ೨೫,೫೦೪ ರಷ್ಟು ಸದಸ್ಯರು ಕ್ರಿಯಾಶೀಲರಾಗಿದ್ದಾರೆ. ಬುಡಕಟ್ಟು ಜನರು ಆಯ್ದು ತಂದ ಅರಣ್ಯದ ಸಣ್ಣ ಪ್ರಮಾಣದ ವಸ್ತುಗಳಿಗೆ ಮಾರುಕಟ್ಟೆ ವ್ಯವಸ್ಥೆಯನ್ನು ಒದಗಿಸಲು ಹಾಗೂ ಆ ವಸ್ತುಗಳಿಗೆ ಸರಿಯಾದ ಬೆಲೆಯನ್ನು ದೃಢಪಡಿಸಲು ಸ್ಥಾಪಿಸಲಾಗಿರುವ ಲ್ಯಾಂಪ್ ಸಹಕಾರ ಸಂಘಗಳು ಮಿಶ್ರ ಫಲಿತಾಂಶಗಳನ್ನು ಹೊಂದಿವೆ. ಕೆಲವೊಮ್ಮೆ ಅವು ಮರಮುಟ್ಟು ರಹಿತ ಅರಣ್ಯ ವಸ್ತುಗಳ (ಎಂಎಫ್‌ಪಿ) ಬೆಲೆ ನಿರ್ಧರಿಸುವಲ್ಲಿ ಬುಡಕಟ್ಟು ಜನರಿಗೆ ಸಾಕಷ್ಟು ಅವಕಾಶ ಒದಗಿಸುತ್ತಿಲ್ಲ. ಮಾರುವ ಬೆಲೆಗಳು ಕ್ರಮೇಣವಾಗಿ ಏರಿಕೆಯನ್ನು ದಾಖಲಿಸಿದ್ದರೂ, ಬುಡಕಟ್ಟು ಜನರಿಂದ ಪಡೆಯಲಿರುವ ವಸ್ತುಗಳಿಗೆ ನಿಗದಿ ಮಾಡಿರುವ ಬೆಲೆಗಳು ಕನಿಷ್ಟ ಮಟ್ಟದಲ್ಲಿ ಏರಿಕೆ ಕಾಣುತ್ತವೆ.

ಬುಡಕಟ್ಟು ಜನರು ಅರಣ್ಯದ ಒಳ ಪ್ರದೇಶಗಳಲ್ಲಿ ಹೋಗಿ, ಕೆಲ ವೈಯಕ್ತಿಕ ಅಪಾಯಗಳನ್ನು ಲೆಕ್ಕಿಸದೇ ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸುತ್ತಿದ್ದಾರೆ.ಆದ್ದರಿಂದ ಲ್ಯಾಂಪ್ಸ್ ಅವರಿಂದ ಪಡೆಯಲಾಗುವ ಖರೀದಿ ಬೆಲೆಗಳನ್ನು ಹೆಚ್ಚಿಸಬೇಕು. ಇದರಿಂದ ಅವರು ತಮ್ಮ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳಲು ಸಾಧ್ಯವಾಗುತ್ತದೆ. ಕೆಲವೊಮ್ಮೆ ಈ ಆದಿಮ ಬುಡಕಟ್ಟಿನ ಅಮಾಯಕ ಜನರು ತಮ್ಮವರಿಂದಲೇ ಮೋಸ ಹೋಗುತ್ತಾರೆ. ಹಲವು ಸದ್ಯರು ತಮ್ಮ ಬಡತನದ ಕಾರಣಕ್ಕಾಗಿ ಸಂಘದಿಂದ ಮೊದಲೇ ಹಣವನ್ನ ಪಡೆದು ಕಟ್ಟಲಾಗದೆ ಒದ್ದಾಡಬೇಕಾಗುತ್ತದೆ. ಅರಣ್ಯದೊಳಗಡೆ ಪ್ರವೇಶ ನಿಷೇಧದಿಂದಾಗಿ ಕಿರು ಅರಣ್ಯ ಉತ್ಪನ್ನಗಳ ಸಂಗ್ರಹಣೆಯನ್ನ ಮಾಡಲಾಗದೆ ಮತ್ತಷ್ಟು ಶೋಷಣೆಗೊಳಗಾಗುತ್ತಾರೆ.

೫.೧೪.ಆ. ತೋಟಗಾರಿಕೆ ಕಾರ್ಯಕ್ರಮಗಳು

ತೋಟಗಾರಿಕೆ ಬೆಳೆಗಳ ಅಭಿವೃದ್ಧಿಯ ಬಗೆಗೆ ಅಥವ ಕೃಷಿಯ ವಾಣಿಜ್ಯೀಕರಣದ ಬಗೆಗೆ ಆದಿವಾಸಿ ಬುಡಕಟ್ಟು ಜನರಾದ ಜೇನು ಕುರುಬರಿಗಾಗಲಿ, ಕೊರಗರಿಗಾಗಲಿ ಕಿಂಚಿತ್ತು ಪರಿಜ್ಞಾನವಿಲ್ಲ. ಹೀಗಾಗಿ ಅವರಿಗೆ ತೋಟಗಾರಿಕೆಯ ಬೆಳೆಗಳಲ್ಲಿ ಲಾಭಕ್ಕಿಂತ ನಷ್ಟವೆ ಹೆಚ್ಚು. ಮಾದರಿ ಸಮೀಕ್ಷೆಯ ಪ್ರಕಾರ ಅವರು ತೊಟಗಾರಿಕೆಯಲ್ಲಿ ತೊಡಗುವ ಮುನ್ನ ಅವರ ಸರಾಸರಿ ವಾರ್ಷಿಕ ಆದಾಯವು ೧೨,೮೭೭ ರಷ್ಟಿದ್ದದ್ದು ತೊಟಗಾರಿಕೆಯಲ್ಲಿ ತೊಡಗಿದ ನಂತರ ಅವರ ಆದಾಯವು ರೂ ೧೨,೧೭೪ ಕ್ಕೆ ಇಳಿದಿದೆ. ಯೋಜನೆಯನ್ನ ಜಾರಿಗೊಳಿಸುವಲ್ಲಿ ಉಂಟಾಗುವ ವಿಳಂಬ, ಅದಿಕಾರಿಗಳ ಪಕ್ಷಪಾತ, ಲಂಚಗುಳಿತನ ಇವುಗಳು ಇವರ ಸಮಸ್ಯೆಗಳ ಉಲ್ಬಣಕ್ಕೆ ಕಾರಣವಾಗಿವೆ.

೫.೧೪.ಇ. ರೇಷ್ಮೆ ಕೃಷಿ

ಸಮಗ್ರ ಗಿರಿಜನ ಅಭಿವೃದ್ಧಿ ಯೊಜನೆಯಡಿ ಹಾಗೂ ಬುಡಕಟ್ಟು ಉಪ ಯೋಜನೆಯಡಿ ಜೇನು ಕುರುಬ ಮತ್ತು ಕೊರಗ ಆದಿವಾಸಿ ಸಮುದಾಯಗಳಿಗೆ ರೇಷ್ಮೆ ಕೃಷಿಗೆ ಧನ ಸಹಾಯವನ್ನ ಮತ್ತು ರೇಷ್ಮೆ ಕೃಷಿಗೆ ಅಗತ್ಯವಿರುವ ಮೂಲಭೂತ ಸೌಲಭ್ಯಗಳನ್ನ ನೀಡಲಾಗುತ್ತದೆ. ಈ ಯೋಜನೆಯು ಆದಿವಾಸಿ ಜೇನು ಕುರುಬ ಮತ್ತು ಕೊರಗರಿಗೆ ಒಂದು ವರದಾನವಾಗಿದೆ ಎಂದೇ ಭಾವಿಸಲಾಗಿದೆ. ಮೈಸೂರು ಜಿಲ್ಲೆಯಲ್ಲಿ ಶೇ. ೦೪ ರಷ್ಟು ಆದಿವಾಸಿ ಜೇನು ಕುರುಬರು ಈ ವೃತ್ತಿಯಲ್ಲಿ ತೊಡಗಿದ್ದು ಶೇ.೦೩ ರಷ್ಟು ಕೃಷಿಕರು ಲಾಭ ಪಡೆಯಲು ವಿಫಲರಾಗಿದ್ದಾರೆ. ಕಾರಣ ರೇಷ್ಮೆ ಕೃಷಿಯ ತರಬೇತಿಯ ಕೊರತೆ, ಮತ್ತು ಬಂಡವಾಳದ ಕೊರತೆ ಮತ್ತು ಅದನ್ನ ಮಾರಾಟ ಮಾಡಲು ಅಗತ್ಯವಿರುವ ಮಾರುಕಟ್ಟೆ ಜ್ಞಾನದ ಕೊರತೆ.

೫.೧೪.ಈ. ಪಶು ಸಂಗೋಪನೆ

ಕೃಷಿ ಜೀವನಾಧಾರವಾದಂತೆ, ಪಶುಸಂಗೋಪನೆ ಬುಡಕಟ್ಟು ಜನರ ವರಮಾನ ಗಳಿಕೆಯ ಪ್ರಮುಖ ಚಟುವಟಿಕೆಯಾಗಿದೆ. ಇದು ತತ್‌ಕ್ಷಣದ ಪ್ರತಿಫಲಗಳನ್ನು ನೀಡುತ್ತದೆ. ದುರಾಧೃಷ್ಟವಶಾತ್, ಅಗತ್ಯವಾದ ಹುಲ್ಲು, ನೀರು ಮತ್ತು ಮಾರುಕಟ್ಟೆ ವ್ಯವಸ್ಥೆಗಳ ಕೊರತೆ/ ಅವುಗಳನ್ನು ಒದಗಿಸುವಲ್ಲಿನ ಅವರ ಅಶಕ್ತತೆಯಿಂದಾಗಿ ಬರುವ ವರಮಾನ ಅತ್ಯಂತ ಕನಿಷ್ಟವಾದುದಾಗಿದೆ. ಶೇ.೩೦.೮೨ ರಷ್ಟು ಕುಟುಂಬಗಳು ತಮ್ಮ ಆಸ್ತಿಯನ್ನು ನಿರ್ವಹಿಸುವಲ್ಲಿ ವಿಫಲಗೊಂಡಿರುವ ವಿಷಯ ಆಶ್ಚರ್ಯ ಪಡಬೇಕಾದುದೇನಲ್ಲ. (ಬುಡಕಟ್ಟು ಉಪಯೋಜನೆ-ಆಸ್ತಿ ಮೌಲ್ಯಮಾಪನ ಅಧ್ಯಯನ ೨೦೦೦-೦೧). ಈ ಯೋಜನೆಯ ಮುಖ್ಯ ಮತ್ತು ಮೂಲ ಸಮಸ್ಯೆಯೆಂದರೆ ಯೋಜನಾ ಸೌಲಭ್ಯದ ವಿತರಣೆಯ ಆರಂಬದಲ್ಲೇ ಸಮಸ್ಯೆ ಉಗಮವಾಗುತ್ತದೆ. ಉದಾ: ಕುರಿ ಘಟಕ, ಮೇಕೆ ಘಟಕ, ಹಸು ಘಟಕಗಳನ್ನ ನೀಡುವಾಗ ಉತ್ತಮ ತಳಿಯ ಪಶುಗಳನ್ನ ನೀಡದೆ ಬುಡಕಟ್ಟು ಜನರಿಗೆ ಮಾರಕವಾಗುವಂತಹ ಕಳಪೆ ಪಶುಗಳನ್ನ ಆಯ್ಕೆಮಾಡಿ ಮಧ್ಯವರ್ತಿಗಳು ಮತ್ತು ಅಧಿಕಾರಿಗಳು ಪರಸ್ಪರ ಶಾಮೀಲಾಗಿ ಬುಡಕಟ್ಟು ಜನರ ತಲೆಯ ಮೇಲೆ ಮತ್ತಷ್ಟು ಭಾರ ಎಳೆಯುತ್ತಾರೆ. ಅಧ್ಯಯನಕ್ಕೆ ಆಯ್ದುಕೊಂಡಿರುವ ಒಟ್ಟು ಕುಟುಂಬಗಳಲ್ಲಿ ಶೇ.೩೪.೫ ರಷ್ಟು ಜೇನು ಕುರುಬರು ಮತ್ತು ಕೇವಲ ಶೇ. ೧೩ ರಷ್ಟು ಕೊರಗ ಕುಟುಂಬಗಳು ಸರ್ಕಾರದಿಂದ ಸೌಲಭ್ಯಗಳನ್ನ ಪಡೆದಿದ್ದು ಅವರು ಪಶುಗಳ ಸಾಕಾಣಿಕೆಯಲ್ಲಿ ಸಾಕಷ್ಟು ತೊಂದರೆಪಡಬೇಕಾಗಿದೆ ಎಂಬುದನ್ನು ವಕ್ತೃಗಳು ತಿಳಿಸುತ್ತಾರೆ. ಹಸು ಘಟಕ ಯೋಜನೆಯಡಿ ಹಾಲನ್ನು ಪಡೆಯುವ ಇವರು ಕನಿಷ್ಟ ೫ ರಿಂದ ೬ಕಿಮೀ ದೂರ ನಡೆದು ಮಾರಾಟ ಮಾಡಬೇಕು, ಇಲ್ಲವಾದಲ್ಲಿ ನಗರ ಪ್ರದೇಶಕ್ಕೊಯ್ದು ಮಾರಾಟ ಮಾಡಬೇಕಿದೆ.ಅಲ್ಲದೆ ಪಶು

ಸಾಕಾಣಿಕೆಯ ಅರಿವಿಲ್ಲದ ಆದಿವಾಸಿ ಜೇನುಕುರುಬ ಮತ್ತು ಕೊರಗರು ಅದರಿಂದ ಲಾಭ ಪಡೆಯಲು ವಿಫಲರಾಗಿದ್ದಾರೆ.

೫.೧೪.ಉ. ಸ್ವ ಉದ್ಯೋಗ ಮತ್ತು ವರಮಾನ ಸೃಷ್ಟಿ ಕಾರ್ಯಕ್ರಮಗಳು

ಬುಡಕಟ್ಟುಗಳಾದ ಜೇನುಕುರುಬರು ಮತ್ತು ಕೊರಗರ ಕಲ್ಯಾಣ ಮತ್ತು ಅಭಿವೃದ್ಧಿಗೆ ರೂಪಿಸಿರುವ ಯೋಜನೆಗಳನ್ನ ಸರ್ಕಾರಗಳು ಮತ್ತು ಸ್ವಯಂ ಸೇವಾ ಸಂಸ್ಥೆಗಳು ೧೯೫೧-೫೨ ರಿಂದಲೂ ಜಾರಿಗೆ ತರುತ್ತಿದ್ದರೂ ಸಹ ಈ ಎರಡು ಆದಿವಾಸಿಗಳ ಜೀವನ ಮಟ್ಟ ಮಾತ್ರ ಸುಧಾರಿಸಿರುವುದಿಲ್ಲ. ಇಂದಿಗೂ ಇವರ ಬಡತನ ರೇಖೆಯ ಪ್ರಮಾಣ ಇತರೆ ವರ್ಗಗಳಿಗೆ ಹೋಲಿಸಿದಲ್ಲಿ ಮಂದಗತಿಯಲ್ಲಿ ಇಳಿಯುತ್ತಿದೆ. ಕಾರಣ ಕೃಷಿಯಲ್ಲಿ ತೊಡಗಲು ಕೃಷಿ ಭೂಮಿಯ ಅಲಭ್ಯತೆ, ಪಶು ಸಂಗೋಪನೆಗೆ ಬಂಡವಾಳದ ಕೊರತೆ, ಹಾಗೂ ಕಿರು ಅರಣ್ಯೋತ್ಪನ್ನಗಳ ಸಂಗ್ರಹಣೆಗೆ ಅರಣ್ಯ ಇಲಾಖೆಯ ನಿರ್ಬಂಧಗಳು ಇವೆ ಇತ್ಯಾದಿ ಕಾರಣಗಳಿಗಾಗಿ ಅವರು ಮುಂದೆ ಬರಲು ಸಾಧ್ಯವಾಗುತಿಲ್ಲ. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಕುಟುಂಬಗಳಲ್ಲಿ ಶೇ. ೪೦ ರಿಂದ ೪೫ ರಷ್ಟು ಕುಟುಂಬಗಳು ನಿರುದ್ಯೋಗ ಮತ್ತು ಅರೆ ನಿರುದ್ಯೋಗಗಳಿಂದ ನರಳುತ್ತಿವೆ. ಬಡತನ ನಿರ್ಮೂಲನೆಗೆ ಮತ್ತು ವರಮಾನ ಸೃಷ್ಟಿಗೆ ಎಸ್‌ಜಿಎಸ್‌ವೈ, ಎಸ್‌ಜಿಎಸ್‌ವೈ, ಸ್ತ್ರೀ ಶಕ್ತಿಗಳಂಥ ಕಾರ್ಯಕ್ರಮಗಳಿವೆ. ಇವುಗಳ ಹೊರತಾಗಿಯೂ ಭೂ ರಹಿತ, ಒಣ ಭೂಮಿಗಳನ್ನು ಹೊಂದಿರುವ ಪರಿಶಿಷ್ಟ ಬುಡಕಟ್ಟು ಜನರ ಅಗತ್ಯತೆಗಳನ್ನು ಪೂರೈಸಲು ನಿರ್ದಿಷ್ಟವಾದ ಯೋಜನೆಗಳು ಸಹ ಇವೆ. ಈ ಸಮುದಾಯಗಳ ಆರ್ಥಿಕ ಅಭಿವೃದ್ಧಿಗಾಗಿ ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮವು ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತದೆಯಾದರೂ ಅವುಗಳು ಅಗತ್ಯವಿರುವ ಕುಟುಂಬಗಳಿಗೆ ಸಮರ್ಪಕವಾಗಿ ಮುಟ್ಟುತ್ತಿಲ್ಲ.

೫.೧೫. ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಕಾರ್ಯಕ್ರಮಗಳು

೫.೧೫.ಅ. ಭೂಮಿ ಖರೀದಿ ಯೋಜನೆ

ಈ ಯೋಜನೆ ಅಡಿಯಲ್ಲಿ ಪರಿಶಿಷ್ಟೇತರರಿಂದ ರೂ.೬೦, ೦೦೦ಗಳ ಘಟಕ ವೆಚ್ಚದಲ್ಲಿ ಭೂಮಿಯನ್ನು ಖರೀದಿಸಿ, ಅದನ್ನು ಭೂರಹಿತ ಕೃಷಿ ಕಾರ್ಮಿಕರಿಗೆ ಶೇ.೫೦ರ ಸಬ್ಸಿಡಿ ರೂಪದಲ್ಲಿ ನೀಡಲಾಗುತ್ತದೆ. ಬಹಳಷ್ಟು ಆದಿಮ ಬುಡಕಟ್ಟು ಜನರ ಅಹವಾಲುಗಳೆಂದರೆ ಸರ್ಕಾರ ನಿಗದಿಪಡಿಸಿರುವ ದರದಲ್ಲಿ ಸರಿಯಾದ ಕೃಷಿ ಭೂಮಿ ದೊರಯದಿರುವುದು ಮತ್ತು ಲಭ್ಯವಿರುವ ಕೃಷಿ ಭೂಮಿಯು ವ್ಯವಸಾಯಕ್ಕೆ ಯೋಗ್ಯವಾಗದಿರುವುದು, ಅಲ್ಲದೆ ಅಂತಹ ಭೂಮಿಯಲ್ಲಿ ಕೃಷಿಯನ್ನಾರಂಭಿಸಲು ಬಂಡವಾಳದ ಕೊರತೆ ಇತ್ಯಾದಿಗಳು ಅಂತಹ ಅಗತ್ಯಗಳನ್ನ ಪೂರೈಸಲು ಸರ್ಕಾರಗಳು ಮತ್ತು ಸ್ವಯಂ ಸೇವಾ ಸಂಸ್ಥೆಗಳು ಸಮಾಜಕಾರ್ಯದ ತತ್ವಗಳ ಆಧಾರದ ಮೇಲೆ ಕಾರ್ಯ ನಿರ್ವಹಿಸಿದಾಗ ಅವರು ಅಭಿವೃದ್ಧಿಯನ್ನ ಸಾದಿಸಬಹುದಾಗಿದೆ ಹಾಗೂ ಸಮಾಜದ ಮುಖ್ಯವಾಹಿನಿಯೊಂದಿಗೆ ಗುರತಿಸಿಕೊಳ್ಳಲು ಅವು ಸಾಧ್ಯವಾಗುತ್ತವೆ.

೫.೧೫.ಆ. ಸ್ವಯಂ ಉದ್ಯೋಗ

ಈ ಕಾರ್ಯಕ್ರಮದ ಅಡಿಯಲ್ಲಿ ಹಣಕಾಸಿನ ಸಂಸ್ಥೆಗಳು ವ್ಯಾಪಾರ-ವ್ಯವಹಾರಗಳ ಚಟುವಟಿಕೆಗಳಿಗಾಗಿ ಹಣಕಾಸಿನ ಸಹಾಯವನ್ನು ನೀಡುತ್ತವೆ. ನಿಗಮವು ರೂ.೧,೦೦,೦೦೦ಗಳ ವೆಚ್ಚ ಘಟಕಕ್ಕೆ ರೂ.೧೦,೦೦೦ಗಳ ಸಬ್ಸಿಡಿ ಒದಗಿಸುತ್ತದೆ. ಉಳಿದ ಹಣವನ್ನು ಹಣಕಾಸಿನ ಸಂಸ್ಥೆಗಳಿಂದ ಸಾಲ ರೂಪದಲ್ಲಿ ನೀಡಲಾಗುತ್ತದೆ. ಪ್ರತಿ ಪ್ರಕರಣದಲ್ಲೂ ರೂ.೧೦೦,೦೦೦ ಲಕ್ಷ

ಮಿತಿ ಇರುವಂತೆ ಘಟಕ ವೆಚ್ಚ ರೂ.೫೦,೦೦೦ಕ್ಕಿಂತ ಅಧಿಕವಿದ್ದಾಗ ನಿಗಮವು ಶೇ.೨೦ರಷ್ಟು ಹಣವನ್ನು ಅಂಚಿನ (ಮಾರ್ಜಿನ್ ಮನಿ ಲೋನ್) ಹಣದ ಸಾಲವೆಂದು ಮಂಜೂರು ಮಾಡುತ್ತದೆ. ಇದಕ್ಕೆ ಶೇಕಡಾ ೪ರ ಬಡ್ಡಿ ದರದಲ್ಲಿ, ಬ್ಯಾಂಕ್ ಮತ್ತು ಎನ್‌ಎಸ್‌ಟಿಎಫ್‌ಡಿಸಿ ಗಳಿಂದ ಶೇ.೭೫ ರಷ್ಟು ಸಾಲ ನೀಡಲಾಗುತ್ತದೆ. ಉಳಿದ ಶೇ.೫ನ್ನು ಫಲಾನುಭವಿಯು ತಾನು ಬರಿಸಬೇಕಾಗಿದೆ. ಈ ಯೋಜನೆಯಡಿ ಶೇ.೧೫ ರಷ್ಟು ವಿಧ್ಯಾವಂತ ಆದಿವಾಸಿ ಯುವಕರು ವಿವಿಧ ರೀತಿಯ ವೃತ್ತಿ ಬುನಾದಿ ತರಬೇತಿಗಳನ್ನು ಪಡೆದಿದ್ದು ತರಬೇತಿಯ ನಂತರ ಬಂಡವಾಳದ ಕೊರತೆ ಹಾಗು ಮೂಲಭೂತ ಸೌಲಭ್ಯಗಳ ಕೊರತೆಯಿಂದ ತರಬೇತಿಯಲ್ಲಿ ಗಳಿಸಿದ ಜ್ಞಾನವನ್ನು ಉಪಯೋಗಿಸಿಕೊಳ್ಳಲು ವಿಫಲರಾಗಿದ್ದಾರೆ.

೫.೧೫.ಇ. ಗಂಗಾ ಕಲ್ಯಾಣ

ಈ ಕಾರ್ಯಕ್ರಮದಲ್ಲಿ ಸಮುದಾಯ ನೀರಾವರಿ ಯೋಜನೆಯಡಿ ಅನೇಕ ಪರಿಶಿಷ್ಟ ಬುಡಕಟ್ಟು ಕುಟುಂಬಗಳು ಹೊಂದಿರುವ ಭೂಮಿಗೆ ಕೊಳವೆ ಬಾವಿ ನೀರಾವರಿಯನ್ನು ಒದಗಿಸಲಾಗುತ್ತದೆ. ನೀರಿನ ಲಭ್ಯತೆಯನ್ನಾಧರಿಸಿ ೨ರಿಂದ ೩ ಕೊಳವೆ ಬಾವಿಗಳನ್ನು ಕೊರೆಯಲಾಗುತ್ತದೆ. ಪಂಪಸೆಟ್‌ಗಳ ಅಳವಡಿಕೆ, ವಿದ್ಯುದ್ದೀಕರಣ, ಸಂಗ್ರಹಣ ಕೆರೆಗಳು, ಪೈಪ್‌ಲೈನ್‌ಗಳಿಗೆ ತಗುಲುವ ವೆಚ್ಚವನ್ನು ನಿಗಮವೇ ಭರಿಸುತ್ತದೆ. ವೈಯಕ್ತಿಕ ನೀರಾವರಿ ಕೊಳವೆಬಾವಿ ಕಾರ್ಯಕ್ರಮದ ಅಡಿಯಲ್ಲಿ ನಿಗಮವು ನೀರಾವರಿ ಕೊಳವೆ ಬಾವಿಗಳನ್ನು ನಿರ್ಮಾಣ ಮಾಡಿಕೊಡುತ್ತದೆ, ಮತ್ತು ರೂ.೭೫೦೦೦ಗಳ ಘಟಕ ವೆಚ್ಚದಲ್ಲಿ ಸೌಕರ್ಯಗಳನ್ನು ಒದಗಿಸಿ ಕೊಡುತ್ತದೆ. ಇದರಲ್ಲಿ ರೂ.೬೫೦೦೦ ಸಹಾಯಧನ (ಸಬ್ಸಿಡಿ)ವಾಗಿದ್ದು ಉಳಿದ ಹಣ ಹಣಕಾಸಿನ ಸಂಸ್ಥೆಗಳಿಂದ ಪಡೆಯಲಾಗುವ ಸಾಲವಾಗಿರುತ್ತದೆ. ವಾಸ್ತವವಾಗಿ ಕ್ಷೇತ್ರದಲ್ಲಿ ನಡೆಯುವ ಸಂಗತಿಗಳೆಂದರೆ ಈ ಯೋಜನೆಯಡಿ ದಶಕಗಳ ಹಿಂದೆ ಕೊಳವೆ ಬಾವಿ ಕೊರೆಸಿದ್ದರು ಅದಕ್ಕೆ ವಿದ್ಯುತ್ ಸಂಪರ್ಕವಿರುವುದಿಲ್ಲ, ಅಥವಾ ನೀರೆತ್ತುವ ಯಂತ್ರಗಳನ್ನ ಸರಬರಾಜು ಮಾಡಿರುವುದಿಲ್ಲ.

೫.೧೫.ಈ. ಸಣ್ಣ ಕೈಗಾರಿಕೆಗಳು

ಅರಣ್ಯದಿಂದ ದೊರೆಯುವ ಸಣ್ಣ ಉತ್ಪನ್ನಗಳು, ಬುಡಕಟ್ಟು ಕರಕುಶಲತೆ, ರೇಷ್ಮೆ, ಬಡಿಗತನಗಳಂಥ ಚಟುವಟಿಕೆಗಳಲ್ಲಿ ಸ್ಥಳೀಯ ಕೌಶಲ್ಯಗಳನ್ನು ಬಳಸಿಕೊಳ್ಳುವುದು ಮತ್ತು ಅವುಗಳನ್ನು ಪ್ರಚೋದಿಸುವುದು ಸಣ್ಣ ಕೈಗಾರಿಕೆಗಳ ಮುಖ್ಯ ಉದ್ದೇಶವಾಗಿದೆ. ಇಲ್ಲಿ ಬಂಡವಾಳ ಹೂಡಿಕೆಯು ರೂ.೫೦೦ ರಿಂದ ರೂ.೨೫,೦೦೦ಗಳಷ್ಟಿರಬಹುದು. ಜೇನುಕುರುಬರು ಮತ್ತು ಕೊರಗರಂತಹ ತುಂಬಾ ಹಿಂದುಳಿದ ಆದಿಮ ಬುಡಕಟ್ಟುಗಳಿಗೆ ಇಂತಹ ಯೋಜನೆಗಳ ಕುರಿತು ಸರಿಯಾದ ತಿಳುವಳಿಕೆ ಇರುವುದಿಲ್ಲ. ಅಧ್ಯಯನಕ್ಕೆ ಆಯ್ಕೆಮಾಡಿಕೊಂಡ ಯಾವೊಂದು ಕುಟುಂಬವೂ ಸಹ ಈ ಯೋಜನೆಯ ಲಾಭ ಪಡೆಯುದಾಗಲೀ, ಯೋಜನೆಯ ಕುರಿತಾದ ತಿಳುವಳಿಯಾಗಲಿ ಹೊಂದಿರಲಿಲ್ಲ.

೫.೧೬. ಶಿಕ್ಷಣ ಯೋಜನೆಗಳು

ಸ್ವಾತಂತ್ರ್ಯದಿಂದೀಚೆಗೆ ಆದಿಮ ಬುಡಕಟ್ಟುಗಳ ಅಭಿವೃದ್ಧಿ ಸ್ಥಾನಮಾನವು ರಾಜ್ಯದ ಉಳಿದ ಜನಸಂಖ್ಯೆಯ ಅಭಿವೃದ್ಧಿ ಸ್ಥಾನಮಾನಕ್ಕೆ ಹೋಲಿಸಿದಾಗ ಎರಡು ದಶಕಕ್ಕಿಂತಲೂ ಹಿಂದೆ ಇದೆಯೆಂದೂ ಮತ್ತು ಅವರು ರಾಜ್ಯದ ಎಲ್ಲ ಬಡ ಮತ್ತು ವಂಚಿತ ಉಪ ಜನಸಂಖ್ಯೆಯ ಪೈಕಿ ಅತ್ಯಂತ ಬಡವರು ಹಾಗೂ ಅತ್ಯಧಿಕ ಪ್ರಮಾಣದಲ್ಲಿ ಕಡೆಗಣಿಸಲ್ಪಟ್ಟ ಸಮುದಾಯವೆಂದು ಹೇಳಬಹುದು. ಎಲ್ಲಾ ಸಾಮಾಜಿಕ ಗುಂಪುಗಳಲ್ಲಿಯೂ ಸಾಕ್ಷರತಾ ಪ್ರಮಾಣವು ಕಡಿಮೆ ಇದೆ

ಮತ್ತು ಪರಿಶಿಷ್ಟ ಬುಡಕಟ್ಟು ಮಹಿಳಾ ಸಾಕ್ಷರತೆಯು ಶೇ.೩೬.೬ ಇದ್ದು, ರಾಜ್ಯದ ಸರಾಸರಿಗೆ ಹೋಲಿಸಿದರೆ (ಶೇ.೫೬.೯) ಇದು ಅತ್ಯಂತ ಕಡಿಮೆ ಸಾಕ್ಷರತಾ ಪ್ರಮಾಣವಾಗಿದೆ. ದುಃಸ್ಥಿತಿಯು ಇಲ್ಲಿಂದಲೇ ಪ್ರಾರಂಭಗೊಂಡು, ಪರಿಶಿಷ್ಟ ಬುಡಕಟ್ಟು ಮಹಿಳೆಯರು ಸಾಮಾನ್ಯ ಮಹಿಳೆಯರಿಗಿಂತ ಹಿಂದಿರುವಂತೆ ಮಾಡಿದೆ.ಎಲ್ಲಾ ಹಂತಗಳಲ್ಲಿ ಮತ್ತು ಶೈಕ್ಷಣಿಕ ಸಾಧನೆಯ ದಾಖಲಾತಿ, ಪ್ರಾಥಮಿಕ ಶಿಕ್ಷಣದಲ್ಲಿ ಕೊನೆಗೊಳ್ಳುವುದು. ದ್ವಿತೀಯ ಮತ್ತು ಪದವಿ ಶಿಕ್ಷಣ ಎಲ್ಲಾ ಸೂಚ್ಯಂಕಗಳಲ್ಲಿ ಪರಿಶಿಷ್ಟ ಬುಡಕಟ್ಟು ವಿದ್ಯಾರ್ಥಿಗಳು ಮತ್ತು ಇತರೆ ವಿದ್ಯಾರ್ಥಿಗಳ ನಡುವೆ ಸಾಕಷ್ಟು ಅಂತರಗಳಿವೆ. ಆದಿಮ ಬುಡಕಟ್ಟು ಮಹಿಳೆಯರಲ್ಲಿ ವಿಶೇಷವಾಗಿ ಜೇನುಕುರುಬ ಮಹಿಳೆಯರ ಸಾಕ್ಷರತೆಯು ತುಂಬಾ ಹೀನಾಯ ಸ್ಥಿತಿಯಲ್ಲಿದೆ ಶೇ.೨೯ ಮತ್ತು ಕೊರಗ ಮಹಿಳೆಯರಲ್ಲಿ ಅದು ಶೇ.೩೫ ರಷ್ಟಿದ್ದು ಇಂದಿಗೂ ಈ ಎರಡು ಸಮುದಾಯಗಳಿಂದ ಒಬ್ಬ ವೈದ್ಯ, ಇಂಜಿನಿಯರ್ ಶಿಕ್ಷಣ ಪಡೆದವರಿರುವುದಿಲ್ಲ. ಬಹುಸಂಖ್ಯಾತ ಆದಿವಾಸಿ ಬುಡಕಟ್ಟು ಜನರಿಗೆ ಶಿಕ್ಷಣದ ಸೌಲಭ್ಯಗಳು ಮುಟ್ಟುತ್ತಿಲ್ಲ. ಅವರಲ್ಲಿನ ಅನಕ್ಷರತೆ ಮತ್ತು ಅಜ್ಞಾನದಿಂದಾಗಿ ಶಿಕ್ಷಣದ ಮಹತ್ವವನ್ನು ಪ್ರಚುರಪಡೆಸುವಂತಹ ಕಾರ್ಯಗಳನ್ನು ಹಮ್ಮಿಕೊಂಡಿಲ್ಲ. ಬದಲಾಗಿ ಅವರ ಮೇಲೆ ಬಲತ್ಕಾರವಾಗಿ ಒತ್ತಡಗಳನ್ನು ಹೇರಿ ಆಧುನಿಕ ಶಿಕ್ಷಣವನ್ನು ಕಲಿಯುವಂತೆ ಮಾಡುತ್ತಿದ್ದೇವೇನೋ ಎನಿಸುತ್ತಿದೆ.

೫.೧೭. ಮೂಲಭೂತ ಸೌಕರ್ಯಗಳ ಕೊರತೆ

ಆದಿವಾಸಿ ಬುಡಕಟ್ಟುಗಳಾದ ಜೇನು ಕುರುಬರು ಮತ್ತು ಕೊರಗರು ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಒಳಗಾಗಿ ಕಾರಣಾಂತರಗಳಿಂದಾಗಿ ತಮ್ಮ ಮೂಲ ನೆಲೆಗಳಿಂದ ಸ್ಥಳಾಂತರಿಸಲ್ಪಟ್ಟ ಸಮುದಾಯಗಳಾಗಿವೆ, ಸರ್ಕಾರಗಳ ಬದಲಾಗಿರುವ ಅಭಿವೃದ್ಧಿ ದೃಷ್ಟಿಕೋನಗಳು ಇವರನ್ನ ಮೂಲ ನೆಲೆಗಳಿಂದ ವಕ್ಕಲೆಬ್ಬಿಸಿದವು. ಆದರೆ ಆನಂತರದ ಅವರ ಅಗತ್ಯತೆಗಳನ್ನ ಪೂರೈಸುವ ಯಾವುದೇ ಸಮಗ್ರ ಯೋಜನೆಗಳೂ ಸಹ ಕಾರ್ಯ ರೂಪಕ್ಕೆ ಬರಲಿಲ್ಲ. ಸರ್ಕಾರದ ಯೋಜನೆಗಳು ಮೈದಾನದ ಜನರಿಗಷ್ಟೆ ಸೀಮಿತವಾದವುಗಳಾಗಿವೆ. ಈ ಎರಡು ಸಮುದಾಯಗಳ ಜನರು ವಾಸಿಸುವ ಹಾಡಿಗಳು ಅರಣ್ಯಗಳಲ್ಲಿ, ಅರಣ್ಯದಂಚಿನಲ್ಲಿ, ಗುಡ್ಡಗಾಡುಗಳಲ್ಲಿದ್ದು ಸರಿಯಾದ ರಸ್ತೆ ಸಂಪರ್ಕ, ವಿದ್ಯುತ್, ಕುಡಿಯುವ ನೀರು, ಆರೋಗ್ಯ ಕೇಂದ್ರಗಳು ಮುಂತಾದವುಗಳ ಸಮಸ್ಯೆಗಳಿಂದ ಬಳಲುತ್ತಿರುವುದು ಎದ್ದು ಕಾಣುತ್ತದೆ. ಅಧ್ಯಯನಕ್ಕೆ ಆಯ್ದುಕೊಂಡ ಶೇ. ೮೦ ರಷ್ಟು ಗ್ರಾಮಗಳಿಗೆ ಸರಿಯಾದ ಸಂಪರ್ಕ ರಸ್ತೆಗಳಿಲ್ಲ, ಶೇ.೪೦ ರಷ್ಟು ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ, ಮತ್ತು ಶೇ. ೩೦ ರಷ್ಟು ಮನೆಗಳಿಗೆ ವಿದ್ಯುತ್ ಸಂಪರ್ಕವನ್ನ ಒದಗಿಸಿರುವುದಿಲ್ಲ ಎಂಬುದನ್ನು ಕ್ಷೇತ್ರಕಾರ್ಯದ ಮೂಲಕ ಅರಿತಿದ್ದೇವೆ.

೫.೧೮. ಅಭಿವೃದ್ಧಿ ಯೋಜನೆಗಳು ಮತ್ತು ವಕ್ಕಲೆಬ್ಬಿಸುವಿಕೆ

ಜೇನು ಕುರುಬರು ಮತ್ತು ಕೊರಗರು ಈ ರಾಜ್ಯದ ಮೂಲನಿವಾಸಿ ಬುಡಕಟ್ಟುಗಳಾಗಿದ್ದು ಅವರನ್ನ ಬೃಹತ್ ನೀರಾವರಿ ಯೋಜನೆಗಳು ಮತ್ತು ರಾಷ್ಟ್ರೀಯ ವನ್ಯಧಾಮಗಳ ಘೋಷಣೆಗಳಿಂದಾಗಿ ವಕ್ಕಲೆಬ್ಬಿಸಿದ ಸರ್ಕಾರಗಳು ಸೂಕ್ತ ರೀತಿಯಲ್ಲಿ ಪುನರ್ವಸತಿಯನ್ನ ಕಲ್ಪಿಸಿರುವುದಿಲ್ಲ. ಅಧ್ಯಯನದ ಅವಧಿಯಲ್ಲಿ ಶೇ.೬೦ ರಷ್ಟು ಕುಟುಂಬಗಳು ತಮ್ಮ ಮೂಲಸ್ಥಾನಕ್ಕೆ ಹಿಂದಿರುಗುವ ಆಶಯವನ್ನ ವ್ಯಕ್ತ ಪಡಿಸಿವೆ. ಜೇನು ಕುರುಬ ವಕ್ತೃಗಳ ಪ್ರಕಾರ ಅವರ ಪುನರ್ವಸತಿ ಕೇಂದ್ರಗಳು ಅವರಿಗೆ ಜೈಲುಗಳಂತೆ ಕಂಡು ಬರುತ್ತವಂತೆ. ತಮ್ಮ ಮೂಲ ನೆಲೆಯಲ್ಲಿದ್ದ ಸ್ವಾತಂತ್ರ್ಯವು ಪುನರ್ವಸತಿ ಕೇಂದ್ರಗಳಲ್ಲಿ ಇಲ್ಲ ಎಂಬ ಅಳಲು ಅವರದು. ಸರ್ಕಾರದ ಯೋಜನೆಗಳು ಅವರ ಆಸ್ತಿ ಪಾಸ್ತಿಗಳಿಗೆ ಮತ್ತು ಮೂಲಭೂತ ಹಕ್ಕುಗಳಿಗೆ

ಮಾರಕವಾಗಿರುವುದರಿಂದ ವಿದ್ಯಾವಂತ ನಿರುದ್ಯೋಗಿ ಆದಿವಾಸಿ ಕೊರಗ ಯುವಕರು ಸರ್ಕಾರದ ವಿರುದ್ಧ ತಮ್ಮ ಭಾವನೆಗಳನ್ನ ಪ್ರತಿಭಟನಾತ್ಮಕವಾಗಿ ವ್ಯಕ್ತಪಡಿಸುತ್ತಾರೆ.

೫.೧೯. ಸ್ವ-ಸಹಾಯ ಗುಂಪುಗಳು

ಸ್ವ-ಸಹಾಯ ಗುಂಪುಗಳು ಚಿಕ್ಕ ಸಾಲದ ವ್ಯವಸ್ಥೆ ಕುರಿತಂತೆ ಗ್ರಾಮೀಣ ಪ್ರದೇಶದಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ತಂದಿವೆ. ಬುಡಕಟ್ಟುಗಳಲ್ಲಿ ಅಧಿಕ ಪ್ರಮಾಣದಲ್ಲಿ ಭೂರಹಿತ ಕೃಷಿ ಕಾರ್ಮಿಕರಿದ್ದಾರೆ ಹಾಗೂ ಜೀವಾನಾಧರಕ್ಕಾಗಿ ಕೃಷಿಯನ್ನು ಅವಲಂಬಿಸಿರುವವರ ಪ್ರಮಾಣ ಅಧಿಕವಾಗಿದೆ. ಇವರು ಹಣಕಾಸಿನ ಸಂಸ್ಥೆಗಳಿಂದ ಸಾಲ ಸೌಲಭ್ಯಗಳನ್ನು ಪಡೆಯುವುದು ಕಷ್ಟಸಾಧ್ಯವೆಂದು ಕಂಡುಕೊಂಡಿದ್ದಾರೆ. ಮತ್ತು ಇವರು ಸ್ವ-ಸಹಾಯ ಗುಂಪುಗಳ ತತ್ವದ ಅಡಿಯಲ್ಲಿ ಬಹಷ್ಟು ಪ್ರಯೋಜನಗಳನ್ನು ಪಡೆಯಲು ಮುಂದಾಗಿದ್ದಾರೆ. ಸ್ವ-ಸಹಾಯ ಗುಂಪುಗಳು ಸದಸ್ಯರಲ್ಲಿ ಉಳಿತಾಯ ಮತ್ತು ಸಣ್ಣ ಪ್ರಮಾಣದ ಹಣಕಾಸು ಹೂಡಿಕೆಗಳನ್ನು ಉತ್ತೇಜಿಸುತ್ತದೆ. ಅಲ್ಲದೇ ಸಾಮಾಜಿಕ ಸಬಲೀಕರಣದ ಮತ್ತು ಲಿಂಗ ಸಮಾನತೆಯಂಥ ಉದ್ದೇಶಗಳನ್ನು ಸಹ ಅದು ಹೊಂದಿದೆ. ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ೧೦೦,೦೦೦ ಸ್ತ್ರೀಶಕ್ತಿ ಗುಂಪುಗಳಲ್ಲಿ ೧೯,೬೨೧ ಪರಿಶಿಷ್ಟ ಪಂಗಡದ ಮಹಿಳೆಯರು ಸದಸ್ಯರಾಗಿದ್ದಾರೆ. ಈ ಯೋಜನೆಯು ಸಮಾಜಕಾರ್ಯದ ಅಸಹಾಯಕರಿಗೆ ಸಹಕರಿಸಿ, ಅವರು ಅವರಷ್ಟಕ್ಕೆ ಸಹಕರಿಸ್ಪಡುತ್ತಾರೆ ಎಂಬ ಮೂಲತತ್ವದ ತಂತ್ರದ ಮೇಲೆ ನಡೆಯುತ್ತಿರುವುದರಿಂದ ಯಶಸ್ವಯಾಗಿ ನಡೆಯುತ್ತಿದೆ.

೫.೨೦. ಬುಡಕಟ್ಟುಗಳ ಅಭಿವೃದ್ಧಿಯಲ್ಲಿ ಸರಕಾರೇತರ ಸಂಸ್ಥೆಗಳ ಪಾತ್ರ

ಆದಿಮ ಬುಡಕಟ್ಟುಗಳ ಅಭಿವೃದ್ಧಿಗಾಗಿ ಸರಕಾರ ಮತ್ತು ಸರಕಾರೇತರ ಸಂಸ್ಥೆಗಳ ನಡುವೆ ಅರೋಗ್ಯಕರ ಪಾಲುದಾರಿಕೆಯನ್ನು ಅಭಿವೃದ್ಧಿಪಡಿಸುವ ಅವಶ್ಯಕತೆ ಅಧಿಕವಾಗಬೇಕೆಂಬುದು ಮನವರಿಕೆಯಾಗುತ್ತದೆ. ಬುಡಕಟ್ಟುಗಳ ಕಲ್ಯಾಣದಲ್ಲಿ ಸರಕಾರೇತರ ಸಂಸ್ಥೆಗಳ ಪಾತ್ರವು ಸಣ್ಣ ಪ್ರಮಾಣದ್ದಾದರೂ ಅದು ಅವರ ಜೀವನದಲ್ಲಿ ಗುಣಾತ್ಮಕವಾದ ಬದಲಾವಣೆ ತರುವಲ್ಲಿ ಕಾರಣವಾಗಿವೆ. 'ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ', 'ಸ್ವಾಮಿವಿವೇಕಾನಂದ ಯೂಥ್ ಮೂವ್‌ಮೆಂಟ್', ಡೀಡ್, ಫೆಡೀನಾ, ಕಾರ್ಡ್,'ಸಮಗ್ರ ಗ್ರಾಮೀಣ ಆಶ್ರಮ', ಜನಶಿಕ್ಷಣ ಟ್ರಸ್ಟ್, ಚಿಂತನ ಫೌಂಡೇಶನ್, ಡಿಯುಡಿಐ, ಸಮೃದ್ಧಿ ಕೃಪಾ, ವನವಾಸಿ ಕಲ್ಯಾಣ ಆಶ್ರಮ ಇವು ಕರ್ನಾಟಕದಲ್ಲಿನ ಬುಡಕಟ್ಟುಗಳ ಅಭಿವೃದ್ಧಿ ಕೆಲಸಗಳಲ್ಲಿ ತೊಡಗಿಕೊಂಡಿರುವ ಸರಕಾರೇತರ ಸಂಸ್ಥೆಗಳಾಗಿವೆ. ಈ ಸಂಸ್ಥೆಗಳು ಸಮಾಜಕಾರ್ಯದ ಮೂಲತತ್ವವಾದ "ಅಸಹಾಯಕರಿಗೆ ಸಹಕರಿಸಿ ಅವರು ಅವರಷ್ಟಕ್ಕೆ ಸಹಕರಿಸ್ಪಡುತ್ತಾರೆ' ಎಂಬ ತಂತ್ರದ ಮೇಲೆ ನಡೆಯುತ್ತಿರುವುದರಿಂದ ಯಶಸ್ವಿಯಾಗಿ ಜನರನ್ನ ತಲಪುತ್ತಿವೆ ಮತ್ತು ಸೌಲಭ್ಯಗಳನ್ನ ಮುಟ್ಟಿಸುತ್ತಿವೆ.

೫.೨೧. ಸಮುದಾಯ ಆಧಾರಿತ ಸಂಘಗಳು

ಜೇನು ಕುರುಬರು ಮತ್ತು ಕೊರಗ ಬುಡಕಟ್ಟು ಜನರ ಸ್ಥಳೀಯ ಸಮುದಾಯದ ಜೊತೆಗಿನ ಒಡನಾಟದ ಮೂಲಕ ಪರಿಣಾಮಕಾರಿಯಾಗಿ ಮತ್ತು ಸುಸ್ಥಿರ ಗತಿಯ ನೆಲೆಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವುದು ಸಾಧ್ಯ. ಏಕೆಂದರೆ ಬುಡಕಟ್ಟುಗಳು ತಮ್ಮ ಸಾಮಾಜಿಕ ಅಗತ್ಯಗಳ ಬಗ್ಗೆ, ಸಂಪ್ರದಾಯಗಳ ಬಗ್ಗೆ ಮತ್ತು ಸಂಸ್ಕೃತಿಯ ಬಗ್ಗೆ ಬುಡಕಟ್ಟೇತರ ಜನರಿಗಿಂತ ಹೆಚ್ಚು ಅರಿತವರಾಗಿದ್ದಾರೆ. ಸರಕಾರ ಮತ್ತು ಸರಕಾರೇತರ ಸಂಸ್ಥೆಗಳ ಹಣಕಾಸಿನ ನೆರವಿನ ಕಾರ್ಯಕ್ರಮಗಳಲ್ಲಿ ಬುಡಕಟ್ಟು ಜನವರ್ಗದ ಸಹಭಾಗಿತ್ವವು ಒದಗಿಸಲಾದ ಸೇವೆಗಳನ್ನು

ಉಪಯೋಗಿಸುವ ದೃಢ ವಿಶ್ವಾಸವನ್ನು ಮೂಡಿಸುತ್ತದೆ. ಮತ್ತು ಕಾರ್ಯಕ್ರಮಗಳ ಬದಲಾವಣೆ ಮತ್ತು ಪರಿಶೀಲನೆಗೆ ಮಾಹಿತಿಯನ್ನು ನೀಡುತ್ತದೆ. ಇವರ ಸಂಘಟನೆಗಳನ್ನು 'ಸಂಘಗಳು' ಎಂದು ಕರೆಯಲಾಗುತ್ತದೆ. ಇವುಗಳು ಬುಡಕಟ್ಟುಗಳಿಗೆ ಸಂಬಂಧಿಸಿದ ಮಹತ್ವದ ಸಂಗತಿಗಳಾದ ಅರಣ್ಯದ ಬೆಂಕಿ ನಂದಿಸುವುದು, ಕಾನೂನು ಬಾಹಿರ ಗಣಿಗಾರಿಕೆ, ಕಳ್ಳಸಾಗಾಣಿಕೆ ಇಂಥವುಗಳನ್ನು ನಿಯಂತ್ರಿಸುವಲ್ಲಿ ಸಕ್ರಿಯವಾಗಿ ಭಾಗವಹಿಸುತ್ತವೆ. ಸಹಭಾಗಿತ್ವದ ಸಂಪನ್ಮೂಲ ನಿರ್ವಹಣೆಯ ಮೂಲಕ ಮರಗಳನ್ನು ಬಿಟ್ಟು ಇತರೆ ಅರಣ್ಯ ವಸ್ತುಗಳ ಸಾಗುವಳಿ, ಮರಗಳನ್ನು ಬಿಟ್ಟು ಇತರೆ ಅರಣ್ಯ ಉತ್ಪನ್ನಗಳ ಮೌಲ್ಯವರ್ಧನೆ, ಪರಿಸರ ಸಂರಕ್ಷಣೆಗಳಂಥ ಕಾರ್ಯಕ್ರಮಗಳಲ್ಲಿ ಸಂಘಗಳ ಸಹಭಾಗಿತ್ವವು ಹೊರಗಿನವರಿಂದ ಅರಣ್ಯ ಉತ್ಪನ್ನಗಳ ದುರ್ಬಳಕೆಯನ್ನು ನಿಯಂತ್ರಿಸುವಲ್ಲಿ ಸಹಕಾರಿಯಾಗಿವೆ. ಮೈಸೂರು ಮತ್ತು ಕೊಡಗು ಜಿಲ್ಲೆಗಳಿಗೆ ಸಂಬಂದಿಸಿದಂತೆ ಜೇನುಕುರುಬರ ಸಂಘ ಮತ್ತು ಬುಡಕಟ್ಟು ಕೃಷಿಕರ ಸಂಘಗಳು ಸಕ್ರಿಯವಾಗಿ ಈ ನಿಟ್ಟನಲ್ಲಿ ಕಾರ್ಯ ನಿರ್ವಹಿಸುತ್ತಿವೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕೊರಗರ ಸಂಘಗಳು ತಮ್ಮ ಹಕ್ಕುಗಳ ರಕ್ಷಣೆ ಮತ್ತು ಅನ್ಯಾಯದ ವಿರುದ್ದದ ಹೊರಾಟಗಳಲ್ಲಿ ಮಹತ್ವದ ಕಾರ್ಯಗಳನ್ನ ನಿರ್ವಹಿಸುತ್ತಿವೆ.

ಕೇಂದ್ರ, ರಾಜ್ಯ ಮತ್ತು ಕೆಲವು ಸ್ವಯಂ ಸೇವಾ ಸಂಸ್ಥೆಗಳ ಕಾರ್ಯಕ್ರಮಗಳು ಬುಡಕಟ್ಟು ಜನರ ಕಲ್ಯಾಣ ಮತ್ತು ಅಭಿವೃದ್ಧಿಯಲ್ಲಿ ಸ್ವಲ್ಪ ಮಟ್ಟಿನ ಸಾಧನೆಯನ್ನ ತೊರಿಸಿವೆ. ಉದಾಹರಣೆಗೆ ಪರಿಶಿಷ್ಟ ಬುಡಕಟ್ಟು ಕುಟುಂಬಗಳಿಗೆ ಉಚಿತ ವಸತಿ, ಕುಡಿಯುವ ನೀರಿನ ಪೂರೈಕೆ, ವಿದ್ಯುತ್ ಸಂಪರ್ಕ, ಶಾಲೆಯಿಂದ ಹೊರಗಿರುವ ಮಕ್ಕಳು (ಆಶ್ರಮ ಶಾಲೆಗಳು, ವಿದ್ಯಾರ್ಥಿ ವೇತನ, ಉಚಿತ ಪಠ್ಯಪುಸ್ತಕ ಮತ್ತು ಸಮವಸ್ತ್ರ, ಮಧ್ಯಾಹ್ನದ ಊಟ) ಮತ್ತು ಬಡತನಗಳನ್ನು ನಿಯಂತ್ರಿಸಲು, ಬಡತನ ನಿರ್ಮೂಲನೆಗಳಂಥ ಅನೇಕ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ದುರಾಧೃಷ್ಟವಶಾತ್ ಅವುಗಳ ಅನುಷ್ಟಾನವು ಆರೋಗ್ಯ, ಉನ್ನತ ಮತ್ತು ತಾಂತ್ರಿಕ ಶಿಕ್ಷಣ ಮತ್ತು ಬಡತನ ನಿವಾರಣೆಗಳಂಥ ಕಾರ್ಯಕ್ರಮಗಳಲ್ಲಿ ಹೆಚ್ಚು ಪರಿಣಾಮಕಾರಿಯಾಗಿಲ್ಲ. ಸಮಸ್ಯೆಗಳ ಆಳವು ಎಷ್ಟು ತೀವ್ರವಾಗಿದೆ ಎಂದರೆ ಈಗಲೂ ಬಹುತೇಕ ಪರಿಶಿಷ್ಟ ಬುಡಕಟ್ಟು ಕುಟುಂಬಗಳು ಕಡು ಬಡವರಾಗಿದ್ದು, ಅವರು ತಮ್ಮ ಶೈಕ್ಷಣಿಕ ಮತ್ತು ಆರೋಗ್ಯ ಮಟ್ಟವನ್ನು ಸುಧಾರಿಸುವುದಕ್ಕಾಗಿ ಅವಶ್ಯವಾದ ಸಂಪನ್ಮೂಲಗಳನ್ನು ಪಡೆಯುವಲ್ಲಿ ವಂಚಿತರಾಗಿದ್ದಾರೆ.

ಕರ್ನಾಟಕದಲ್ಲಿ ತೊಂಬತ್ತರ ದಶಕದಲ್ಲಿ ನಡೆಸಿರುವ ಸಮೀಕ್ಷೆಗಳ ಪ್ರಕಾರ ಪರಿಶಿಷ್ಟ ಬುಡಕಟ್ಟು ಆರೋಗ್ಯ ಸ್ಥಿತಿಗತಿಗಳಲ್ಲಿ ಸುಧಾರಣೆಯಾಗಿಲ್ಲ. ಒಟ್ಟು ಜನಸಂಖ್ಯೆಗೆ ಹೋಲಿಸಿದರೆ (೫೨.೦) ಬುಡಕಟ್ಟು ಜನರಲ್ಲಿನ ಶಿಶು ಮರಣ ದರವು (೬೪.೩೭) ಅಧಿಕವಾಗಿದೆ. ಈ ಚಿತ್ರಣವು ಭಾಗಶಃ ಸಾಂಸ್ಥಿಕ ಬೆಂಬಲದ ಕೊರತೆಯಿಂದ ಆಗಿದೆ ಎಂದೆನ್ನಬಹುದು. ನುರಿತ ತಜ್ಞರಿಂದ ಪ್ರಸವಪೂರ್ವ ಮತ್ತು ಪ್ರಸವಾನಂತರದಲ್ಲಿ ದೊರೆಯಬೇಕಾದ ಸೇವೆಗಳು ಸಮರ್ಪಕವಾಗಿ ಬುಡಕಟ್ಟು ಮಹಿಳೆಯರಿಗೆ ದೊರೆಯುತ್ತಿಲ್ಲ. ಆರೋಗ್ಯ ಇಲಾಖೆ ಮತ್ತು ಸರಕಾರೇತರ ಸಂಸ್ಥೆಗಳು ಬುಡಕಟ್ಟಿನ ಹೆಣ್ಣು ಮಕ್ಕಳಿಗೆ ಎ ಎನ್ ಎಮ್ ಗಳ ತರಬೇತಿ ನೀಡಿ ಅವರನ್ನು ಬುಡಕಟ್ಟು ಪ್ರದೇಶಗಳಲ್ಲಿನ ಪ್ರತ್ಯೇಕ ಉಪಕೇಂದ್ರಗಳಿಗೆ ನೇಮಿಸಲಾಗದಿರುವುದರಿಂದ ಅವರಲ್ಲಿ ಆರೋಗ್ಯದ ಬಗೆಗೆ ಅರಿವು ಮೂಡಿಸಲಾಗಿಲ್ಲ. ಕೆಲವು ಸರಕಾರೇತರ ಸಂಸ್ಥೆಗಳು ಪ್ರಸ್ತುತ ಬುಡಕಟ್ಟು ಮಹಿಳೆಯರು ಮತ್ತು ಮಕ್ಕಳಿಗೆ ಒಳ್ಳೆಯ ಆರೋಗ್ಯ ರಕ್ಷಣೆಯ ಸೇವೆಗಳನ್ನು ಒದಗಿಸುವಲ್ಲಿ ಶ್ರಮಿಸುತ್ತಿವೆ. ಗುಂಬಳ್ಳಿ ಮತ್ತು ತಿಥಿಮತಿಗಳಲ್ಲಿನ ಸರಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಕರುಣಾ ಟ್ರಸ್ಟ್ ಮತ್ತು ವಿವೇಕಾನಂದ ಫೌಂಡೇಶನ್‌ಗಳಿಗೆ ಅನುಕ್ರಮವಾಗಿ ಹಸ್ತಾಂತರಿಸಲಾಗಿದ್ದು ಅವುಗಳನ್ನು ಮಾದರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನಾಗಿ ನಡೆಸಲಾಗುತ್ತಿದೆ.

ಆದಿಮ ಬುಡಕಟ್ಟುಗಳು ನಿರ್ಲಕ್ಷಿತವಾಗಿದ್ದು ಇವರಲ್ಲಿ ತಾಯಂದಿರ ಮರಣ ಪ್ರಮಾಣ ಶಿಶು ಮರಣ ಪ್ರಮಾಣಗಳನ್ನು ನಿಯಂತ್ರಿಸುವ ಕಾರ್ಯಕ್ಕೆ ರಾಜ್ಯದ ಆಡಳಿತಶಾಹಿ ಅಗತ್ಯ ಗಮನವನ್ನು ನೀಡುತ್ತಿಲ್ಲ. ಇವರ ಮಕ್ಕಳಲ್ಲಿಯ ಅರೆಪೌಷ್ಟಿಕತೆಯು ಅವರ ಬೆಳವಣಿಗೆಯನ್ನು ಕುಂಠಿತಗೊಳಿಸಿದೆ. ವೃತ್ತಿ ಆಧಾರಿತ ವಿಂಗಡಣೆಯು ತೋರಿಸುವಂತೆ ಆದಿಮ ಬುಡಕಟ್ಟು ಜನತೆಯಲ್ಲಿ ಬಹಳಷ್ಟು ಬುಡಕಟ್ಟು ಜನರು ಸಣ್ಣ ಮತ್ತು ಅತಿ ಸಣ್ಣ ಕೃಷಿಕರು ಮತ್ತು ಕೃಷಿ ಕಾರ್ಮಿಕರಾಗಿದ್ದಾರೆ. ಇವರ ಬಹಳಷ್ಟು ಹಿಡುವಳಿಗಳು ನೀರಾವರಿ ರಹಿತವಾಗಿವೆ. ಆದ್ದರಿಂದ ಅವು ಆರ್ಥಿಕವಾಗಿ ಲಾಭಕಾರಕವಾಗಿರುವುದಿಲ್ಲ. ಉಳಿದ ಜನಸಂಖ್ಯೆಗೆ ಹೋಲಿಸಿದರೆ, ಪರಿಶಿಷ್ಟ ಬುಡಕಟ್ಟು ಜನರ ತಲಾವಾರು ತಿಂಗಳ ವೆಚ್ಚವು ಅತ್ಯಂತ ಕಡಿಮೆ ಪ್ರಮಾಣದಲ್ಲಿದೆ. ಕೆಲವು ಬುಡಕಟ್ಟುಗಳ ಜೀವನಾಧಾರಕ್ಕಾಗಿ ಚಿಕ್ಕ ಪುಟ್ಟ ಅರಣ್ಯ ಉತ್ಪನ್ನಗಳು ಮತ್ತು ಮರಗಳನ್ನು ಬಿಟ್ಟು ಉಳಿದ ಅರಣ್ಯ ಉತ್ಪನ್ನಗಳ ದೊರೆಯುವಿಕೆಯು ಅತ್ಯವಶ್ಯಕವಾಗಿದೆ. ಅವರು ಜೀವಿಸುವ ಅರಣ್ಯದ ಸುತ್ತ ಮುತ್ತಲಿನ ಪ್ರದೇಶ ಅಥವಾ ಅರಣ್ಯದ ಬಹುತೇಕ ಪ್ರದೇಶವನ್ನು ವನ್ಯಜೀವಿ ಧಾಮಗಳೆಂದು ವರ್ಗೀಕರಿಸಲಾಗಿದ್ದು ಇವರಿಗೆ ಅರಣ್ಯದೊಳಗಿನ ಪ್ರವೇಷ ನಿಷೇಧವು ಅವರ ಸಂಕಷ್ಟಕ್ಕೆ ಮತ್ತೊಂದು ಕಾರಣವಾಗಿದೆ.

೫.೨೨. ಜೇನುಕುರುಬರ ಮತ್ತು ಬುಡಕಟ್ಟು ಕೃಷಿಕರ ಸಂಘದ ಬೇಡಿಕೆಗಳು

- ಬುಡಕಟ್ಟು ಜನರರಿವ ಕ್ಷೇತ್ರಗಳನ್ನ ಪರಿಶಿಷ್ಟ ಕ್ಷೇತ್ರಗಳೆಂದು ಘೋಷಿಸುವುದು ಹಾಗೂ ಬುಡಕಟ್ಟು ಪಂಚಾಯ್ತಿ ವಿಸ್ತೀಕರಣ ಕಾಯಿದೆ ೧೯೯೬ನ್ನು (ಪರಿಶಿಷ್ಟಕ್ಷೇತ್ರಗಳಲ್ಲಿ) ರಾಜ್ಯದಲ್ಲಿ ಜಾರಿಗೊಳಿಸುವುದು.
- ಇತರೆ ಹಿಂದುಳಿದ ವರ್ಗಗಳು, ಸುಳ್ಳು ಪ್ರಮಾಣ ಪತ್ರದಿಂದ ಪರಿಶಿಷ್ಮ ಪಂಗಡಗಳ ಸೌಲಭ್ಯಗಳನ್ನ ಪಡೆಯುವುದನ್ನು ತಪ್ಪಿಸುವುದು.
- ಜೇನುಕುರುಬರಗರಿಗೆ ವಿಶೇಷ ಅಧಿಕಾರಿಯನ್ನು ನೇಮಿಸುವುದು.
- ನಾಗರಹೊಳೆ ಹಾಗೂ ಬಂಡೀಪುರ ಅಭಯಾರಣ್ಯದಿಂದ ಒಕ್ಕಲೆಬ್ಬಿಸಿದ ಬುಡಕಟ್ಟು ಜನರಿಗೆ ಸಮರ್ಪಕ ವಸತಿ, ಭೂಮಿ, ನೀರಾವರಿ, ಸೌಲಭ್ಯ ಹಾಗೂ ಇತರೆ ಸೌಲಭ್ಯಗಳನ್ನು ಒದಗಿಸುವುದು.
- ಬುಡಕಟ್ಟು ಜನರ ಮೇಲೆ ಅರಣ್ಯ ಇಲಾಖೆಯವರು ಮಾಡಿರುವ ಮೊಕದಮ್ಮೆಗಳನ್ನು ಹಿಂದಕ್ಕೆ ಪಡೆಯುವುದು.
- ಸರಿಯಾದ ಪ್ರಮಾಣದಲ್ಲಿ ಭೂಮಿ ಹಾಗೂ ವ್ಯವಸಾಯಕ್ಕೆ ಅಗತ್ಯವಾದ ಮೂಲ ಸೌಲಭ್ಯಗಳನ್ನು ಒದಗಿಸುವುದು.
- ಭೂ ಅಭಿವೃದ್ಧಿ ಹಾಗೂ ವ್ಯವಸ್ಥಿತಿ ಬೇಸಾಯಕ್ಕೆ ಅನುವು ಮಾಡಿಕೊಡುವುದು.
- ವಸತಿ ಮತ್ತು ಇತರೆ ನಾಗರೀಕ ಸೌಲಭ್ಯಗಳನ್ನು ಕಲ್ಪಿಸುವುದು.
- ಉತ್ತಮ ಬುಡಕಟ್ಟು ಶಿಕ್ಷಣವನ್ನೊದಗಿಸುವುದು.
- ಆರೋಗ್ಯ ವ್ಯವಸ್ಥೆಯನ್ನು ಸುಧಾರಿಸಲು ಅಗತ್ಯವಿರುವ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವುದು.
- ಬುಡಕಟ್ಟು ಜನರು ವಾಸಿಸುವ ಪ್ರದೇಶಗಳಲ್ಲಿ ಮಧ್ಯಪಾನವನ್ನು ಕಟ್ಟುನಿಟ್ಟಾಗಿ ನಿಯಂತ್ರಿಸುವುದು.

- ಬುಡಕಟ್ಟು ಕ್ಷೇತ್ರಗಳಿಗೆ ವಿಶೇಷ ವಲಯಗಳನ್ನಾಗಿ ವಿಂಗಡಿಸಿ ಅಭಿವೃದ್ಧಿಗಾಗಿ ದತ್ತು ಸ್ವೀಕರಿಸುವುದು.

೫.೨೩. ಕೊರಗ ಸಂಘದ ಬೇಡಿಕೆಗಳು

- ಶೈಕ್ಷಣಿಕವಾಗಿ ಹಿಂದುಳಿದಿರುವ ಕೊರಗ ಸಮುದಾಯದ ಕಾಲೊನಿಗಳಲ್ಲಿ ಶೈಕ್ಷಣಿಕ ಪ್ರಗತಿಗಾಗಿ ವಸತಿ ಶಾಲೆಗಳನ್ನು ತೆರೆಯುವುದು
- ವಿಧ್ಯಾರ್ಥಿಗಳಿಗೆ ನೀಡುವ ವಿಶೇಷ ಪ್ರೊತ್ಸಾಹ ಧನದ ವಂಚನೆಯನ್ನ ತಪ್ಪಿಸುವುದು. ಮತ್ತು ವಂಚನೆ ಮಾಡುವ ಅಧಿಕಾರಿಗಳಿಗೆ ಶಿಕ್ಷೆಯಾಗುವಂತೆ ನೋಡಿಕೊಳ್ಳುವುದು.
- ವಸತಿ ರಹಿತ ಕುಟುಂಬಗಳಿಗೆ ಸರ್ಕಾರಿ ವೆಚ್ಚದಲ್ಲಿ ವಸತಿ, ವಿದ್ಯುದ್ದೀಕರಣ, ಕುಡಿಯುವ ನೀರು, ಹಾಗು ಶೌಚಾಲಯಗಳ ಸೌಲಭ್ಯವನ್ನೊದಗಿಸುವುದು.
- ಪರಿಶಿಷ್ಟ ಪಂಗಡಗಳ ಪಟ್ಟಿಯಲ್ಲಿರುವ ಮುಂದುವರೆದ ಸಮುದಾಯಗಳು ಮೀಸಲಾತಿಯಡಿ ದೊರೆಯುವ ಎಲ್ಲಾ ಸೌಲಭ್ಯಗಳನ್ನ ತಾವೆ ಅನುಭವಿಸುತ್ತಿರುವದರಿಂದ ಹಿಂದುಳಿದಿರುವ ಕೊರಗ ಸಮುದಾಯಕ್ಕೆ ಶೇಕಡ ೨ರಷ್ಟು ವಿಶೇಷ ಮೀಸಲಾತಿಯನ್ನು ಒದಗಿಸುವುದು
- ಗ್ರಾಮೀಣ ಭಾಗದ ಕೊರಗರು ಕೂಲಿ ಕಾರ್ಮಿಕರಾಗಿರುವದರಿಂದ ಭೂರಹಿತ ಎಲ್ಲಾ ಆದಿವಾಸಿ ಸಮುದಾಯಗಳಿಗೆಂದು ೫ ಎಕರೆ ಕೃಷಿ ಭೂಮಿಯನ್ನ ಮಂಜೂರು ಮಾಡವುದು.
- ಕೊರಗ ಸಮುದಾಯದವರು ಸರಕಾರಿ ಭೂಮಿಯಲ್ಲಿ ಮನೆಗಳನ್ನು ಕಟ್ಟಿ ಮರ ಗಿಡಗಳನ್ನು ನೆಟ್ಟು ಹಲವಾರು ವರ್ಷಗಳಿಂದ ಅನುಭವಿಸಿಕೊಂಡು ಬಂದಿದ್ದರೂ ಈ ತನಕ ಹಕ್ಕು ಪತ್ರ ದೊರಕಿರುದಿಲ್ಲ. ಇಂತಹ ಪ್ರಕರಣಗಳನ್ನು ಕಂದಾಯ ಇಲಾಖೆಯು ಪತ್ತೆ ಹೆಚ್ಚಿ ಹಕ್ಕು ಪತ್ರವನ್ನು ಕೂಡಲೇ ನೀಡುವುದು.
- ಕೊರಗ ಸಮುದಾಯದವರು ಹೆಚ್ಚಾಗಿ ವಾಸಿಸುತ್ತಿರುವ ಕಾಲೋನಿಗಳಲ್ಲಿ ನಾಗರಿಕ ಸೌಲಭ್ಯಗಳಾದ ರಸ್ತೆ, ವಿದ್ಯುತ್, ನೀರು ಇತ್ಯಾದಿ ಸೌಲಭ್ಯಗಳಿಂದ ವಂಚಿತರಾಗಿವುದರಿಂದ .ರಾಜ್ಯ ಸರ್ಕಾರವು ಒದಗಿಸುತ್ತಿರುವ ಹಣವು ದುರುಪಯೋಗವಾಗುತ್ತಿದ್ದು ಈ ಬಗ್ಗೆ ತನಿಖೆ ನಡೆಸಿ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳವುದು. ಅಲ್ಲದೆ ಈ ಮೇಲಿನ ಸೌಲಭ್ಯಗಳನ್ನು ಕೂಡಲೇ ಎಲ್ಲಾ ಕಾಲೋನಿಗಳಿಗೂ ಒದಗಿಸುವುದು.
- ಕೊರಗರ ಕಲ್ಯಾಣಕ್ಕಾಗಿರುವ ಲ್ಯಾಂಪ್ ಸೊಸೈಟಿಯು ಅಧಿಕಾರೇತರರ ಮೇಲ್ವಿಚಾರಣೆಯಲ್ಲಿ ನಡೆಯುತ್ತಿದೆ. ಅದರ ದೈನಂದಿನ ವ್ಯವಹಾರದಲ್ಲಿ ಅನೇಕ ರೀತಿಯ ವಂಚನೆಗಳು ಸ್ವಜನ ಪಕ್ಷಪಾತಗಳು ನಡೆಯುತ್ತಿದೆ ಎಂದೂ ಸಹ ವಕ್ತೃಗಳು ತಿಳಿಸಿದರು. ಅಲ್ಲದೆ ಕೊರಗ ಜನರಿಗೆ ಸೊಸೈಟಿಯಲ್ಲಿ ಯಾವುದೇ ರೀತಿಯ ಪ್ರಾತಿನಿಧ್ಯವಿಲ್ಲದೆ ಕೊರಗ ಜನರ ಶ್ರೇಯಸ್ಸು ಸಾಧ್ಯವಾಗಿಲ್ಲ. ಜನರು ತಯಾರಿಸುವಂತಹ ಬುಟ್ಟಿ ಇತ್ಯಾದಿಗಳಿಗೆ ನ್ಯಾಯವಾದ ಬೆಲೆ ಸಿಗದೆ ಮಧ್ಯವರ್ತಿಗಳ ಮೂಲಕ ಮಾರುಕಟ್ಟೆಗೆ ಬರುತ್ತಿದೆ. ಆದುದರಿಂದ ದಲ್ಲಾಳಿ ಪದ್ಧತಿಯನ್ನು ತಪ್ಪಿಸುವುದಕ್ಕೆ ಸರಕಾರವೇ ಪ್ರಾರಂಭಿಕ ಹಂತದಲ್ಲಿ ಅವರ ಬುಟ್ಟಿ ಇತ್ಯಾದಿಗಳನ್ನು ಖರೀದಿಸುವಂತಾಗಬೇಕು. ಕೊರಗರ ಆರ್ಥಿಕ ವ್ಯವಹಾರವನ್ನು ಕೊರಗರೆ ವ್ಯವಸ್ಥೆ ಮಾಡಿಕೊಳ್ಳುವ ಮಟ್ಟಕ್ಕೆ ಭೌದ್ಧಿಕವಾಗಿ, ಸಂಘಟನಾತ್ಮಕವಾಗಿ ಬೆಳೆದಾಗ ಸಹಕಾರಿ ಸಂಘಗಳನ್ನು ಸ್ಥಾಪಿಸಬೇಕು

- ಕೊರಗ ಸಮುದಾಯದ ಕುಲಕಸುಬು ಬುಟ್ಟಿ ಹೆಣೆಯುವುದಾದರೂ ಅದಕ್ಕೆ ಬೇಕಾದ ಅವಶ್ಯಕ ಬಿದಿರಿನ ಸಲಕರಣೆಗಳು ದೊರಕದಿದ್ದುದರಿಂದ ಅನಿವಾರ್ಯವಾಗಿ ಪೌರಕಾರ್ಮಿಕ ವೃತ್ತಿಗೆ ಇಳಿದಿದ್ದಾರೆ. ದಿನನಿತ್ಯ ತ್ಯಾಜ್ಯ ವಸ್ತುಗಳ ನೈರ್ಮಲ್ಯೀಕರಣ ಕೆಲಸ ಮಾಡುವುದರಿಂದ ಹೆಚ್ಚಿನ ಕೊರಗ ಜನರು ಅನಾರೋಗ್ಯ ಪೀಡಿತರಾಗುತ್ತಿದ್ದಾರೆ. ಇದರ ದುಷ್ಪರಿಣಾಮ ಕೊರಗರ ಮಕ್ಕಳ ಮೇಲೂ ಬಿದ್ದಿದೆ. ಆದುದರಿಂದ ಪ್ರತಿ ತಿಂಗಳಿಗೊಮ್ಮೆ ಕೊರಗರ ಕಾಲೊನಿಗಳಲ್ಲಿ ವೈದ್ಯಕೀಯ ತಪಾಸಣೆ ನಡೆಸಿ ಉಚಿತ ಔಷಧಿಗಳನ್ನು ಹಂಚುವ ವ್ಯವಸ್ಥೆಯನ್ನು ಮಾಡಬೇಕು.
- ಕೊರಗ ಪೌರ ಕಾರ್ಮಿಕರ ಹೊರತು ಅವರು ಸರಕಾರಿ ಹುದ್ದೆಗಳಲ್ಲಿ ಇರುವುದೇ ವಿರಳ. ಕೊರಗರ ಸಾಮಾಜಿಕ ಹಿಂದುಳುಯುವಿಕೆಯಿಂದ ಮಿಸಲಾತಿ ಹುದ್ದೆಗಳಿಗೆ ಇತರ ಜಾತಿಗಳೊಂದಿಗೆ ಸ್ಪರ್ಧಿಸಿ ಸರಕಾರ ಹುದ್ದೆಗಳನ್ನು ಪಡೆಯುವಲ್ಲಿ ವಿಫಲರಾಗೊಂಡಿದ್ದಾರೆ ಅದುದರಿಂದ ಪ್ರಾಥಮಿಕ ಶಿಕ್ಷಣದ ಹಂತವನ್ನು ಮುಗಿಸಿದ ಕೊರಗ ಸಮುದಾಯದ ಸದಸ್ಯನಿಗೆ ಕನಿಷ್ಠಪಕ್ಷ ಸರಕಾರದ 'ಡಿ'ವರ್ಗದ ಹುದ್ದೆಗೆ ನೇರ ನೇಮಕಾತಿ ನೀಡುವುದು ಹಾಗೂ ಎಸ್.ಎಸ್.ಎಲ್.ಸಿ.ಯನ್ನು ಮುಗಿಸಿದ ಕೊರಗ ಸಮುದಾಯದ ಸದಸ್ಯನಿಗೆ 'ಸಿ' ವರ್ಗದ ಹುದ್ದೆಗೆ ನೇರ ನೇಮಕಾತಿಯನ್ನು ಮಾಡಲು ಸರಕಾರ ಕಾನೂನುಗಳನ್ನು ತಿದ್ದುಪಡಿ ಮಾಡಿ ನೇರ ನೇಮಕಾತಿಗೆ ಅವಕಾಶ ಮಾಡಿಕೊಡಬೇಕು.

ಎರಡು ಬುಡಕಟ್ಟುಗಳ ಬೇಡಿಕೆಗಳಲ್ಲಿ ಮಹತ್ವವಾದ ಅಂಶಗಳಿದ್ದು ಈ ಎರಡು ಬುಡಕಟ್ಟುಗಳ ಸರ್ವತೋಮುಖ ಪ್ರಗತಿಗೆ ಅವಶ್ಯವಿರುವ ಕಾರ್ಯಕ್ರಮಗಳನ್ನು ಜಾರಿಗೊಳಿಸಬೇಕಾಗಿದೆ. ವಿಶೇಷವಾಗಿ ಈ ಸಮುದಾಯಗಳಿಗೆ ವಿಶೇಷ ಮೀಸಲಾತಿ ಸೌಲಭ್ಯವನ್ನ ಸರ್ಕಾರದಿಂದ ಮತ್ತು ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಎಲ್ಲಾ ರಂಗಗಳಲ್ಲಿ ಜಾರಿಗೊಳಿಸುವುದರ ಮೂಲಕ ನ್ಯಾಯ ಒದಗಿಸಬೇಕಿದೆ.

೫.೨೪. ಆದಿವಾಸಿ ಬುಡಕಟ್ಟುಗಳ ಸಮಸ್ಯೆಗಳು

- ಬದಲಾಗುತ್ತಿರುವ ಇಂದಿನ ಆರ್ಥಿಕ ಪರಿಸ್ಥಿತಿಯಲ್ಲಿ ಶೇಕಡ. ೮೦ ರಷ್ಟು ಆದಿವಾಸಿ ಜೇನು ಕುರುಬ ಮತ್ತು ಕೊರಗ ಬುಡಕಟ್ಟುಗಳು ಬಡತನ ರೇಖೆಗಿಂತ ಕೆಳಗಿದ್ದು ತಮ್ಮ ದಿನ ನಿತ್ಯದ ಅವಶ್ಯಕತೆಗಳನ್ನ ಪೂರೈಸಿಕೊಳ್ಳಲು ಪರದಾಡುವ ಸ್ಥಿತಿಯಲ್ಲಿವೆ.
- ಸಮಗ್ರ ಗಿರಿಜನ ಅಭಿವೃದ್ಧಿ ಯೊಜನೆಯಡಿಯಲ್ಲಿ ಸೌಲಭ್ಯಗಳು ನಿರೀಕ್ಷಿತ ಗುರಿ ಮುಟ್ಟುಲ್ಲಿ ವಿಫಲವಾಗಿರುವುದರಿಂದ ಈ ಎರಡು ಸಮುದಾಯಗಳು ಮತ್ತಷ್ಟು ಶೋಷಣೆಗೊಳಗಾಗಿವೆ.
- ಆದಿವಾಸಿ ಬುಡಕಟ್ಟು ಹಾಡಿಗಳಲ್ಲಿ ಇಂದಿಗೂ ಮೂಲಭೂತ ಸೌಲಭ್ಯಗಳಾದ ಕುಡಿಯುವ ನೀರು, ರಸ್ತೆ, ಆರೋಗ್ಯ, ಶೌಚಾಲಯಗಳು, ವಿದ್ಯುತ್ ಇತ್ಯಾದಿಗಳ ಸಮಸ್ಯೆ ಎದ್ದು ಕಾಣುತ್ತದೆ.
- ಆದಿವಾಸಿ ಬುಡಕಟ್ಟು ಜನರು ಅಭಿವೃದ್ಧಿ ಯೋಜನೆಗಳ ಹೆಸರಿನಲ್ಲಿ ತಮ್ಮ ಮೂಲ ನೆಲೆ, ಮೂಲ ವೃತ್ತಿಯನ್ನು ಕಳೆದುಕೊಂಡು ಮತ್ತಷ್ಟು ಸಂಕಷ್ಟಕ್ಕೀಡಾಗಿದ್ದಾರೆ.
- ಆದಿವಾಸಿ ಕುಟುಂಬಗಳು ವಾಸ ಮಾಡುವ ಹಾಡಿಗಳು ಆಡಳಿತ ಯಂತ್ರದ ಸಂಪರ್ಕದಿಂದ ದೂರ ಉಳಿದಿವೆ. ಈ ಮಧ್ಯೆ ಇಲಾಖೆಗಳಲ್ಲಿ ಹಲವು ಹುದ್ದೆಗಳು ಖಾಲಿಯಿದ್ದು ಅದರಿಂದಾಗಿ ಬುಡಕಟ್ಟು ಜನರಿಗಾಗಿ ರೂಪಿಸಿರುವ ಯೊಜನೆಗಳನ್ನು ಸಮರ್ಪಕ ರೀತಿಯಲ್ಲಿ ತಲುಪಿಸಲು ಸಾಧ್ಯವಾಗುತ್ತಿಲ್ಲ.
